Kannada Tournals

ಕನ್ನಡ ಪತ್ರಿಕೆಗಳು

1901 to
1910



ಮೈಸೂರ್

ಪೋಲೀಸ್ ಗೆಜೆಟ್.

ಮೈಸೂರು ದೇಶದ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬ್ಬರವರ ಅಪ್ಪಣೇಮೇರಿಗೆ ತಿಂಗಳಿಗೆ ಎರಡಾವರ್ತಿ ಪ್ರಕಟಿಸಲ್ಪಡುವುದು.

ವಾಲ್ಯೂಂ ೧೬. ಬೆಂಗಳೂರು, ತಾರೀಖು ೧೫ನೇ ಜುಲೈ ೧೯೦೯ನೇ ಇಸವಿ. ನಂ. ೧೫.

ವರ್ಗಾವರ್ಗಿಗಳು.

ಇದರಡಿಯಿನ ಇನ್‌ಸ್ಪೆಕ್ಟರ್‌ಗಳ ವರ್ಗಾವರ್ಗಿಗಳನ್ನು ಹುಕುಂ ಮಾಡಿರುತ್ತೆ.

ಪಡಿ.

ಡಿಸ್ಟ್ರಿಕ್ಟು	ಇ	ಹೊಸ ಬೆಂಗಳೂರು ಇಂಥ.	ಗೆ.	ವರ್ಗಾವರ್ಗಿ ಮಂಜೂರಾಪ ದಾಖಲೆ ನಂ. ಮತ್ತು ತಾ॥
ಚಿತ್ರದುರ್ಗ.	ಇನ್ಸ್‌ಪೆ॥ ಬಾಳ್ಳೆಜಕಾಸ್ಟ್ರ್	ಜಗಲೂರು	ಹೊಸಕೋಟೆ	ತಾ॥ ೧೦—೬—೧೯೦೯ ನಂ. ೫೬೮೮—೦೬೨.
ಬೆಂಗಳೂರು.	ಇನ್ಸ್‌ಪೆ॥ ರಾಮಾಂಜಲು ನಾಯ್ಡು	ಹೊಸಕೋಟೆ	ಹೊಸದುರ್ಗ	ತಾ॥ ೧೦—೬—೧೯೦೯ ನಂ. ೫೬೮೫-೦೧೮.
ಚಿಟಲ್ಡ್ರೂ...	ಇನ್ಸ್‌ಪೆ॥ ಪೈ॥ ಟಿ. ಎಫ್. ವಿಲ್‌ಕಿನ್ಸನ್	ಬೆಂಗಳೂರು ಪಟ್ಟಣ	ಮೂಡಿಗೆರೆ	ತಾ॥ ೧೯—೬—೧೯೦೯ ನಂ. ೫೭೯೬-೬-ಪಿ. ಸಿ. ೧೪೬
	ಇನ್ಸ್‌ಪೆ॥ ಸೈಯದ್ ದಿಲ್ದಾರ್ ಹುಸೇನ್	ರೈಲ್ವೇ ಪೋಲೀಸ್ ಬೆಂಗಳೂರು ನಂಜನಗೂಡು ಸೆಕ್ಷನ್	ಬೆಂಗಳೂರು ಪಟ್ಟಣ	
ಕಡೂರ್ ...	ಇನ್ಸ್‌ಪೆ॥ ಜೆ. ನಾರಿಸ್.	ಮೂಡಿಗೆರೆ	ರೈಲ್ವೇ ಪೋಲೀಸ್ ಬೆಂಗಳೂರು ನಂಜನಗೂಡು ಸೆಕ್ಷನ್	ತಾ॥ ೧೯—೬—೧೯೦೯ ನಂ. ೫೭೯೩-೦೪೯.

KARNATAKA NEWSPAPERS EXHIBITION
1 - MAR 1971
KANNADA NEWS AGENCY
BANGALORE-1

ಕೃಷಿ

ಸಂಪುಟ ೮] REGISTERED NO M 176 ಬೆಂಗಳೂರು ಸಿಟಿ—ಸರ್ ೧೯೦೬ ನೇ ಇಸವಿ ಫೇಬ್ರುವರಿ ತಾರೀಖು ೧೭ ನೇ ಶನಿವಾರ. [ಸಂಚಿಕೆ ೩೩

ಸರಕಾರೀ ಬಕ್ಕಲತನದ ಖಾತೆಯು

—o—

ಧಾರವಾಡದಲ್ಲಿಯ ಸರಕಾರೀ ಹೊಲವು.

ಜೋಳದ ಬೀಜ:—ಹೊಲದಲ್ಲಿ ಜೋಳವನ್ನು ಬಿತ್ತುವಾಗ ಮೊದಲು ಕಾಳುಗಳನ್ನು ತುತ್ತೆಯ ನೀರಿನಲ್ಲಿ ತೊಯಿಸಿ ಬಿತ್ತುವದರಿಂದ ಏನು ಪ್ರಯೋಜನವೆಂಬದನ್ನು ನೋಡಿದರು. ತುತ್ತೆಯ ನೀರಿನಲ್ಲಿ ಬೀಜಗಳನ್ನು ತೊಯಿಸಿ ಬಿತ್ತಿದರೆ ಬೆಳೆಗಳಿಗೆ ರೋಗದ ಭೀತಿಯು ಕಡಿಮೆ. ಜೋಳವನ್ನು ತುತ್ತೆಯ ನೀರಿನಲ್ಲಿ ತೋಯಿಸಿ ಬುದು ಕಡೆಯಲ್ಲಿ, ಮತ್ತೊದುಕಡೆಯಲ್ಲಿ ತೋಯಿಸದೆ ಬಿತ್ತಿ ಅನುಭವ ನೋಡಿದರು. ಇದರ ಮೇಲಿಂದ ತುತ್ತೆಯ ನೀರಿನಲ್ಲಿ ಬೀಜಗಳನ್ನು ತೋಯಿಸಿ ಬಿತ್ತುವದರಿಂದ ಬೆಳೆಗೆ ರೋಗ ಸಂಭವಿಸುವದಿಲ್ಲೆಂದು ಕಂಡುಬಂತು. ಬೀಜಗಳನ್ನು ತೊಯಿಸುವದಕ್ಕೆ ತಗಲುವ ಖರ್ಚು ಆದರಿಂದಾಗುವ ಲಾಭಗಳೂ ತುತ್ತೆಯ ನೀರಿನಲ್ಲಿ ಬೀಜಗಳನ್ನು ತೊಯಿಸುವ ಖರ್ಚು ಎಕರೆಗೆ ೩ ಪೈ ಯಂತೆ ಬರುತ್ತದೆ. ಇದರಿಂದ ರೋಗ ನಿವಾರಣೆಗೆ ೩ ಪೈ ಯಂತೆ ಬರುತ್ತದೆ. ಇದರಿಂದ ರೋಗ ನಿವಾರಣೆಯಾಗಿ ಪೈರಿನ ಉತ್ಪನ್ನವು ಎಕರೆಗೆ ಮೂರುವರೆ ರೂಪಾಯಿಯಂತೆ ಹೆಚ್ಚುತ್ತದೆ. ಆದ್ದರಿಂದ ಈ ಸುಲಭ ಉಪಾಯವನ್ನು ಬಕ್ಕಲಿಗರಿಗೆ ತಿಳಿಸುವದಕ್ಕಾಗಿ ಸರಕಾರದವರು ಪ್ರಸಿದ್ಧ ಪಡಿಸಿರುತ್ತಾರೆ.

ಗೊಬ್ಬರದ ಪ್ರಯೋಗಗಳು.

ಹತ್ತಿ ಮತ್ತು ಗೋಧಿ ಈ ಎರಡು ಬೆಳೆಗಳಿಗೆ ಹೆಚ್ಚು ಗೊಬ್ಬರ ಹಾಕುವದರಿಂದ ಆಗುವ ಲಾಭವೇನೆಂಬದನ್ನು ನೋಡುವದಕ್ಕಾಗಿ ಒಂದೇ ಮಾದರಿ ಎರಡು ಭಾಗಗಳಲ್ಲಿ ಒಂದಕ್ಕೆ ಗೊಬ್ಬರ ಇಲ್ಲಿಯ ಹತ್ತಿಯು ಸಾಗುವಳಿಗೆ ಭೂಮಿಯನ್ನು ಕಡಿಮೇ ಪ್ರಮಾಣದಿಂದ ಉಪಯೋಗಿಸಿದ್ದರು. ಇದರಿಂದ ಎಕರೆಗೆ ೧೦೬೬ ರತ್ತಲ ಬೆಳೆಯಿಂತು! ಹತ್ತಿಯ ಬೆಳೆಯು ನಿಯಮಿತ ಕ್ಕಿಂತ ಎರಡು ಪಾಲು ಹೆಚ್ಚಾಗಿಬಿತು. ಇದೇ ಪ್ರಯೋಗವನ್ನು ಮುಂದಿನವರ್ಷ ಮತ್ತೆ ಮಾಡಿ ನೋಡತಕ್ಕವರಿರುತ್ತಾರೆ.

(೪) ಜೋಳ:— ದೇಶೀ (ನಂದ್ಯಾಲ) ಮತ್ತು ಗುಜರಾಥ ದೊಳಗಿನ 'ಪಿವಿಪಿ' ಮತ್ತು ಚಡಪಿ ಈ ಎರಡು ಜಾತಿಯ ಪೈರಿನ ತುಲನೆ ಮಾಡುವದಕ್ಕಾಗಿ ಬಿತ್ತಿದ್ದರು. ದೇಶೀ ನಂದ್ಯಾಲದ ಜೋಳಕ್ಕಿಂತ ಗುಜರಾಥಿ ಜೋಳದ ಉತ್ಪನ್ನವು ಹೆಚ್ಚಾಗಿಬಿತು.

೧ ಚಡಪಿ (ಗುಜರಾಥ) ಜೋಳ- ೧೬೬೫ ರತ್ತಲ ಕಾಳು ಬೆಳೆದವು.

೨-ಪಿವಿಪಿ " " ೧೪೫೫
" "
೩ ನಂದ್ಯಾಲ (ಧಾರವಾಡ) " ೧೩೬೦
" "

ಈ ಮೇಲೆ ಬರೆದ ಮೂರು ಪ್ರಕಾರದ ಬೆಳೆಗೂ ಯಾವ ಪ್ರಕಾರದ ಗೊಬ್ಬರವನ್ನೆಷ್ಟು ಮಾತ್ರವೂ ಹಾಕಿದ್ದಿಲ್ಲ.

(೫) ಗೋಧಿ:— ಮೂರುಪ್ರಕಾರದ ಗೋಧಿಯನ್ನು ಪ್ರತ್ಯೇ ಪ್ರತ್ಯೇ ದೇಶದಿಂದ ತಂದು ಬಿತ್ತಿ ಬೆಳೆಸಿದರು. ಆದರೆ ದೇಶೀ ಗೋಧಿಯೇ ಹೆಚ್ಚು ಲಾಭದಾಯಕವೆಂದು ಕಂಡುಬಂತು.

ಸಾಗುವಳಿಯು ಬೇರೆಬೇರೆ ಪ್ರಯೋಗಗಳು.

ಧಾರವಾಡದ ಹತ್ತಿಯಮದರ್ಸ್ ಫೀಲ್ಡ್ ಸ್ಟೇಷನ್ ಹೆಂಗಾಮಿಗಿಂತ

೧ ಭೂಮಿಯ ... ೪೦೦ ರೂ. ದರವರ್ಷ.
೨ ಕಾರಕೂನ ವ್ಯವಸ್ಥಾಪಕರ ಸಂಬಳ ೧೪೦೦ "
೩ ತಂತೀವೆಚ್ಚವೂ ಖೋಸ್ಟವ್ಯಯವೂ. ೬೨ "
೪ ಕಚೇರಿಯ ಡೆಸಿಸ್ಟಾಕ ಸಾಮಾನು. ೨೨೫ "
೫ ನಿಲಾಯಿತಿಯ ಕೃಷಿಯೋಪಯೋಗದ ಆಯು
ಧಗಳು. ... ೬೦ ೩೪೩ "
೬ ಕಬ್ಬಿಣ ಬೇಲಿಯು. ... ೨೬೦೦ "
೭ ಕೂಲಿ ... ... ೧೯೬೨ "
೮ ಗೊಬ್ಬರದ ಕ್ರಯವು ... ೧೦೦೫ "
೯ ಬೀಜಗಳು. ... ... ೧೪೯೦ "
೧೦ ಎತ್ತುಗಳ ಕ್ರಯವು. ... ೯೯೦ "

ಈ ಪ್ರಕಾರ ಖರ್ಚು ಸಂಭವಿಸಿತು. ಇದು ಮೊದಲನೇವರ್ಷ ನಿದ್ದರಿಂದ ಹೆಚ್ಚು ಖರ್ಚು ತಗಲಿದ್ದು ಸಹಜಕವೇಸರಿ.

"ಬಕ್ಕಲಿಗನು."—ಪೂಜೆ.

ಅಮೇರಿಕಾದೇಶದಲ್ಲಿ ಉದ್ಯೋಗಮಾಡತಕ್ಕ ಹೆಂಗಸರು.

—o—

ಯೂರೋಪಕ ಮತ್ತು ಅಮೇರಿಕಾ ಖಂಡಗಳಲ್ಲಿ ಸ್ತ್ರೀವಿದ್ಯಾಭ್ಯಾಸ, ಸ್ತ್ರೀಸ್ವಾತಂತ್ರ್ಯಗಳಿಂದ ಅನೇಕರು ಉದ್ಯೋಗವನ್ನು ಮಾಡಿ ಜೀವಿಸುತ್ತಿದಾರೆಂದು ಅನೇಕರಿಗೆ ತಿಳಿದಿರುವದು. ಆದರೆ ಈ ವಿಧವಾದ ಸ್ವಯತ್ನವು ಎಷ್ಟುಮಟ್ಟಿಗೆ ವೃದ್ಧಿಯಾಗಿರವದು ಎಂಬದು ಎಲ್ಲರಿಗೂ ತಿಳಿದಿರಲಾರದು. ಈ ಭಾಗದಲ್ಲಿ ಮುಂದಾಗಿರುವ ಅಮೇರಿಕಾಖಂಡದಲ್ಲಿ ಸ್ತ್ರೀ

ಗೆ ೪೬೦೦ ರತ್ತಲ ಸುಣ್ಣವನ್ನು ಹಾಕಿದ್ದರೆ ಭೂಮಿಯಲ್ಲಿ ಗೂಡಿನೆಯುನ್ನು ಬಿತ್ತಿ ನೋಡಿದರು. ಸುಣ್ಣ ರಹಿತವಾದ ಅದೇ ಪ್ರಾಥರಿಯ ಅಪ್ಪೇ ಭೂಮಿಯೊಳಗಿನ ಗೋದಿ ಬೆಳೆಗಿಂತ ಸುಣ್ಣ ಹಾಕಿದ ಅಪ್ಪೇ ಭೂಮಿಯ ಗೋದಿ ಬೆಳೆಯು ಉತ್ಪನ್ನವು ಹೆಚ್ಚಾಗಿ ಇಂತು. ಅದು ಕೆಳಗೆ ಬರೆದಂತೆ.

೧ ಸುಣ್ಣ ಹಾಕಿದ ಭೂಮಿಯಲ್ಲಿ ೫೧೧ ರತ್ತಲ ಗೋದಿಯೂ ೭೯೩ ರತ್ತಲ ಹುಲ್ಲೂ ಆಯಿತು.

ಸುಣ್ಣ ರಹಿತವಾದ ಅಪ್ಪೇ ಭೂಮಿಯಲ್ಲಿ ೨೯೦ ರತ್ತಲ ಗೋಧಿಯೂ ೪೦೦ ರತ್ತಲ ಹುಲ್ಲೂ ಬಂತು.

ಅಂದರೆ ಸುಣ್ಣ ಹಾಕಿದ ಭೂಮಿಗಿಂತ ಸುಣ್ಣ ಹಾಕಿದ ಭೂಮಿಯ ಉತ್ಪನ್ನವು ಸುಮಾರು ಒಂದೂವರೆಪಾಲು ಹೆಚ್ಚು ಎಂತೆಂದು ಸಿದ್ಧವಾಯಿತು. ಇದರಿಂದ ಗೋದಿ ಬೆಳೆಗೆ ಸುಣ್ಣವು ಉತ್ತಮವಾದ ಗೊಬ್ಬರವೆಂದು ನಿರ್ಣಯಿಸಲ್ಪಟ್ಟಿತು. ಇದೇ ಪ್ರಕಾರದ ಅನುಭವವನ್ನು ಮುಂದಿನ ವರ್ಷ ಮತ್ತೆ ನೋಡತಕ್ಕವರಿರುತ್ತಾರೆ.

ಜೋಳದ ಪೈರಿಗೆ "ನಾಯಟ್ರೇಟು ಆಫ಼ ಸೋಡಾ" ಎಂಬ ಗೊಬ್ಬರವನ್ನು ಹಾಕಿ ನೋಡಿದರೆ, ಇದರ ಮೇಲಿಂದ ಬಂದ ಅನುಭವವೇನೆಂದರೆ—ಸ್ವಲ್ಪ ಉತ್ಪನ್ನದ ಬೆಲ್ಲರೆ ಪೈರಿಗೆ ಹೆಚ್ಚು ಕಿಮ್ಮತ್ತಿನ ಗೊಬ್ಬರವನ್ನು ಹಾಕುವದು ಲಾಭಾದಾಯಕವಲ್ಲೆಂದು ಗೊತ್ತಾಯಿತು. ಇದೇ ಗೊಬ್ಬರವನ್ನು ಹತ್ತಿಯ ಪೈರಿಗೂ ಹಾಕಿ ನೋಡಿದರು ಅನುಭವವು ಮೇಲಿನಂತೆ.

ಹತ್ತಿಯನ್ನು ಬಿತ್ತುವಾಗ ಪ್ರತಿಯೊಂದು ಸಾಲಿನ ನಡುವೆ ೧೯ ಇಂಚು ಅಂತರ ವಿರುವಂತೆ ಬಿತ್ತುವ ಪದ್ಧತಿಯು ಒಕ್ಕಲಿಗರಲ್ಲಿ ನೆಲೆಗೊಂಡಿದೆ. ಇದೇ ಪ್ರಕಾರದಿಂದ ಬಿತ್ತುವದು ಉತ್ತಮವೆಂದು ಸರಕಾರಕ್ಕೆ ಕಂಡು ಬಂತು. ಆದರೆ ಧಾರವಾಡಿನ್ನಿ ಅಮೇರಿಕನ್ ಹತ್ತಿಯನ್ನು ೨೬ ಇಂಚು ಅಂತರದಿಂದಲೂ ಬೇರೆ ಬೇರೆ ಕಡೆಯಲ್ಲಿ ಬಿತ್ತಿ ತೆಗೆದುಕೊಳ್ಳಲಾಗಿ ಅನುಭವ ಕಂಡು ಬಂದ ಸಂಗತಿಗಳು ಕೆಳಗೆ ಬರೆದಂತೆ.

೧೯ ಇಂಚು ಅಂತರವುಳ್ಳ ಕಾಂಟೆಯಿಂದ ಬಿತ್ತಿದರೆ.- ಎಕರೆ ಬಾಧಕ್ಕೆ ೩೧೩ ರತ್ತಲ ಹತ್ತಿಯೂ ೨೬ ಇಂಚು ಅಂತರದ ಕಾಂಟೆಯಿಂದ ಬಿತ್ತಿದ್ದರೆ ೪೬೦ ರತ್ತಲ ಹತ್ತಿಯೂ ಬಂತು.

ಇದರಮೇಲಿಂದ ೨೬ ಇಂಚು ಅಂತರದಿಂದ ಬಿತ್ತುವದೇ ಉತ್ತಮವೆಂದು ತೋರುತ್ತದೆ.

ಬೇರೆಬೇರೆ ಪ್ರಕಾರದ ಬೆಳೆಗಳ ಸಾಗುವಳಿಯು.

(ಅ) ಹತ್ತಿ:— ದೇಶೀ ಹತ್ತಿಯ ಹಲವುಪ್ರಕಾರದ ಬೀಜಗಳನ್ನು ಬಿತ್ತಿ ನೋಡಿದರು. ಕುಮಟಾ, ಮತ್ತು ಧಾರವಾಡಿನ ಅಮೇರಿಕನ್ ಹತ್ತಿಯ ಭೂಮಿಗಿಂತ ಭಿಡೋಣಿ, ಸುರತ್ಕಲ್ [illegible] ಡಿನೆ ಪ್ರಮಾಣದಿಂದ ಇಟ್ಟರೆ ಏನು[illegible]ಬಂದನ್ನು ನೋಡಿದರು. ಆದರೆ ಈ ಬಗ್ಗೆ ಈ ವರ್ಷ ನಿಶ್ಚಯಾತ್ಮಕವಾದ ಬಂದೂ ಅನುಭವವು ಸಿದ್ಧವಾಗಲಿಲ್ಲ. ಹೀಗಾಗುವದಕ್ಕೆ ಮೇಘರಾಜನ ಅವಕೃಪೆಯೇ ಕಾರಣವು. ಮುಂದಿನವರ್ಷ ಇದೇ ಪ್ರಯೋಗವನ್ನು ಮತ್ತೆ ಮಾಡಿ ನೋಡುವರು.

ಬಟಾಟೆಯನ್ನು ಬಿತ್ತಿನೋಡಿದರು. ಪೈರಿಗೆ ರೋಗಸಂಭವಿಸಿದ್ದರಿಂದ ನಿಜವಾದ ಉತ್ಪನ್ನದ ಅಂದಾಜು ಗೊತ್ತಾಗಲಿಲ್ಲ. ಮುಂದಿನವರ್ಷ ಈ ಬೆಳೆಯ ವಿಷಯವಾಗಿ ಬೇರೆಬೇರೆ ಪ್ರಯೋಗಗಳನ್ನು ಮಾಡಿ ನೋಡತಕ್ಕವರಿರುತ್ತಾರೆ. ಈ ಬೆಳೆಯು ಇತ್ತೀತ್ತಲಾಗಿ ನಮ್ಮ ದೇಶದಲ್ಲಿ ಹೆಚ್ಚಾಗುತ್ತ ನಡೆಸದರಿಂದ ಈ ಪ್ರಕಾರದ ಪ್ರಯೋಗಗಳನ್ನು ಮಾಡಿ ನೋಡುವದು ಅತ್ಯಕ್ಕ ವಶ್ಯಕವು.

ಹುಳಗಳ ಉಪದ್ರವು.

ಬಟಾಟೆಯ ಪೈರಿಗೆ ಬಂದು ಪ್ರಕಾರದ ಹುಳ ಹತ್ತಿತ್ತು, ಇದರಂತೆ ಎಳ್ಳು, ಮತ್ತು ಹತ್ತಿ ಇವುಗಳಮೇಲೂ ಬಾದುಪ್ರಕಾರದ ರೋಗಬಾಧೆಯು ಸಂಭವಿಸಿತ್ತು.

ಬೀಜ, ನೇಗಿಲು ಮೊದಲಾದ ಕೃಷಿಸಂಬಂಧದ ಆಯುಧಗಳ ಪುರವಣೆಯು:—೭೧ ಸಾವಿರ ೩೦೦ ರತ್ತಲ ಕುವಾಜ್ಯಾತಿಯ ಹತ್ತಿಯ ಬೀಜಗಳನ್ನೂ ೩೭ ಸಾವಿರ ೮೦೦ ರತ್ತಲ ವಿದೇಶದ ಹತ್ತಿಯ ಬೀಜಗಳನ್ನೂ ಒಕ್ಕಲಿಗರಿಗೆ ಮೂಲಕ್ರಯಕ್ಕೆ ಪೂರೈಸಿದರು.

೧೨ ವಿಲಾಯಿತಿಯ ನೇಗಿಲುಗಳನ್ನೂ ೬೦ ಕಣಿಕೆ ಕೊರೆದು ಹೊಟ್ಟು ತಯಾರಿಸುವ ಯಂತ್ರಗಳನ್ನೂ ಒಕ್ಕಲಿಗರಿಗೆ ಮೂಲಕ್ರಯಕ್ಕೆ ಮಾರಿದರು.

ಈ ಹೊಲವನ್ನು ನೋಡುವದಕ್ಕಾಗಿ ಬಂದಒಕ್ಕಲಿಗರು.

ಈ ಹೊಲವನ್ನು ನೋಡುವದಕ್ಕಾಗಿ ಸುಮಾರು ೧೩೫ ಜನ ಒಕ್ಕಲಿಗರು ಈ ವರ್ಷ ಬಂದಿದ್ದರು. ಬೇರೆ ಮುಖ್ಯೀಖಾತೆಯ ಅಧಿಕಾರಸ್ಥರೂ ಬಂದು ನೋಡಿಹೋದರು.

ಜನಾಖರ್ಚಿನ ಟಿಪ್ಪಣಿ.

ಈಕೊಲಕ್ಕಾಗಿ ಸರಕಾರದವರು ಈ ವರ್ಷ ೧೦ ಸಾವಿರ ೬೯೩ ರೂಪಾಯಿ ಖರ್ಚು ಮಾಡಿದರು. ಈ ವರ್ಷ ಬಂದ ಉತ್ಪನ್ನವು ೬ ಸಾವಿರ ೯೩೩ ರೂಪಾಯಿ! ಇದರಮೇಲಿಂದ ನೋಡಲಾಗಿ ಸರಕಾರಕ್ಕೆ ೩ ಸಾವಿರ ೩೩೦ ರೂಪಾಯಿ ಕೇವಲ ಲುಕ್ಸಾನಿಯು ನಂ ವಿಸಿತೆಂದು ಹೇಳಬಹುದು. ಖರ್ಚುವೆಚ್ಚವು ತಿಳಿಯುವದಕ್ಕಾಗಿ ಕೆಲವು ಮಾಹಿತಿಯನ್ನು ಕೆಳಗೆ ಕೊಡುತ್ತೇವೆ.

ಸುಮಾರು ಟಿಪ್ಪಣವನ್ನು ಬರೆದಿರುವದು. ಅದೇನೆಂದರೆ:

ಆದೇಕವಲ್ಲಿ ಒಟ್ಟು ೩೦೦ ವಿಧವಾದ ಅನೇಕ ಉದ್ಯೋಗೆಗಳವೆ. ಇವುಗಳಲ್ಲೆಲ್ಲಾ ಗಂಡಸರು ಕೆಲಸಮಾಡುತ್ತಿದ್ದಾರೆ. ಆದರೆ ಹೆಂಗಸರು ಇವುಗಳೆಲ್ಲ ೩೦ನೆಯ ಉಳದ ೩೦೦ ಉದ್ಯೋಗೆಗಳೆಲ್ಲೂ ಸೇರಿದಾರೆ. ಸ್ವಂತವಾಗಿ ಕಮ್ಮಾರ ಕೆಲಸಗಳನ್ನು ಮಾಡಿ ಕಬ್ಬಿಣದ ಕಾರ್ಖಾನೆಯನ್ನು ಇಟ್ಟಿರುವರು ೧೯೩ ಹೆಂಗಸರು ಇದಾರೆ. ಕುಂದರ ಲಾಯಗಳನ್ನಿಟ್ಟು ಜೀವಿಸುವ ೧೯೦ ಜನವು, ಇಂಜಿನ್ ಕೆಲಸಗಳನ್ನು ನಡೆಸುವವರು ೪ ಜನವು ೪೦೯ ಜನ ವೈದ್ಯಕೃತ ಕೆಲಸದಲ್ಲಿಯೂ ೧೦೩೧ ಮಂದಿ ಮನೆಕಟ್ಟುವತಕ್ಕವರು ಎಂಜಿನೀಯರು, ೧೩೭ ಕಲ್ಲು ಕೆಲಸದವರೂ, ೫೭೫ ಮರಗೆಲಸದವರು, ೫೫ ವರ್ಣಕುಂಚಿಯವರೂ, ೧೭೫೯ ಚಿತ್ರಕೆಲಸಗಾರರು, ೨೪೦ ಕಾಗದ ಹಚ್ಚುವವರೂ ಹೆಂಗಸರಾಗಿದಾರೆ.

ಕಲ್ಲಿನ ಪ್ರತಿಮೆಗಳನ್ನು ಮಾಡುವಹೆಂಗಸರು, ಕುರ್ಚಿ ಮೇಜು ಮೊದಲಾದ ಮರದಸಾಮಾನುಗಳನ್ನು ಮಾಡುವವರು, ಕಬ್ಬಿಣದಬಲೆಗಳನ್ನು ಮಾಡುವದು, ಇಟಕೆಸುಡುವದು, ಕಲ್ಲು ಮತ್ತು ಮರದ ಕೆಂಟ್ರ್ಯಾಕ್ಟರುಗಳಲ್ಲಿ, ಅನೇಕಮಂದಿ ಇರುವರು ಸಿವಿಲ್ ಇಂಜಿನೀಯರು ಕೆಲಸಗಳನ್ನುಮಾಡಿ ಪ್ರಖ್ಯಾತಿಯಾಗಿರುವ ೮೫ ಸ್ತ್ರಿ ಎಂಜಿನಿಯರುಗಳು ಹಡಗು ನಡೆಸುವವರು, ೧೬೬೮ ರೈಲ್ವೆ ಗಾಡಿಯನ್ನು ನಡೆಸುವವರು, ೪೮ ಟ್ರಾಂಗಾಡಿಯ ಕೆಲಸದವರು, ಇದಾರೆ. ಯಂತ್ರದ ಕೆಲಸಗಳೆನ್ನು ಮಾಡುವವರು ೩೭೧ ಮಂದಿ ಇದಾರೆ. ಇವರಲ್ಲಿ ಒಬ್ಬಳು ಬಂದು ಭಾರಿ ಕಾರ್ಖಾನೆಯನ್ನಿಟ್ಟು ತಾನೇ ಎಲ್ಲಾ ಕೆಲಸಗಳನ್ನು ನಡೆಸುವಳು.

ಅಮೆರಿಕಾದಲ್ಲಿ ಸತ್ಕವರ ಹೆಣಗಳನ್ನು ಸಾಗಿಸುವದಕ್ಕೆ ೩೫೩ ಹೆಂಗಸರಿದಾರೆ, ಹಜಾಮೆಗೆ ಕೆಲಸಮಾಡತಕ್ಕ ಹೆಂಗಸರು ೫೫೩೪ ಜನರಿದಾರೆ. ಅಮೆರಿಕಾದ ಸ್ತ್ರಿ ವೈದ್ಯರುಗಳು ಬಹು ಪ್ರಖ್ಯಾತಿ ಹೊಂದಿರುವರು ಇವರ ಸಂಖೆಯು ೮೦೦೮ ಎಂತಲೂ ಸಾಧಾರಣ ವೈದ್ಯರು ಬೇರೆಇದಾರೆಂದೂ ತಿಳಿಯುವದು. ಚಿತ್ರ ಕೆಲಸವೇ ಮೊದಲಾದ ಕಲಾಶಾಸ್ತ್ರಗಳನ್ನು ಬೋಧಿಸುವ ಹೆಂಗಸರು ೧೧೧೦ ಜನ, ವರ್ತಮಾನಪತ್ರಿಕೆಗಳಲ್ಲಿ ೨೧೯೨ ಜನರು, ೧೦೦೦ ಹೆಂಗಸರು ಲಾಯರ್ ಕೆಲಸದಲ್ಲಿ ಇರುವರು.

ಅಮೇರಿಕಾದ ನ್ಯಾಯಾಸ್ಥಾನ ಪಟ್ಟಣದಲ್ಲಿರುವ ಸ್ತ್ರಿಲಾಯರುಗಳು ಬಹಳ ಬುದ್ಧಿವಂತರಾಗಿಯು ತಮ್ಮ ಉದ್ಯೋಗದಲ್ಲಿ ನಿಪುಣರಾಗಿಯೂ ಇದಾರೆ. ಕೆಲವುವೇಳೆ ಇವರು ಹೆಂಗಸರೆಂಬ ವ್ಯತ್ಯಾಸವು ತಿಳಿಯದೇ ಇರುವಂತೆ ಅವರ ಆಫೀಸುಗಳು, ಕೆಲಸಗಳು ನಡೆಯುತ್ತವೆ. ಈ ರೀತಿ ಒಬ್ಬ ಹೆಂಗಸು ವರ್ಷಕ್ಕೆ

ನ್ನು ಸಮಾಂದೆಂಬಲ್ಲಿಗೇಳುವವರು ಎಲ್ಲರೂ ಕೂಡಿಸ್ಕೊಳ್ಳಲೇ ಬಹುದು ನಮಗೆ ಎದ್ದು ಯೆನ್ನೂ, ಜ್ಞಾನವನ್ನೂ ಕೊಟ್ಟಿರುವದು ಬಲ್ಲಿ ಸೃಷ್ಟಿಯಲ್ಲಿನ ಪ್ರತಿಯೊಂದು ವಸ್ತುವನ್ನೂ ಖಚಿತ ಜಾಗರೂಕತೆಯಿಂದ ಪರೀಕ್ಷಿಸಿ ಅದರ ನಿಜಸ್ವರೂಪವನ್ನು ತಿಳಿದುಕೊಳ್ಳಲು ಪ್ರಯತ್ನಪಡುವದಕ್ಕಾಗಿಲ್ಲವೆ? ಈ ಗುಣವು ಪಾಶ್ಚಾತ್ಯರಲ್ಲಿ ವಿಶೇಷವಾಗಿ ನೆಲೆಗೊಂಡಿರುವದರಿಂದಲೇ ಅವರು ಪ್ರಪಂಚದಲ್ಲೆಲ್ಲಾ ಇಷ್ಟು ಪ್ರಬಲ್ಯಕ್ಕಾಗಿ ಎಲ್ಲೆಲ್ಲಿಯೂ ಆಶ್ಚರ್ಯಾನಂದಗಳ ಕಾರವನ್ನು ತಮ್ಮ ಜ್ಞಾನತೇಜಸ್ಸಿನಿಂದ ಚದರಿಸುತ್ತಿರುವರು.

ಸೂರ್ಯನೆಂದರೇನು? ಎಂಬ ಪ್ರಶ್ನೆಗೆ ಪಾಶ್ಚಾತ್ಯ ಶಾಸ್ತ್ರಜ್ಞರು ಏನು ಉತ್ತರ ಕೊಡುವರೋ ನೋಡೋಣ. "ಸೂರ್ಯನು ರಭಸದಿಂದ ಉರಿಯುತ್ತಿರುವ ಅಗಾಧವಾದ (ಅಂದರೆ ಸುಮಾರು ೫೫ ಲಕ್ಷ ಮೈಲುಗಳ ವಿಸ್ತಾರವಿಳ್ಳ) ಚೆಂಡಾಲಿ ಯಂತಿಲವು. ಈ ಮಂಡಲದಲ್ಲಿ ನಮ್ಮ ಭೂಮಿಯಲ್ಲಿ ದೊರೆಯುವ ಕಬ್ಬಿಣ, ತಾಂಬ್ರ, ಬೆಳ್ಳಿ, ಸೀಸ, ಇಂಗಾಲ ಇವೇ ಮೊದಲಾದ ಅನೇಕ ವಸ್ತುಗಳು ಹಾಯುರೂಪವನ್ನು ಧರಿಸಿ ಉರಿಯುತ್ತಿರುವವು. ಸೂರ್ಯನ ತೇಜಸ್ಸಿಗೆ ಕಾರಣಭೂತವಾದ್ದು ನಮ್ಮ ಭೂಮಿಯಲ್ಲಿರುವ ಭೌತಿಕ ಮೂಲವಸ್ತುಗಳೆಲ್ಲವೂ ಸೂರ್ಯನಲ್ಲಿರುವವು."

ಪಕ್ಷತ್ರಗಳೆಂದರೇನು? "ಇವುಗಳು ನಮ್ಮ ಸೂರ್ಯನಂತೆಯೇ ಪ್ರಜ್ವಲಿಸುತ್ತಿರುವ ಸೂರ್ಯಮಂಡಲಗಳು. ಇವುಗಳಿಗೂ ನಮ್ಮ ಸೂರ್ಯಮಂಡಲಕ್ಕಿರುವಂತೆಯೇ ಭೂಮಿಯಂತಹ ಗ್ರಹಗಳು ಸುತ್ತಲೂ ಸುಳ್ಳುತ್ತಿರುವವು. ಆದರೆ ಈ ನಕ್ಷತ್ರಗಳು ನಮ್ಮ ಸೂರ್ಯನಿಗಿಂತಲೂ ಅತ್ಯಂತ ದೂರದಲ್ಲಿರುವದರಿಂದ ಇವುಗಳು ನಮಗೆ ಸಣ್ಣ ಚುಕ್ಕೆಗಳಂತೆ ಕಾಣುವವು. ಇವುಗಳಲ್ಲಿಯೂ ನಮ್ಮ ಭೂಮಿಯಲ್ಲಿರುವ ಕೆಲವು ಭೌತಿಕ ವಸ್ತುಗಳು ಕಂಡು ಬರುವವು. ಸೂರ್ಯಮಂಡಲವು ಭೂಮಿಗೆ ಈ ನಕ್ಷತ್ರಗಳಿಗಿಂತಲೂ ಬಹಳ ಹತ್ತಿರ (ಅಂದರೆ ೮೫ ಕೋಟಿ ವೈಲುಗಳಷ್ಟಿರಬಹುದು) ಇರುವದರಿಂದ ಅಷ್ಟು ಪ್ರಕಾಶಮಾನವಾಗಿ ಕಾಣುವದೇವಿನಾ, ಅಂತರಿಕ್ಷದಲ್ಲಿ ಯಾವುದಾದರೂ ಒಂದು ನಕ್ಷತ್ರವಿರುವ ಪ್ರದೇಶದಿಂದ ನೋಡಿದಲ್ಲಿ ವಿಶೇಷಕಾಂತಿಯಿಲ್ಲದ ಸಣ್ಣ ನಕ್ಷತ್ರದೊಪಾದಿಯಲ್ಲಿಯೇ ಕಾಣುವದೆ."

ಮೇಲೆ ನಿರೂಪಿಸಿರುವ ಸಂಗತಿಗಳು ಎಲ್ಲರಿಗೂ ಅತ್ಯದ್ಭುತವಾಗಿ ತೋರುವದಲ್ಲದೆ ಕೆಲವರಿಗೆ ಕಲ್ಪನಾಕಥೆಯೆಂದು ಕೂಡ ತೋರಬಹುದು. ಆದರೆ ಇವು ಶಾಸ್ತ್ರರೀತ್ಯಾ ನಿರ್ಧರಿಸಲ್ಪಟ್ಟು ಅನುಮಾನಕ್ಕೆ ಕಾರಣವಿಲ್ಲದಿರುವುಗಳಾಗಿರುತ್ತವೆ. ಪ್ರಯತ್ನ ಪಟ್ಟಲ್ಲಿ ಇವುಗಳನ್ನು ಗ್ರಹಿಸಲು ಯಾರಿಗೂ ಅಸಾಧ್ಯವಲ್ಲ. ಆದರೆ ಪುಸ್ತಕಗಳನ್ನು ಓದಿದ ಮಾತ್ರದಿಂದಲೇ ಸಾಧ್ಯವಾಗಲಾರದು; ಪರೀಕ್ಷೆಯೂ ಅದಕ್ಕೆ ತಕ್ಕ ಉಪಕರಣಗಳೂ ಬೇಕು. ಇನ್ನೊಂದು ಮುಖ್ಯ ಕಾರಣವು ಬುಧೇ. "ಬಿಳಿಯ ಬೆಳಕೆಂಬುದು ಕೆಲವು ನಾನಾ ವರ್ಣಗಳ ಬೆಳಕುಗಳು ಸೇರಿ ಆಗಿರುತ್ತದೆ. ಉದಾಹರಣೆಗೆ ಆಕಾಶದಲ್ಲಿ ಗಾಜಿನಲ್ಲೇ ಆಗಲಿ ಅಥವಾ ಮತ್ತಾವುದಾದರೂ ಈ ಅರ್ಥದಲ್ಲಿ ಪಾರದರ್ಶಕ (ವರ್ಣದ) ಪದಾರ್ಥದಲ್ಲೇ ಆಗಲಿ ಬಿಳಿಯ ಬೆಳಕಿನ ಕಿರಣಗಳು ಪ್ರವೇಶಿಸಿ ಹೊರಕ್ಕೆ ಬಂದಕ್ಷಿ ಅವು ನಾನಾ ವರ್ಣಗಳ ರಶ್ಮಿಗಳಾಗಿ ವಿಭಾಗಿಸಲ್ಪಡುವವು. ಈ ಸಂಗತಿಯು ಅತ್ಯಂತ ಫಲದಾಯಕವಾದದ್ದು. ಇದರಿಂದಲೇ ಇತರ ವಿಧಗಳಲ್ಲಿ ಅಸಾಧ್ಯವಾದ ಅನೇಕ ಸಂಗತಿಗಳು ನನಗೆ ತಿಳಿದು ಬರುವವು. ಲಸ್ಪರಿನ ಅಕ್ಷತಿಯು ಗಾಜಿಗೆ 'ಪ್ರಸಂ' (prism) ಎಂದು ಹೆಸರು. ಯಾವ ವಿಧವಾದ ಬೆಳಕನ್ನೇ ಆಗಲಿ ವಿಶ್ಲೇಷಿಸುವ ಶಕ್ತಿಯಂ ಇದಕ್ಕೆ ಉಂಟು. ಹೇಗೆಂದರೆ, ವಿದ್ಯುಚ್ಛಕ್ತಿಯಿಂದ ಎರಡು ಕಬ್ಬಿಣದ ಕಡ್ಡಿಗಳ ಮಧ್ಯೆ ಬೆಳಕು ಹುಟ್ಟುವಂತೆ ಮಾಡಿ ಅದರಿಂದ ಹೊರಕ್ಕೆ ಬರುವ ರಶ್ಮಿಗಳನ್ನು ಸರಿಯಾದ ರೀತಿಯಲ್ಲಿ ದೃಷ್ಟಿಸಿ ನೋಡಿದಲ್ಲಿ ಒಂದು ವಿಧವಾದ ಕಾಂತಿ ಪ್ರದೇಶವು (spectrum) ಕಾಣಬರುವದು. ಕಬ್ಬಿಣದ ಕಡ್ಡಿಗಳ ಮಧ್ಯೆ ಕಾಣಬರುವ ವಿದ್ಯುಚ್ಛಕ್ತಿಯು ಬೆಳಕು ವಾಯುರೂಪಕ್ಕೆ ತಿರುಳ್ವುತ್ತ ಕಬ್ಬಿಣದ ಕಣಗಳು ಪ್ರಜ್ವಲಿಸುವದರಿಂದ ಉಂಟಾಗುವದು.

ಹೀಗೆಯೇ ಈ ಮಾತನ್ನು ಉಪಯೋಗಿಸಿದರೆ ಈ ಮೂರ್ತ ಕಣಗಳು ಪ್ರಜ್ವಲಿಸುವವು. ಶಾಖವು ವಿಶೇಷವಾಗಿಯೂ ಕಾಂತಿಯು ವಿಶೇಷವಾಗಿಲ್ಲದೆಯೂ ಇರುವ ಒಂದು ದೀಪದ ಜ್ವಾಲೆಯಲ್ಲಿ ಕೊಂಚ ಉಪ್ಪನ್ನು ಉದುರಿಸಿ ಆ ಬೆಳಕಿನ ರಶ್ಮಿಗಳನ್ನು ಆದೇ ಪ್ರಸಮಿನಲ್ಲಿ ಹೋಗುವಂತೆ ಮಾಡಿ ನೋಡಿದಲ್ಲಿ ಬೇರೇ ತೆರನಾದ ಕಾಂತಿ ಪ್ರದೇಶವು ಕಾಣಬರುವದು. ಹೀಗೆಯೇ ಪ್ರತಿಯೊಂದು ಭೌತಿಕವಸ್ತುವಿಗೂ ಬೇರೆಬೇರೆ ತೆರನಾದ ಕಾಂತಿಪ್ರದೇಶವು ಉಂಟಾಗುವದು. ಇದರಿಂದ ಯಾವದಾದರೂ ಒಂದು ಪ್ರಜ್ವಲಿಸುತ್ತಿರುವ ಪದಾರ್ಥದಲ್ಲಿ ಯಾವ ಯಾವ ಭೌತಿಕ ಮೂಲವಸ್ತುಗಳವೆಯೆಂದು ಸುಲಭವಾಗಿ ಹೇಳಿಬಹುದು. ಇಂತಹ ಕೆಲಸಕ್ಕಾಗಿಯೇ ಸ್ಪೆಕ್ಟ್ರಸ್ಕೋಪ್ (spectroscope) ಎಂಬ ಯಂತ್ರವನ್ನು ಕಲ್ಪಿಸಿರುವರು. ಅದರಲ್ಲಿ ಮುಖ್ಯವಾದ ಭಾಗವು ಮೇಲೆ ವಿವರಿಸಿದ ಪ್ರಸಂ ಎಂಬುವದು. ಈ ಪ್ರಸಮನ್ನು ಖಚಿತ ಜಾಗರೂಕತೆಯಿಂದ ಒಂದೇ ಸಮನಾಗಿರುವಂತೆ ಗಾಜಿನಲ್ಲಿ ಮಡಿಯುವರು. ಇದು ಸ್ಪೆಕ್ಟ್ರಸ್ಕೋಪಿನ ಮಧ್ಯಭಾಗದಲ್ಲಿ ಒಂದು ಬೇರೆ ಪೆಟ್ಟಿಗೆಯಲ್ಲಿ ಸಿಕ್ಕಿಸಲ್ಪಟ್ಟಿರುವದು. ಆ ಪೆಟ್ಟಿಗೆಯ ಸುತ್ತಲೂ ಎರಡು ಕೊಳವೆಗಳು ಅಡರುತ್ತಿರುವವು. ಇವುಗಳಲ್ಲೊಂದು ಕೊಳವೆಯು ನಾವು ಪರೀಕ್ಷಿಸಬೇಕಾದ ಬೆಳಕಿನ ರಶ್ಮಿಗಳನ್ನು ಒಂದೇ ಸಮನಾಗಿ ಪ್ರಸಮಿನ ಮೇಲೆ ಬೀಳುವಿನಂತೆ ಮಾಡುವದು. ಮತ್ತೊಂದು ಇದಕ್ಕೆ ಲಂಬವಾಗಿ ತೋರುವ ಯಂತ್ರವು ಪ್ರಯೋಗಾರ್ಹ ಅದ್ಭುತಕಾರ್ಯಗಳು ಅನೇಕವಾಗಿವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಮುಂದೆ ತಿಳಿಸುವೆವು.

೧ ಆಣುವೀಣುವಷ್ಟಿರುವ ಪದಾರ್ಥದಲ್ಲಿ ಯಾವ ಮೂಲವಸ್ತುಗಳವೆಯೆಂದು ತಿಳಿಯಬಹುದು. ಕೆಲವು ಸಂದರ್ಭಗಳಲ್ಲಿ ಗೋದೀಕಾಳಿನ ತೂಕದ ಕೋಟಿಭಾಗದಲ್ಲಿ ಒಂದು ಭಾಗದಷ್ಟಿರುವ ಪದಾರ್ಥವನ್ನು ಕಂಡುಹಿಡಿಯಬಹುದು. ೨ ಸೂರ್ಯ ಚಂದ್ರ ನಕ್ಷತ್ರಗಳಲ್ಲಿರುವ ಭೌತಿಕ ವಸ್ತುಗಳು ಯಾವುವೆಂಬುದನ್ನೂ ಇವು ಯಾವ ಸ್ಥಿತಿಯಲ್ಲಿ, ಎಂದರೆ ಘನ, ಜಲ, ಅಥವಾ ವಾಯು ಸ್ಥಿತಿಯಲ್ಲಿನವೆ ಯೆಂಬುದನ್ನೂ—ಸೂರ್ಯನು ಬಿಗುರಿಯಂತೆ ಸುತ್ತುತ್ತಿರುವ ಸಂಗತಿಯನ್ನೂ—ಆ ಸುತ್ತುವಿಕೆಯ ಪರಿಮಾಣವನ್ನೂ—ಸೂರ್ಯಮಂಡಲದ ವೇಲ್ಪಿಗದಲ್ಲಿ ದೂರ ದರ್ಶಿಯಂತ್ರದಲ್ಲಿ ನೋಡಿದರೆ ಕಾಣಬರುವ ಕಪ್ಪು ಚುಕ್ಕೆಗಳ ಕಾರಣವನ್ನೂ—ಸೂರ್ಯನ ಕಾಂತಿಯೇ ಚಂದ್ರನಲ್ಲಿಯೂ ಗ್ರಹಗಳಲ್ಲಿಯೂ ಪ್ರತಿಫಲಿಸುತ್ತಿದೆ ಯೆಂಬ ಸಂಗತಿಯನ್ನೂ—ಚಂದ್ರನ ಸುತ್ತಲೂ ವಾಯುಮಂಡಲವಿಲ್ಲವೆಂಬುದನ್ನೂ—ಧೂಮಕೇತು ಅಥವಾ ಪೊರಕೆ ಚುಕ್ಕೆಗಳು ಉರಿಯುತ್ತಿರುವ ವಾಯು ವಿಶೇಷಗಳು ಅಥವಾ ಹಬೆಗಳೆಂಬುದನ್ನೂ—ನಕ್ಷತ್ರಗಳು ಆಕಾಶದಲ್ಲಿ ಸಂಚರಿಸುತ್ತಿರುವ ವೇಗದ ಪರಿಮಾಣವನ್ನೂ—ಸೂರ್ಯನಲ್ಲಿನ ವಾಯು ವಿಶೇಷಗಳು ಸೆಕೆಂಡಿಗೆ ೫೦ ಅಥವಾ ೧೦೦ ಮೈಲಿಗಳ ವೇಗದಿಂದ ಚಲಿಸುತ್ತಿರುವ ಸಂಗತಿಯನ್ನೂ ಕಂಡು ಹಿಡಿಯಬಹುದು. ೩ ಒಂದು ಬಟ್ಟೆಯು ಮೇಲೆಯೋ ಅಥವಾ ಮತ್ತಾವ ಪದಾರ್ಥವ ಮೇಲೆಯೋ ಎಷ್ಟೋ ದಿನಗಳ ಕೆಳಗೆ ಬಿದ್ದ ರಕ್ತವು ಅತಿ ಸೂಕ್ಷ್ಮವಾದ ಅಂದರೆ ಗೋದೀಕಾಳಿನ ಕೋಟಿಯ ಮೂರು ಭಾಗದಲ್ಲಿ ಒಂದು ಭಾಗದಷ್ಟಿರುವ ಕಣವನ್ನು ಕಂಡು ಹಿಡಿಯಬಹುದು. ೪ ಕೆಲವು ಕೀಳುತರದ ದ್ರಾಕ್ಷಾರಸಗಳಲ್ಲಿ ಒಳ್ಳೆಯ ದ್ರಾಕ್ಷಾರಸದ ಬಣ್ಣ ಬರುವುದಕ್ಕಾಗಿ ಕೋಸಂಬರಿ ಮಿಶ್ರಿ ಮಾಡಿದ ಪದಾರ್ಥಗಳನ್ನೂ, ಯಾವುದಾದರೂ ದ್ರಾಕ್ಷಾರಸವು ತನ್ನಷ್ಟಾನುತಾನೆ ಎಷ್ಟು ವರುಷಗಳಾದವೆಂಬುದನ್ನೂ ಕಂಡು ಹಿಡಿಯಬಹುದು. ೫ ಬೆಳಕಿನ ತರಂಗಗಳ ಪರಿಪೂರ್ಣತನವನ್ನು ಬಹು ನಿಕರವಾಗಿ ಕಂಡು ಹಿಡಿಯಬಹುದು. ಆದರೆ ಒಂದು ಅಂಗುಲದ ಅರವತ್ತು ಸಾವಿರ ಭಾಗಗಳಲ್ಲಿ ಒಂದು ಭಾಗದಷ್ಟು ವಿಸ್ತಾರವನ್ನು ಅಳತೆ ಮಾಡಬಹುದು. ೬ ಈ ಯಂತ್ರದ ಸಹಾಯದಿಂದಲೇ ಇದುವರೆಗೂ ಮನುಷ್ಯನಿಗೆ ತಿಳಿಯದ ಕೆಲವು ಮೂಲವಸ್ತುವನ್ನು ಕಂಡು ಹಿಡಿದಿರುತ್ತಾರೆ. 'ಹಿಲಿಯಂ' ಎಂಬ ಒಂದು ಮೂಲ

ಕನ್ನಡ ನುಡಿಗನ್ನಡಿ.

ತುಲಸೀ-ರಾಮದಾಸ್ ರವರಿಂದ ಮುದ್ರಿಸಲ್ಪಡುವ

ಮಾಸಪತ್ರಿಕೆ.

ಇದು

(ಪ್ರತಿ ಪೌರ್ಣಿಮೆಯಲ್ಲಿಯೂ ಪ್ರಕಟಿಸಲ್ಪಡುವುದು.)

ಇದರಲ್ಲಿ ಅಪೂರ್ವವಾದ ವೃತ್ತಾಂತಗಳು, ನೀತಿಗಳು, ಧರ್ಮಗಳು, ನ್ಯಾಯಗಳು, ನೆನಪಿಡತಕ್ಕ ಚಿಕ್ಕಕಥೆಗಳು, ಸಮಸ್ಯೆಗಳು, ಒಗಟುಗಳು, ವ್ಯಾಪಾರಸ್ಥರಿಗೆಬೇಕಾದ ವಿಶೇಷವಿಷಯಗಳು, ಚಿತ್ರಗಳಾ ಸೇರಿರುತ್ತವೆ.

ವರುಷಕ್ಕೆ ಚಂದಾಮೊಬಲಗು ರೂಾ ೧- ೮- ೦.

ತಿಂಗಳ ಸಂಚಿಕೆಗೆ ಬೆಲೆ ,, ೦- ೨- ೮.

ಚಂದಾದಾರರಿಗೆ ಟಪಾಖರ್ಚು ಇದರಲ್ಲಿಯೇ ಸೇರಿರುತ್ತೆ.

ಈಶೋಭಕೃತ್ಸಂವತ್ಸರದ ಕಾರ್ತೀಕಶುಕ್ಲ ೧೫ ಯಲ್ಲಿ ೧೯೦೩ ನೆಯ ಇಸವಿಯಂಬರು ಲಕ್ಕೆ ಮೊದಲಪತ್ರಿಕೆ ಹೊರಟಿರುತ್ತೆ.

ಈ ನಮ್ಮ ಪತ್ರಿಕೆಯಲ್ಲಿ, ನಮ್ಮ ಯೇಜಂಟುದಾರರ ಹೆಸರುಗಳು ಅವರವರು ಬರೆದುಕಳುಹಿಸುವವಿಷಯಗಳೂ ಪ್ರಕಟಿಸಲ್ಪಡುವುವು.

ಇದಕ್ಕೆ ಚಂದಾದಾರರಾಗುವವರಿಗೆ ಅನೇಕವಿಷಯಗಳು ತಿಳಿಯುವಿಕೆಯೊಂದಲ್ಲದೆ, ವ್ಯಾಪಾರಾದಿವಿಷಯಗಳಲ್ಲಿ ಬಹಳಲಾಭವುಂಟು.

ದರಖಾಸ್ತುಗಳನ್ನು ಸಂವತ್ಸರದ ಚಂದಾರೂಪಾಯಿಸಹಿತವಾಗಿ ಶೀಘ್ರವಾಗಿ ಕಳುಹಿಸಬೇಕೆಂದು ಹಾರೈಸುತ್ತಿರುವೆವು.

ಇಂತು,

ಸುಜನವಿಧೇಯ

ತುಲ[illegible] ರಾಮದಾಸ್,

ಪತ್ರಿಕಾಧಿಪತಿ.

೧೯೦೩ನೆ ಸಂ॥ ಜನವರಿ ೨೨.

ಮದರಾಸ್.

ಶ್ರೀವಿಶ್ವೇಶಾಯನಮಃ.



ಶ್ಲೋ॥ ಶ್ರೀಮದಿಂಡ್ಯಾಚಕ್ರವರ್ತಿ ಪ್ರೇಮದಿಂ ದೆಚ್ಚರ್ಣಸೇವಾತ್।
ನೇಮದಿಂದಂ ರಾಜ್ಯವಾಳಲ್ ಕ್ಷೇಮದಿಂ ಪ್ರಜೆರಾಜಿಕುಂ.

ಸಂಪುಟ ೧. } ಶೋಭಕೃತ್ ಪುಷ್ಯಮಾಸಂ. (4-1-1904). { ಸಂಚಿಕೆ ೨.

ಕ. ನೆರವಾಗಿರೆನಾಡಿಗರೊ। ಳ್ಸಿರಿಸರಸತಿಯುತ್ತೆಸ್ಫೂರ್ತಿವರದನ್ಪ್ರೋರ್ನ್ನ್ಯೇ
ನೆರೆಕನ್ನಡಸಂಡಿಗವನ್ನಡಿ। ಮೆರೆಗುಂವಾಣಿನ್ಯವಿದ್ಯೆಗಳ್ಬೆಳಗುತಿರಳ್॥

ಭಾ॥ ಅಂಬೆಭೃತವಿಧುಬಿಂಬೆಮಹಿಮ ಕ।
ದುಂಬಿ ಸರಸಕದಂಬೆ ಲೋಕವಿ।
ಡಂಬೆಪುರಿತ ವಿಲಂಬಿ ನವಪವಲಂಬಿ
[ಮೂಕಾಂಬೆ॥

ಭಾ॥ ಮಂಗಳಾಹ್ವಯ ಪುಂಗವಧ್ವಜ।
ರಂಗವಿತ್ರಕ-ರಂಗ ಭೃಂಧರ।
ಬಂಗಜಟಿಭವಭಂಗ ವಿಜಿತಾನಂಗ ಧವ
[ಳಾಂಗ॥

ಕ್ಷ್ಯೋತಿಸಕಲಸೌರಮಂಡಲಗಳ।
ಬಿಂಬಿಸ ಗುಣಾಲಂಬೆ ಗಜಮುಖಿ।
ನಂಬಿಷಣ್ಮುಖನಂಬಿಸಲಮ ವಲಂಬೆ
[ಜಗದಂಬೆ

ಸಾಂಗಶ್ರುತಿಕೃತ ಸಂಗಹೃತ್ಕಜ।
ಭೃಂಗಪೊರೆ ಅವಿ ಭಂಗವಹಿಮೋ
ತ್ತುಂಗಸಚಯಾಹಾಂಗವಿಧೃತಕುರಂಗ
[ಶಿವಲಿಂಗಾ.

ಇದರಲ್ಲಿ ಅಪೂರ್ವ ವೃತ್ತಾಂತಗಳು, ನೀತಿಗಳು, ಧರ್ಮಗಳು, ನ್ಯಾಯಗಳು, ನೆನಪಿಡತಕ್ಕ ಬೆಕ್ಕುಕಥೆಗಳು, ಸಮಸ್ಯೆಗಳು, ಒಗಟುಗಳು, ವ್ಯಾಪಾರ ವಿಷಯಗಳು, ಚಿತ್ರಗಳೂ, ಸೇರಿ ಸರ್ವಪ್ರಕಾರವ್ಯತ ಸಾರವೆನಿಸಿರುವುದು.

ಕನ್ನಡನುಡಿ ಗನ್ನಡಿ.

ಸದ್ಭೋಧಾಮೃತವು

ಪುತ್ರಸ್ವರೂಪವು.

ಅವತಾರಿಕೆ—ಹಿಂದೆ ಹೇಳಿದಂತೆ ಮಾತಾಪಿತೃಭಕ್ತಿಯುಕ್ತರಾದವರು ತಮ್ಮ ಪುತ್ರಧರ್ಮಗಳನ್ನು ಮುಖ್ಯವಾಗಿ ತಿಳಿಯಬೇಕಾಗಿರುವುದರಿಂದ ತತ್ಸ್ವರೂಪವು ಧರ್ಮ ಶಾಸ್ತ್ರಗಳಲ್ಲಿ ಹೀಗೆ ತಿಳಿಯಬರುತ್ತಿದೆ. ಹೇಗೆಂದರೆ:—

ಶ್ಲೋ॥ ಪುನ್ನಾಮ್ನೋ ನರಕಾದ್ಯಸ್ಮಾ ತ್ಪಿತರಂತ್ರಾಯತೇ ಸುತಃ
ತಸ್ಮಾತ್ತ್ವಪುತ್ರಇತಿಪ್ರೋಕ್ತ ಸ್ಸ್ವಯಮೇವಸ್ವಯಂಭುವಾ॥

ಟೀ॥ ಯಸ್ಮಾತ್=ಯಾವ, ಪುನ್ನಾಮ್ನಃ=ಪುತ್ ಎಂಬ ಹೆಸರುಳ್ಳ, ನರಕಾತ್= ದುಃಖಾನುಭವದಿಸೆಯಿಂದ, ಪಿತರಂ = ತಂದೆಯನ್ನು, ಸುತಃ = ಮಗನು, ತ್ರಾಯತೇ=ಕಾಪಾಡುವನೋ; ತಸ್ಮಾತ್= ಆಕಾರಣದತ್ತಣಿಂದ, ಸ್ವಯಂಭುವಾ= ಸೃಷ್ಟಿಕರ್ತನಾದ ಬ್ರಹ್ಮನಿಂದ, ಸ್ವಯಂ+ಏವ= ತಾನಾಗಿಯೇ, ಪುತ್ರಃ+ಇತಿ = ಪುತ್ರನೆಂದು, ಪ್ರೋಕ್ತಃ= ಆಮಗನು ಹೇಳಲ್ಪಡುವನು. ಎಂದರೆ ಮಗನು ಹುಟ್ಟುವುದರಿಂದ ತಂದೆಗೆ ಸದ್ಗತಿಯನ್ನು ಕೊಡುವನು. ಇವನು ಹುಟ್ಟುವುದರಿಂದ ತಂದೆಗೆ ದುಃಖನಿವೃತ್ತಿಯಾಗುವುದು. ಧರ್ಮಪ್ರಜಾಸಂತತಿ ಪರಂಪರೆಯನ್ನು ಪ್ರವಾಹಗಲಾಡಿಸದೆ ಬೆಳೆಯಿಸಿದುದರಿಂದಲೇ ತಂದೆಗೆ ದುಃಖನಿವೃತ್ತಿಯೆಂದು ಭಾವವು.

ಶ್ಲೋ॥ ಅಜಾತಮೃತಮೂರ್ಖಾರ್ಣಾಂ ಮೃತಾಜಾತೌವರೌಸುತೌ॥
ತಾಕಿಂಚಿಚ್ಛೋಕದೌ ಪಿತ್ರೋ ರ್ಮಾರ್ಖಸ್ತ್ವತ್ಯಂತಶೋಕದಃ॥

ಟೀ॥ (ಮೂರುವಿಧಗಳ ಸಂತಾನಗಳು, ಹುಟ್ಟಿದವು, ಹುಟ್ಟಿ ಸತ್ತವುಗಳು, ಹುಟ್ಟಿ ಮೂರ್ಖಂಗಳಾದುವು.) ಅಂತಹ, ಅಜಾತ= ಹುಟ್ಟಿದವನು, ಮೃತ= ಸತ್ತವನು, ಮೂರ್ಖಣಾಂ= ಹುಟ್ಟಿ ಮೂರ್ಖನು ಎಂಬಿ ಮೂರರಲ್ಲಿ, ಮೃತ+ಅಜಾತಾ= ಸತ್ತವನು ಹುಟ್ಟಿದವನು ಎಂಬಿಬ್ಬರೂ, ವರಾ= ಶ್ರೇಷ್ಠರಾದ, ಸುತಾ= ಮಕ್ಕಳಿನಿಸುವರು. (ಏಕೆಂದರೆ) ತಾ= ಅವರಿಬ್ಬರೂ, ಪಿತ್ರೋಃ= ತಂದೆಗೆ, ಕಿಂಚಿತ್+ಶೋಕದಾ= ಕೊಂಚವೆಂದರೆ ನೆನಸಿಕೊಂಡ ಒಂದುವೇಳೆಯಲ್ಲಿ ಮಾತ್ರವೇ ವ್ಯಸನಗೊಳಿಸುವರು. ಮೂರ್ಖಃ+ತು=ಮೂರ್ಖನಾದ ಮಗನಾದರೋ, ಅತ್ಯಂತಶೋಕದಃ=ಬಹಳದುಃಖಕರನಾಗಿರುವನು. (ಮಗನು ಮೂರ್ಖನಾದರೆ ತಂದೆತಾಯಿಗಳು ದುಃಖಿಸುತ್ತಿರುವರೆಂದು ಭಾವವು.)

ಶ್ಲೋ॥ ಜೀವತೋವಾಕ್ಯಕರಣಾತ್ ಪ್ರತ್ಯಬ್ದಂಭೂರಿಭೋಜನಾತ್।
ಗಯಾಯಾಂಪಿಂಡದಾನಾಚ್ಚ ತ್ರಿಭಿಃಪುತ್ರಸ್ಯಪುತ್ರತಾ॥

ಟೀ॥ (ಅಂತಹ ಮಾರ್ಖನಲ್ಲದೆ ಪುತ್ರನು ತನ್ನಪುತ್ರತ್ವವನ್ನು ಈಶ್ಲೋಕದೊಳಗಣ ಮೂರುಕೆಲಸಗಳಿಂದ ಕಾಪಾಡಬೇಕು.) ೧. ಜೀವತಃ = ಬದುಕಿರುವ ತಂದೆಯು, ವಾಕ್ಯಕರಣಾತ್ = ಮಾತನ್ನು ನೆರವೇರಿಸುವುದರಿಂದಲೂ, ೨. ಪ್ರತ್ಯಬ್ದಂ= ತಂದೆ ಸತ್ತುಹೋದೆಮೇಲೆ ಪ್ರತಿಸಂವತ್ಸರದಲ್ಲಿಯೂ, ಭೂರಿಭೋಜನಾತ್=ವಿಸ್ತಾರವಾಗಿ ಶ್ರಾದ್ಧಭೋಜನಗಳನ್ನಿಡುವುದರಿಂದಲೂ, ೩. ಗಯಾಯಾಂ= ಗಯಾಕ್ಷೇತ್ರದಲ್ಲಿ, ಪಿಂಡದಾನಾತ್ = ವಿಷ್ಣುಪದಿಶ್ರಾದ್ಧ ಮಾಡುವುದರಿಂದಲೂ, ತ್ರಿಭಿಃ= ಈ ಮೂರರಿಂದಲೇ, ಪುತ್ರಸ್ಯ= ಮಗನಿಗೆ, ಪುತ್ರತಾ= ಪುತ್ರತ್ವವು. ಎಂದರೆ ತಂದೆ ಕೇಳಿದುತೆಕ್ಕೆಳುತ್ತಿದ್ದ ಬಳಿಕ ಕೃತಜ್ಞತೆಯಿಂದ ಪಿತೃಧರ್ಮವನ್ನು ಪಾಲಿಸುವನ್ನು ಪುತ್ರನೆನಿಸುವನು.

ಶ್ಲೋ॥ ಪ್ರಜಯಾಚಪಿತೃಂಪೂರ್ವಾನ್ ಋಣೋಮಿವೋದತೇ।
ಪುತ್ರೇಣ ಲೋಕಾಂಜಯತಿಪೌತ್ರೇಣಾನಂದಮಶ್ನುತೇ॥
ಅಥ ಪುತ್ರಸ್ಯಪೌತ್ರೇಣ ನಾಕಮೋಹಾಧಿರೋಹತಿ।
ಅತೋ ಗರೀಯೋಭವತಿ ಪುತ್ರಸ್ತಸ್ಯಹಿ ಪುತ್ರತಾ॥

ಟೀ॥ ಋಣಾಃ= ಗೃಹಸ್ಥನಾಗಿ ಪಿತೃಋಣವಿಮುಕ್ತನಾದವನು; ಪ್ರಜಯಾ= ಸಂತಾನದಿಂದ, ಪೂರ್ವಾನ್=ಪಿತೃಪಿತಾ ಮಹಪ್ರಪಿತಾಮಹಾದಿ ತನ್ನ ಹಿಂದಣವರಾದ ಪಿತೃಗಳ ನೆಲ್ಲರನ್ನೂ, (ಪುತೋನಿತ್ಯಾಸನ್ನರೂಪ ಧರ್ಮಾಚರಣದಿಂದಸಂತೃಪ್ತರನ್ನಾಗಿ ಮಾಡಿ) ದಿವಿ= ತೇಜೋಲೋಕದಲ್ಲಿ, ಮೋದತೇ = ಸಂತೋಷಿಸುವನು. ಮತ್ತು) ಪುತ್ರೇಣ= ಧರ್ಮವಾಗಿ ಜನಿಸಿದ ಮಗನಿಂದ, ಲೋಕಾನ್ = ಐಹಿಕಜನರನ್ನು, ಜಯತಿ= ಜಯಿಸುವನೆಂದರೆ ಇಷ್ಟಿಂದ ಆರಂಭಿಸಲ್ಪಟ್ಟ ಕಾರ್ಯಗಳನ್ನು ಕೊನೆಗಾಣಿಸುವವನಾಗಿಯೂ ತನ್ನ ಅಧಮರೊಣ್ಣೆತ್ತ ಮರ್ಣಾದಿಗಳನ್ನು ನಿರ್ವಹಿಸಿಕೊಳ್ಳುವವನಾಗಿಯೂ ಇರಲುಳ್ಳವನು ಮಗನಾದುದರಿಂದ ಲೋಕರತೊಂದರೆ ತನಗಿಲ್ಲದೆಹೋಗುವಿಕೆಯೇ ಜಯವೆನ್ನಬಹುದು. ಹಾಗಲ್ಲದೆಹೋದರೆ, ಲೋಕಾನ್= ಪಾರತ್ರಿಕ ಲೋಕಗಳನ್ನು, ಜಯಿಸುವನೆಂದರೆ ಆಪುತ್ರನಿಂದ ಕೊಡಲ್ಪಡುವತಿಲೋದಕಾದಿಗಳಿಂದೆ ಪುಣ್ಯಲೋಕಗಳನ್ನು ಹೊಂದುವನೆಂದು ಭಾವವು. ಪೌತ್ರೇಣ=ಮುಮ್ಮಗನಿಂದ, ಆನಂದಮಶ್ನುತೇ = ಸುಖವನುಭವಿಸುವನೆಂದರೆ ನನ್ನವಂಶವು ಹೀಗೆಯೇ ಅಭಿವೃದ್ಧಿಯಾಯಿತಲ್ಲವೇ ನಾನು ಪಿತೃಋಣವಿಮುಕ್ತಿಗಾಗಿ ಪುತ್ರನನ್ನುಪಡೆದಂತೆ ಅವನೂ ಪುತ್ರನನ್ನು ಪಡೆದನೆಂದು ಆನಂದಿಸುವನು. ಅಥ = ಅನಂತರ, ಪುತ್ರಸ್ಯ ಪೌತ್ರೇಣ=

ಮಗನ ಮುಮ್ಮಗನಿಂದೆ, ನಾಕಂ + ಏವ= ಬ್ರಹ್ಮಲೋಕವನ್ನೇ, ಅಧಿರೋಹತಿ=ಹತ್ತ
ನೆಂಬಿವೆ ತಾತಪ್ರವ್ಯಾಪಾರವೆಂಬ್ಲಿ ಭಾವವು. ಪ್ರತೇ:=ಆಕಾರಣದತ್ತಣಿಂ, ಯಃ ಪ್ರತ್ರ:
ಜಾಯತೇ ಸ ಮಂಗಲಾಗೃಹೋಭವತಿ= ಸಂಸಾರಿಯಾಗಿ ಯೇರ್ಪಡವನೋ, ತಸ್ಯ=ಅಂತ
ಯೆನ್ನಿಗೆ ಪುತ್ರನಾಯ=ಪ್ರತ್ರತ್ವಪ್ರಾಪ್ತಿಯಲ್ಲವೆ? ಎಂದರೆ ಯಾವನಾದರೂ ಇಂತಹವನ
ಪ್ರಾಣಿಯೊಂದು ಕೆಸಪಡಿಪು ಧರ್ಮವನ್ನವಲಂಬಿಸಿ ಸಂಸಾರಿಯೆನಿಸಿಕೊಂಡು ಪರೋಪ
ಕಾರಿಯೆತಿಸಿ ಗರುವನೋ ಆವಮ ಮಗನೇ ಹೊರತು, ಯಾವನೋ ಇವನೊಬ್ಬ
ಅನಾಮಧೇಯನು ತಾಪಿಯರೆಸರು ಕೆಡಿಸುವವನು ಮೂಢನು ಎನಿಸಿಕೊಳ್ಳುವ
ಮಗನು ಮಗನಲ್ಲವೆಂದು ತಾತ್ಪರ್ಯವು. ಸಶ್ಲೇಷವು.

ಸುನೀತಿಸಂಪಾದಕದಲ್ಲಿ

ಬಾಲಕನೀತಿ.

ಕರಷಟ್ಪದೀವೃತ್ತಗಳು.

ದುರುಳರು ನಂಬಿಸು
ತೊರೆಯುವಮಾತಿಗೆ
ಮರುಳಾಗುತೆನೀಂ ಮನೆಯಲ್ಲಿ
ಮರೆಯಿಸಿಮನ್ಮ
ನರಿಯಪೆ ಕೊಟ್ಟೈರೆ
ನೆರೆಕೆಡುತಿರುವೈ ಬಾಲಕನೇ.

೧೦. ಅಕ್ಕರಗಳನುಂ
ಲೆಕ್ಕಗಳಂ ನೀ
ನಕ್ಕುತೆಯಿಂಬಿಟ್ಟೆಯೋದುತ್ತ
ತಕ್ಕವನಾಗರೆ
ಮೊಕ್ಕಳವ ಪಸಾ
ಖ್ಯಿಕ್ಕೆಡೆಯಾಪಪೆ ಬಾಲಕನೇ.

೧೧. ಅರುಹುಂಬಾರದ
ಪ್ರತುಭುಂಬಾರದ
ಬರಿದಾಗಿಪಕೆಲಸಗಳಂ ನೀ
ಪಿರಿದಾಸೆಯೊಳಾ
ಚರಿಸಲ್ಕುದರಿಂ
ಕುರಿಕರಿಗೊಳ್ಳುವೆ ಬಾಲಕನೇ.

೧೨. ಜ್ಞಾನವನಳಿಪ
ಲ್ಲಾನಿತನಾಗುವೆ
ನೀನದರಿಂವಿತ ವಘಳಿಪ್ಪೆ
ಮಾನಿತಧನಿಕನೆ
ಭೂನುತನೆನಿಪನು
ನೀನದರಿಂತಿಳಿ ಬಾಲಕನೇ.

೧೩. ಕಾಸನೆಕೊಟ್ಟೈಡೆ
ಹೇಸದೆಕೈಕೊಂ
ಡಾಸೆಗೆಸಿಕ್ಕುಪೆ ತೃಪ್ತಿಗೊಳೈ.
ಲೇಸಹುದದರಿಂ
ಕಾಸನಲಪ್ರಿಸೆ
ಮಾಸಿತುಭಾಗ್ಯಂ ಬಾಲಕನೇ.

೧೪. ಕರುಣಾಯುತರಹ
ಗುರುಗಳು ತಿಳಿಸಿದ
ವರಹಿತವಚನಂಗಳನೊಲಿಪು
ಮ ನುದೆ ನೆನಪಿಗೆ
ತರುತಂದಂದಿಗೆ
ಚರಿಸುವನಾಗೈ ಬಾಲಕನೇ.

೧೫. ಜಲಮಂಕೋಫಸಿ
ತಿಳಿಯಾಗಿಸಿವೈ
ಯೊಳಪ್ಪಗುವಂತೆಂಪಿ ಕ ಡಿಯುಯ್ಯ
ಕೊಳೆಯಿರಲಪ್ಪಿಳ್
ಫಲಿಲ ವಿ ಯ್ಯಡ
ವಳಸವ್ರನಂರಂ ಬಾಲಕನೇ.

೧೬. ಅಡಿಯಿಡುವಾಗಳ್
ನಡೆನೋಡುತೆನಿಂ
ನೆಡವರಿಸದೆ ಪಕ್ಕಗಳಲ್ಲಿ
ತೊಡಕಿರಿಸುಂ ಬಲ್
ತಡೆಗಳನಿವೃತ
ನಡೆಯುವನಾಗೈ ಬಾರಕ್ಷನೇ.

೧೭. ಕೋಡಿಗರಾವ
ರಾಡುವಕುತ್ಸಿತ
ದಾಡಿಕೆಗಳನೀಂ ಲೆಕ್ಕಿಸದೆ
ಕೋಡಗನೊಳ್ಕ್ಷಣ
ಚಾಡದೆ ಜೇಷ್ಟೆಯ
ಮಾಡದಿರಣ್ಣಾ ಬಾಲಕನೇ.

೧೮. ಕ್ರಮವಂತಪ್ಪದ
ಸಮಯೋಚಿತವ ಪ
ವಿಮಲಾಹಾರವ ಭುಜಿಸಯ್ಯಾ
ಕ್ರಮವಿಲ್ಲದಿಕ್ಕೇ
ಳ್ದನಮನಿಸ್ಪ್ರದದರಿಂ
ದೆಮಹಾರೋಗ್ಯಂ ಬಾಲಕನೇ.

ಸಶೇಷವ್ರ.

ಸಮಸ್ಯಾಪೂರ್ತಿ.

"ಕನ್ನಡನುಡಿ ಗನ್ನಡಿ" ಪತ್ರಿಕಾಧಿಪತಿಗಳಿಗೆ— ಅಯ್ಯಾ ನಿಮ್ಮ ಮೊದಲಾದ ಪತ್ರಿಕೆಯನ್ನು ನೋಡಿ, ಎರಡುಸಮಸ್ಯೆಗಳನ್ನು ಪೂರೈಸಿ ಕಳುಹಿಸಿರುವೆನು. ನೀವು ನಿಮ್ಮ ಪತ್ರಿಕೆಯಲ್ಲಿ ನಮೂದಿಸಿರುವಂತೆ ೧ ವರ್ಷದವರೆಗೆ ನಿಮ್ಮ ಪತ್ರಿಕೆಯನ್ನು ಉಚಿತವಾಗಿ ಪಡೆಯಲು ಅರ್ಹನಾಗಿರುವನೆಂದು ತಿಳಿಸಿರುವೆನು.—

ಕಂ॥ ಕಂಜಸಖಂ ರಾತ್ರಿಯೊಳಂ
ಮಂಜುಗದಿರನಾಪಗಲ್ ಪ್ರಕಾಶಿಸೆ ಕನಸಿಂ
ದಂಜಾಗ್ರದ್ದ ಶೆಯೊಪ್ಪಲ್
ಬಂಜೆಗೆಮಗುರಂಜಿಸುವುದು ಸಂಜೆಯೊಳಲ್ಲಿ

ಕಂ॥ ಸುಲಲಿತಗುಣರೀಹರ್ಕಳ್
ನಲಿವುತೆ ಚದುರಂಗವಾಡಿ ನಡುರಾತ್ರಿಯೊಳಾ
ಬಲವೆತ್ತಿರಿಸಲೆ ಮರೆತಿರ
ಲಲಿತನ್ನಯ ಬಿಲಕೆಗಜವ ನಲೆದೆಳತತ್ತೀಂ.

ಬಿಚ್. ಟೆನ್ನಕೇಶವಯ್ಯಂಗಾರ್.

ಹೊಸಸಮಸ್ಯೆಗಳು

೫. ಕಲ್ಲದು ಸಲ್ಲಲಿತನುಗಿ ಸಲ್ಲಾಪಬಿತೇಂ ?
೬. ಜನನಿಯಪತ್ನಿಯನದೆಂತು ಕೂದಪೆನೀಗಳ್?
೭. ವಾವಾಗಂಮಾವನಾಪನಾವಂಮೊಪಲೊಳ್?
೮. ಸರ್ಪಾಕಚಕ್ಷುವುಪೆಸೊರ್ವನೊರ್ವಾ ಮಡಿನಂ.

ಹೀಗೆ ನಮ್ಮಪತ್ರಿಕೆಯಲ್ಲಿ ಹಾಕುವ ಸಮಸ್ಯೆಗಳು, ಒಗಟುಗಳು, ಮೊದಲಾದವುಗಳನ್ನು ೧ ವರುಷದೊಳಗಾಗಿ ಯಾರೂ ಪೂರೈಸಬಿಡಲು; ಕಡೆಗೆ ನಾವೇ ಪೂರೈಸಿದ ಸಣ್ಣಪುಸ್ತಕವು ಹೊರಗೆ ಬರವುದಾಗಿದೆ. ಈ ನಡುವೆ ಯಾರುಯಾರು ಏನೇನುಸಂಗತಿಯನ್ನು ಪೂರೈಸಿ ಕಳುಹಿಸಿದರೂ ಆಯಾ ಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತಿರುವುದು.

ವಿನೋದಕಥೆ.

ಹರಕಲಗೂಡು ಬಳಿಯೂಷ ರತಗ್ರಹಾರದಲ್ಲಿ ಪ್ರಳಿಯೋಗರಸ್ವಾಮಿಗಳವನೆಗಳು ನೂರಾರಿರಲು ಬಾದೀಬೊಳಕಣ್ಣಭಟ್ಟರೊಬ್ಬರು ಉಂಛವೃತ್ತಿಯಿಂದ ಬದುಕುತಿದ್ದರು. ಹೀಗಿರಲು ಮೇಲಣ ಅಯ್ಯಂಗಾರಸ್ವಾಮಿಗಳೆಲ್ಲರೂ ಆಲ್ಲಿರುವ ಜನಾರ್ದನಸ್ವಾಮಿ ದೇವಾಲಯದಲ್ಲಿ ತಳಿಗೆಗಳನ್ನು ಬಿಡಿಸುತ್ತ ಸಕ್ಕರೆ ಪೊಂಗಲ್, ವೊಳಿಗ, ಓಗರೈ, ಶುಂಡಲ್, ದಧ್ಯೋದನಂ, ವಡೈ, ದೋಸೈಗಳನ್ನು ವಿನಿಯೋಗಗಳನ್ನು ನಲ್ಲಿಸಿಕೊಂಡು ಈಷಣ್ಮತಸ್ಥಾಪನಾಚಾರ್ಯರಾಗಿ "ಅಲಂಕಾರ ಪ್ರಿಯೋ ವಿಷ್ಣುಃ" ಎಂಬಂತೆ ಹೊಟ್ಟೈ, ಬಟ್ಟೈ, ಜುಟ್ಟು, ಸೊಗಸುಗಳಿಂದ ಸುಖವಾಗಿರುತಿದ್ದರು. ಮೇಲಣಭಟ್ಟರು ಉಪಾದಾನದಲ್ಲಿ ಹೊಟ್ಟೆಪಾಡೇ ನಡೆಯುವುದು ಕಷ್ಟವಾಗಿದ್ದರೂ ದೋಸೆಯಾದರೂಮಾಡಿಸಿ ತಿನ್ನಬೇಕೆಂಬ ಕುತೂಹಲವು ಹೆಚ್ಚಿದಷ್ಟಾ ಕಾರಿಗೆ ಬಿಕಾಣಿಯಿಲ್ಲದೆ ಕಾಲಕಳೆದು ಕಡೆಗೆ ದೇವರನ್ನುಕುರಿತು ತಪಸ್ಸುಮಾಡಿದರು. ನೇವರೂ ಪ್ರಸನ್ನನಾದನು, ವರವೆ ನೆನಲು "ಶಾಶ್ವತವಾದ ದೋಶೇಬೇಕು" ಎಂದು ವರವನ್ನು ಕೇಳಿದರು. "ತಥಾಸ್ತು" ಎಂದು ಮಹೇಶ್ವರನು ಮಾಯವಾದನು. ಈ ಬ್ರಾಹ್ಮಣನು ಆದಿವಸ್ತುನಿಗೆ ಎರಡಾಣೆ ದಕ್ಷಿಣೆಸಿಕ್ಕಲು ಶಿವಕೃಪೆಯಾಯಿತೆಂದು ಅಂಗಡಿಗೆಹೋಗಿ ಒಂದುಸೇರು ಉದ್ದು ಬೇಕೆಂದು ಎರಡಾಣೆಯನ್ನೆಕೊಟ್ಟನು. ಆಹಾ! ಆಶಾಶ್ವತ ದೋಶೆಯ ಸಮ್ಬಂಧವಾದ ಎರಡಾಣೆ ಕಟ್ಟಿಯಕ್ಕೆಗೆ ಸೇರಲು ಮುಂದಣ ಸಂಗತಿಗಳೆಲ್ಲವೂ ಶಾಶ್ವತವಾಗ ತೋಡಗಿತು. ಅಚಿತ್ರವೇನೆಂದರೆಹೇಳಬಹುದು ಆಳು ಸೇರು ಉದ್ದುಅಳೆಸು ಭಟ್ಟನಬಟ್ಟೆಗೆ ಸುರಿದನು. ಭಟ್ಟನೂ ಗಂಟುಕಟ್ಟಿ ಹೆಗಲಿಗೆ ಹಾಕಿದನು. ಸೇರಿನಲ್ಲಿ ಯಥಾಪ್ರಕಾರ ಉದ್ದು ನಿಂತಿರಲು, "ಇದೇನುಸ್ವಾಮಿ"

ಯಿಂದುಬಟ್ಟೆಯ ಇನ್ನೊಂದುಕೊನೆಗೆ ಸುರಿದನು. ಬ್ರಾಹ್ಮಣನು ಮತ್ತಷ್ಟುಲಾಭ ವಾಯಿತೆಂದು ಯಿನ್ನೊಂದುಹೆಗಲಿಗೆ ಹತ್ತಿಸಿದನು. ಸೇರು ಯಿದ್ದಂತೆಯೇ ಯಿರಲು ಯಿನ್ನೊಮ್ಮೆ ಹಿಡಿಯಿರೆಂದನು. ಆತನು ಅದನ್ನು ತಲೆಗೇರಿಸಿಕೊಂಡನು. ಹೀಗೆಲ್ಲಾದ್ದಿನಸೇರು ಉದ್ದಿನೊಡನೆಯೇ ನಿಂತುಹೋಯಿತು. ಉದ್ದಿನಗಂಟುಗಳ ವ್ಯೆರ್ಥವಾಗಿ ಭಟ್ಟನಗುರ್ತುಕಾಣಿಸದೆ ಹೋಯಿತು. ಕಡೆಗೆಬೇಸತ್ತು, ಇನ್ನುಬೇಡವೆಂದು ಮನೆಗೆಬಂದು ಹೆಂಡತಿಯನ್ನು ಕರೆದು ಉದ್ದಿನ ಗಂಟುಗಳಿಲ್ಲವನ್ನು ಕೆಳಕ್ಕೆ ಕೊಡವಿದನು. ಮತ್ತಷ್ಟುವೈತುಂಬಿತು ಮರಳಿಕೊಡಹಿದನು. ಮರಳಿಯೂ ತುಂಬಿತು ಹೀಗೆ ಮನೆಯೆಲ್ಲಾ ಉದ್ದಿನಗಂಟಾದರೂ ವೈಯಲ್ಲಿ ಉದ್ದಿನಗಂಟುಗಳು ನೇತಾಡದೇ ಬಿಡಲಿಲ್ಲ. ಕಡೆಗೆ ದೋಶೆಯ ಆಶೆಯಿಂದ ಗಂಟುಗಳೊಡನೆಯೇ ಸ್ನಾನಕ್ಕೆ ಹೋದನು. ಮನೆಯ ಮುದಿಯಾದ ಮುಂಡೇವಿಯಮ್ಮನು ಒಂದುಗಂಟುಬಿಚ್ಚಿ ಬೇಳೆಮಾಡತೊಡಗಲು ಬಿಚ್ಚಿದ ಗಂಟಿನಲ್ಲಿ ಉದ್ದು ಬೆಳೆಯತೊಡಗಿತು. ಬೀಸುವಕಲ್ಲಿನಲ್ಲಿ ಹೋಳುಬೆಳೆಯಿತು. ನೀರಿನಪಾತ್ರೆದಲ್ಲಿ ಬೇಳೆನೆನೆಯಿಸಿ ತೆಗೆಯಲು ಆದೂ ಅಕ್ಷಯವಾಯಿತು. ಒರಳಲ್ಲಿ ರುಬ್ಬಲು ಆ ಒರಲು ಅದಕ್ಕೇ ವಿಾಸಲಾಯಿತು. ತಿರುವಿದಹಿಟ್ಟನ್ನು ಸುಟ್ಟುಕಾವಲಿಯಮೇಲೆ ಸುರಿಯಲು ಹಿಟ್ಟೂ ಬೆಳೆಯತೊಡಗಿತು. ಕಾವಲಿಯಿಂದ ದೋಸೆಯನ್ನು ತಿರುವಿಸುಟ್ಟು ತೆಗೆದಿಡುತ್ತಬರಲು ಕಾವಲಿಯೂ ದೋಸೆಗಳನ್ನು ಹೆರುತ್ತಬಂತು. ಕಡೆಗೆ ಯಿಷ್ಟುವಿಪರೀತವಾದರೂ ಉದ್ದಿನ ಮೂಟೆಗಳಿಂದ ಪ್ಲಲುಂಕೃತನಾದ ಬೂದಿಬೊಳಕಂಭಟ್ಟನೂ ದೋಶೇತೆಗೆಯುತ್ತಲೇ ಯಿದ್ದ ಮುಂಡೇವಿಯಮ್ಮನೂ ಒಂದೊಂದು ದೋಸೆಯನ್ನು ಎಡಗೈಗೆತೆಗೆದುಕೊಂಡು ಬಲಗೈಯಿಂದ ಮುರಿದು ಬಾಯಿಗಿಟ್ಟುಕೊಂಡರು. ಎಡಗೈಯಲ್ಲಿ ಗುಂಡುದೋಸೆಯೂ, ಬಲಗೈಯಲ್ಲಿ ದೋಶೆಯಮುರುಕೂ, ಬಾಯಲ್ಲಿ ದೋಸೆಯತುಂಡೂ, ಬೆಳೆಯಲಾರಂಭಿಸಲು ನುಂಗಿನುಂಗಿ ಮುಕ್ತಾಯಕಾಣದೆ ಹೊಟ್ಟೆಯುಬ್ಬಿ ಮೂಲಿಗಿ ಮುಕ್ಕರಿಸಿ ಮೂರನೆಯಲೋಕಕ್ಕೆ ಜೀವಗಳನ್ನು ಬಿಟ್ಟರು.

ಮೂರುದಿನಗಳಾದರೂ ಮನೆಯ ಮುಂಬಾಗಲು ತೆರೆಯದಿರಲು. ಅಗ್ರಹಾರಿಕರಾದ ಶ್ರೀವೈಷ್ಣವಸ್ವಾಮಿಗಳೆಲ್ಲರೂ ''ಎಲ್ಲಪ್ಪಾ, ನಮ್ಮಪಿಶಾಚಿಭಟ್ಟನುಈಚೆಗೇ ಬರಕಾಣನೋಡರಣ್ಣಾ. ವಾರಂಗೋ'' ಎಂದು ಹತ್ತುಮಂದಿಸೇರಿಹೆಣಗಳಾದ ಆ ದಿವ್ಯಾಲಂಕಾರ ದಂಪತಿಗಳನ್ನುಕಂಡು ಯಿದೇನದ್ಭುತವೆಂದು ಮುಂದಿನಕೆಲಸಕ್ಕೆ ವಿಳಿಂಬಿಲ್ಲದೆ ಹಣೇ ಬರಹವೆಂದು ಆರಂಭಿಸಿದರು. ಎಂಟುಮಂದಿಯೆತ್ತಿ ಈಚೆಗಿಟ್ಟರು. ತ್ತೆಂಟುಮಂದಿ ಕಟ್ಟತೊಡಗಿದರು. ಇನ್ನೆಂಟುಮಂದಿ ಹೊತ್ತರು. ಬೇರೆಯೆಂಟುಂದಿ ಮುಂದೆ ಹೊರಟರು. ಇನ್ನು ಎಂಟುಮಂದಿ ನಡುಗಾಡಿಗೊಯ್ದರು. ''ಅಯವಿಚಿತ್ರವೋ, ದೋಶೇಮಹಿಮೆ ಎಷ್ಟುಶಾಶ್ವತವೋ, ರಾಮ ರಾಮಾ!'' ಭೂಜದಯಿಳಿಸುತಲೂ ಹೆಗಲಮೇಲೆ ಮತ್ತೆ ರಡುಸಿದ್ದ! ಈಮೇರೆ ಭಟ್ಟನ ಮನೆಯೊಂದ ಕೊನೆವರಿವಿಗೆ ಕೊನೆಮೊದಲಿಲ್ಲದೆಹೋಯಿತು. ಕಡೆಗೆಲ್ಲರೂ ಭೂತೇಶ

ನಾದ ರುದ್ರನನ್ನು ಇದೇನಮಂಗಳವೆಂದು ಪ್ರಾರ್ಥಿಸಿ, "ಜನಾರ್ದನನೇ, ಜನ್ಮಸಾಫ ಲ್ಯವಾಗಿಸಪ್ಪಾ!" ಎಂದು ಶರಣಾಗತರಾದೆರು. ಆಗ ವಿಷ್ಣುಪ್ರಿಯನಾದ ವಿರೂಪಾ ಕ್ಷನು ಪ್ರತ್ಯಕ್ಷವಾಗಿ ಎಲ್ಲವನ್ನೂ ಮಾಯವಾಗಿಸಿ "ಅತ್ಯಲ್ಪ ಫಲಕ್ಕಾಗಿ ಅತ್ಯಾಶೆ ಯಿಂದ ಹೀಗೆ ವರಕೇಳಬಾರದು. ನಿತ್ಯಸಾಮ್ರಾಜ್ಯವಾದ ಮುಕ್ತಿಯನ್ನು ಪುರಂದರ ನಿಂದ ಪಡೆಯಬೇಕು" ಎಂದು ಬುದ್ಧಿಹೇಳಿ ಬಾದಿಬೊಳಕಂಭಟ್ಟನನ್ನು ಮಡದಿಯೊ ಡನೆ ಅಷ್ಟೈಶ್ವರ್ಯಸಂಪನ್ನನನ್ನಾಗಿ ಮಾಡಿ ಹೆಣಾಗ್ರಹಾರದಿಂದ ಆ ಅಗ್ರಹಾರವನ್ನು ಸರ್ವಮಂಗಳಾಗ್ರಹಾರವನ್ನಾಗಿ ಮಾಡಿದನು. ಆದುದರಿಂದ ದುರಾಶೆಮಾಡಬಾರದು. ಹಿರಿಯರತಿಂಡಿಗೆ ಹೊಟ್ಟೇಕಿಚ್ಚು ಪಡಬಾರದು.

ಎಚ್. ಚನ್ನಕೇಶವಯ್ಯಂಗಾರ್.

ವಿವಿಧವೃತ್ತಾಂತಗಳು.

"ಗಂಡನನ್ನು ಬಿಟ್ಟು ಓಡಿಹೋದ ಪ್ರಿನ್ಸೆಸ್.—ಷೂಯೆಬಲ್ಸ್ ವಾಲ್ಡೆಬರ್ಗ್ ಪ್ರಿನ್ಸುಫ್ರೆಡರಿಕ್ ಯವರಭಾರ್ಯೆಯೂ, ಬೋರ್‌ಬರ್‌ಡಾರ್ಕಾರ್‌ಲೆಸ್ ಯುವರಾ ಕನಿಷ್ಠಪುತ್ರಿಯೂ ಆದ ಪ್ರಿನ್ಸೆಸ್ ಆಲಿಸ್ ಯೆಂಬಾಕೆ ತಮ್ಮ ಕೋಚ್‌ಮೆಕ್‌ವೇಲೆ ಯರುಕಗೊಂಡು ಈಚೀಚೆಗೆ ಅನನೊಡನೆ ಓಡಿಹೋದಳು. ೧೮೯೭ನೆ ಯಿಸವಿ ವಿವಾಹವಾದ ಈಕೆಯವಯಸ್ಸು ೨೭ ಸಂವತ್ಸರಗಳು. ೧೪ ತಿಂಗಳಪ್ರಾಯದ ಚಿಕ್ಕ ಮಗನೊಬ್ಬ ನುಂಟಾಗಿರುವನು. ತಾಯಕಡೆಯವರೇನು, ಗಂಡನಕಡೆಯವರೇನು ಎಲ್ಲರೂ ರಾಜಮಾರ್ಗದಲ್ಲಿ ಸೇರಿದವರು. ರೂಪವತಿಯಾದೀಕೆ ಪ್ಯಾರಿಸ್‌ನಲ್ಲೇನು ವಿಯನ್ನಾಯೊಳಗೇನು, ದೊಡ್ಡಮನುಷ್ಯರ ಸಮಾವೇಶಗಳಲ್ಲಿ ಕಲತು ಮೆಲತಿದ್ದಳು. ಡಾರ್ಕಾರ್‌ಲಸ್ ಯವರು ಒಬ್ಬಮಗನೂ ಮೂರುಮಂದಿ ಪೆಣ್ಣುಮಕ್ಕಳೂ ಉಂಟಾಗಿದ್ದು. ಅವರಿಂದಲೂ ಕೂಡ ಬಹಳಶ್ರಮಪಟ್ಟರು. ಒಬ್ಬ ಮಗಳು ತನ್ನ ಗಂಡನಮೇಲೆ ಅನುಮಾನಪಟ್ಟು ಟೈಬಟ್‌ನದಿಯಲ್ಲಿ ಜಿಗ್ದು ಆತ್ಮಹತ್ಯೆ ಮಾಡಿಕೊಂಡಳು. ಇನ್ನೊಬ್ಬಮಗಳು ಒಬ್ಬ ಚಿತ್ರಕಾರನನ್ನು ತಗಲಿಕೊಂಡು ಅವನೊಡನೆ ಓಡಿಹೋದಳು. ಈಪ್ರಿನ್ಸೆಸ್ ಆಲಿಸ್ ಮೋಹಿಸಿದ ಕೋಚ್‌ಮೇಕ್, ರಾಜನಗರದ ಒಬ್ಬಮನೆತೊತ್ತಿಯನ್ನು ಮದುವೆಮಾಡಿಕೊಂಡಿರುವನು. ಅದೇನುಪಾಪವೋ ಆಗಲಿ ಐರೋಪಾನೊಳಗಣ ಕೆಲವರು ಪ್ರಿನ್ಸೆಸುಗಳು ಕುದುರೆಯವರನ್ನೂ ಕೋಚ್‌ಮೆಕ್‌ಗಳ್ಳ ಮುಂತಾದ ನೀಚರನ್ನು ಕಾಮಿಸಿ, ರಾಜಭೋಗಗಳನ್ನು ಬಿಟ್ಟು ತುಚ್ಛಭೋಗಕ್ಕೆ ಒಳಪಡಲು ಇಚ್ಛೈಸುತ್ತಿರುವರು."—ಎಂದು ಆಂಗ್ಲಪ್ರಕಾಶಿಕೆ ಹೇಳುವುದು. ಸ್ವರೂಪ ಜಾತಿಯೊಂದು ಸ್ತ್ರೀಜಾತಿಯೊಂದು ಬೇರೆಜಾತಿಯಿಲ್ಲವೆಂಬಲ್ಲಿ ಆವರೇಕೆ ತುಚ್ಛರು? ವೃತ್ತಿಯಲ್ಲಿ ಯಾವುದಾದರೇನು! ವೃತ್ತಿಗೂ ಮೋಹಕಕ್ಕೂ ಸಂಬಂಧವೇನು? ಜಾತಿವೃತ್ತಿಸಂಬಂಧವನ್ನು ಬಿಟ್ಟನೋಲೆ ಎಲ್ಲರೂ ಒಂದೇಅಲ್ಲವೆ? ಆದರೆ ವಿದ್ಯಾವತಿಯರಾದ ಸ್ತ್ರೀಯರೂ ಹೀಗಾಗಲು ಅವರಿಗೆ ವಿದ್ಯೆಯೇಕೆ? ಇದಕ್ಕಾಗೆಂದರೆ ಸ್ವತಂತ್ರರಾಗಲು.

"ಸ್ತ್ರೀಷ್ಟ ಸ್ತ್ರೀವಾಹವು.—ಕಾರ್ಲೆಸ್ಪ್ಯೆಯೊಳಗಣ ಕನ್ನಿಯರು ಸಾತ್ಕರೋಲಿನಾ ಗವರ್ನರವರಿಗೆ ೧೫೫೫ರಲ್ಲಿ ಬ್ರಹ್ಮಚಾರಿಗಳು ವಿಧವೆಯರದೆಸೆಯಿಂದ ಕಟ್ಟಲ್ಪಡುವುದರಿಂದ ನಮ್ಮ ಯೌವನಸಂಪತ್ತೆಲ್ಲವೂ ವ್ಯರ್ಥವಾಗಿಹೋಗುತ್ತೆಂದೂ, ಕನ್ನೆಯರೆಲ್ಲರಿಗೂ ಮದಿವೆಯಾಗುವವರೆಗೂ ವಿಧವೆಯರು ಮದಿವೆಮಾಡಿಕೊಳ್ಳಕೂಡದೆಂದು ಶಾಸನ ಮಾಡಬೇಕೆಂದೂ, ಹೀಗೆ ಶಾಸನವನ್ನು ಮೀರಿ ಸಾಖ್ಯಕ್ಕೆ ಭಂಗಮಾಡುವ ಪ್ರತಿವಿಧವೆಗೂ ವಿಧವೆಯೆನ್ನು ಮದಿವೆಮಾಡಿಕೊಳ್ಳುವ ಬ್ರಹ್ಮಚಾರಿಗೂ ಅಪರಾಧವಿಧಿಸಬೇಕೆಂದೂ, ಮೊರೆಯಿಟ್ಟರು." ಎಂದು ಆಂಧ್ರಪ್ರಕಾಶಿಕೆ ನುಡಿವುದು. (ವಿಧವಾಗಮನಾದಾಯುರ್ನ್ಯತಿ) ಇತ್ಯಾದಿ ಧರ್ಮಶಾಸ್ತ್ರವು ಸತ್ಯವಾಗಿದೆ. ಸುಖವಾಗಿರುವ ಹಿಂದೂದೇಶಕ್ಕೆ ಈ ದುಸ್ಥಿತಿಯನ್ನು ತಂದಿಡಬೇಕೆಂಬ ಸವನಾಗರಿಕರು ಇದನ್ನು ಪರ್ಯಾಲೋಚಿಸಬೇಕು. ಕಲಿಯಾಜ್ಞೆ ಪರ್ಯಾಲೋಚನೆಯನ್ನೂ ಕೊಡದು.

ಗವರ್ನಮೆಂಟು ಹೌಸ್ ಬಾಲ್.

ಕಳೆದ ಸೋಮವಾರರಾತ್ರಿ ಗವರ್ನಮೆಂಟು ಹೌಸಿನಲ್ಲಿ ನಡೆದ ಬಾಲಿನಲ್ಲಿ ಶ್ರೀ ಗವರ್ನರವರು ಲೇಡಿ ಲೈಗ್ ಎಂಬುವರ ಜೊತೆಯಲ್ಲಿಯೂ, ಮೈಸೂರು ಮಹಾರಾಜರವರು ಲೇಡಿ ಪಿವ್ಸ್‌ಲ್ ಎಂಬುವರ ಜೊತೆಯಲ್ಲಿಯೂ ಬಾಲ್ಗಾಡಿದರು.

ಗನೆಯ ತಿಂಗಳಿನರಾತ್ರಿ ಬ್ಯಾಂಕ್ವೆಟೆಂಗ್ ಹಾಲಿನಲ್ಲಿ ಜರಿಗಿದ "ಸ್ಪೋರ್ಟ್ಸ್ ಕ್ಲಬ್ಬಿಗೆ, ಮೈಸೂರುಮಹಾರಾಜರವರು ಮೊದಲಾದ ದೊಡ್ಡಮನುಷ್ಯರೂ, ಅಫಿಸರ್ಸಲ್ಸ್, ಮತ್ತು ಸಬ್ ಅಫಿಷಲರುಗಳೂ ದಯಮಾಡಿದ್ದಾಗ, ಶ್ರೀಯವರು ಎಲ್ಲರನ್ನೂ ಆದರಿಸಿ ಕುಶಲಾತಿಶಯವನ್ನು ವಿಚಾರಿಸಿದರು.

ನೂತನ ಪೋಸ್ಟಲ್ ರೇಟುಗಳು—ಆರು ತೊಲೆಗಳಿಗೆ ಅತಿಕ್ರಮಿಸದರಿಜಿಸ್ಟರು ನೂಡಲ್ಪಟ್ಟ ವರ್ತಮಾನ ಪತ್ರಿಕೆಗೆ ಕಾಲಾಣೆ, ಆರುತೊಲೆಗಳಿಗೆ ಮೇಲ್ಪಟ್ಟು ೨೦ ತೊಲೆಗಳೊಳಗಿರುವವುಗಳಿಗೆ ಅರ್ಧಾಣೆ; ಪ್ರತಿಹೆಚ್ಚು ೨೦ ತೊಲೆಗಳಿಗಾಗಲಿ ಅಥವ ಅದರಲ್ಲಿ ಸ್ವಲ್ಪಭಾಗಕ್ಕಾಗಲಿ, ಅರ್ಧಾಣೆ. ಈರೇಟುಗಳು ಈತಿಂಗಳು ೧ನೆಯ ತಾರಿನಿಂದ ಜಾರಿಗೆ ತರಲ್ಪಟ್ಟಿತು.

ಅಡ್ಡಪಲ್ಲಕ್ಕಿ ಸೇವಾರಿ—ಬಳ್ಳಾರಿಜಿಲ್ಲೆಯ ತಂಬರಹಳ್ಳಿ ಬ್ರಾಹ್ಮಣರಿಗೂ, ತಾಯತರಿಗೂ, ಗಟಗ ತೋಪಸ್ವಾಮಿಯವರನ್ನು ಅಡ್ಡಪಲ್ಲಕ್ಕಿಗಳಮೇಲೆಮೆರ

ವಣಿಗೆ ಮಾಡುವವಿಷಯವಾಗಿ ತಕರಾರುಹುಟ್ಟಿ ಕೊನೆಗೆ ಹೆ॥ ಆ॥ ಮೆ॥ ಸ್ಮಿತ್ ಯವರು ಅಷ್ಟಪಲ್ಲಕ್ಕಿಯಮೇಲೆ ಸವಾರಿಹೊರಡುವುದು ಬ್ರಾಹ್ಮಣರಿಗೊಬ್ಬರಿಗೇನೇ ಹಕ್ಕುಂಬುವುದಕ್ಕೆ ಆಧಾರವಿಲ್ಲವೆಂದು ತೀರ್ಮಾನಮಾಡಿದರು.

ಮೈಸೂರುಸಂಸ್ಥಾನದ ಶ್ರೀಮನ್ಮಹಾರಾಜರವರು.

ಮದ್ರಾಸು ಸೆಂಟ್ರಲ್‌ಸ್ಟೇಷನ್.—ಮೈಸೂರುಸಂಸ್ಥಾನದ ಶ್ರೀಮನ್ಮಹಾರಾಜರವರು ಮಹಾಮಾತ್ಯ ಶ್ರೀ ಮಹಾರಾಣಿಯವರೂ ಶ್ರೀ ಯುವರಾಜರೂ, ಸ್ಪೆಷಲ್ ಟ್ರೈನಿನಲ್ಲಿ ಬಂದು ಕಳೆದೆ ೨೨ನೆಯ ತಾ॥ ಮಂಗಳವಾರ ಬೆಳಿಗ್ಗೆ ಮಡ್ರಾಸ್ ಪಟ್ಟಣವನ್ನು ಸೇರಿದರು. ಇವರೊಡನೆ ದಿವಾನರವರೂ ಪ್ರೈವೆಟ್ ಸೆಕ್ರೆಟರಿಗಳೂ ಪರ್ಸನಲ್ ಭಕ್ಷಿಗಳೂ ಎಡಿಕಾಂಗ್ ರವರೂ ಮೆ॥ ಸ್ಮಿತ್ ಸಾಹೇಬರವರೂ ಮುಂತಾದಬಹಳಮಂದಿ ಗಾಡಿಯಿಳಿದರು. ಶ್ರೀ ಗವರ್ನರವರ ಪ್ರತಿನಿಧಿಯಾಗಿ ಲೇಡಿಕಾಂಗ್, ಕ್ಯಾಪ್ಟೆನ್ ಕೇಯವರು ಕಾದಿದ್ದರು. ಚನ್ನಪುರಿ ರಾಜಧಾನಿಯ ದೊಡ್ಡಮನುಷ್ಯರೆಲ್ಲರೂ ವ್ಯಾಲಂಕೃತವಾದ ಸ್ಟೇಷನ್ನಿನಲ್ಲಿ ಕಾದಿದ್ದು, ಶ್ರೀಮನ್ಮಹಾರಾಜರವರು ಗಾಡಿಯಿದು ಎಲ್ಲರನ್ನೂನೋಡಿ ಯೋಗಕ್ಷೇಮವಿಚಾರ ಮಾಡುತಲಿರಲು, ಪಟ್ಟಣದವರಿಗೆ ಪ್ರನಿಧಿಯಾಗಿ ಮೆ. ಪಿ. ಯಸ್. ಶಿವಸ್ವಾಮಿ ಅಯ್ಯರವರಿಂದ ಅಡ್ರೆಸ್ಸನ್ನು ಓದಿಸಿದರು. "ಹಿಂದೂಮಹಾರಾಜ ಸಂಸ್ಥಾನಗಳಲ್ಲಿ ಗಣ್ಯತೆಪಡೆದು ಸ್ವದೇಶೀಯರ ಬುದ್ಧಿಕಲತೆ ಕಾರ್ಯದಕ್ಷತೆ ಮುಂತಾದವುಗಳಿಂದ ಅಭಿವೃದ್ಧಿಗೊಳ್ಳುತ್ತಿರುವ ಶ್ರೀಮಹಿಸರು ಸಂಸ್ಥಾನವನ್ನು ಪುರೋವೃದ್ಧಿಗೆ ತರುತ್ತಿರುವ ಶ್ರೀಮನ್ಮಹಾರಾಜರವರು ಈ ಪಟ್ಟಣಕ್ಕೆ ಪ್ರಥಮ ಸಮಾಗಮವಿತ್ತು ದೇಶೋನ್ನತಿಗೆ ಕಾರಣವಾದ ಸರ್ವವಸ್ತು ಪ್ರದರ್ಶನಾಲಯಕ್ಕೆ ವಿಕಾಸಿಕರವಾಗಿ ಒಪ್ಪಿ ಇಲ್ಲಿಗೆ ದಯಮಾಡಿಸಿದುದು. ನಮ್ಮೆಲ್ಲರಿಗೆ ವಿಶೇಷ ಶುಭಸೂಚಕವಾಗಿದೆ" ಎಂಬ ಸಾರಾಂಶವುಳ್ಳ ಆ ಅಡ್ರೆಸ್ಸನ್ನು ಸುಂದರವಾದ ಕೈಗಾರಿಕೆಯುಳ್ಳ ಪೆಟ್ಟಿಗೆಯೊಡನೆ ಮಹಾರಾಜರಿಂದ ಸ್ವೀಕೃತವಾಗಿ ಅಲಂಕರಿಸಲ್ಪಟ್ಟಿತು. ಬಳಿಕ ಶ್ರೀಮನ್ಮಹಾರಾಜರವರು "ಈ ಮಹಾನಗರದ ಮುಖ್ಯಸ್ಥರೆಲ್ಲರನ್ನೂ ಸಂಘಸಿ ಪರಿಚಯಗೊಳ್ಳುವುದು ಪರಮಾನಂದವಾಗಿದೆ. ಹೀಗೆ ನನ್ನಸುಖ ಮನವನ್ನು ಸತ್ಕರಿಸುವ ನಿಮ್ಮ ಗಳನ್ನು ಸಂಶ್ಲಾಘಿಸುವೆನು. ಮಹೀಶ್ವರಸಂಸ್ಥಾನ ಅಭಿವೃದ್ಧಿಯಲ್ಲಿ ಶ್ರೇಯಃಪ್ರಾರ್ಥಿಕರಾದ ನಿಮ್ಮ ಕುತೂಹಲದಿಂದ ಆನಂದಿಸುತ್ತಿವೆನು. ಮೊದಲಿನಿಂದಲೂ ನಮ್ಮ ಸಂಸ್ಥಾನಕ್ಕೆ ಬಂದಿರುವ ಸುಪ್ರಖ್ಯಾತಿಯನ್ನು ಪಾಡಿಕೊಳ್ಳುವುದೇ ನನ್ನಕುತೂಹಲವು. ನನ್ನರಾಜ್ಯಭಾರ ಕ್ರಮಗಳು ಸರ್ವರ ಮಗಳೆಂದು ನೀವ್ರಹೇಳಿದ್ದು— ನೀವು ಸೂಚಿಸಿದ ದೇಶೋನ್ನತಿಕಾರ್ಯಗಳು ಶಾಶ್ವತ

ಗಿನಡೆಯಲೂ ಇನ್ನೂ ಒಳ್ಳೆಯಕಾರ್ಯಗಳನ್ನು ಮಾಡುತ್ತ ಬರಲೂ ಪ್ರೋತ್ಸಾಹಕ
ವಾಗಲೆಂದು ಸಂತೋಷಿಸುವೆನು.'' ಮುಂತಾದ ಸರಸಗಂಭೀರೋಕ್ತಿಗಳಿಂದ ಪ್ರತ್ಯು
ತ್ತರವನ್ನು ದಯಪಾಲಿಸಿದರು. ಬಳಿಕ ಶ್ರೀಮನ್ಮಹಾರಾಜರವರು ತಮ್ಮ ಬಿಡಾರವಾ
ದ ಲಾಂಡನ್ಸ್ ಗಾರ್ಡನ್ಸ್ ಬಂಗಲೆಗೆ ಬಿಜಮಾಡಿದರು.

ಗವರ್ನರವರನ್ನು ಭೇಟಿಮಾಡಿದ್ದು—ಕಳೆದ ೨೪ನೆಯ ಗುರುವಾರಮಧ್ಯಾಹ್ನ
೧ ಗಂಟೆಗೆ ಶ್ರೀಮನ್ಮಹಾರಾಜರವರು ಮದ್ರಾಸು ಗವರ್ನರ್ ಲಾರ್ಡ್ ಅಂಪ್ಥಿಹಲ್
ಯವರ ಬೇಟಿಗೆ ಬಂದರು. ಲಾಂಡ್ಸ್ ಗಾರ್ಡನ್ನಿಂದ ಇಸ್ತಕಪಾಲ್‌ಸಹಿತವಾಗಿ ಗವ
ರ್ನರವರು ದರ್ಬಾರ್ ಹಾಲಿನಲ್ಲಿ ಮಹಾರಾಜರವರನ್ನು ಇದಿರ್ಗೊಂಡರು. ಕುಶಲ
ವಾರ್ತೆಗಳು ನಡೆಯಿತು. ಮಹಾರಾಜರವರು ಗಾರ್ಣಮೆಂಟು ಹಾಸಿನಲ್ಲಿ ಇಳಿದಾ
ಗಲೂ ಅಲ್ಲಿಂದ ಹೊರಡುತಲೂ ೨೧ ತೋಪುಗಳು ಹಾಕಲ್ಪಟ್ಟವು. ಅದೇದಿನ ೪½
ಗಂಟೆಗೆ ಶ್ರೀ ಗವರ್ನರವರು ಪರಿವಾರಸಹಿತ ಲಾಂಡ್ಸ್ ಗಾರ್ಡನ್ಸೆಂಬ ಬಂಗಲೆಗೆ ದ
ಯಮಾಡಿ ಶ್ರೀಮನ್ಮಹಾರಾಜರವರಿಗೆ ಮರುಭೇಟಿಕೊಟ್ಟು ಸತ್ಕೃತರಾದರು.

ಸರ್ವವಸ್ತುಪ್ರದರ್ಶನಶಾಲಾ ವಿಕಸನವು—ಕಳೆದ ೨೬ನೇ ತಾ॥ ಶನಿವಾರ ಬೆಳಿ
ಗ್ಗೆ ಮದ್ರಾಸ್ ಪಟ್ಟಣದ ಕೆಥೀಡ್ರಿಲ್ ಗಾರ್ಡನ್ಸ್ ಯೆಂಬ ಬೈಲಿನಲ್ಲಿ ಕೈಗಾರಿಕೆ
ಮತ್ತು ವ್ಯವಸಾಯವಸ್ತುಗಳ ಪ್ರದರ್ಶನಶಾಲೆಗೆ ನವ್ಯಮಹಾರಾಜ ಶ್ರೀ॥ ಶ್ರೀ॥ ಕೃ
ಷ್ಣರಾಜ ಒಡೆಯರ್ ಬಹದ್ದೂರ್ ಯವರು ಉಪನ್ಯಾಸಪೂರ್ವಕವಾಗಿ ದರ್ಶನವಿಕಾ
ಸಮಹೋತ್ಸವವನ್ನು ಲೋಕರಿಗೆ ದಯಪಾಲಿಸಿದರು. ಮೈಸೂರುಸಂಸ್ಥಾನದ ಮು
ಖ್ಯಾಧಿಪತ್ಯದ ಮುಖಂಡರೆನಿಸಿಕೊಂಡಿರುವ ದೊಡ್ಡಮನುಷ್ಯರೆಲ್ಲರೂ ಅಲ್ಲಿ ನೆ
ರೆದರು. ೩ ಗಂಟೆಗೆ ಸರಿಯಾಗಿ ಸಪರಿವಾರರಾದ ಶ್ರೀಮನ್ಮಹಾರಾಜರವರು ಕಮಿಟಿ
ಯವರುಗಳಿಂದ ಸ್ವಾಗತವನ್ನು ಕೊಂಡಿ ಕೊಜ್ಜಿಸಂಸ್ಥಾನದ ತಾಜನೊಡನೆ ಕುಳಿತರು.
ಎ॥ ಶಂಕರನಾಯರ್ ಯವರ ಪ್ರದರ್ಶನಶಾಲಾ ಪ್ರಾರಂಭೋಪನ್ಯಾಸವನ್ನು ಕೇಳಿ
ದುಮಧುರಸರಸಗಂಭೀರ ರಚನಾಮೃತವನ್ನು ಎಷ್ಟಿಸಿ ಈ ಪ್ರದರ್ಶನೋತ್ಸವ
ದಲ್ಲಿ ಇದರ ಸಭಿಪ್ರಾಯಗಳು ಹುಟ್ಟಿ ಕಸಬುದಾರಿಗಳುವೃದ್ಧಿಗೆಬಂದರೆ
ನಗೆ ಯಿದರ ಉದ್ದೇಶವು ಸಾರ್ಥಕವೆನಿಸುವುದು:'' ಎಂದು ತಮ್ಮದೊಡ್ಡ ಉಪ
ನ್ಯಾಸವನ್ನು ವಿರಮಿಸಿ ಎಲ್ಲರೊಡನೆ ಹೊರಟು ಹತ್ತು ಗಂಟೆಯವರೆಗೂ ಪ್ರದರ್ಶ
ನವನ್ನು ಪರಿಕಿಸುತ್ತ ಬಂದು ಬಿಡಾರದ ಬಂಗಲೆಗೆ ಬಿಜಮಾಡಿದರು.

ಕನ್ನಡನುಡಿ ಗನ್ನಡಿ.

ರಬ್ಬರ್ ಸ್ಟ್ಯಾಂಪುಗಳು.





* ಬುದಾವ್ಯಿ ಯಾಕಾರ ವಾಚ್ಯರೂ ಸರಿಯೆ, ರಾಂಡಾಕಾರವಾದರೂ ಸರಿಯೆ, ಚಚ್ಚಾಕ ವಾದರೂ ಸರಿಯೆ, ಅ

ಪರಲ್ಲಿ ಹಾಕಬೇಕಾದ ಅಕ್ಷರಗಳನ್ನು ಹಾಕಿ ಸಾದಾರೂಪಾಲುಗಳುಳ್ಳದ್ದಾದ ರಬ್ಬರು ಸ್ಟ್ಯಾಂಪು ಗಕ್ಕೆ	ಗಅಂಗುಳ.	...	2	0	0
,, ,,	೨ ಅಂಗುಳ.	...	3	0	0
,, ,,	೩ ಅಂಗುಳ.	...	4	8	0
,, ,,	೪ ಅಂಗುಳ.	...	5	0	0



ಇದರಲ್ಲಿ ಭೈಲೋ ಬೇಲ್‌ದಾರಿ ಹೂಗಳ ಕೆಲಸವಿದ್ದರೆ ಮೇಲಣ ಅಂಗುಳಗಟ್ಟಿಗೆ ಬೆಲೆಗಳಿಗೆ, ಅಂಗುಳಕ್ಕೆ ೪ ಆಣೆಮೇರೆ ಸೇರಿಸಿ ಛಾರ್ಜು ಮಾಡಲ್ಪಡುತ್ತೆ.

ಇದರಲ್ಲಿ ಯೇ ಇಷ್ಟುವಾದ ವಿಗ್ರಹವು ಹಾಕಿಕೊಡಬೇಕಾದರೆ ಮೇಲಣ ಛಾರ್ಜಿಗೆ ಅಂಗುಳ ಗಕ್ಕೆ $\frac{3}{4}$ ರೂಪಾಯಿ ಹೆಚ್ಚಿಗೆ ಕೊಡಬೇಕಾಗಿರುತ್ತೆ.

ಇದರಲ್ಲಿ ಯೇ ವಿಗ್ರಹವೂ ಹಾಕಿ ಭೇಲ್‌ದಾರೀ ಕೆಲಸವೂ ಮಾಡಿ, ಪರಛಾಪ್ತುದಾರರು ಬರೆದು ಕಳುಹಿಸಿದಂತೆ ಮಾಡಿಸಿಕೊಡಬೇಕಾದರ, ಅಂಗುಳ ಗಕ್ಕೆ ೫ ರೂಪಾಯಿ. ಅವೇಲ್ಲೆ ವ್ಯಕ್ತಿಅಂಗುಳಕ್ಕೂ ಎರಡುರೂಪಾಯಿಮೇರೆ ಹೆಚ್ಚು ಛಾರು, ಹಾಕಲ್ಪಡುತ್ತೆ.

---

* ಯಾವ ರಬ್ಬರ್‌ಸ್ಟ್ಯಾಂಪು ತೆಗೆದರೂ ಅದರೊಡನೆ ಒಂದುಪೆಟ್ಟಿಗೆ ಅದಕ್ಕೆ ಹಾಕುವ ಒಂದು ಇಂಕ್‌ಸೀಷೆ ಸಹಿತ ವಿರುತ್ತೆ.

[redacted] ರಾಮದಾಸ್ ಕಂಪನಿ,

[redacted] ಸಾವಕಾರಪೇಟೆ

ಮದರಾಸು Sawcarpet, Madras

ಕೋಮಲಕೇಶಸಂವರ್ಧನಿ

ಪರಿಮಳಿಸುವ ಈ ಯೆಣ್ಣೆಯಿಂದ ತಲೆಗೂದಲು ಅತ್ಯಂತ ಕೋಮಲವಾಗಿ ಬೆಳೆಯುತ್ತೆ. ನಿತ್ಯವೂ ಪೆರುಗೆಣ್ಣೆಯಂತೆ ತಲೆಗೆ ಸವರಿಕೊಳ್ಳುತ್ತಿದ್ದರೆ ಕೂದಲಿಗೆ ಮೃದುತ್ವವೂ ಕಾಂತಿಯೂ ಕಪ್ಪು ಬಣ್ಣವೂ ಉಂಟಾಗಿ ಉದ್ದಕ್ಕೆ ಬೆಳೆಯುತ್ತೆ. ಇಪರೀಸೆ ಒಕ್ಕೆ ರೂ. 0—8—0.

ಗಡಿಯೂರದಪರಪಣಿಚಿನ್ನದ ಗಿಲ್ಟು

ಒಕ್ಕೆ ... ರೂ. 1 8 0
ಜರ್ಕ್ ಸಿಲ್ವರ್ ರೂ. 1 0 0



ಸೈಸಾರುದೇಶದ ಅತಿಸುಂದರವಾದ ಕೈಕಪ್ಪು ರೂ. 1 0 0.



ಕೈಗೆ ಅಲಂಕರಿಸುವ ಬಂಗಾರದಗಿ
ಲ್ಟಿನ ಭಳಿಕೀಗುಂಡು ಜೊತೆ ೧ಕ್ಕೆ
,, ದೊಡ್ಡವರಿಗೆ ರ್ಪ. 2 8 0
,, ಚಿಕ್ಕವರಿಗೆ ,, 2 0 0
,, ಮುಕ್ಕಳಿಗೆ ,, 1 8 0

ಉಂಗುರಕ್ಕೆ.



ಬಂಗಾರದಗಿಲ್ಟ್ಟ ತರಹಾವಾರಿ ಬೇಲ್‌ದಾರಿ
ಕೆಲಸಮಾಡಿದ್ದು ಮೊದಲನೆರಖಂ ರ್ಪ. 1 4 0
ಎರಡನೇ ರಖಂ ರ್ಪ. 1 0 0



ಬಂಗಾರದಗಿಲ್ಟ್ಟಷೆಲ್ಟ್ಟಗುಂಡಿ
ರ್ಪ ... 2 0 0
೧ ಸೆಟ್ಟ್ಟು ಕೋಟುಗುಂಡಿ
ರ್ಪ. ... 2 0 0



ಜರ್ಕ್‌ಸಿಲ್ವರ್‌ಷೆಲ್ಟ್ಟ
ಗುಂಡಿ ರ್ಪ. ... 1 0 0
,, ಕೋಟುಗುಂಡಿ. 1 0 0



ಬಂಗಾರದಗಿಲ್ಟ್ಟ ನಶ್ಯದಡಬ್ಬಿ ನಾಲ್ಕ್ಕುಮೂಳೆಯದು ರ್ಪ. ... 2 8 0
,, ,, ಅಷ್ಟಮೂಲೆ ರ್ಪ. 3 0 0
ಜರ್ಕ್‌ಸಿಲ್ವರ್ ಅಷ್ಟಮೂಲೆ ರ್ಪ. 1 8 0
,, ನಾಲ್ಕ್ಕುಮೂಲೆ ರ್ಪ. 1 4 0

[illegible] ರಾಮ [illegible] ಕಂಪನಿ,

[illegible] ಪ್ಪನಬೀದಿ ಸಾವಕಾರಪೇಟೆ

[illegible] Sowcarpet, Madras.

ಸೀವಳಿ ಹವಳದ ಮಣಿಗಳು.

ಮಣಿ ಸರ ೧ ಕ್ಕೆ +

40 ಕ್ಕೆ ಬೆಲೆ 2-0-0.

45ಕ್ಕೆ ಬೆಲೆ 1-12-0.

48 ಕ್ಕೆ ಬೆಲೆ 1-8-0.

50 ಕ್ಕೆ ಬೆಲೆ 1-6-0.

55 ಕ್ಕೆ ಬೆಲೆ 1-4-0.

65 ಕ್ಕೆ ಬೆಲೆ 1-2-0.



ಈಹವಳಗಳು ಬಣ್ಣ ಕೆಡುವುದಿಲ್ಲ. ಕಾಂತಿ ಕರವಾಗಿರುತ್ತೆ. ಬೆಲೆ ಬಹಳಸುಲಭವು. ಅಲಂಕಾರಕ್ಕೆ ಶ್ಲಾಘ್ಯವಾಗಿದೆ. ಹೊಸಸ್ಟೈಲ್ಲಿಯೆನಿಸಿದೆ. ಎಂದಿಗೂ ಕೆಡಲಾರದು. ಎಂದು ನಾವು ಭರವಸಹೇಳುತ್ತೇವೆ.

* ನಮ್ಮಿಂದ ಕಳುಹಿಸಲ್ಪಡುವ ಸರಗಳು ಹೀಗಿರುತ್ತೆ. ಆಯಾ ಹವಳಗಳ ಗಾತ್ರಕ್ಕೆ ತಕ್ಕಂತೆ ಒಂದೊಂದು ಸರಕ್ಕೂ ಮಣಿಗಳು ಪೋಣಿಸಲ್ಪಟ್ಟಿದೆ. ಇವುಗಳನ್ನು ಈ ಸರಗಳನ್ನಾಗಿ ತರಿಸಿಕ್ಕೊಂಡು ಅವರವರು ತಮ್ಮತಮ್ಮ ಯಿಷ್ಟದಂತೆ ಕಟ್ಟಿಸಿಕ್ಕೊಂಡರೂ ಕಟ್ಟಿಸಿಕ್ಕೊಳ್ಳಬಹುದು. ಅಲ್ಲದೆ.



? ಈ ನಮೂನೆಯಾಗಿ ಹಾರವನ್ನು ಕಟ್ಟಿಸಿ ಕಳುಹಿಸುತ್ತೇವೆ. ಇದಕ್ಕಾಗಿ ಹಾರವೊಂದಕ್ಕೆ ೧ ರೂಪಾಯಿ ಹೆಚ್ಚಿಗೆ ಕೊಡಬೇಕು. ಈಹಾರವೆ ಬಂಗಾರದ ಗಿಲ್ಟ್ಸಾಹಾಕಿದ ಕಂಬಿಯಿಂದ ಕಟ್ಟಲ್ಪಡ್ಡಿರುತ್ತೆ. ಒಂದು ರೂಪಾಯಿಗೆ ೧೫ ರೂಪಾಯಿ ಬಂಗಾರದಿಂದ ಕಟ್ಟಿಸಿದ್ದಕ್ಕಿಂತಲೂ ಚೆನ್ನಾಗಿರುವಂತೆ ಕಟ್ಟಿಸಿ ಕಳುಹಿಸುವೆವು. ವರ್ಷಗಟ್ಟಲೆ ಯಿಂಸರೆ ನಿತ್ಯವೂ ಉಪಯೋಗಿಸಿದರೂ ೨-೩ ವರುಷಗಳ ವರೆಗೂ ಕಂಬಿಯ ಬಣ್ಣ ಕೆಡಲಾರದು. ಕೊಳ್ಳುವವರಿಗೆ ಭಾರವು ಸುಲಭವು. ಲಕ್ಷಾಂತರಹಾರಗಳು ಬಿಕರಿಯಾಗಿ ಯೆಲ್ಲಾ ಜಿಲ್ಲೆವ ನುಷ್ಯರಲ್ಲಿಯೂ ಉಪಯೋಗವಾಗಿದೆ. ನೋಡಿದವರೂ ಬಿಡರು.

ಕನ್ನಡನುಡಿ ಗನ್ನಡಿ.

ಶ್ರೀ

ತುಳಸೀರಾಮುದಾಸ್ ರವರಿಂದ ತಯಾರಾಗುವ

ಜರ್ಮನ್ ಸಿಲ್ವರ್ ಬೆಳ್ಳಿ ಸಾಮಾನುಗಳು.

ಆಭರಣಗಳು ವಗ್ಗೈರೆ. *

ಮೇಲಾದನಕಾಸ್ ಕೆಲಸಮಾಡಿದ ಕೇಳುಕಟ್ಟ್ಯಿಳ್ಳ ಚಿಕ್ಕದಾಗಿಯೂ ದೊಡ್ಡದಾಗಿಯೂ ಮಾಡಿಕೊಳ್ಳಿ ಬಹುದಾದ ಸೊಗಸಾದ ಡಾಬು ೧ಕ್ಕೆ	3	0	0
ಇದೇ ಚಿಕ್ಕದು ೧೨ ವರುಷದೊಳಗಿನ ಹುಡುಗಿಯರಿಗೆ ...	2	0	0
ಸಣ್ಣ ಮಕ್ಕಳಿಗೆ	1	8	0
ಚಿಕ್ಕಹುಡುಗಿಯರು ಕಾಳಿಗೆಹಾಕುವ ಕಾಲಂದಿಗೆ ಜೊತೆ ೧ಕ್ಕೆ ...	1	8	0
ಇದೇ ದೊಡ್ಡವರಿಗೆ			0
ಕೈಕಡಗ ಜೊತೆ ೧ಕ್ಕೆ	1	0	0
,, ಬೋಲುಕಡಗ ಜೊತೆ ೧ಕ್ಕೆ ...	0	8	0
ಕೊಂಡು(ಡೊಂಕು) ಕಾಲ್ಕಡಗ, ದೊಡ್ಡವರಿಗೆ ಜೊತೆ ೧ಕೆ	1	8	0
,, ,, ಚಿಕ್ಕವರಿಗೆ ...	1	0	0
ಗೊಬ್ಬಿಕಾಯ್ಕಡಗ, ದೊಡ್ಡವರಿಗೆ ಜೊತೆ ೧ಕ್ಕೆ ...	3	0	0
,, ಚಿಕ್ಕವರಿಗೆ ಜೊತೆ ೧ಕೆ ...	2	0	0
ಇದೇ ಎಳೆಯಮಕ್ಕಳಿಗೆ	1	8	0

* ಈನಮ್ಮ ಸಾಮಾನುಗಳಿಗೆ ವರ್ಷಗಟ್ಟಲೆ ಬಾಳಿಕೆ ಬರುವಂತೆ ಒಳ್ಳೆಗಿಲೆ ಕೊಡಲ್ಪಟ್ಟಿರುತ್ತೆ.

ಜರ್ಮನ್‌ಸಿಲ್ವರ್ ಡಬ್ಬಿಪಾತ್ರಗಳು ವಗ್ಗೆರೆ. *

ನೀರುಕುಡಿಯುವ ಟಮ್ಲರ್ ಒಕ್ಕೆ	1	8	0
ಬಹಳನಾಗರೀಕವಾದ ಲೋಟಾ	1	8	0
ಮುಚ್ಚಳವುಳ್ಳಕಾಲಿನ ಲೋಟಾ	1	12	0
ನಕಾಸುಕೆಲಸದಪಂಚಪಾತ್ರೆವಜ್ರಣಿಸಹ ಬಹಳಸೊಗಸು ...	3	0	0
,, ಚಿಕ್ಕಸಮಿಜು	2	0	0
ತಾಂಬೂಲದತಟ್ಟೆ ಬೇಲ್ದಾರಿಕೆಲಸವು ಒಕ್ಕೆ	2	8	0
ಪನ್ನೀರ್‌ದಾನಿ	2	0	0
ಗಂಧದ ಬಟ್ಲು	1	8	0

ಚಿನ್ನದಗಿಲುಟ ಸಾಮಾನುಗಳು.

ಬೇಲ್ದಾರಿಕೆಲಸದಪಚ್ಚೆಕಲ್ಲಿನ ಜಡೆವಿಳ್ಳೆ ದೊಡ್ಡರಕಂ ಒಕ್ಕೆ ...	3	0	0
,, ಚಿಕ್ಕರಕಂ ಒಕ್ಕೆ ...	2	8	0
ಚಿಕ್ಕವರಿಗೂ ದೊಡ್ಡವರಿಗೂಆಕೂಡ ಉಪಯೋಗಿಸುವ ಶರಡಬ್ಬಿಕೆ ಸಪಕ ಸಹಿತವಾಗಿ	5	0	0
ವಂಕೀ ಜೊತೆ ಒಕ್ಕೆ ದೊಡ್ಡದು	4	0	0
,, ,, ಚಿಕ್ಕದು	3	0	0
ಜಡೆಯ ನಾಗಾಭರಣ ಒಕ್ಕೆ	1	8	0

* * ಇಸೇ ಅಲ್ಲದೆ ಇನ್ನೂ ದೇವರಿಗೆಬೇಕಾದ ಸಂಪುಟಗಳು, ಲವಂಗದಾನಿ, ಆರತಿಪಾತ್ರೆಗಳು, ದೇವಾಲಯಗಳಿಗೆ ಬೇಕಾದ ಪ್ರಭಾವಳಿಗಳು, ಕಿರೀಟಗಳು ಸೂರೇಪಾನಕೊಡೆವಗ್ಗೆರೆಗಳೂ ಮಾಡಿಸಿ ಕಳುಹಿಸಲ್ಪಡುತ್ತೆ. ಮಿತಲಾಭದಿಂದ ಸುಲಭವಾಗಿ ತಯಾರಿಸಲ್ಪಡುತ್ತೆ.

? ಇವುಗಳೂಚೆನ್ನಾಗಿ ಬಾಲಿಕೆ ಬರುವಂತೆ ಒಳ್ಳೆಯ ಗಿಲ್ಟುಮೆರುಗು ಕೆಲಸ ಮಾಡಲ್ಪಟ್ಟು, ಹೊಸಹೊಸಸಮಾನುಗಳಾಗಿ ತಯಾರಿಸಲ್ಪಟ್ಟವೆ. ಬಹಳ ತಾಳಿಕೆ ಬರುತ್ತೆ.

ಧಾರಣಕಸೂರಿನಮಾತ್ರೆ ಯಲ್ಲ. ದೊಡ್ಡಮನುಷ್ಯರೆಲ್ಲರೂ ಒಂದೊಂದನ್ನು ತ
ಮ್ಮ ಜ್ರೋಬಿನಲ್ಲಿಡಲು ಮೋಲಂಟ್ಟು. ಉಪಯೋಗವಿಧಿ—ದೊಡ್ಡವರು ೧—೨ ಮಾತೆ
ಗಳಪ್ರಮಾಣವಾಗಿಯೂ, ಮಕ್ಕಳಿಗೆ ಅರೆ ಒಂದುಮಾತ್ರಾಪ್ರಮಾಣವಿಂದಲೂ ಬೆಳಿ
ಗ್ಗೆ ಸಾಯಂ ತೆಗೆಸಿಕೊಳ್ಳಬೇಕು. ೪೮ ಮಾತ್ರೆಗಳಬುಡ್ಡಿ ೧ಕ್ಕೆ ರು. ೧—೦—೦

೫ ಕಾಮಚಿಂತಾಮಣಿಲೇಹ್ಯವು—ಇದರಿಂದ, ಹಸಿವೂ, ಜೀರ್ಣಶಕ್ತಿಯೂ,
ಉತ್ಸಾಹವೂ, ಹೆಚ್ಚುತ್ತೆ. ದೇಹದಲ್ಲಿ ವ್ಯಾಪಿಸಿರುವ ಪಿತ್ತವಾತಾದಿವ್ಯಾಧಿಗಳು ಮಾ
ಣುತ್ತೆ. ಶೀತಬೇಧಿ ರಕ್ತಬೇಧಿಯೂ ಮಾಣ್ಮುತ್ತೆ ಅಪಾರ ವೀರ್ಯವೃದ್ಧಿಯೂ, ವಿಶೇ
ಷಭೋಗಶಕ್ತಿಯೂ ಉಂಟಾಗುತ್ತೆ. ಇದು ರಾಜಾರ್ಹವಾದ ಲೇಹ್ಯವು. ಉಪಯೋ
ಗವಿನ—ಇದನ್ನು ಸಾಯಂಕಾಲ ದೊಡ್ಡವರು ಅವರವರ ದೇಹಬಲಕ್ಕೆ ತಕ್ಕಂತೆ ಗಜ್ಜಿ
ಗೆಕಾಯಿ ನೆಲ್ಲಿಕಾಯಿಯಷ್ಟು, ಚಿಕ್ಕವರೂ ಸ್ತ್ರೀಯರೂ ಅವರವರಿಗೆ ತಕ್ಕಷ್ಟು ನೋ
ವಿಸುತ್ತ ಬಂದರೆ ಬಹಳಪ್ರೊಳ್ಳೆಯದು ಬೆಲೆ ಸೇರು ೧ಕ್ಕೆ ೨ ರೂಪಾಯಿ.

೬. ಖಜ್ಜಿಕುರುಗಳಿಗೆ ಪುಡಿ—ಒಂದೇದಿನದಲ್ಲಿ ಸ್ವಸ್ಥವಾಗುತ್ತೆ. (ಡಬ್ಬಿ
೧ಕ್ಕೆ ಬೆಲೆ ೪ ಆಣೆ.) ಕೊಂಜಪುಡಿಯನ್ನು ಒಳ್ಳೆಣ್ಣೆಯಲ್ಲಾದರೂ ತೆಂಗಿನೆಣ್ಣೆಯ
ಲ್ಲಾದರೂ ಕಲಸಿ ಬೆಳಿಗ್ಗೆ ಖಜ್ಜಿಯಿರುವಕಡೆ ಲೇಪಿಸಿಕೊಂಡು ಸಾಯಂಕಾಲಕ್ಕೆ ಚ
ನ್ನಾಗಿ ಹಿಟ್ಟಿನಿಂದ ಉಜ್ಜಿ ಸ್ನಾನಮಾಡಬೇಕು.

೭. ಗಾಯಗಳ ಮುಲಾಮು—ಎಲ್ಲಾ ವಿಧಗಳಾದ ಗಾಯಗಳೂ ಇದರಿಂದ
ವಾಸಿಯಾಗುತ್ತೆ. ಗಾಯುವಸ್ಥಳವನ್ನು ಬಿಸಿನೀರಿಂದ ತೊಳೆದು ಇದನ್ನು ೨ ಹೊತ್ತೂ
ಹಚ್ಚಬೇಕು. ಡಬ್ಬಿ ೧ಕ್ಕೆ ಬೆಲೆ ರೂ. ೧—೧೦—೦.

೮. ಗೂರ್ಲು ಬ್ಬಸಗುಠಾಣಿ—ಅಸಾಧ್ಯವಾದ ಗೂರ್ಲು ಬ್ಬಸ
ಶ್ವಾಸವನ್ನೂ ಕೊರಳಕೂಗನ್ನೂ ಈಮದ್ದಿನಿಂದ ಗುಣಮಾಡಿಕೊಳ್ಳ
ಡ್ಡವರು ಕಾಲುರೂಪಾಯಿ ತೂಕದಷ್ಟೂ, ಚಿಕ್ಕವರು ೨ ಆಣೆ ತೂಕದಷ್ಟು ಪುಡಿ
ಯನ್ನು ಸೇರೆ ಬಿಸಿನೀರಲ್ಲಿ ಹಾಕಿ ೨ ಹೊತ್ತೂ ಕುಡಿಯಬೇಕು. ಕೂಡಲೇ ಗುಣತಿ
ಳಿಯುತ್ತೆ. ೨೧ ದಿನಗಳಿಗಾಗುವಷ್ಟು ಮದ್ದಿನಡಬ್ಬಿ ೧ಕ್ಕೆ ಬೆಲೆ ೧—೪—೦.

೯. ಜ್ವರಸಂಜೀವಿಮಾತ್ರೆ.—ಮಲನಾಡುಜ್ವರವು, ಳಿಜ್ವರವು, ಪರಸೆಜ್ವರ
ವು, ಬಿಡದೆಕಾಯುವ ಹಳೆಜ್ವರವು, ಸನ್ನಿ ಇವುಗಳೆಲ್ಲವೂ ಹೋಗುತ್ತೆ. ಉಪಯೋಗ
ವಿಧಿ—ದೊಡ್ಡವರು ಒಂದೊಂದುಮಾತ್ರೆ ಪ್ರಮಾಣವಾಗಿಯೂ, ಚಿಕ್ಕವರು ವಯಸ್ಸಿಗೆ
ತಕ್ಕಂತೆ ಮುಕ್ಕಾಲು, ಅರ, ಕಾಲುಒಂದುಮಾತ್ರೆ ಪ್ರಮಾಣವಾಗಿಯೂ ಬೆಳಿಗ್ಗೆ ಹಸಿಶುಂಠಿ
ರಸದಲ್ಲಿಯೂ ಸಾಯಂ ಜೀನುತುಪ್ಪದಲ್ಲಿಯೂ ತೆಗೆದುಕೊಳ್ಳಬೇಕು. ೧೨ ಮಾ
ತ್ರೆಗೆ ೪ ಆಣೆ ಬೆಲೆ.

೧೦. ದಂತಶೋಧನಿ ಪುಡಿ—ಇದರಿಂದ ನಿತ್ಯವೂ ಹಲ್ಲುಜ್ಜಿಕೊಳ್ಳುತ್ತಿದ್ದರೆ,
ಹಲ್ಲುಗಳು ಮುತ್ತುಗಳಂತೆ ಬೆಳ್ಳಗಾಗಿ, ಒಸಡಿಗೆ ಬಿಗಿಯುಂಟು ಸಾಧನದಿಂದ ರ

(Vol. I.) December 1906. (No.
The Vernacular Medical monthly magzine published to stimulate the Ayurvedic system of medicine in Karnatal

PER EXHIBITION
. 577524.
nataka State



Editor, Chikitsaka. V. D. Pandit.

ಧನ್ವಂತರಿಸ್ಸುಧಾಪೂರ್ಣಕಲಶಾಭ್ಯೋ
ಕರೋದ್ಧರಿಃ ॥ ಜರಾಂಪೃತಿತ್ಸು
ದೇವದಾರ್ಥನಾಸಾಧಕಃಪ್ರಭುಃ ॥

Annual Subscription 2—8—0

1,000 Copies, S. V. L. Press Bangalore 1906

ವೈದ್ಯಸಿಂಧು ಮಾಸ ಪತ್ರಿಕೆ ಚಂದಾನಿರ್ಣಯ

ವರ್ಷಕ್ಕೆ ೦ ಕ್ಕೆ ಸ್ಥಳ ಪರಸ್ಥಳೀಕರಿಗೆ ಸಹಾ ರೂ ೩-೪-೪

ಇದರಲ್ಲಿ ಟಪಾಲು ಹಾಸಲು ಸೇರಿರುತ್ತೆ,

ಬಿಡಿ ಪತ್ರಿಕೆ ೦ ಕ್ಕೆ ೪ ಆಣೆ,

೧೦ ಜನ ಚಂದಾದಾರರನ್ನು ಹೊಂದಿಸಿಕೊಡುವವರಿಗೆ ಒಂದು ದನರಿಗೆ ಪ್ರತಿಗಳು ದೊರೆಯುವವು, ಚಂದಾಕರಣವನ್ನು ಮುಂಗ ಕಳುಹಿಸಿದ ಹೊರತು ಸಂಚಿಕೆಯುಂನು ಅಪೇಕ್ಷಿಸಿದರೆ ದೊರಿಯುವ

ಒಳ್ಳೆ ೀ ಸಮಯ,

ಪ್ರತಿನಿಧಿಸ್ಟ್ ಕ್ಟ್, ಮುತ್ತು ತಾಲ್ಲೂಕ್‌ಗಳಲ್ಲಿಯೂ,

ಜೀಕಾಗಿರುತ್ತೆ, ಅಪೇಕ್ಷಿಯುಳ್ಳವರು, ಪ್ರಕಟನೆಯು ದರ ಮುಂ

ವಿಷಯಗಳೆಲ್ಲಾ ಬರದು ತಿಳಿದುಕೊಳ್ಳಬಹುದು,

ಚಿಕಿತ್ಸಕ, ವಿ. ಡಿ. ಪಂಡಿತರು ಎಡಿಟರ್

ವೈದ್ಯಸಿಂಧು ಆಪೀಸು

ಬೆಂಗಳೂರು ಪಟ್ಟಣ

ಅನುಕ್ರಮಣಿಕೆ.

೧ ಭಿಷಕ್ ಮಿತ್ರ,

೨ ಪ್ರಜಾಪ್ರತಿನಿಧಿ ಸಭೆಯೂ ಆಯುರ್ವೇದ ವೈದ್ಯವು,

೩ ಆಧುನಿಕ ಡಾಕ್ಟರುಗಳ ನಡವಳಿಕೆಗಳು,

೪ ಕುಡಿಯುವ ನೀರು,

೫ ಭೌತಿಕಶಾಸ್ತ್ರ ಸಂಗ್ರಹವೇ ಪಟ್ಟವರ್ಧನ ನುಜುಂಡಶಾಸ್ತ್ರಿಗಳವ

೬ ಮಂತ್ರ ತಂತ್ರ ಸಂಗ್ರಹ ವೆ॥ ಚಿತಂಬ್ರದೀಕ್ಷಿತರು,

೭ ಕಲಾಕೌಶಲ್ಯ ಸಂಗ್ರಹ,

೮ ಮದ್ಯಪಾನದ ಗುಣಾವಗುಣವು,

೯ ಸ್ತ್ರೀ ರೋಗವರ್ಣ

೧೦ ಆಯುರ್ವೇದ ಔಷಧಪ್ರಕಾಶಕ.

೧೧ ವೈದ್ಯ ಸಾಮರ್ಥ್ಯ

೧೨ ಆಧುನಿಕ ವೈದ್ಯ ಪ್ರಶಂಸೆ,

೧೩ ಕಾಲನಿರ್ಣಯ,

೧೪ ಚಿಕಿತ್ಸಾಸ್ಥಾನ

೧೫ ಅಲ್ಪಸ್ಥಾನ,

೧೬ ಅಮೂಲ್ಯ ಮನೆಮದ್ದು ಔಷಧ,

೧೭ ಅಡ್ವರ್ಟೈಸುಮೆಂಟುಗಳು

ವೈದ್ಯಸಿಂಧು

ಸಂಪುಟ ೧] ಪರಾಭವ ಸಂವತ್ಸರ ಪುಷ್ಯಶುದ್ಧ ೧ [ಸಂಚಿಕೆ ೫

ವಿಜ್ಞಾಪನೆ

ಶ್ಲೋ॥ ಚೋದ್ಯಾದೋಮತ್ಸರಗ್ರಸ್ತಾಃ । ಪ್ರಭವಸ್ಮಯದೂಷಿತಾಃ ॥
ಅಬೋಧೋಪಹತಾಶ್ಚಾನ್ಯೇ । ಜೀರ್ಣಮಂಗೇಸುಭಾಷಿತಂ॥೧॥

ಸೂಚನೆ.

ಬಾತ್ಮೀದಾರರು ಬೇಕಾಗಿರುತ್ತೆ, ಬಾತ್ಮೀದಾರರು ವೈದ್ಯಸಂಬಂಧವಾದ ಯಾವ ಅಂಶವನ್ನಾದರೂ, ಉಪನ್ಯಾಸವನ್ನಾದರೂ, ಔಷಧ, ಚಕಿತ್ಸಕ್ರಮವನ್ನಾದರೂ, ಅಥವಾ ಯಿತರ ಯಾವಆರೋಗ್ಯವಿಷಯವನ್ನಾದರೂ, ಇಂಗ್ಲೀಷ್, ಕನ್ನಡ, ತೆಲುಗು, ಮರಾಠಿ, ಭಾಷೆಗಳಲ್ಲಿ ಸ್ಪಷ್ಟವಾಗಿಬರದು ಕಳುಹಿಸಿದರೆ ಅವುಗಳು ಪ್ರಕಟನೆಗೆ ಅನುಗುಣವಾಗಿ ತೋರಿ ಬಂದಲ್ಲಿ ಉಚಿತಾರ್ಥವಾಗಿ ಪ್ರಕಟಿಸಲ್ಪಡುವದಲ್ಲದೆ ಬಾತ್ಮೀದಾರರಿಗೆ ಅವರು ಕಳುಹಿಸಿದ ಅಂಕದ ೨೫ ಅಚ್ಚಿನ ಪ್ರತಿಗಳನ್ನು ಅಪೇಕ್ಷಿಸಿದಲ್ಲಿ ರವಾನಿಸಲ್ಪಡುವವು. ಬಾತ್ಮೀದಾರರು ಬರೆದು ಕಳುಹಿಸುವ ಅಂಕೆಗಳಿಗೆ ಈ ಪತ್ರಿಕಾ ಎಡಿಟರ್ ಯಾವಭಾಗದಲ್ಲಿಯೂ ಜವಾಬ್ದಾರರಾಗುವದಿಲ್ಲ.

ಭಿಷಕ್ ಮಿತ್ರ.

ಶ್ಲೋಕ॥ ಭಿಷಜಾಂಸಾಧುವೃತ್ತಾನಾಂಭದ್ರಾಗಮಶಾಲಿನಾಂ॥
ಅಭ್ಯಸ್ತಕರ್ಮಣಾಂಭದ್ರಂಭದ್ರಮಾಭಿಲಾಷಿಣಾಂ॥

"ಯತ್ರಯೋಗೀಶ್ವರಃ ಕೃಷ್ಣೋ, ಯತ್ರಪಾರ್ಥೋಧನುರ್ಧರಃ"
ಎಂಬ ಗೀತಾವಚನವು, ಘಂಟಾಘೋಷವಾಗಿದ್ದರೂ ಕೂಡ ನಮ್ಮ ಕರ್ನಾಟಕದೇಶ ಬಾಂಧವರನಡವಳಿಕೆ, ವಿದ್ಯಾಭಿವೃದ್ಧಿ, ದೇಶಾಭಿಮಾನ, ಮುಂತಾದವುಗಳನ್ನು ನೋಡಿದರೆ, ತುಂಬಾ ಅವ್ಯವಸ್ಥೆಯಲ್ಲಿರುವದೆಂದು ಹೇಳುವದಕ್ಕೆ ಯಾವ ಅಭ್ಯಂತರವೂ ಇರುವದಿಲ್ಲ. ಆದರೆ ನಮ್ಮ ಭಾರತೀಯರಾದ ನಮ್ಮ ಡಿಗರಲ್ಲಿ ಕೆಲವರು, ವೈದ್ಯವಂದರೇನು, ವೈದ್ಯಮಾಸಸಂಚಿಕೆ ಅ ದ್ದೇನು, ಎಂದು ಆಶ್ಚರ್ಯಪಡುತ್ತಾ ನಮ್ಮವೈದ್ಯಸಿಂಧು ಮಾಸಸಂಚಿಕೆಯನ್ನು ಚೆನ್ನಾಗಿ ಓದದೆ, ತಿರಸ್ಕರಿಸಿ ವಾಪಸ್ಸುಮಾಡಿರುವರು ಇಂಥಾ ಶ್ರೇಷ್ಠವಾದ ಶರೀರ ಸಂರಕ್ಷಣೆಮಾಡಿಕೊಳ್ಳುವ ಮಾಸ ಪತ್ರಿಕೆಯನ್ನು ಜನರು ಉಪಯೋಗಮಾಡಿಕೊಳ್ಳುವದು ತಿಳಿಯದೆ, ವಾಪಸ್ಕಳುಹಿಸಿದ್ದಾರೆಂದು ನೋಡಿ ತುಂಬಾ ವಿಷಾದಿಸುತ್ತೇವೆ. ಈಮಾಸಪತ್ರಿಕೆಯಲ್ಲಿ ಆರೋಗ್ಯ ವಿಷಯ ವುತ್ತು ವೈದ್ಯವಿಷಯವಾದ ಅನೇಕ ಚರ್ಚೆಗಳು ನಡಯುವದಲ್ಲದೆ ಶರೀರ ಸೌರಕ್ಷಣೆಯಂನು ಮಾಡಿಕೊಳ್ಳುವ ಉತ್ತೀರ್ಣಕ್ರಮವಂನು ಸಹಾ ವಿಶದವಾಗಿ ಬೋಧಿಸುವೆವು. ಇಂಥಾಮಾಸಪತ್ರಿಕೆಯು ಕರ್ನಾಟಕ ದೇಶದಲ್ಲಿ ಇದುವರಿವಿಗೆ ಯಾರೂಭಾಪಿಸಲಿಲ್ಲವೆಂದು ಅನೇಕ ಪತ್ರಿಕಾಕರ್ತರು ತಮ್ಮ ಅಭಿಪ್ರಾಯವನ್ನು ತಮ್ಮ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವರು. ಹೀಗಿದ್ದರೂಕೂಡ ನಮ್ಮ ಭಾರತೀಯರಾದ ದೇಶಾಭಿಮಾನಿಗಳು ಪ್ರೋತ್ಸಾಹಿಸದೇಯಿರುವದು ತುಂಬಾ ಪಶ್ಚಾತ್ತಾಪಕ್ಕೆ ಕಾರಣವಾಗಿರುವದು. ಶರೀರ ದಾರ್ಢ್ಯವು ಸರಿಯಾಗಿಲ್ಲದೆಯಿದ್ದಲ್ಲಿ ಮನುಷ್ಯರು ಯಾವಕೆಲಸಕ್ಕೂ ಶಕ್ತಿಯಿಲ್ಲದೆ ಸುಮ್ಮನೆಕೂತುಕೊಳ್ಳುವ ಸಂಭವವು ಬಂದು ಅನೇಕ ತೊಂದರೆಗಳಿಗೆ ಬಳಗಾಗುವರು, ಈವಿಷಯವಾಗಿ ಹಿಂದಿನ ಸಂಚಿಕೆಗಳಲ್ಲಿ ಓದಿತಿಳಿದುಕೊಳ್ಳಬಹುದು. ಈ ಸಂಚಿಕೆಯಲ್ಲಿ ವಿಶೇಷ ಬರೆಯಲು ಸ್ಥಳ ಸಂಕೋಚವಾದ್ದರಿಂದ ಮನ್ನಿಸಿರುತ್ತೇವೆ.

(ಆಳುವ ಶ್ರೀಮನ್ಮಹಾರಾಜರವರ ಪ್ರಜಾಪ್ರತಿನಿಧಿ ಸಭೆಯೂಮತ್ತು ಆಯುರ್ವೇದವೈದ್ಯವಿಷಯವು)

ನಮ್ಮಭಿಷಕ್ಮಿತ್ರನು, ಇದುವರಿವಿಗೂ ಜನರ ಜನರಾಗವ

ನ್ನು ಹೊಂದಿ ಈ ವಿಷಯದಲ್ಲಿ ಶ್ರೀಮತ್ ಮೈಸೂರು ಸರ್ಕಾರದವರ ಸನ್ನಿಧಾನದಲ್ಲಿ ವಿಜ್ಞಾಪಿಸುವದೇನಂದರೆ, ಮಹಾರಾಜರವರು ಪ್ರಜೆಗಳ ಆರೋಗ್ಯವನ್ನು ಸಂರಕ್ಷಿಸುವದಕ್ಕೂ, ನಮ್ಮ ಭಾರತೀಯರಾದ ಕರ್ನಾಟಕ ಬಾಂಧವರು ಸಕಲ ಶಾಸ್ತ್ರಗಳಲ್ಲಿಯೂ ಕಾವಿಂಡಿಕೊಂಡು, ಅಭಿವೃದ್ಧಿಗೆ ಬರುವದಕ್ಕೂ, ಕಳದ ವಿಜಯದಶಮೀ ಮಹೋತ್ಸವದಲ್ಲಿ, ದೇಶಾಭಿಮಾನಿಗಳಾದ, ವೇ॥ ಅಂಬಳಿ ಕೃಷ್ಣಯ್ಯಾಪಂಡಿತರವರೂ, ಮತ್ತು ಮು॥ರಾ॥ ಕೃಷ್ಣಯ್ಯಂಗಾರ್ಯರವರೂ, ಮಹಾಸ್ವಾಮಿಗಳವರ ಸಂನಿಧಾನದಲ್ಲಿ ಆಯುರ್ವೇದ ವೈದ್ಯವಿಷಯವಾಗಿ ಚರ್ಚಿಸಿದ್ದಕ್ಕಿಂತಲೂ ಅನುಕೂಲವಾಗಿ ನಾವು ಪ್ರಾರ್ಥಿಸುವದೇನಂದರೆ, ಮೈಸೂರುದೇಶದಲ್ಲಿ ಸುಮಾರು ೧೫ಲಕ್ಷ ಪ್ರಜೆಗಳಿರುವರು. ಇಂಗ್ಲೀಷ ವೈದ್ಯಶಾಸ್ತ್ರ ಇಂಗ್ಲೀಷ ಜನರ ಆಹಾರ ಇವುಗಳು ಸುತರಾಂ ತಿಳಿಯುವದೇಬೇಡ. ಇಂಗ್ಲೀಷ ವಿದ್ಯದಲ್ಲಿ ಪ್ರವೀಣರಾಗಿ ಸಂಸ್ಥಾನದ ದೊಡ್ಡ ಅಧಿಕಾರಮಾಡುವವರು ಮಾತ್ರ ಇಂಗ್ಲೀಷ ಸಾರ್ವಭೌಮನವರ, ಅನುಕೂಲಗಳಂನು ಹೊಂದುವಕೇವಿನಹ ಇತರರಿಗೆ ಕರ್ನಾಟಕವೇ ಕ್ಲೇಷ್ಮವಾದದ್ದು ಅದುದರದಕಯಿಂದ ಕರ್ನಾಟಕರಿಗೆ, ಕರ್ನಾಟಕವಿದ್ಯ ಕರ್ನಾಟಕಭಾಷೆ ಕರ್ನಾಟಕ ಆಹಾರ, ಕರ್ನಾಟಕ ವೈದ್ಯಇವುಗಳಂನು ಬಿಟ್ಟರೆ ಮಾರ್ಗವಿಲ್ಲದೆ ತೊಂದರೆಪಡುತ್ತಿರುವರು. ಕರ್ನಾಟಕದೇಶದ ರಾಜಧಾನಿಯಾದ ಮೈಸೂರು ಪಟ್ಟಣವು ಮೇಲ್ಕಂಡ ನ್ಯೂನತೆಗಳಂನು ಪರಿಹರಿಸುವದಕ್ಕೆ ತವರುಮನೆಯಾಗಿರುತ್ತೆ, ವೇ॥ ಅಂಬಳಿ ಕೃಷ್ಣಯ್ಯಾಪಂಡಿತರವರು ಮು॥ ರಾ॥ಕೃಷ್ಣಯ್ಯಂಗಾರ್ರವರೂ, ಮುಂತಾದವರುಗಳು ನಮ್ಮ ಕರ್ನಾಟಕ ವೈದ್ಯವಂನು ಜೀರ್ಣೋದ್ಧಾರಮಾಡುವದಕ್ಕೆ ಪ್ರವರ್ತಿಸಿರುವದು ನೋಡಿ ನಾವುಗಳು ತುಂಬಾ ಸಂತೋಷಿಸುವೆವು. ಈ ನಮ್ಮ ಮೈಸೂರುದೇಶದಲ್ಲಿ. ೪ ಡಿಸ್ಟ್ರಿಕ್ಟ್‌ಗಳೂ, ೪೦ ತಾಲ್ಲೂಕ್‌ಗಳೂ, ಮತ್ತು ೭-೪ ಸಹಸ್ರ ಹೋಬಳಿಗಳನ್ನು ಇರುವವು ಇದಕ್ಕೆ ಶ್ರೀಮತ್ ಮಹಾರಾಜರವರ ಸರ್ಕಾರದವರು ಮೈಸೂರಿನಲ್ಲಿ ವೇ॥ ಅಂಬಳಿ ಕೃಷ್ಣಯ್ಯ ಪಂಡಿತರವರಂನು ಆಯುರ್ವೇದ ಔಷಧಕಾರ್ಯಾಲಯಕ್ಕೂ ಮತ್ತು ಆಯುರ್ವೇದ ಔಷಧಸಂಗ್ರಹಕ್ಕೂ ಕಾರ್ಯದರ್ಶಿಗಳಂನಾಗಿಯೂ, ಮು॥ ರಾ॥ ಡಾಕ್ಟರ್. ಅಚ್ಯುತರಾಯರವರಂನು ಪ್ರಸಿಡೆಂಟರಂನಾಗಿಯೂ, ಮು॥ರಾ॥ ಡಾಕ್ಟರ್ ವೆಂಕಟರಾ

ಯುವರಂನು ವೈಸ್ರಾಯ್ ಸಿಡೆಂಟ್ ರಂನಾಗಿಯೂ ಮತ್ತು ಕೆಲ್ಸಸ್ಥಾನ, (ಲಿಬೆರಿಬರಿ) ಕಾರ್ಯಗಳಿಗೆ ಡಾಕ್ಟರ್ ಮು॥ ರಾ॥ ಶ್ರೀನಿವಾಸರಾಯರವರಂನು ಮತ್ತು ಡಾಕ್ಟರ್ ರಾಮಸ್ವಾಮಯ್ಯಂಗಾರವರಂನೂ ಅಧ್ಯಕ್ಷರನ್ನಾಗಿ ನಿಯಮಿಸುವುದಾಗಿಯೂ, ಪಾಶ್ಚಿಮಾತ್ಯರ ಶ್ರೇಷ್ಠವಾದ ವೈದ್ಯಶಾಸ್ತ್ರದ ಔಷಧಗಳಂತೆ ನಮ್ಮ ಆಯುರ್ವೇದದ ಔಷಧಗಳಂನು ತಯಾರ್ ಮಾಡುವದಲ್ಲದೆ ಅಲ್ಲಿವೈದ್ಯರಂನು ತಯಾರುಮಾಡಿ ಪ್ರತಿಯೊಂದು ಡಿಸ್ಟ್ರಿಕ್ಟಿನ ಸಿವಿಲ್ ಆಸ್ಪತ್ರೆಯಿಂತೆ, ಆಯುರ್ವೇದ ಸಿವಿಲ್ ಆಸ್ಪತ್ರೆಯನ್ನು ಸ್ಥಾಪಿಸಬೇಕು, ಮತ್ತು ಅಲ್ಲಿ ಕರ್ನಾಟಕರ ನಾಟುವೈದ್ಯ, ಚಿಕಿತ್ಸೆಯನ್ನುವೂ ಡಿಸಬೇಕು; ಮತ್ತು ಡ್ರಸ್ಸರುಗಳು, ಆಸಿಸ್ಟೆಂಟು ಸರ್ಜರಿಯರ್ ರವರುಗಳ ತರಗತಿಯಂತೆ ಕರ್ನಾಟಕ ವೈದ್ಯಸಂಘದಲ್ಲಿ ಶ್ರೇಷ್ಠ ಮಹಾರಾಜರವರು, ಇತರುಗಳಿಗೆ ಪದವಿಯನ್ನುಕೊಟ್ಟು, ಸುಮಾರು ಸಾವಿರಾರು ವೈದ್ಯರುಗಳನ್ನು ತಯಾರುಮಾಡಿ ಅಲ್ಲಲ್ಲಿನ ಪ್ರಜೆಗಳಿಗೆ, ಸಹಾಯ ಮಾಡಿ, ರೋಗಬಾಧೆಯಂನು ನಿವಾರಣೆಮಾಡುವ ಪ್ರಯತ್ನ ಮಾಡಿ, ಶ್ರೇಯಸ್ಸಂನು ಹೊಂದಬೇಕೆಂದು ಕೋರುವೆವು ಈ ಕೆಲ್ಸಕ್ಕೆ ಸುಮಾರು ೪-೧೦ ವರ್ಷಗಳಾಗುವವು, ಅಲ್ಲದೆ ಇಂಡಿಯಾ ಸರ್ಕಾರದವರುಯೂ ವಿಶೇಷವಾಗಿಯೂ ತೊಂದರೆಯಂನು ತೋರಿಸಲಾರರೆಂದು ನಂಬಿಧ್ದೇವೆ. ಈ ವೈದ್ಯರುಗಳಿಗೆ ಕನ್ನಡ ಚನ್ನಾಗಿ ಓದಿ ಬರೆಯುವದಕ್ಕೆ ಬರುತ್ತಿರಬೇಕು, ಇಂಗ್ಲೀಷ್ ತಕ್ಕಮಟ್ಟಿಗೆ ತಿಳಿದಿರಬೇಕು, ಮತ್ತು ಇವರುಗಳಿಗೆ ಕಂನಡದಲ್ಲಿಯೇ ಶಾರೀರಶಾಸ್ತ್ರ ಇಂದ್ರಿಯವಿಜ್ಞಾನಶಾಸ್ತ್ರ, ರಸಾಯನಶಾಸ್ತ್ರ ಶಸ್ತ್ರ ಚಿಕಿತ್ಸೆ, ವೈದ್ಯಶಾಸ್ತ್ರ ಪ್ರಸೂತಚಿಕಿತ್ಸೆ, ನ್ಯಾಯವೈದ್ಯ ಬಾಲರೋಗ ಚಿಕಿತ್ಸೆ ಮೊದಲಾದ ಶರೀರ ಆರೋಗ್ಯಶಾಸ್ತ್ರಗಳನ್ನು ನಮ್ಮ ನೇಟೀವ್ ಆಧುನಿಕವೈದ್ಯರಿಂದ ಉಪನ್ಯಾಸರೂಪವಾಗಿ ಕೊಡಿಸಿ ಅಧ್ಯಯನಮಾಡಿಸಬೇಕು, ಮತ್ತು ಅವರುಗಳಿಗೆ ಒಬ್ಬ ದಾದಿ ಇಬ್ಬರು ಜವಾನರಂನೂ ಒಬ್ಬ ಕಾಂಪೌಂಡರನ್ನೂ ಸಹಾಯಕ್ಕೆ ಕೊಡಬೇಕು. ಹೋಬಳಿ ವೈದ್ಯರಿಗೆ ವರ್ಷಕ್ಕೆ ಔಷಧಕ್ಕಾಗಿ ೨೦೦ ರೂಪಾಯಿ ಸರ್ಕಾರವಾಗುವದು. ಡಿಸ್ಟ್ರಿಕ್ಟು ತಾಲ್ಲೂಕ್‌ಗಳಲ್ಲಿರುವ ವೈದ್ಯರುಗಳಿಗೆ ಸಿವಿಲ್ ಆಸ್ಪತ್ರೆಯಮೇರಿಗೆ, ಸಂದರ್ಭಾನುಸಾರ ವೇತನವನ್ನುಕೊಟ್ಟು ಕೆಲ್ಸ ಮಾಡಿಸುವ ಪಕ್ಷದಲ್ಲಿ ವರ್ಷಕ್ಕೆ ಸುಮಾರು ೪೦ ಸಹಸ್ರ ರೂಪಾಯಿಗಳಾಗುವದು, ಇಂಗ್ಲೀಷ್ ವೈದ್ಯ ಔಷಧ ಚಿಕಿತ್ಸೆಗಾಗಿ ನಮ್ಮ ಮಹಾರಾ

ಜನರು ಕಳಪನಷ್ಟ ಸುಮಾರು ೫ ಲಕ್ಷ್ಮರೂಪಾಯಿಗಳಿಂದು ವ್ಯಯ ಮಾಡಿದ್ದು ನೋಡಿ ತಿಳಿದುಬರುತ್ತದೆ. ಇಂಗ್ಲೀಷ್ ವಿದ್ಯಾಭ್ಯಾಸಕ್ಕೂ ಮತ್ತು ಕನ್ನಡ ವಿದ್ಯಾಭ್ಯಾಸಕ್ಕೂ ನಮ್ಮ ಮಹಾರಾಜರವರು ಯಾವ ಮೇರಿಗೆ ವೆಚ್ಚವನ್ನು ಮಾಡುವರೋ ಅದೇ ಮೇರಿಗೆ ನಮ್ಮ ನಾಟಿವೈದ್ಯಕ್ಕೆ ಖರ್ಚು ಮಾಡಿದರೆ ತುಂಬಾ ಅನುಕೂಲವಾಗುವದು, ಮೇಲೆ ಅರಿಕೆ ಮಾಡಿಕೊಂಡ ಸತ್ಕಾರ್ಯವು ನಡೆಯುವವರಿಗೆ ಆ ಡಿಸ್ಟ್ರಿಕ್ಟ್ ಸಿವಿಲ್ ಸರ್ಜರವರು ಮೇಲ್ವಿಚಾರಣೆಮಾಡಿ ಇಂಗ್ಲೀಷ್ ವೈದ್ಯ ಇಲಾಖೆಯಂತೆ ವೈದ್ಯ ವಿಷಯ ವಾಗಿ ಮಂತ್ರಿ ಸ್ಯಾನಿಟರಿ ಕಮಿಶ್ನರ್ ರವರಿಗೆ ತಿಳಿಸಬೇಕು ಅವರಿಂದ ಸರ್ಕಾರದವರು ತಿಳಿದುಕೊಳ್ಳಬಹುದು.

(ಎಡಿಟರ್)

ಅಧುನಿಕ ವೈದ್ಯರ ನಡವಳಿಕೆಗಳು

ಸಂಯುಕ್ತ ಸಂಸ್ಥಾನದ ಡಾಕ್ಟರ್ ಹೆಚ್. ಎ. ರಾಯೆಸ್ಟರ್ ಲಘು ರ್ಯಾಲಿಯವರು ಟ್ರಾನ್ಸ್ಯಾಟೀ ಮೆಡಿಕಲ್ ಅಸೋಸಿಯೇಷನ್ ಎಂಬ ಸಮಾಜದ ಅಗ್ರಾಸನಾಧಿಪತ್ಯವನ್ನು ವಹಿಸಿದ್ದಕಾಲದಲ್ಲಿ ವೈದ್ಯರಲ್ಲಿ ಚಿತ್ರ ವಿಚಿತ್ರವಾದವರಿರುವರೆಂದು ಹೇಳಿರುತ್ತಾರೆ, ಅವರು ಹೀಗೆ ಹೇಳಿರುವುದು ವೈದ್ಯರನ್ನು ಹೀಯಾಳಿಸಬೇಕೆಂಬ ಅಭಿಪ್ರಾಯದಿಂದಲ್ಲ. ಅವರು ಮಾಡುವ ಕೆಲಸಗಳಿಂದು ನ್ಯಾಯವಾಗಿ ಜನ ಸಮೂಹಕ್ಕೆ ಬಯಲು ಮಾಡುವುದಕ್ಕಾಗಿಯೇ ನವೀನ ವೈದ್ಯರನ್ನು ಅವರು ಏಳುಪಂಗಡಗಳಾಗಿ ವಿಂಗಡಿಸಿರುವರು.

(1) ಪ್ರೊಲಿಟಿಕಲ್ ಡಾಕ್ಟರ್ ಅಂದರೆ ತಾಂತ್ರಿಕವೈದ್ಯರು ವೈದನಾದಂಥವನು ಪ್ರಾಣಿನರ್ಗಕ್ಕೆ ಆಪತ್ತು ಸಂಭವಿಸಿದಾಗ ಸಹಾಯಕನಾಗಿರುತ್ತಾ ಇತರ ಜನಗಳಂತೆ ತಾನೂ ಬೇರೆಕಾರ್ಯಗಳಲ್ಲಿ ಪ್ರವರ್ತಿಸುವುದೇನೂ ನ್ಯಾಯವಾದುದೇಸರಿ ರಾಜ್ಯ ತಂತ್ರದಲ್ಲಿ ಪ್ರವೀಣತೆಗೂ (Doctor in politics) ಮತ್ತು ತಂತ್ರವೈದ್ಯದಲ್ಲಿ ಪ್ರವೀಣತೆಗೂ (Politics in Doctor.) ಒಹಳ ವ್ಯತ್ಯಾಸವುಂಟು ಮೊದಲಿನದೇನೂ ನ್ಯಾಯವಾದ ಕಾರ್ಯವಾಗಿದೆ. ಎಡನೆಯದು ಕೊಂಚಮಟ್ಟಿಗೆ ಮೋಸದ ಛಾಯೆಯನ್ನುಂಟಾಗಿರುತ್ತದೆ ರೋಗಬಂದಾಗ ಒಳ್ಳೇಅವುಷಧವನ್ನು ಕೊಟ್ಟು ರೋಗವನ್ನು ಮೂಲೋತ್ಪಾಟನವಾಡದೆ ಅಗ ಮಟ್ಟಿಗೆ ಅದನ್ನು ಯಾವುದಾದರೂ ಚುಟಿಕಾದಿಂದ ಉಪಶಮನಮಾಡಿಸಿ ಕಾಲಾನುಕಾಲ

ಕ್ಕೆ ರೋಗಿಯುನರಳುವಹಾಗೆ ಮಾಡುವುದು ಸರಿಯೋಡುದಲ್ಲ ಇದಕ್ಕೆ ತಂತ್ರವೈದ್ಯವೆಂದು (ಮೋಸವೈದ್ಯ) ಹೆಸರು ಇಂಥವೈದ್ಯರು ಅನೇಕರುಂಟು

2) Business Doctor' ಕಾರ್ಯಪರರಾದ ವೈದ್ಯರು ಕಾರ್ಯಪರರಾದ ಎಂದರೆ ಜನರ ವಿಪತ್ತುಗಳಂನು ಹೋಗಲಾಡಿಸು ತಕ್ಕವಟ್ಟಿಗೆ ಅವರಿಂದ ದವ್ಯವಪಡೆದುಕೀರ್ತಿಯನ್ನು ಪಡೆಯಬೇಕೆಂಬ ಕಾರ್ಯದಲ್ಲಿ ನಿರತರಾಗಿರುವವರು ಕೆಲವರು, ಮತ್ತೆ ಕೆಲವರು ರೋಗಿಯಾದವನು ತಂನು ಕೈಗೆ ಬೀಳುತ್ತಲೆ ನಾನಾ ವಿಧಗಳಲ್ಲಿಯೂ ಅವನದ್ರವ್ಯವನ್ನು ಪಹರಿಸಬೇಕೆಂಬ ಆಲೋಚನಾಕಾರ್ಯಪರರು ಕೆಲವರು, ವೈದ್ಯರಾದಂಥವರು ಮುಖ್ಯವಾಗಿ ದ್ರವ್ಯಾರ್ಜನೆಗೆ ಗಮನ ಕೊಟ್ಟಕೆ ಅವರಿಗೆ ಗೌರವವು ಬಹಳ ಕಾಲ ನಿಲ್ಲುವದಿಲ್ಲ. ನಾನು ಗುರುತು ಕಂಡಿರುವ ವೈದ್ಯನೊಬ್ಬನ ವಿನೋದ ವರ್ತನವನ್ನು ಹೇಳುತ್ತೆನೆ. ಯಾವರೋಗಿಯು ಅತನ ಬಳಿಗೆ ಬಂದರೂ ಅಥನ ಅತನ ಸಂಗಡ ಮಾತನಾಡಬೇಕಾದರೂ ಸಕಲವೂ ಹಣದ ವಿಷಯಾಂತರವಾಗಿಯೇ ನಡೆಯಬೇಕು ಎಂದಿನ ದಿನ ಅತನಿಗೆ ತುಂಬಾ ಹಣವು ಲಾಭವಾಗುವದಿಲ್ಲವೋ ಆದಿನ ಅತನಿಗೆ ನಿದ್ದೆ ಬರುವಹಾಗೆ ಕಾಣುವದಿಲ್ಲ ಸಾಧ್ಯವೇ ಅಸಾಧ್ಯವೇ ಎಂಬ ಪರ್ವಾಲೋಚನೆಯಿಲ್ಲದೆ, ಅತನು ಎಲ್ಲಾರೋಗಗಳಿಂನೂ ವಾಸಿಮಾಡಲು ಪ್ರಯತ್ನಗೊಳ್ಳುವುದರಿಂದ ಅತನ ಕೀರ್ತಿಯು ಬಹಳಕಾಲನಿಲ್ಲಲಾರದು. ದ್ರವ್ಯಾಭಿಲಾಷೆಯಿಂದ ರಾತ್ರಿ ಹಗಲೆಂನದೆಕಷ್ಟಪಡುತ್ತಾನೆ ಇದೇಕಷ್ಟವನ್ನು ವೈದ್ಯದಲ್ಲಿ ತನಗಿರುವ ಪಾಂಡಿತ್ಯವನ್ನು ಪ್ರಬಲಪಿಸಿಕೊಳ್ಳುವುದರಲ್ಲಿ ಉಪಯೋಗಿಸಿದರೆ ಅತನಿಗೆ ಯಾವರೋಗವೂ ಸಾಧ್ಯವಲ್ಲದೆ ಪೋಗಲಾರದಂದು ನಾನು ಖಂಡಿತವಾಗಿ ಹೇಳಬಲ್ಲೆ

(3) ವೈದ್ಯರಾದಂಥವರು ಎಲ್ಲರಲ್ಲಿಯೂ ಸಲಿಗೆಯುಳ್ಳವರಾಗಿಯೂ ದಯಾಳುಗಳಾಗಿಯೂ, ಸ್ನೇಹಪರರಾಗಿಯೂ, ಇರಬೇಕು ಈವಿಧವಾದ ಸ್ನೇಹಸ್ವಭಾವವಂನು ಗಂಡಸರು, ಹೆಂಗಸರು ಮಕ್ಕಳು, ವೃದ್ಧರು, ಎಲ್ಲರಲ್ಲಿಯೂ ತೋರಿಸಬೇಕಾಗುತ್ತದೆ ಪ್ರಾಣಿವರ್ಗದಲ್ಲಿ ಹೆಚ್ಚು ಸಂಖ್ಯೆಗೆ ಅತನು ಸಹಾಯಕನಾಗಿಯೂ ಕರುಣಾಳುವಾಗಿಯೂ ಇದ್ದಹಾಗೆಲ್ಲಾ ಅತನ ಕೀರ್ತಿಯು ಹೆಚ್ಚುತ್ತಬರುತ್ತದೆ ಆದರೆ ಸ್ನೇಹಿತರಂನೂ ಇವರ ನ್ನು ಸಂಪಾದಿಸುವದರಲ್ಲಿ ತಂನ ಯುಕ್ತಾಯುಕ್ತ ಪರಿಜ್ಞಾನವಂನುಪ

ಯೋಗಿಸಬೇಕು ನವುಗೆ ತಾವು ವಿಚಾರಿಂದು ಹೇಳುತ್ತ ಒರುವನರಲ್ಲಿ ಅನೇಕಜನರು ಆಷಾಢಭೂತಿಗಳುಗಿರೆಒಹುದು ಮುಖ್ಯವಾಗಿ ವೈದ್ಯನಾ ದಂಥವನು ರೋಗಿಗಳ ಗುಟ್ಟಂನು ಹೊರಪಡಿಸದೆ ಅವರನಂಬಿಕೆಗೆ ಪಾತ್ರನಾಗಿರಬೇಕು ವೈದ್ಯನಿಗೆ ಪ್ರಾಣಸ್ನೇಹಿತನಾದರೂ, ಆತನಗುಟ್ಟಂನು ವೈದ್ಯನು ಹೊರಪಡಿಸಿದ ಕಾಲದಲ್ಲಿ ಸ್ನೇಹವು ನಷಿಸುವದು ವೈದ್ಯನಮು ಖ್ಯಕರ್ತವ್ಯವೇನಂದರೆ ರೋಗಿಯು ತಂನ ಬಳಿಗೆ ಬರುತ್ತಲೆ ರೋಗ ಪರಿಶಿಲನೆಮಾಡಿ, ತಕ್ಕ ಔಷಧವಂನು ಕೊಟ್ಟ ಮಾತ್ರವಾದನಂತರ ಆ ರೋಗವಂನು ಪುನಃ ಉಂಟುಮಾಡಿಕೊಳ್ಳದಹಾಗೆ ತಕ್ಕಸಲಹೆಕೊಟ್ಟು ಕಳುಹಿಸುವುದು. ಮುಖ್ಯವಾಗಿ ವೈದ್ಯನಿಗೆ ಜಿತೇಂದ್ರಿಯತ್ವವೂ ಜನರೆಲ್ಲರೂ ತಂನ ಸೋದರ ಸೋದರಿಯರಂಬ ಭಾವವೂ ವಿಶೇಷವಾಗಿರಬೇಕು. ಅನೇಕ ವೇಳೆಗಳಲ್ಲಿ, ಒಳ್ಳೆಳ್ಳೀ ವೈದ್ಯರು ರೋಗಿಗಳಿಂದಲು ರೋಗಿಗಳು ವೈದ್ಯರಿಂದಲೂ ಕೆಟ್ಟುಹೋಗಿರುತ್ತಾರೆ.

(4) ಪ್ರಾರಂಭಿಕ ವೈದ್ಯರು ವೈದ್ಯಶಾಸ್ತ್ರದಗಂಥವನ್ನೇ ಅರಿಯೆದೇ ಹೋದರು ತಾನು ಸದ್ವಂಶದವನೆಂತಲೂ, ತಂನ ತಾತ ಮುತ್ತಾತಂದಿರೆಲ್ಲರು ಘನವೈದ್ಯರೆಂತಲೂ ಹರಟುವ, ಮತ್ತು ತಂನ ಬಳಿಗೆ ಬಂನ ರೋಗಿಗೆ ಒಂದುಪಾಲು ರೋಗವಿದ್ದಲ್ಲಿ ಅದಂನು ಸಾವಿರ ಪಾಲು ಹೆಚ್ಚಿಸಿ ಹೇಳಿ, ಒಂದು ವರುಷಕಾಲದಲ್ಲಿ ಸಾಯುವವನಂನು ಮೂರು ತಿಂಗಳ ಕಾಲದಲ್ಲಿ ಸಾಯುವಹಾಗೆ ಇಲ್ಲದ ಭೀತಿಯಂನು ಹುಟ್ಟಿಸುವ ಧನ್ವಂತರಿ ಶಿಕೋವಮಣಿಗಳು ಕೆಲವರು ಎಲ್ಲಾ ದೇಶಗಳಲ್ಲಿಯೂ ಇರುತ್ತಾರೆ. ಕೆಲವು ಜನ ವೈದ್ಯರು 'ಇಷ್ಟು ಪ್ರಬಲವಾದ ತಲೆನೋವಂನು ನಾನು ಎಂದು ನೋಡಲಿಲ್ಲ'ವೆಂದು ಹೇಳುವರು. ಮತ್ತು ಕೆಲವು ವೈದ್ಯರು, ದೇಹ ಕೃಶವಾಗಿರುವ ರೋಗಿಗಳು ಬಂದಲ್ಲಿ 'ಕ್ಷಯವು ನಿಂನ ದೇಹದಲ್ಲಿ ಉಪಕ್ರಮವಾದಹಾಗೆ ತೋರಿಬರುತ್ತೆ ಯೆಂಬದಾಗಿ ಹೇಳುವದುಂಟು. ವೈದ್ಯನಾದಂಥನು ಸಾಧ್ಯವಾದಮಟ್ಟಿಗೂ ಸತ್ಯವಂನೇ ನುಡಿಯುಬೇಕು. ರೋಗವು ಅತಿ ಪ್ರಬಲಸ್ಥಿತಿಯಲ್ಲಿರುವಾಗ, ರೋಗಿಗೆ ಮಾತ್ರ ನಿಜಸ್ಥಿತಿಯಂನು ತಿಳಿಸಬಾರದು. ಮತ್ತು ಕೆಲವರು ತಾವು ನೇತ್ರವೈದ್ಯದಲ್ಲಿಯೂ, ನಾಡೀ ಪರೀಕ್ಷೆಯಲ್ಲಿಯೂ, ಶಾರೀರ ಧರ್ಮಶಾಸ್ತ್ರದಲ್ಲಿಯೂ, ಅದ್ವಿತೀಯ ಪಾಂಡಿತ್ಯವಂನು ಸಂಪಾದಿಸಿರುವಹಾಗೆ ನಟಿಸುವದುಂಟು,

೫. ಸದಾರೋಗಿಗಳಲ್ಲಿಯೂ ಕಾಯುತ್ತಾ ಮತ್ತಾವ ಕೆಲಸವನ್ನು ಮಾಡದೇ ಇರುವ ವೈದ್ಯರು ಕೆಲವರುಂಟು. ಇವರಿಗೆ ಹಣ ಸಂಪಾದನೆಯು ಹೆಚ್ಚಾಗುತ್ತಾಬಂದರೂ, ವೈದ್ಯಶಾಸ್ತ್ರದಲ್ಲಿ ಜ್ಞಾನಸಂಪಾದನೆಯು ಕ್ರಮೇಣ ಕಡಿಮೆಯಾಗುತ್ತಾ ಬರುವದು. ಪ್ರತಿನಿತ್ಯವೂ ಕೊಂಚಕಾಲವನ್ನು ವೈದ್ಯಶಾಸ್ತ್ರ ಪಠನವಾಡುವದರಲ್ಲಿಯೂ, ಮತ್ತು ವೈದ್ಯಶಾಸ್ತ್ರದ ವಿಷಯವಾಗಿ ಮುದ್ರಿಸುವ ಮಾಸಪತ್ರಿಕೆಗಳನ್ನು ನೋಡಿಕೊಳ್ಳುವುದರಲ್ಲಿಯೂ, ಮತ್ತು ತಮ್ಮಹಾಗೆಯೇ ಕಷ್ಟಪಡುತ್ತಿರುವ ಇತರ ವೈದ್ಯರುಗಳ ಸಂಗಡ ಅನುಮಾನಗ್ರಸ್ತವಾದ ವಿಷಯಗಳನ್ನು ಚರ್ಚಿಸುವದರಲ್ಲಿಯೂ, ಕಳೆಯುಬೇಕು. ಎಷ್ಟಾದರೂ ನಾಲ್ವರುಕೇರಿ ಒಂದು ಕಾರ್ಯವನ್ನು ಮಾಡಿದರೆ ಅದರಲ್ಲಿ ಜನರಿಗೆ ಗೌರವ ಹೆಚ್ಚು ಮತ್ತು ಹೀಗೆ ಮಾಡುವದರಿಂದ ವೈದ್ಯರಲ್ಲಿ ಐಕಮತ್ಯ ಹೆಚ್ಚಾಗುವದು.

೬. ರೋಗದ ಲಕ್ಷಣಗಳು, ತಿಳಿಯದೆ ಇರುವ ವೈದ್ಯರುಕೆಲವರುಂಟು. ಅಥವಾ ತಿಳಿದಿದ್ದರೂ ನಾಡೀ ಪರೀಕ್ಷೆಮಾಡಿ, ರೋಗಿಯಪೂರ್ವಚರಿತೆಯಂನು ವಿಚಾರಿಸಿ ಅದಕ್ಕನುಗುಣವಾಗಿ ಔಷಧವನ್ನು ಕೊಡದೇ ಇರುವವರು ಕೆಲವರುಂಟು. ಅಜಾಗರೂಕತೆ, ಅಜ್ಞಾನ ಇವೆರಡು ತುಂಬಿರುವ ವೈದ್ಯರು ಕೆಲವರುಂಟು. ವೈದ್ಯನಿಗೆ ಶಾಸ್ತ್ರಜ್ಞಾನಕ್ಕಿಂತಲೂ ಅನುಭವವು ಮುಖ್ಯವಾದದ್ದು. ಇಂಥಾ ಅನುಭವವುಂಟಾಗಬೇಕಾದರೆ ರೋಗಿಗಳಿಗೆ ಸದಾಗವನಕೊಟ್ಟ ರೋಗದಗುಣಾವಗುಣಗಳನ್ನು ಆಗಿಂದಾಗ್ಗೆ ಮನಸ್ಸಿಗೆ ತಂದುಕೊಳ್ಳುತ್ತಾ ಅದಕ್ಕನುಗುಣವಾಗಿ ಔಷಧವನ್ನು ಬದಲಾಯಿಸುತ್ತಾ ಅತಿಜಾಗರೂಕತೆಯಿಂದಿರಬೇಕು. ಇದಕ್ಕೆ ತಾಳ್ಮೆಯು ಅತ್ಯವಶ್ಯಕ ಆದುದರಿಂದ ತಾಳ್ಮೆಯು, ಬುದ್ಧಿಕುಶಲತೆಯು ವೈದ್ಯನಲ್ಲಿ ರೋಪ್ಯದ್ಧಿಗೆ ಅತ್ಯವಶ್ಯಕವಾದವುಗಳು.

೭. ಉತ್ತಮ ವೈದ್ಯನು ಯಾರು? ಬುದ್ಧಿಶಾಲಿಯಾಗಿಯೂ ಇರುವ ಬುದ್ಧಿಯನ್ನು ಸರಿಯಾಗಿ ಉಪಯೋಗಿಸುವವನಾಗಿಯೂ, ಗುಣವಂತನಾಗಿಯೂ, ಸತ್ಯವಾಕ್ಕುಳ್ಳವನಾಗಿಯೂ, ಮಾನದಮೇಲೆ ದೃಷ್ಟಿಯುಳ್ಳನಾಗಿಯೂ, ಇತರ ವೈದ್ಯರೊಡನೆ ಚರ್ಚೆಮಾತ್ರವನಾಗಿಯೂ ವೈದ್ಯಶಾಸ್ತ್ರವನ್ನು ವಿಶ್ರಾಮಕಾಲಗಳಲ್ಲಿ ಪಠಿಸುವವನಾಗಿಯೂ, ವೈದ್ಯದಲ್ಲಿ ಅನುಭವಕಾಲಿಯಾಗಬೇಕೆಂಬ ಆಸಕ್ತಿಯುಳ್ಳವನಾಗಿಯೂ ಇರುವಂಥವನೇ ಉತ್ತಮವೈದ್ಯನಾಗತಕ್ಕವನು.

ಕುಡಿಯುವನೀರು.

ಕುಡಿಯುವನೀರಿನ ಅನುಕೂಲಕ್ಕೋಸ್ಕರ ಯಾವಾಗಲೂ ಪ್ರತ್ಯೇಕ
ಾದ ಸೀನೀರಿನ ಭಾವಿಯೆನ್ನು ಏರ್ಪಡಿಸಬೇಕು. ಆ ಭಾವಿಯು ಸಾ
ಣವಾಗಿ ಆಳವಾಗಿಯೂ ದಿಣ್ಣೆಯಮೇಲೆ ಗಾಳಿಗೆ ಸವಿಾಪವಾ
ಿಯೂ ಇದ್ದರೆ ಸಾಮಾನ್ಯವಾಗಿ ಸಕಲಜನರೂ ಈ ಭಾವಿಯ ನೀರನ್ನು
ಪಯೋಗಿಸಲು ಆರೋಗ್ಯವಾಗಿರುವದು ಇಲ್ಲದೇಇದ್ದ ಪಕ್ಷದಲ್ಲಿ ತಿಳುವ
ರಿಯಿಲ್ಲದ ಮೂಢಜನರು ಅನಾರೋಗ್ಯಕರವಾದ ಕಕ್ಕಲನೀರು ಸ
ಾಪದಲ್ಲದ್ದಿದ್ದೇ ಆದರೆ, ಸವಿಾಪವಾಗಿರುವದೆಂದು ಆ ನೀರನ್ನೇ ಉಪ
ೀಗಮಾಡಿಕೊಳ್ಳುವರು. ಭಾವಿಯಸುತ್ತಲೂ ಬಚ್ಚಲುನೀರು, ಪಾ
ಖಾನೆ, ತಿಪ್ಪೆಯಿಗುಂಡಿ, ಪಾತ್ರೆಗಳನ್ನು ತೊಳೆಯುವದು, ದನಗಳ
ಟ್ಟಿಗೆ, ಮುಂತಾದವುಗಳನು ತಪ್ಪಿಸುವ ವಿಷಯವಾಗಿ ಹಿಂದಿನ
ಚಿಕೆಯ ಉಪನ್ಯಾಸದಿಂದ ಅವಗಾಹನೆಗೆ ಬರಬಹುದು.

ಆದರೆ ವಾಸವಾಗಿರುವ ಮನೆಯೆ ಭಾವಿಯನೀರಂನು ಉಪಯೋ
ಸದರಿಂದ ಶರೀರ ಸೌರಕ್ಷಣೆಗೆ ಕುಂದಕ ವುಂಟಾಗುವ ಸಂಗತಿನ
ಇಲ್ಲಿಬರಿಯಲು ಅನಾವಶ್ಯಕ.

ಭಾವಿಯಮೇಲೆ ಬೈಶಿದ್ದು ಅದರಲ್ಲಿ ಸೂರ್ಯಕಿರಣ (ಬಿಸಲು) ಬಿ
ದ್ದರೆ ದೋಷವು ನೀರಿನಲ್ಲಿ ಉಂಟಾಗುವದಿಲ್ಲವೆಂಬ ಮೌಢ್ಯ ತಿಳಿ
ಕೆಯು ನಮ್ಮಜನರಲ್ಲಿರುತ್ತೆ. ವಾಸವಮಾಡುವ ಮನೆಯೆಲ್ಲಿರುವ ಭಾ
ಿಯಲ್ಲಿ ಗವಾಕ್ಷಿ (ಬಿಸಲುಕಂಡಿ) ಇರುವದರಿಂದ ಏನೂ ಅನುಕೂ
ವುವದಿಲ್ಲ. ಭಾವಿಯಮೇಲೆ ಗವಾಕ್ಷಿಯಿರುವದರಿಂದ ಒಯಲಾಗಿರು
ಅದರ ಸುತ್ತಲೂ ಸೃಷ್ಟಿಕ್ರಮದಂತೆ ಹುಟ್ಟುವ ಹುಲ್ಲು, ಜಸ.
ಿೂದಲಾದವುಗಳು ನೀರಿನಲ್ಲಿ ಬಿದ್ದು ಕೊಳೆಯುವದರಿಂದ ಕಕ್ಕ
ಾಗುವದು. ಮತ್ತು ಪುಷ್ಟಿಕರವಾದ ಸಣ್ಣ ಸಣ್ಣ ಗಿಡಗಳಮೇಲೆ ಹ

ಪಕ್ಷಿಗಳು ಕೂಡುವದರಿಂದ ಅನ್ನಗಳ್ಳ ಮೊಲವು ಸ್ವರ್ಗದಲ್ಲಿ ಬೀಳುವದು ಭಾವಿಯಮೇಲೆ ಮುಚ್ಚಿಕ್ಕಿರುವದೆಂದು ಮೇಲೆ ತಿಳಿಸಿದ ಸಂಗತಿಗಳಿಂದ ನೀರು ಕಡತಕ್ಕ ಸಂಭವವು ಸ್ವಲ್ಪವೂ ಬಿಡುವದಿಲ್ಲ. ಗವಾಕ್ಷಿಯನ್ನು ಮುಚ್ಚುವದಕ್ಕೆ ಅನ್ನುಕೂಲವಿಲ್ಲದಿದ್ದಲ್ಲಿ ಅದರ ಮೇಲೆ ಒಪ್ಪರ (ಪವಾರ) ಹಾಕುವದುಂಟು. ಭಾವಿಯ ಮುಖದಲ್ಲಿ ಸುಮಾರು ಹತ್ತು ಹನ್ನೆರಡು ಗಾವುದದಷ್ಟಾದರೂ ಗಾರೆಯ ಕಟ್ಟಡವನ್ನು ಮಾಡಿಸುವದು ಒಳ್ಳೇದು. ಇದರಿಂದ ಭಾವಿಯ ಸುತ್ತಲೂ ಬೀಳುವ ಸಂಕರದೋಷಗಳು ಭಾವಿಯನೀರಿನಲ್ಲಿ ಸೇರುವದು ಕಡಿಮೆಯಾಗುವದು. ಮತ್ತು ಭಾವಿಯ ಜಡವನ್ನು ಕೈಲಾದವರಿಟ್ಟಿಗೆ ಶುಚಿಯಾಗಿಟ್ಟುಕೊಂಡದರಿಂದ ಗಬ್ಬು ಮೊದಲಾದಪಕ್ಷಿಗಳು ಗೂಡುಕಟ್ಟುವದಕ್ಕೆ ಅನ್ನುಕೂಲವಾಗಲಾರದು. ಭಾವಿಯ ಸುತ್ತಲೂ ಸುಮಾರು ಎರಡಡಿ ಅತ್ತರ ದೋಡೆಯಂತೆ ಕಟ್ಟಿ ಅದರ ಮೇಲೆ ಮುಚ್ಚುವದಕ್ಕೆ ಅನುಕೂಲವನ್ನು ಮಾಡಿರಬೇಕು. ಮುಚ್ಚುವ ಮುಚ್ಚಳದಲ್ಲಿ ಕೊಡ ಮೊದಲಾದ ನೀರು ತೆಗೆಯುವ ಪಾತ್ರೆ ಹಿಡಿಯುವಷ್ಟು ಕಂಡಿಯನ್ನಿಟ್ಟಿರಬೇಕು. ನೀರು ತೆಗೆದುಕೊಂಡನಂತರ ಮುಚ್ಚಬೇಕು. ಇದರಿಂದ ಬಿಕ್ಕು, ಇಲಿ, ಕಣ್ಣಗಣ್ಣ ಹುಡುಗರು ಒಳಗೆ ಬೀಳತಕ್ಕ ಅವಕಾಶವಿರುವದಿಲ್ಲ. ಭಾವಿಯಸುತ್ತಲೂ ಬಿದ್ದನೀರು ಭಾವಿಯಲ್ಲಿ ಇಳಿಯುವಂತೆ ಸುಣ್ಣ ಜಲ್ಲಿ ಕಲ್ಲು ಕ್ಲುಕಿ ಜೆಲ್ಲವನ್ನು ಕಟ್ಟಿಮಾಡಿ ದೂರವಾಗಿ ಹರಿದು ಹೋಗುವಂತೆ ಚರಂಡಿಯನ್ನು ಮಾಡಬೇಕು.

ಭಾವಿಯನೀರನ್ನು ತೆಗದುಕೊಳ್ಳುವದಕ್ಕೆ ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಯ ಹಗ್ಗ ಪಾತ್ರೆ ತರುವದಕ್ಕಿಂತಲೂ ಒಂದು ಧೃಢವಾದ ಜಿಸಿಕವುದ ಕೊಡವನ್ನು ಮತ್ತು ಕೈಗೆ ಸ್ಪುಟವಾಗಿರುವ ಕಬ್ಬಿಣದ ಸರಪಣಿಯನ್ನು ಹಾಕಿರಬೇಕು. ಕೆಲವುಸಂದರ್ಭಗಳಲ್ಲಿ ಮನೆಯವರಿಗೂ ಹಗ್ಗ ಮುಂತಾದವುಗಳ ಮಲಿನದೋಷದಿಂದ ಕ್ರಿಮಿ ಜಂತುಗಳು ಭಾವಿಯನೀರಿನಲ್ಲಿ ಉದ್ಭವಿಸುವವು. ಭಾವಿಯಲ್ಲಿ ನೀರಿನವರಿಗೂ ಮೆಟ್ಟಿಲುಗಳಿರುವದು ತುಂಬಾ ಅನಾರೋಗ್ಯಕ್ಕೆ ಮೆಟ್ಟಿಲುಗಳಿರುವದರಿಂದ ಜನರು ಇಳಿದು

ತನ್ನ ಅಂಗಾಂಗಗಳನ್ನು ತೊಳೆದುಕೊಂಡು ನೀರನ್ನು ಮುಟ್ಟಿದವರು ಕೊನೆಗೆ ಆ ನೀರನ್ನೇ ತುಂಬಿಕೊಂಡುಹೋಗುವರು. ಈ ಅಸಹ್ಯಕರವಾದ ನಡವಳಿಕೆಯು ಮೆಟ್ಟಿಯಿರುವ ಪ್ರತಿಯೊಂದು ಭಾವಿಯಲ್ಲಿಯೂ ಕಂಡುಬರುವದು.

ವರ್ಷಾಕಾಲದ ಪೂರ್ವದಲ್ಲಿ ಕುಡಿಯುವನೀರಿನ ಭಾವಿಯಲ್ಲಿ ಬಿದ್ದಿರುವ ಕಲ್ಲು, ಮಣ್ಣು, ಕಸ, ಮಗೈರೆ ಕಶ್ಮಲವೆನ್ನು ತೆಗೆದು ಕೋಢಿಸಿ, ಭಾವಿಯು ಗೋಡೆ ಗಾರೆ ಮುಂತಾದುವುಗಳನ್ನು ದುರಸ್ತು ಮಾಡುವದು ಅವಶ್ಯಕ ಮತ್ತು ಭಾವಿಯು ಮೇಲಿನ ಗಿಡಗಳನ್ನು ತೆಗದು ಸೋಲ್ಪಾಗವನ್ನು ಶುಚಿಯುಮಾಡಿಟ್ಟುಕೊಳ್ಳಬೇಕು. ಹೀಗೆ ಶುದ್ಧಿಮಾಡಿದ ಭಾವಿಯನೀರನ್ನು ಜರಡಿ ಬಿಸಿಸಿ ಬಳಸುವದೊಳ್ಳೆದು ಮತ್ತು ಉರಿದ ಉಪ್ಪಿನಿಂದ ಮಾಡಬಹುದು.

ಹವವು ಕುಚ್ಚಿಲಾಗಿಧೆಯೆಂಬ, ಅಕುಚ್ಚಿಲಾಗಿಧೆಯೆಂ ಎಂಬುವದು ಗ್ರಹಣೇಂದ್ರಿಯಕ್ಕೆ ಹೇಗೆ ತಿಳಿಯುವದಿಷ್ಟಲ್ಲದೆ ಇಷ್ಟಾಗಿಯೇ ನೀರು ಕುಡಿಯುವದಕ್ಕೆ ಯೋಗ್ಯಾಯೋಗ್ಯತ್ವವು, ಕೇವಲರುಚಿಯಿಂದ ತಿಳಿದು ಒರುವದು ಸ್ವಲ್ಪಪ್ರಯಾಸವಾಗಿರುವದು.

ಕಶ್ಮಲದಿಂದ ಉಪ್ಪಿನಿಂದ ಹವಿದು ಪಾಕವು ಕೆಲವುಕಾಲದಲ್ಲಿ ನೀರಿನಲ್ಲಿ ವಿಶೇಷವಾಗಿ ನೀರಿಗೆ ಬರದಿರುವಿಧವಾದ ಕೆಲವಿತ್ತಿ ಬರುವದುಂಟು. ಮತ್ತು ಇದರಿಂದ ಜನರಿಗೆ ವಿಶೇಷವಾಗಿ ಆ ನೀರು ಕುಡಿಯುವದಕ್ಕೆ ಕ್ಲೇಷ ಪಡಿಸಿದ್ದಿಂದು ತಿಳಿದುಕೊಳ್ಳಬೇಕಾಗುತ್ತದೆ. ಸರದಭ್ಯಾನುಸಾರವಾಗಿ ಇಂಥಾ ಭಾವಿಯನೀರಿನಲ್ಲಿ ಪಾಂತಿ ಭೇದಿ, ಸನ್ನಿಪಾತಜ್ವರ ಮುಂತಾದ ಸಾಂಕ್ರಾಮಿಕ ರೋಗೋತ್ಪತ್ತಿಯಾಗುವದರಿಂದ ತುಂಬಾ ಅನಾಹುತಗಳು ಜರಗುತ್ತವೆ.

ಶ್ರೇಷ್ಠವಾದ ನೀರಿನ ಗುಣ

(1) ಶ್ರೇಷ್ಠವಾದ ಕುಡಿಯುವನೀರಿನಗುಣವು ಭಾನಿಯೊತಳಲ್ಲಿರುವ

ಭೂಮಿಯು ಕಾಣುವಷ್ಟು ತಿಳಿಯಾಗಿರಬೇಕು.

(2) ಈ ನೀರಿಗೆ ಯಾವವಿಧವಾದ ವಾಸನೆಯೂ ಇರಕೂಡದು,

(3) ಅದು ಶುಭ್ರವಾದ ಪಾತ್ರೆಯಲ್ಲಿ ಹಾಕಿ ಕಲಕಿದಾಗ್ಯೂ ಕೆಳಕ್ಕೆ ಲವಾಗಿ ಕೂಡದು.

(4) ಅದರ ಮೇಲೆ ಗುಳ್ಳೆ ಮತ್ತು ಜಿಡ್ಡು ಇರಕೂಡದು,

(5) ಕುಡಿಯುವ ನೀರಿನಲ್ಲಿ (ಇಂಗಾಲಾಮ್ಲವನ್ನು) ಮತ್ತು ಆಮ್ಲ ಜನಕವುಂತಾದ ವಾಯು ಸಂಬಂಧವಾದ ಪದಾರ್ಥಗಳಿರಬೇಕು,

(6) ಸ್ವಚ್ಛವಾದ ನೀರಂನು ಕಾಸಿದಾಗ್ಯೂ ಅದರಲ್ಲಿ ಯಾವವಿಧವಾದ ಕರ್ದಮ (ಬದಿ) ಇರಕೂಡದು. ಚರಂಡಿ ಮತ್ತು ಪಾಯಿಖಾನೆಯಲ್ಲಿನ ನೀರಿನಸಾರವು ವಿಶುದ್ಧವಾದ ನೀರನ್ನು ಕಾಸಿದಾಗ್ಯೂ, ಅದರಲ್ಲಿನ ಅನಾರೋಗ್ಯಕರಗುಣವು, ಬರದೇ ಯಿರುವದಿಲ್ಲ,

(7) ಬುಡದಲ್ಲಿ ಮಣ್ಣು ಇರಕೂಡದು ಮೇಲೆ ಬರವಿರುವ ಸ್ಪಷ್ಟೀಕರಣದಿಂದ ಸ್ವಚ್ಛವಾದ ನೀರು ಹೇಗಿರಬೇಕು? ಮತ್ತು ಹೇಗಿಟ್ಟಿರಬೇಕು? ಎಂಬ ತಿಳುವಳಿಕೆಯು ಚನ್ನಾಗಿಗೊತ್ತಾಗುವದು, ರಸಾಯನಿಕ ಪರೀಕ್ಷೆ ಮಾಡುವದಕ್ಕೂ ಸೂಕ್ಷ್ಮದರ್ಶಕ ಎಂತ್ರ ಸಹಾಯದಿಂದ ನೀರಂನು ಪರೀಕ್ಷಿಸುವದಕ್ಕೂ ಸಹಾಯವು ಎಲ್ಲಿರುವದಿಲ್ಲವೋ ಅವರು ಆ ಸ್ಥಳದಲ್ಲಿ ಸ್ವಚ್ಛವಾದ ನೀರು ನಿರ್ಗಂಧಯುಕ್ತ ಬುಡದಲ್ಲಿ ಕಶ್ಮಲವಿಲ್ಲದೇಯಿರುವ ಯಾವವಿಧವಾದ ರುಚಿಯು ಯಿಲ್ಲದೇಯಿರತಕ್ಕ ಮತ್ತು ಸ್ವಲ್ಪಸುಂಚುವ ನೀರು ಕುಡಿಯುವದಕ್ಕೆ ಉಚಿತವೆಂದು ತಿಳಿಯಬೇಕು.

Test for pure water:- Take a quantity of the specimen of water and add a quantity (sufficient) of Soap Solution; it takes no at once occurs. The water is pure if perfect & abundant. The water is impure if [illegible]

ಭೌತಿಕಶಾಸ್ತ್ರಸಂಗ್ರಹ

(ಹಿಂದೆ ನೋಡುವುದಕ್ಕೆ)

ಪ್ರಪಂಚದಲ್ಲಿರುವ ಸಕಲಪದಾರ್ಥಗಳೂ ಪ್ರಾಣಿಗಳೂ, ಸೂರ್ಯಪ್ರಭಾಕಿರಣಾಗಳ ಬೇರೆ ಬೇರೆ ರೂಪಗಳಿಂದು ಹಿಂದಣ ಸಂಚಿಕೆಯಲ್ಲಿ ತಿಳುಹಿಸಿರುವೆನು. ಅದು ಹೇಗೆಂಬುವದನ್ನು ಈ ಸಂಚಿಕೆಯಲ್ಲಿ ವ್ಯಾವಹರಿಸುವದು ಉತ್ತಮ (ಅಸ್ಮಿನ್ಕಲಿಯೆಂಪುರುಷೋವಸತೋಽಯಂ) ಎಂಬ ಉಪನಿಷದ್ವಾಕ್ಯಾನುಸಾರವಾಗಿ ಭೂತ ಭವಿಷ್ಯತ್, ವರ್ತಮಾನಾವಸ್ಥಕವಾಗಿ, ತಾನು, ಬುದ್ಧಿ, ಅಂಗವೈಕಲ್ಯ ಅಭ್ಯಾಸವಿನಃ, ರೇಣುವೇಕರಜಕರಣಾದ್ಯನಯು ವಾತ್ಮಕರೂಪನಾಗಲು ಅಸಂಬದ್ಧ ಪ್ರಲಾಪವೆಂದೂ ಹಿಸಲು ಸಾಧ್ಯವಲ್ಲವು ಇದಕ್ಕುದಾಹರಣೆಯಾಗಿ ಸೂರ್ಯಪ್ರಭಾಲೇಖನ (ಫೋಟೋಗ್ರಾಫ್) ಎಂಬುವದೆನು ತಗೆದುಕೊಳ್ಳಲಿಲ್ಲಿಣ ಆದರೆ ನಂ ಮ ಪೂರ್ವಿಕರಿಗೆ ಸೂರ್ಯಪ್ರಭಾಲೇಖನವು ತಿಳಿದಿತ್ತು ಎಂಬದಾಗಿ ಸಂಶಯ ಪುಟ್ಟಾಗಬಹುದು. ಆದರೆ ಕೆಳಗಿನ ಶ್ಲೋಕಗಳ ಇಂನು ಕೆಲವೇ ಶಾಸ್ತ್ರಗಳಿಂನು ಪರಿಶೀಲಿಸಿ ನೋಡಿದಲ್ಲಿ ಅವರು ಅರಿಯದಿರುವ ವಿದ್ಯೆಯೆ ಪ್ರಪಂಚದಲ್ಲಿಲ್ಲವೆಂದು ತಿಳಿಯಬರುವುದು ಭೌತಿಕಶಾಸ್ತ್ರ ಪುರುಷಯೆ ತ್ನಪ್ರಕಂಶಾವ್ಯಯೆ ಶ್ಲೋ॥ ಕೃಂಷವ್ಯಕ್ಷರಸಾಮೀನಿ। ರಾತ್ರೌಸಮು ಕುರಲೇಪನಾತ್ । ದಿವಾಅಂಧೇವಮಾನುಷಾದಿ । ಆಕರ್ಷಣರಹಬ್ರವೀತ್ ॥ ರಕ್ತ ದೀಪ ನಿಶಾಮಧ್ಯೇ । ಪೂರ್ವತೀವೀರ್ಯವುಂಬುಚೆ । ಆದೌಸಿದ್ಧಂ ದ್ವಿತೀಯೋಪಿ । ತೃತೀಯೋಕೃತ್ಯಸೋಗರೇ ॥ ೧೦೬ ॥ ದ್ವಿತ್ವರಂಕುದ್ಧ ಅಂಬೂನಿ । ರೂಪಸದ್ದಂಭವೇದ್ಭವಂ । ಇದಾನೀಂನಿಷ್ಪಿಪೇತೋಸ್ಮೀವೈಶಿ । ವಾಷ್ಪಾಣಂರಜಿತಾದ್ಬಿಂ ॥೧೦೭॥ ರಾತ್ರೌವುಂಗಾರಮಾನೀತಾ । ಪೆ ತ್ರಂತದ್ಧವುಲೇಪನಾತ್ । ಮುಕುರಾದ್ಬಿಂನಿಷ್ಕ್ರಿಯ್ಯ । ಸೂರ್ಯಭ್ಯಾ ಯೀನಿಕೃಂತನಂ ॥೧೦೮॥ ಸ್ಥಾಪ್ಯಸೂಪೋತ್ಕೃತ್ಯಪರಂ । ನಂಶೋಧ್ಯೆ ಹ್ಯೆವುಕ್ಕಂತನಂ । ಆಂಗಾಂಗೀಭವತಿನಪ್ಪಿರ್ತಿಃ । ಕುದ್ರೀಜಲನಿರಾಶ ಯೋತ್ ॥೧೦೯॥ ಅರ್ಥಕೃಂತ ವೃಕ್ಷದರಸವಂನು ರಾತ್ರಿಯಲ್ಲಿ ತಂದ ಒಂದು ಕನ್ನಡಿಗೆ ಸವರಿ ರಾತ್ರಿಯೇ ಒಣಗಿಸಿ ಬೆಳಕುತೋರದಕಡೆ ಇಟ್ಟು

ಅದರಮೇಲೆ ಬೆಳಕು ಬೀಳುವಹಾಗೆ ಮಾಡಲು ಬೆಳಕಿನಲ್ಲಿರುವಪದಾರ್ಥವನ್ನು ಮೂರಾವರ್ತಿ ಕೆಪ್ಪೆ ಬಡಿಯುವಷ್ಟರಲ್ಲಿಯೆ, ಆಕರ್ಷಿಸಿಕೊಳ್ಳುವುದು. ನಂತರ ಒಂದು ಕತ್ತಲೇ ಚಿಕ್ಕಮನೆಯಲ್ಲಿ, ರಕ್ತದೀಪದ ಬೆಳಕಿನಲ್ಲಿ ಎರಡುಭಾಗ ಶುದ್ಧನಾದ ನೀರು ಕಾಲುಭಾಗ ಗಂಧಕದ್ರಾವಕ ಪಟಕದ್ರಾವಕ ಇವುಗಳಿಂದ ಮಿಶ್ರಮಾಡಿ ತೊಳೆದರೆ ಆ ಕಂನಡಿಯಲ್ಲಿ ರೂಪಬಿದ್ದಿರುವುದು ಸ್ಪಷ್ಟವಾಗಿ ತಿಳಿಯುಬರುತ್ತದೆ: ಬಿಳ್ಳಿಯ ಬಾಜೂ ಇರುವ ಕಿಲೆಯನ್ನು ಸಂಗ್ರಹಿಸಿ ನಿಶಿಯವಮಧ್ಯದಲ್ಲಿಯೊಗಲಿ ಅಥವ ಕತ್ತಲೆ ಚಿಕ್ಕಮನೆಯಲ್ಲಿಟಿಗಲಿ ಅಗ್ನಿಯಲ್ಲಿ ಹಾಕಿ ಧೂಮವನ್ನು ಪತ್ರವೊಂದಕ್ಕೆ ಲೇಪನಮಾಡಿ ರೂಪಬಿದ್ದಿರುವ ಮುಕ್ಕುರದ ಹಿಂಭಾಗದಲ್ಲಿ ಮುಚ್ಚಿ ಸೂರ್ಯರಶ್ಮಿಗೆ ತೋರಿಸಲು ಕೇವಲ ಸೂರ್ಯ ಕಿರಣಗಳ ಸಹಾಯದಿಂದಲೇ ಪುನಸ್ಸಿದ್ಧಪಟ್ಟತಕ್ಷಣವೆ ಕೆಪ್ಪೆ ಬಡಿಯುವಷ್ಟರಲ್ಲಿ ಪತ್ರಕ್ಕೆ ರೂಪವು ಪರಿವರ್ತನೆಯಾಗುವುದು ಆ ಪತ್ರವನ್ನು ಪುನಃ ಪೋಲ್ಕರಿಡ ಪಟಕ್ಕ ಗಂಧಕ್ಕ ನವಾಸಾರಗಳ ಚಿನ್ನಪಾತ್ರಗಳಲ್ಲಿ ತೊಳೆಯುವುದರಿಂದ ಅಂಗೀಕಾರಕ್ಕೆ ಸ್ಥಿರವಾಗಿ ನಿಲ್ಲುತ್ತದೆ. ನಂತರ ಬಣ್ಣಗಿಸೆಯಾಡಲು ಯಾವಪಾತ್ರೆಯಲ್ಲಿಯಾದರೂ ನಾತಿ ಕೀಳಿಗಳು ತೊಳೆಯುವುದಿಲ್ಲ. ಪಾಶ್ಚಾತ್ಯರಲ್ಲಿ ಭೌತಿಕ ಶಾಸ್ತ್ರಜ್ಞರು ಪ್ರಯೋಗಿಸಿದಲ್ಲಿಗಿವೆ ಸಕಲ ಶಿಕ್ಷಣಗಳಿಗೂ ಸೂರ್ಯಕಿಕ್ತಿಯೇ ಮೂಲವಾದುದರಿಂದ ಹೀಳರತಾತ್ಮಕ ಆದುದರಿಂದ ನಾವು ತಿಂನುವ ನಾನಾವಿಧವಾದ ಆಹಾರಗಳಲ್ಲಿ ಬೇರೆ ಬೇರೆ ಪ್ರಮಾಣಗಳಲ್ಲಿ ಕೆಲವು ನಮಗೆ ಜೈತನ್ಯವೆನ್ನುಂಟುಮಾಡುವುವು ಆ ಸೂರ್ಯರ ಪ್ರಭಾತೇಣುಗಳೇ ಈ ಕೇಣುಗಳೇ ಪುರುಷರ ಮುತ್ತು ಸ್ತ್ರೀಯರ ಕುಕ್ಷ್ಣಿಯಲ್ಲಿರುವ ಇರವಲ್ಲದು. ಮೇಲಿಹೇಳಿದಂತೆ ಪೊರಾವರ್ತಿ ಕೆಪ್ಪೆ ಬಡಿಯುವಷ್ಟರಲ್ಲಿ ಪುಂಕುರದಮೇಲೆ ಆಕಾರವನ್ನು ಕಲ್ಪಿಸುವ ಶಕ್ತಿಯುಳ್ಳ ಸೂರ್ಯ ಕಕ್ತಿಯು, ಪುರುಷನ ಶುಕ್ಲದಲ್ಲಿ ಗರ್ಭವಾಗಿ ಸ್ತ್ರೀಯರಗರ್ಭ ಕೋಶಕೆಂಬ ಕತ್ತಲೆಯಿರುವ ಮನೆಯಲ್ಲಿ ನುಗ್ಗಿ ಅಲ್ಲಿ ಸ್ತ್ರೀಕೋಣಿತ ಪಿಂಬ ಪುಂಕುರದಮೇಲೆ ಆಕಾರವನ್ನುಂಟುಮಾಡಿ ಪಿಂಡೋತ್ಪತ್ತಿಯಾಗುವಹಾಗೆ ಮಾಡಿ ಸ್ತ್ರೀಯರು ನವಮಾಸವೂ ಭುಜಿಸುವ ಆಹಾರದ ಸಾರತೆಯಂಬ ದ್ರವ್ಯಗಳಲ್ಲಿ ಬೆಳೆದು ನವಮಾಸದ ಅವಧಿಯು ಜೀರಿಸಿಹೋಗಿ ಶಿಶುವಾಗಿ ಪೂರ್ತಿಕ್ಕೆ ಬರುವದೇನಾಶ್ಚರ್ಯ ! ಆ

ದುದರಿಂದ ಪ್ರಾಣಿಗಳ ಉತ್ಪತ್ತಿಗೆ ಸೂರ್ಯರಶ್ಮಿಗಳು ಕಾರಣವಾದವು ಈ ಸೂರ್ಯ ರಶ್ಮಿಗಳು ಭೂಮಿ ಬೇರೆ ಬೇರೆ ಪ್ರಮಾಣದಲ್ಲಿ ಬೇರೆ ಬೇರೆ ವಸ್ತುಗಳಲ್ಲಿ ಕೇಂದ್ರೀಕರಿಸಿದ್ದರಿಂದ ಅದಕ್ಕೆ ಕ್ಷಾರಜ್ಞಾನವು ಮಗಳು ಬುದ್ಧಿಯು ಉಂಟಾಗಿರುವುದು. ಸೂರ್ಯರಶ್ಮಿಗಳಿಗೆ ಸಂಬಂಧಪಟ್ಟ ವಿಷಯವಾಗಿ ಬರೆಯುವಲ್ಲಿನುಕೂರವೆಂಬ ಶಬ್ದವನ್ನು ಉಪಯೋಗಿಸಿರುವುದರಿಂದ ಕಂನಡಿಯುಂನು ಮಾಡುವ ವಿಧಾನವು ನಮ್ಮ ಪೂರ್ವಿಕರಿಗೆ ತಿಳಿದಿರುತ್ತೆ ಎಂಬ ಸಂಶಯವುಂಟಾಗಬಹುದು ಇದನ್ನು ತಜ್ಞರು ಅರಿತಿದ್ದರು ಹೇಗಾದರೆ ಭೌತಿಕ ಶಾಸ್ತ್ರಗುಣ ಸ್ವಭಾವಧರ್ಮವೆನ್ನಿ

ಶ್ಲೋಕ॥ ಸೈಕತಂಪಿವೆ್ಚಭಾಗಂಚ । ಸುಧಾಭಾಗಂಸವಿಜ್ರಕಂ । ಸತ್ತಾಭಾಗಂನಯುಕ್ತ್ವಾತ್ವಾತ್ । ಸಯೋವೆಂವ್ಯುಕ್ಕುರಂಭವೇತ್ ॥೧॥ ಅರ್ಥ— ಸಂಣವುರಳಿನ ಪುಡಿ ಒಂದುಭಾಗವು, ಸುಂಣದೆ ಪ್ರಡಿ ಒಂದು ಭಾಗವು (ಸತ್ತಾಭಾಗವೆಂದರೆ) ಸೀಸಕಿಂಧೂರ ಒಂದು ಭಾಗವು ಈಮೂರು ಕೇರಿಸಿ ಇಪ್ಪತ್ತೊರಡನೆಭಾಗದ ಅಗ್ನಿಯಲ್ಲಿ ಕ್ಷಣಕಿಗಿಸಲು ನೀರುನೀರಾಗುತ್ತೆ ಅದನ್ನು ಬೇಕಾದಂತೆ ಎಡಕ್ಕಹೊಂಯ್ದುಕೊಳ್ಳವುದು ಇವೇ ಮೊದಲಾದ ನಮ್ಮ ಪೂರ್ವಿಕರಾದ ಋಷಿಗಳು ರಚಿಸಿರುವ ಕಲ್ಪಾಕಲ್ಪಶಾಸ್ತ್ರಗಳಂನು ಪರಿಶಿ ಅವುಗಳಲ್ಲಿ ಹೇಳಿರುವಂತೆ ಶ್ರದ್ಧೆಯಿಸ್ಪದಸ್ಪದ ಆರೋಗ್ಯಭಾಗ್ಯವೂ, ಮನೋನಿಗ್ರಹವೂ ಅಪೇಕ್ಷವಕ್ಯಕ್ಕವಾದಪ್ರಸಿದ್ಧಿಯು ಇನ್ನು ಗಳನ್ನು ಸಂಪಾದಿಸಿಕೊಳ್ಳಲು ಚಿಕಿತ್ಸಾಜ್ಞಾನವುತ್ಪತ್ತಿಮುಖ್ಯವಾದುದಾದಕ್ಕಾಗಿ ರಣ ಲೋಲಂಬರಾಜೀಯ ವೆಂಬ ಗ್ರಂಥದಲ್ಲಿ

ಶ್ಲೋಕ॥ ನಾನಾರೋಗಪ್ರಮಾತ್ಪತ್ತಿಚಿಕಿತ್ಸೈಕದುಃಖಿನಾಂ । ಸಂಸಾರೇದೀನಜನೇಕರುಣ್ಯಾ ಹಿಷ್ಟೋ ನಾಸಾಖ್ಯಾಸ್ಯಾತ್ಯಾಸ್ಯಯಂ ॥ ಗೆ ತತ್ವಾಧೈರ್ಯ ಮಧೀರವಿಕಾರುತೇತತ್ತಚ್ಚಿಕಿತ್ಸಾಭಿಷಕ್ । ತೇನಾರ್ತೇ ಸುಖಿನೋಭವಂತುಮನುಜಾಪಿತೇಮೈದ್ಯಸಪ್ರೋತ್ತಮಃ ॥ ಎಂಬದಾಗಿ ಹೇಳಲ್ಪಟ್ಟರುತ್ತದೆ (ನಮ್ಮ ಪುರಾತನ ಋಷಿಗಳು ರಚಿಸಿರುವ ಕಲಾಕೌಶಲ್ಯ ಶಾಸ್ತ್ರಗಳನ್ನು ಳ್ಳ ನಕ್ಷಳವುಳ್ಳನೀಯರು ಮೇಲಿನ ರೀತಿಯಾಗಿ ವೈದ್ಯಸಿಂಧುವಿಗೆ ಸುಲಭಶೈಲಿಯಲ್ಲಿ ಪತ್ರಗಳನ್ನು ಬರೆದು ಲೋಕೋಪಕಾರ ಮಾಡಬೇಕೆಂಬ ಪ್ರಾರ್ಥನೆ.) (ಸಶೇಷ)

ಮಂತ್ರ ತಂತ್ರ ಸಂಗ್ರಹ.

ಅಥಕೇಶಪಾತನಂ.

ಕೋಕಾತಕೀಬೀಜ ಸಮುದ್ಭವೇನ | ತೈಲೇನಕೇಶಾನ್ಪುನರ್ಭವಂತಿ ॥೧॥ ಧಾತ್ರ್ಯಾಖ್ಯಪಲಾಶವಿಡಂಗವಹ್ನಿಶತಾವರಿಗೋಕ್ಷುರ ಕಾಮೃತಂಚ ॥ ೨ ॥ ಕಟುತೈಪ್ರಯುಕ್ತಂಮುಧುಕೇರ್ಕರಾಭ್ಯಾಂನಿಶಿಪ್ರಲಿಪ್ಯೇನ ಘೃತೇನಮಿಶ್ರಂ ॥೩॥ ವೃದ್ಧಸ್ಯಕೃಷ್ಣಸ್ಯಚಜೀರ್ಣಸ್ಯ ಬಲಹೀನೋಪರಾಕ್ರಮಃ ॥೪॥ ಭಕ್ಷಯೇತ್ಪಾತಯಮುಖ್ಯಾಯೆ ತರಿಮೀಜಾಯತೇನದಃ ॥೫ ಇತಿಶ್ರೀಕೇಶಪಾತನಂ ನಾಮಸಪ್ತವಿಂಶಪಟಲಃ ॥೬॥

ಅಥ ಭೂತಗ್ರಹ ನಿವಾರಣಂ.

ಶಿರೀಷಪತ್ರ ಪುಷ್ಪಂಚರವಾವಾಕೀಸಮುದ್ಧರೇತ್ ॥ ಉಲೂಷ್ಟ್ರಂಗೃಹೀತ್ವಾತ ಉಷ್ಟ್ರರೋಮಂತುಸಂಯುತಂ ॥ ಶುನ್ನೋವಿಷ್ಠಾಸವಾಯುಕ್ತಂವಾಜಾರಸ್ಯೈವಸಂಯುತಂ ॥ಗೋಮಯಂಚೈವಸಂಯುತಂ ಗಂಧಕಂಸಂಯುತಂತತಃ ॥ ಶ್ವೇತಗುಂಜಾಸವಾಯುಕ್ತಂ ಕಟುತೈಲೇನವಾಚಿಯೇತ್ ॥ ಧೂಪಂದತ್ವಾಜಪೇಮಂತ್ರಂ ಭೂತಬಾಧಾವಿನಶ್ಯತಿ ॥ ರಾಕ್ಷಸಾಭೂತವೇತಾಲದೇವಮಾನವಖೇಚರಾಃ ॥ ಡಾಕಿನೀಪ್ರೇತಿನೀಚೈವಧೂಪಂದೃಷ್ಟ್ವಾಪಲಾಯತೇ ॥೧॥ ಮಂತ್ರಸ್ತು ಓಂನಮಃ ಸ್ಮಶಾನವಾಸಿನೇಭೂತಾದಿಪಲಾಯನಂಕುರುಕುರುಸ್ವಾಹಲಾ॥ಅಷ್ಟೋತ್ತರಶತಜಪಃ ತಸಿದ್ಧಿಃ ॥ ಇತಿಈಶ್ವರದತ್ತಾತ್ರೇಯಸಂವಾದೆಭೂತಗ್ರಹನಿವಾರಣಂನಾಮ ಅಷ್ಟಾವಿಂಶಪಟಲಃ

ಪಾಕ್ಷಮಾತ್ಯರ ಕಲಾಕೌಶಲ್ಯ ಸಂಗ್ರಹ.

ಶಾಯಿಮಾಡತಕ್ಕವಿಧಾನ

ಬೂಸ್ಲ ಬ್ಲಾಸ್ಯಕ್ (ನೀಲಿಕಪ್ಪುಶಾಯಿ) ಅಳಲೇಕಾಯಿಚೂರ್ಣ ವಸ್ತುಗಾಳಿತವುಡಿದ್ದು ೧ ಭಾಗ, ಅನ್ನಬೇದಿ ೧ ಭಾಗ ಗೋಂದಿನಪ್ರದಿವನೇ ೧ ಭಾಗ, ನೀಲಿಬಣ್ಣ (ಬೂಸ್ಲನೇಲ್ಯೂಷ್ಟ್) ೧ ಭಾಗ, ಇವುಗಳ

ಚೂರ್ಣವನ್ನು ವಸ್ತ್ರಗಾಳಿತಮಾಡಿ ಅದರಲ್ಲಿ ಹದಕ್ಕೆ ಬರುವಂತೆ ಲವಂಗತೈಲವನ್ನು ಹಾಕಿ ಕಲ್ಲು ಪತ್ತಿನಲ್ಲಿ ಮರ್ದಿಸಬೇಕು. ಆನಂತರ ಪ್ರತಿಶತ ಚೂರ್ಣವನ್ನು ಕಿಲುಬುಹಿಡಿಯದೇಯಿರುವ ಪಾತ್ರೆಯಲ್ಲಿ ಹಾಕಿ ಸ್ವಲ್ಪಾರು ೫೦ ತೊಲೆ ತಣ್ಣೀರನ್ನಾಗಲಿ ಬಿಸಿನೀರನ್ನಾಗಲಿ ಸೇರಿಸಿ ಚನ್ನಾಗಿ ಕಲಸಿ ಪ್ಲಾನಲ್ ಬಟ್ಟೆಯಿಂದ ಶೋಧಿಸಿ ಸೀಸಾಯಲ್ಲಿ ತುಂಬಿಟ್ಟುಕೊಳ್ಳಬೇಕು. ಸ್ವಲ್ಪಕಾಲ ಸಂಗ್ರಹಿಸಿಟ್ಟುಕೊಳ್ಳಬೇಕಾದರೆ ಸ್ವಲ್ಪ ಸ್ಪಿರೀಟು ಮಿಕ್ಸ ಹಾಕಬೇಕು. ಈ ಶಾಯಿಯು ಬಹಳ ಶ್ರೇಷ್ಠವಾದ (ಬ್ಲ್ಯಾಕ್ ಬ್ಲ್ಯಾಕ್ ಇಂಕ್) ನೀಲಿಕಪ್ಪು ಶಾಯಿ ಯಾಗುವದು ಇದರಿಂದ ಬರೆಯುವಾಗ ನೀಲಿ ಬಣ್ಣವಾಗಿ ಒಣಗಿದ ನಂತರ ಕಪ್ಪಾಗುವದು. ಈ ಶಾಯಿಯು ತುಂಬಾ ಲೋಕಪ್ರಿಯವಾಗಿದೆ.

ಅಚ್ಚೆ ಕಪ್ಪು ಶಾಯಿ-ಮಾಪಳಕಾಯಿ ತೊಗಟೆ ೧೦೦ ಭಾಗ, ಗೋಂದು ೩೫ ಭಾಗ, ಪತಂಗಚಕ್ಕೆ ೨೫ ಭಾಗ, ನೀರು ೧೦೦೦ ಗ್ಯಾಲ್ ಅಂದ ಭೇದಿಸಿಹದಕ್ಕೆ ತಕ್ಕಷ್ಟು

ಮಾಡತಕ್ಕ ವಿಧಾನ, ನೀರು ಮುಕ್ಕಳುವಷ್ಟಾಗಿ ಕಾಯಿಸಿ ಅದರಲ್ಲಿ ಮಾಪಳಕಾಯಿ ತೊಗಟೆ, ಮತ್ತು ಪತಂಗಚಕ್ಕೆ ಸಹಿತ ೧೦ ದಿವ್ಸ ನೆನೆಹಾಕಬೇಕು ೧೧ನೇ ದಿವಸ ಗೋಂದಿನಪುಡಿಯಂನು ಹಾಕಬೇಕು. ೧೨ ನೇ ದಿವಸ ಅಂನಭೇದಿಚೂರ್ಣವಂನು ಸಂದೆಭರ್ಮನುಸಾರ ಹಾಕಬೇಕು. ಇದು ಚಂನಾಗಿ ಮಾಗಿದಮೇಲೆ ಬಟ್ಟೆಯಿಂದ ಶೋಧಿಸಿ ಸೀಸಾಯಿಯಲ್ಲಿ ತುಂಬಿಟ್ಟುಕೊಳ್ಳಬೇಕು. ಈ ಶಾಯಿಯಿಂದ ಬರೆದಲೇಖನವು ಕಾಗದದ ಮೇಲೆ ೧೦೦ ವರ್ಷಗಳು ನಿಲ್ಲುವದು. ಇದಕ್ಕೆ ಪಕ್ಕಾಕರೀಶಾಯಿ ಎಂದು ಹೇಳುತ್ತಾರೆ.

ಕಪ್ಪು ಶಾಯಿಗೆ ಪುಡಿ.—ಟಾನಿಕ್ ಆಸಿಡ್. ೭ ಪೌಂಸ್, ಅನ್ನಬೇದಿ ೧ ರತಲ್, ಶ್ರೇಷ್ಠವಾದ ಗೋಂದು ೪ ಪೌಂಸು, ಇವುಗಳನ್ನು ಬೇರೆ ಬೇರೆ ಚೂರ್ಣಮಾಡಿ ಸ್ವಲ್ಪ ಲವಂಗ ತೈಲವವನ್ನು ಸೇರಿಸಿ ಮರ್ದನೇ ಮಾಡಿಟ್ಟುಕೊಳ್ಳಬೇಕು. ಈ ಪುಡಿಯನ್ನು ತಣ್ಣೀರಿನಲ್ಲಿ ವಿಶ್ರವಮಾಡಿದರೆ ಬರೆಯುವದಕ್ಕೆ ಕಪ್ಪು ಶಾಯಿಯಾಗುವದು. ಬ್ಲ್ಯಾಕ್ ಬ್ಲ್ಯಾಕ್ ಇಂಕ್ ಮನಸ್ಸಿಗೆ ಸರಿಬೀಳದೇ ಯಿರತಕ್ಕವರು, ಈ ಶಾಯಿಯನ್ನು ಉಪಯೋಗಿಸಬಹುದು.

ಮದ್ಯಪಾನದ ಅವಗುಣ.

ಶ್ಲೋ॥ ಧನಾರ್ಜಧರ್ಮಂ ಸುಖದುಃಖ್ಖಂ | ಅರ್ಥಾನರ್ಥಂಹಿತಾ
ಹಿತಂ | ಯದಾಸಕ್ತೋನಜಾನಾತಿ| ಕಥಂತತ್ಪ್ರೀಲಯೇ
ತ್ತಬುಧಃ ॥ ಬಹಟ॥

ಮನುಷ್ಯನು ಮದ್ಯಪಾನಾಸಕ್ತನಾಗಿ ಅತಿಯಾಗಿ ಪಾನಮಾಡುವ ದರಿಂದ ಬುದ್ಧಿಭ್ರಮಣೆಯಾಗುವದಲ್ಲದೆ ಧರ್ಮವು ಅಧರ್ಮವಾಗಿಯೂ, ಸುಖವು ದುಃಖ್ಖವಾಗಿಯೂ, ಧನವು ನಷ್ಟವಾಗಿಯೂ, ಹಿತವು ಅಹಿತವಾಗಿಯೂ, ಪರಿಣಮಿಸುವದಲ್ಲದೆ ಇವುಗಳ ಜ್ಞಾನವು ಇಲ್ಲದೇಹೋಗುವದು: ಆದ್ದರಿಂದ ಸುಜ್ಞಾನರಾದವರೂ, ತಿಳುವಳಿಕೆಯುಳ್ಳವರೂ, ಮದ್ಯವನ್ನು ಹೆಚ್ಚಾಗಿ ಸೇವನೇಮಾಡಲಾರರೆಲು. (ಸಕೇವ)

ವೈದ್ಯಸ್ಫುಟತ್ವ.

ಹೊಗೆಸೊಪ್ಪಿನಿಂದ ಕಣ್ಣಿಗೆ ಉಂಟಾಗುವ ಅಪಾಯವು,--ಹೊಗೆ

ಸುತ್ತಂನು ವಿಶೇಷವಾಗಿ ತೆಗಿಯುವದರಿಂದ, ನೇತ್ರದೃಷ್ಟಿಯು ಕಡಿಮೆಯಾಗುವದು. ಪಾಶ್ಚಿಮಾತ್ಯರು ಹಿಂದೂಜನಗಳಿಗಿಂತಲೂ, ಮದ್ಯಪಾನದಲ್ಲಿಯೂ, ಸುತ್ತು ತೆಗಿಯುವದರಲ್ಲಿಯೂ, ಅಗ್ರಗಣ್ಯರಾಗಿರುವದರಿಂದ ಅನೇಕಜನರು ಕುರುಡರಾಗಿರುತ್ತಾರೆ. ನೇತ್ರಪಟಲದಲ್ಲಿ ದೃಷ್ಟಿಯುಂನು ವ್ಯಾಪಿಸಿಡಿಸುವ ಮಹತ್ವವುಳ್ಳಜ್ಞಾನತಂತು (ಆಪ್ಟಿಕನರ್ವ್) ವಿನ ಸಾವಯ್ಯವು ಸುತ್ತು ತೆಗಿಯುವದರಿಂದ, ಕಡಮೆಯಾಗಿಯೂ, ದೃಷ್ಟಿದೋಷವುಂಟಾಗಿಯೂ, ಕಣ್ಣುಕಾಣಿಸದಂತೆ ಆಗುವದು. ಈಚೆಗೆ ಸುಮಾರು ೦೦ ವರ್ಷಗಳಿಂದ ಅಲ್ಪ ದೃಷ್ಟಿಯುಳ್ಳವರ ಸಂಖೆಯು ಬೆಳೆಯುತ್ತಲೇ ಇರುವದು. ಬಹಳತೀಕ್ಷ್ಣವಾದ ಸುತ್ತು ತೆಗಿಯುವದರಿಂದ ಈ ಅನರ್ಥವುಂಟಾಗುವದು. ಈ ಅಪಾಯವನ್ನು ತಪ್ಪಿಸುವದಕ್ಕಾಗಿ, ಸುತ್ತು ತೆಗಿಯುವದನ್ನು ಖಂಡಿತವಾಗಿ ಮುಂನಿಸಬೇಕು.

ಚಿಂತೆ ಮತ್ತು ಮಧುಮೇಹ-- ಚಿಂತೆಗೆಮಧುಮೇಹವು (ಡೈಬಿಟೆಸ್) ಐಕ್ಯವಾಗಿರುವಂತೆ ತೋರುತ್ತೆ, ಮಧುಮೇಹವನ್ನು ಸ್ಥಿರೋಗಿಯು ಮನಸ್ಸಿನಲ್ಲಿ ವ್ಯಥೆಯಿದ್ದಪಕ್ಷದಲ್ಲಿ ಸಮಾಧಾನವಾಗಿ ಆತನಿಗೆ ಯಾವವಿಧದಿಂದಲೂ ಸುಖವುಂಟಾಗುವದಿಲ್ಲ. ಅಲ್ಲದೆ ವ್ಯಾಧಿಯು ದಿನೇದಿನೇ ವೃದ್ಧಿಯಾಗುವುದುಂಟು, ಪ್ರಸಿದ್ಧರಾದವೈದ್ಯರು ಸಿಷ್ಕರ್ಷೆಮಾಡಿರುತ್ತಾರೆ, ಮಧುಮೇಹ (ಬಹುಮೂತ್ರ) ವ್ಯಾಧಿಯುಂಟಾಗುವದಕ್ಕೆ ಯಾವಾಗಲೂ

ವ ನಸ್ಸಿನವ್ಯಥೆಯು ಕಾರಣವಾಗಿರುವದು. ಇತರೇತರ ಜನರಿಗಿಂತಲೂ, ಇಂಜಿನ್ ಎಂತ್ರವನ್ನು ನಡಿಸತಕ್ಕ ಜನರಲ್ಲಿ ಈವ್ಯಾಧಿಯು ಎರಡುಪಾಲು ಹೆಚ್ಚಾಗಿ ಕಂಡುಬರುವದು. ಇದರಕಾರಣ ಅವರವಮನಸ್ಸಿನವ್ಯಥೆಯೇ ಹೌದು! ಶ್ರೀಮಂತಜನರಲ್ಲಿ ಈವ್ಯಾಧಿಯು ಅಧಿಕವಾಗಿರುವದು, ಇದರ ಕಾರಣವೂ ಅವರವಮನಸ್ಸಿನ ಚಿಂತೆಯೇ ಆಗಿರುವದು. ಅಹರ್ನ್ಯಾಹನ ಕಾಲಕ್ಷೇಪಮಾಡುವ ಬಡವರಿಗೆ ಒಪ್ಪತ್ತಿಗೆ ಹೊಟ್ಟಿಗಿಲ್ಲವೆಂಬ ವ್ಯಥೆಯೊಂದೇ. ಶ್ರೀಮಂತರಿಗೆ ನಾನಾವಿಧವಾದ ವ್ಯಥೆಯಿರುವದು. ಪುಣ್ಯವಂತರವಮನಸ್ಸು ಎಂದಿಗೂ ಸುಖವಾಗಿರುವದಿಲ್ಲ ದ್ರವ್ಯದಸಂರಕ್ಷಣೆಯೇ ಗಾಗುವದು, ವಿಶೇಷದ್ರವ್ಯಸಂಚಯ ಹೇಗಾಗುವದು, ಮತ್ತು ತಮ್ಮ ಡಂಭಾಚಾರವನ್ನು ಹೇಗೆಬೆಳಿಸುವದು, ಎಂಬ ನಾನಾವಿಧವಾದ ಮೋಹಜಾಲಗಳಿಂದ ಅವರವಮನಸ್ಸು ಸುತ್ತಿಕೊಂಡಿರುತ್ತೆ. ಆದ್ದರಿಂದ ಮಧುಮೇಹಾದಿ ರೋಗಗಳು, ಅವರನ್ನು ಕಾದುಕೊಂಡಿರುತ್ತವೆ. ಶ್ರೀಮಂತರ ಐಶ್ವರವು ನೋಡುವವರಿಗೆ ಎಷ್ಟು ಅಧಿಕವಾಗಿ ಕಂಡುಬಂದಾಗ್ಯೂ ಮೇಲ್ಕಂಡಯೋಜನೆಗಳು ಜನರಿಗೆ ತಿಳಿದುಬರುವದಿಲ್ಲ.

ಒಬ್ಬಭೌತಿಕಶಾಸ್ತ್ರಜ್ಞರು ನೆಗೆಟೀವ್ ಎಂಬ ಫೋಟೋಗ್ರಾಫರ್(ತಸ್ವೀರ್) ಹಿಡಿಯುವ ಕನ್ನಡಿಯನ್ನು ಮತ್ತು ಖ. ಯೋ. ಪಿ, ಪೇಪರ್ ಎಂಬ ತಸ್ವೀರ್ ಪ್ರಿಂಟುಮಾಡುವ ಪತ್ರವನ್ನು ನಮ್ಮಭರತ ದೇಶಿಯರ ಉಪಯೋಗಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟನಮಾಡುವಂತೆ, ಸರ್ವರಿಗೂ ತಿಳಿಯುವಹಾಗೆ, ಸ್ಪಷ್ಟವಾಗಿ ಬರದು ಕಳುಹಿಸಿರುವರು, ಅದಂನು ಪ್ರಬುದ್ಧಭಾರತೀಯರು, ಪ್ರಯತ್ನಿಸಿ ಮಾಡುವಪಕ್ಷದಲ್ಲಿ ಕಾಲಾಣೆ, ಅಥವಾ ಅರ್ಧಾಣೆಗಿಂತಲೂ, ಹೆಚ್ಚಾಗಿ ವ್ಯಯವಾಗಲಾರದು. ಹೀಗೆ ಅನುಕೂಲಿಸುವ ಸುಲಭೋಪಾಯವಾದ ತಸ್ವೀರ್‌ನ್ನುಮಾಡಿ,ಪಾಶ್ಚಿಮಾತ್ಯರಂತೆ ಪ್ರಚುರಪಡಿಸಿ ವ್ಯಾಪಾರಮಾಡುವಪಕ್ಷದಲ್ಲಿ ನಾವಿರಾರು ರೂಪಾಯಿಗಳನ್ನು ಪಡೆಯಬಹುದು. ಈಚಿಗೆ ದಿನೇದಿನೇ ಫೋಟೋಗ್ರಾಫರ್ ಸಂಖ್ಯೆಯು, ಬೆಳೆಯುತ್ತಲೇ ಇದೆ. ಇದನ್ನುದೆಯೆನಿಟ್ಟು ಫೋಟೋಗ್ರಾಫರ್‌ಗಳು ಒದಿ ತಿಳಿದುಕೊಂಡು ಪರೀಕ್ಷಿಸಬಹುದು.

ದೀರ್ಘಾಯುಷ್ಯವಂತರಾಗಿಯೂ, ವಿವೇಕಜ್ಞರಾಗಿಯೂ, ಮಾನವಪಕ್ಷೋಪಯೋಗಿಯೂ ಪ್ರಜೋತ್ಪತ್ತಿಯನ್ನು ಮಾಡುವ ಸಹಾಯಕ್ಕೆಸ್ಕರ

ಅನಾದಿಸಿದ್ಧ ಋಷಿಕೃತವೆಂದೂ, ಪಣಿನಿಕೃತವೆಂದಂತೆ, ವೈದ್ಯಶಾಸ್ತ್ರಕ್ಕೂ, ಧರ್ಮಶಾಸ್ತ್ರಕ್ಕೂ ಜ್ಯೋತಿಷ್ಯಶಾಸ್ತ್ರಕ್ಕೂ ಸಂಕೀರ್ಣಲಿತವಾಗಿ, ಋತುಮತಿಯರಾದ ರಜಸ್ವಲೆಯರ ಅಂತಸ್ಥಿನ ಪ್ರಜೋತ್ಪತ್ತಿಯ (ನೆಗೆಟೀವ್) ಕನ್ನಡಿಯಾದ ಗರ್ಭಕೋಶವೆಂದು ನಾಲಕ್ಕು ದಿವಸದವರಿಗೆ, ಕತ್ತಲೆಕೋಣೆಯಲ್ಲಿ ಸುಖವಾಗಿಟ್ಟದ್ದಪಕ್ಷದಲ್ಲಿ ಪ್ರಜೋತ್ಪತ್ತಿಯನುಂಟುಮಾಡುವ ಗರ್ಭಕೋಶವು (ನೆಗೆಟೀವ್) ಪುರುಷಸಂಭೋಗಕ್ಕೆ ಅನುಕೂಲವಾಗುವದೆಂದು ಹೇಳಿರುವದೆಂದು ನೋಡಿ ನಾವುಗಳು ಅತ್ಯಂತಕೃತಜ್ಞರಾಗಿರಬೇಕು. ಭೌತಿಕಶಾಸ್ತ್ರದಲ್ಲಿ ವಿಚಾರಮಾಡಿದಲ್ಲಿ ವಿಶದವಾಗಿ ತಿಳಿಯುವದು.

ಹೊಟೆಲ್‌ನವರ ಅಕ್ರಮ

ವೆಸ್ಲಿಸೂರುದೇಕದ ಸ್ಯಾನಿಟರಿಕಮೀಷ್ಣರ ಸಾಹೇಬರವರ ಅವಗಾಹನಕ್ಕೆ.

ಈಚಿಗೆ ಕಾಲವು ಬಹಳ ಸೂಕ್ಷ್ಮವಾಗಿ ನಾಗರೀಕತೆಗೆ ಬಂದಿರುವದರಿಂದ ಸಾಮಾನ್ಯವಾಗಿ ಸ್ಥಳಿ, ಪರಸ್ಥಳಿಗಳ ಜನರಿಗೆ ಆಹಾರಾನುಕೂಲವಿಲ್ಲದೆ ಹೋಬಲ್ (ಅನ್ನವಂನು ಮಾರುವ ಅಂಗಡಿ) ನಲ್ಲಿ ಭೋಜನಮಾಡುವದು ದಿನಂಪ್ರತಿಯಾಗಿ ಅಭಿವೃದ್ಧಿಗೆ ಬರುವದು ನೋಡಿ ಸಕಲಪಟ್ಟಣಗಳಲ್ಲಿಯೂ ಹಿಂದೂಜನರ ಉಪಾಹಾರಗಳ ಅಂಗಡಿಗಳು ಮತ್ತು ಹೋಟಲುಗಳು ಹೆಚ್ಚುತ್ತಲಿರುವದು ಸರ್ಕಾರದವರ ಚಿತ್ತಕ್ಕೆ ವೇದ್ಯವಾಗಿರಬಹುದು. ಆಸಂಸ್ಥೆಗಳಲ್ಲಿ ಅವರು ನಿಷ್ಕರ್ಷಿಸಿರುವ ರುಸುವುಂನುಕೊಟ್ಟು ಸಭ್ಯ ಮನುಷ್ಯಶರೀರಕ್ಕೆ ಆರೋಗ್ಯವಾದ ಆಹಾರಪದಾರ್ಥಗಳಂನು ವದಗಿಸಿಕೊಡುವದಿಲ್ಲವೆಂಬಸಂಗತಿ ಈ ವಿಷಯಸಂಬಂಧಿಕೆಯುಂಟಾಗಲಕವಾಗಿ ನಾವು ಸರ್ಕಾರದವರ ಅವಗಾಹನಕ್ಕೆ ತರಲು ತುಂಬಾ ವಿಷಾದಿಸುತ್ತೇವೆ.

ಆಹಾರಪ್ರಚನ್ನಾಗಿದ್ದೊರಕದೇ ಇದ್ದರೆ ಮನುಷ್ಯಶರೀರವು ಕೃಶಿಷ್ಟಕರವಾಗಿಯೂ, ತೇಜಸ್ಸುಪುಂಜವಾಗಿಯೂ, ಕೆಲ್ಸವಾಡುವದಕ್ಕೆ ಉಲ್ಲಾಸವಾಗಿಯೂ, ಇರುವದು ತುಂಬಾಕಷ್ಟ. ಈ ಅಕ್ರಮವು ಬೆಂಗಳೂರು ಪಟ್ಟಣದಲ್ಲಿ ದಿನೇದಿನೇ ವೃದ್ಧಿಯಾಗುತ್ತಲೇ ಇದೆ. ಆದ್ದರಿಂದ ಮೇಲ್ ಸ್ಯಾನಿಟರಿ ಕಮೀಷ್ಣರ್ ಸಾಹೇಬರವರು ಮುದರಾಸು ಆಧಿಪತ್ಯಕ್ಕೆಸೇರಿನ ಕುಂಭಕೋಣಂ, ತಿರುಚನಾಪಲ್ಲಿ ಮುಂತಾದ ಪಟ್ಟಣಗಳಲ್ಲಿ "ಹೋಟಲು ಇನ್‌ಸ್ಪೆಕ್ಟರ್" ಎಂದು ಸಿಬ್ಬಂದಿಯನ್ನು ನೇಮಕಮಾಡಿ ಅವರಿಂದ ಪ್ರತಿದಿನವೂ, ವಾರವಾರವೂ, ಮಾಸಮಾಸವೂ, ಬರುವ ರಿಪೋರ್ಟಂನು ಪರೀಕ್ಷಿಸಿ ಜನಗಳಿ

ಗೆಆರೋಗ್ಯಕರವಾದ ಉತ್ಕೃಷ್ಟವಾದ ಆಹಾರಪದಾರ್ಥಗಳನ್ನು ಹೋಟಲುಗಳಲ್ಲಿ ವದಗಿಸುವಂತೆಮಾಡಿರುವವಿರ್ಮಾಟನ್ನುಗಮನಕ್ಕೆತಂದು ಆದೇತಿಯೊಗಿ ಬಿಂಗಳೂರು ಮ್ಯುನಿಸಿಪಾಲಿಟಿಯವರಿಗೆ ತಿಳಿಯಿಪಡಿಸಿದಲ್ಲಿ ಅವರಿಂದ ಜಾರಿಗೆ ತರುವದು ಅಸಾಧ್ಯವಲ್ಲ. ಹೋಟಲು ಮತ್ತು ಫಲಹಾರದಅಂಗಡಿಯವರು ಲೈಸೆನ್ಸ್ ಇಲ್ಲದೆ ಪ್ರವರ್ತನೇಮಾಡಲು ಅವಕಾಶವಾಗದೆಹಾಗೆ ನಿಬಂಧನೇಮಾಡಿ ಪ್ರಜೆಗಳಿಗೆ ಆರೋಗ್ಯಕರವಾದ ಆಹಾರಪದಾರ್ಥಗಳನ್ನು ವದಗಿಸುವಂತೆ ಕ್ಷಿಪ್ರದಲ್ಲಿಯೇ ಅನುಕೂಲಪಡಿಸುವರೆಂದು ನಂಬಿದ್ದೇವೆ. ಎಡೀಟರ್

ಚಂದಾದಾರರುಗಳ ತಪಶೀಲ್

ಹಿಂದಿನಸಂಚಿಕೆಯಿಂದ ಮುಂದಕ್ಕೆ

ಮ॥ ರಾ॥ ನರಸಿಹ್ಮಮೂರ್ತಿರಾಯರವರು, ಅಕೌಂಟೆಂಟರ್ ಡಿ. ಪಿ. ಡಬ್ಲ್ಯೂ. ಆಫೀಸ್ ಬೆಂಗಳೂರು ೨-೦-೦ ಮ॥ ರಾ॥ ವೆಂಕಟಸುಬ್ಬಯ್ಯನವರು ಆರ್ಯಧರ್ಮವೈದ್ಯಶಾಲೆ ಬೆಂಗಳೂರು ೨-೦-೦ ಮ॥ ರಾ॥ ನರಸಿಹ್ಮಸಾಹುಜಿಯವರು, ಚೇಣ್ಣಾಜವಳಿಅಂಗಡಿ ಬೆಂಗಳೂರು ೨-೦-೦ ಮ॥ ರಾ॥ ರಾಯಬಹದ್ದೂರ್ ಸಿ. ತಿಮ್ಮಯ್ಯನವರು, ಪೆಷ್ಕಸ್ಸುಬೇದಾರ್‌ರವರು ಕೊಡಗು ೨-೦-೦ ಮ॥ ರಾ॥ ದೇವಪ್ಪನಾಯಕರವರು ವೆಸ್ಲಿನೇಟರ್, ಕೆರಡಾಳ ೨-೦-೦ ಇವರುಗಳು ಕಾತೀರ್ಕವಾಸದವಳಗೆ (ಅಡ್ವಾನ್ಸ್) ಮುಂಗಡವಾಗಿ ಕಳುಹಿಸಿಕೊಟ್ಟಿರುವರು. ಮ॥ ರಾ॥ ಸೆಟಲ್ಮೆಂಟ್ ಅಣ್ಣಾಸ್ವಾಮಯ್ಯಂಗಾರ್ಯರವರು ಜಿಯೊಲಜಿಕಲ್, ಅಫೀಸು ಅಸಿಸ್ಟೆಂಟರವರು ೨-೪-೦ ಮ॥ ರಾ॥ ಸುಬ್ಬರಾವ್, ಗೋಪಾಲ ಕ್ಯಾಪಿಯರ್ ಮಹಾರಾಜಮಿಲು ಬಿಂಗಳೂರು ೨-೪-೦ಮ॥ ರಾ॥ ಶ್ರೀನಿವಾಸರಾಯರವರು ಸೂಪರ್‌ಟೆಂಡಿಂಗ್ ಇಂಜಿನಿಯರ್ ಬೆಂಗಳೂರುಕೋಟೆ ೨-೪-೦ ಮ॥ ರಾ॥ ಖಂಡೇರಾವ್ ಘಾಟಗಿ, ರಿಸಾಲ್ದಾರ್‌ಮುನಿರಡ್ಡಿಪಾಳ್ಯ ೨-೪-೦ ಮ॥ ರಾ॥ ಮೆಕದ ಬಸಪ್ಪನವರು ಹೊಳಗುಂದಿಗಾಮ ೨-೪-೦ ನಿಶಾನಿವಾರಣ್ಣನವರು ಕೈಲ್ವಿಕಂಟ್ರಾಕ್ಟರ್ ಬೀರೂರು ೨-೪-೦ ಮ॥ ರಾ॥ ಸಿ. ಬಾವಯ್ಯನವರು ಧರ್ಮಾವರಂ ೨-೪-೦ ಮ॥ ರಾ॥ ಮುಗಳವುನೆಸಾಹುಕಾರ್, ಕೂಡಪ್ಪನವರು ಚಿತ್ರದುರ್ಗ ೨-೪-೦ ಮ॥ ರಾ॥ ಕೆ. ನೀಲಕಂಠಯ್ಯನವರು ಕಣಿಕಟ್ಟಿ ೨-೪-೦ ಮ॥ ರಾ॥ ಸಜ್ಜನಪಾಪಯ್ಯನವರು ಸಾಹುಕಾರ್, ನ್ಯಾಮಗುಂಡ್ಲು ೨-೪-೦ ಮ॥ ರಾ॥ ಬೋಜಣ್ಣನವರು ರೇಷ್ಮೆಕೋಠಿಬೆಂಗಳೂರು ೨-೪-೦ ಮ॥ ರಾ॥ ತಿರುಮಲಾಚಾರ್ಯರವರು ಅಡ್ವೋಕೇಟ್, ಮತ್ತು ಹೈಕೋರ್ಟ್‌ವಕೀಲರು ಬೆಂಗಳೂರು ೨-೪-೦ ಮ॥ ರಾ॥ಜಿ. ವೆಂಕಟನಾರಣಯ್ಯನವರು ಫ್ಲೀಡರ್‌ಬೆಂಗಳೂರು ೨-೪-೦ ಮ॥ರಾ॥ದಿಬ್ಬೂರುವೀರಭದ್ರಸೆಟ್ಟಿರವರು ಸುಗಂಧವ್ಯಾಪಾರ ಬೆಂಗಳೂರು ೨-೪-೦-

"NORTH INDIAN STORES.
KASUR, PUNJAB,

We can supply cheap and genuine Himalayan drugs than other suppliers. Musk No 1, 2, & 3, at Rs 25, 22, & 18, per tola respectively.

Saffron at Re. 1—0—0 per tola Assafætida at 13, annas a tin contg 13 tolas 6 tins at Rs 4—8, 12 tins at Rs. 8—4 for detailed price list apply to the Manager

OMA DIT CHOPRA & SONS,
P. P. North Indian Stores.

Batliwala's Ague Mixture and Pills.

ಬೊಂಬಾಯಿ ಪ್ರಸಿದ್ಧ ಡಾಕ್ಟರ್ ಬಾಟ್ಲೀವಾಲ ಅವರಿಂದ ತಯಾರಾದ ಜ್ವರದ ಔಷಧಿಯನ್ನು ಪ್ರತಿಯೊಬ್ಬ ಸಂಸಾರದವರೂ ಇಟ್ಟಿರುವದು ಒಳ್ಳೇದು.

ಕ್ರಯ ಸೀಸಾಯಿ ೧ ಕ್ಕೆ ೧ ರೂಪಾಯಿ ಟಪ್ಪಲು ಹಾಸಲು ಆಣೆ ಇಪ್ಪತ್ತುಳ್ಳವರು ವಿಶೇಷ ಸಂಗತಿಯನ್ನು ವಿಳಾಸದಾರರಿಗೆ ಬರೆಯಬಹುದು. Dr. H. L. Batliwala,
Warli Dispensary, Bombay.

ನೆಗದೆ ಇರುವವರಿಗೆ ನಗಿಸುವಕಥೆ-ಇದನ್ನು ಓದುವದಕ್ಕೆ ಪ್ರಾರಂಭಿಸಿದರೆ ಮುಗಿಯುವವರಿಗೂ ಬಿಡುವದಕ್ಕಾಗುವದಿಲ್ಲ ಕ್ರಯ ೧ಕ್ಕೆ ೪ ಆಣೆ ವಿಚಿತ್ರ ವಿನೋದರಸವುಂಜರಿ—ಈ ಪುಸ್ತುಕದಲ್ಲಿ ಚೌಟಿ ರಾಜನ ದಬರ್ಾರ್, ದಡ್ಡಶಿಖಾಮಣಿಯು ಜಾತ್ರೆಗೆ ಹೋಗಿಬಂದ ಕಥೆಯೂ ಅಡಕವಾಗಿದೆ ಕಥೆಯು ಬಹಳ ಮನೋಹರವಾಗಿದೆ ಕ್ರಯ ೧ಕ್ಕೆ ೪ ಆಣೆ ಸ್ಮೃತಿಶಕ್ತಿವರ್ಧಿನಿ ಅಂದರೆ ಈ ಕಥೆಯುಲ್ಲಿ ಜ್ಞಾಪಕಶಕ್ತಿಯನ್ನು ಹೆಚ್ಚಿಸಿಕೊಳ್ಳುವ ರಹಸ್ಯವಾದ (ಗುಟ್ಟಿನ) ಉಪಾಯವನ್ನು ಬೋಧಿಸುವ ಪುಸ್ತಕ ಪ್ರತಿಯೆ ೩ಬ್ಬರಲ್ಲಿಯೂ ಇದ್ದಿರಬೇಕಾದ್ದು ಕ್ರಯ ೧ಕ್ಕೆ ೪ ಆಣೆ

ನಮ್ಮ ವಿಳಾಸ--ಎಂ ರಾಮಯ್ಯಶೆಟ್ಟಿ.
ನಂ॥ ೪೭ ಜನುಖಾನೆ ಪೇಟೆ, ಬೆಂಗಳೂರು ಸಿಟಿ.

96 274 S.S. No 03

SRIKRISTNA SUKTHI SERIES.

No 1

SRIKRISTNA

ಈ ದಿವ್ಯವಿಷಯವು

ಅನ್ಯಮತವೋಹಿನಿ.

(Mrs Annie Me Queen)

ಎಂಬಮಹನ್ನೀಯಳಿಂದ

ನವದ್ವಾರಕೆಯ (Newyork) ದಿವ್ಯಜ್ಞಾನ ಸಭೆಯಲ್ಲಿ

ಉಪನ್ಯಾಸಿಸಲ್ಪಟ್ಟು

1906

ಕೆರೋಡಿ ಸುಬ್ಬರಾವ್ ಬಿ. ಎ.

(Karody Subba Rao B. A).

ಇವರಿಂದ

ಕನ್ನಡ ಭಾಷಾಂತರವನ್ನು ಹೊಂದಿ

ಉಡುಪಿ

ಹಿಂದು ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿತವಾಗಿರುವುದು.

1906.

ಬೆಲೆ 0–1–6

SRI MADABHINAVA. Srishenkaranarayana Bharatisvamigal TIRTHAMUTTUR, SRINIVASAPURA.

ಪ್ರಕಟಣೆ

ನಮ್ಮ ಮುಖಾಂತರ ದೊರೆಯ ಬಹುದಾದ ಪುಸ್ತಕಗಳು—

I ಪ್ರಕಟಿಸಲ್ಪಟ್ಟಿವೆ ಸಿದ್ಧವಾಗಿರುವವು.

1. 'ಸೌಭಾಗ್ಯವತೀ ಪರಿಣಯಂ' ಸಂಗೀತನಾಟಕವು. ... 0—10—0
2. 'ಗಂಭೀರಶೃಂಗಾರಶತಕಂ' ನೂರುಪದಗಳ ಜಾವಡಿಪುಸ್ತಕವು 0—4—0
3. 'ಅನುಕೂಲದಾಂಪತ್ಯಂ' ವರಕನ್ನೆಯನ್ನು ಕುರಿತಉಪನ್ಯಾಸವು 0—1—0
4. 'ಶ್ರೀಕೃಷ್ಣರಾಸಲೀಲೆ' ಗೋಪಿಕಾಸ್ತ್ರೀ ವಿಹಾರವರ್ಣನೆ ... 0—1—0
5. 'ಶ್ರೀಕೃಷ್ಣ' ದಿವ್ಯಜ್ಞಾನಗ್ರಂಥಮಾಲೆಯ ಭಾಷಾಂತರ ... 0—1—6
6. 'ಖರ್ಜಾಸಿಲಕ್ಷ್ಮೀಬಾಯಿಚರಿತ್ರೆ' ಮಹರಾಷ್ಟ್ರಮೂಲಗ್ರಂಥದಿಂದ
ಕೆರೋಡಿರಾಮರಾಯರು ಕನ್ನಡಿಸಿದ ಇತಿಹಾಸ. 1—0—0

II ಛಾಪೆಗೆ ಸಿದ್ಧವಾಗಿರುವವು—

1. 'ಕುಮಾರಶೇಖರಚರಿತ್ರೆ' ನವೀನಸಂಗೀತ ನಾಟಕವು... ... 0—8—0
2. 'ತಾರಾನಾಥಚರಿತ್ರೆ' ಇಂಗ್ಲಿಷ್ ಕವಿಶ್ರೇಷ್ಠ ಷೇಕ್ಸಪಿಯರ್
ವಿರಚಿತ ಪೆರಿಕ್ಲಿಸ್ ಕಾವ್ಯಾಧಾರದ ನಾಟಕವು 0—6—0
3. 'ಜರಾಸಂಧವಧೆ, ಪಾಂಡವದಿಗ್ವಿಜಯ' ರಾಜಸೂಯ ಯಾಗಾರಂಭವೆಂಬ ಯಕ್ಷಗಾನದ ಹೊಸಪ್ರಸಂಗ. 0—6—0
4. 'ಪಲಾಂಡಚರಿತ್ರೆ' ನೀರುಳ್ಳಿಗಡ್ಡೆಯ ಯಕ್ಷಗಾನಪ್ರಸಂಗ. 0—4—0
5. 'ಪ್ರಭಾವತೀ ಸ್ವಯಂವರ' ವಜ್ರನಾಭನಕಾಳಗವೆಂಬ ಭಾಗವತಭಾಗವನ್ನು ಪರಿಷ್ಕರಿಸಿದ ಯಕ್ಷಗಾನ ಪ್ರಸಂಗ. 0—6—0

ಈ 5 ಗ್ರಂಥಗಳನ್ನು ಹೊಂದಲಪೇಕ್ಷಿಸುವವರು ದಯವಿಟ್ಟು ತಮ್ಮ ಮೇಲುವಿಳಾಸವನ್ನು ನಮಗೆ ಸೂಚಿಸಬೇಕು. ಯುಕ್ತವಿರುವಷ್ಟು ಸೂಚನಾ ಪತ್ರಗಳು ತಲ್ಪಿದೊಡನೆ ಈ ಗ್ರಂಥಗಳು ಯಥಾಕ್ರಮವಾಗಿ ಛಾಪಿಸಲ್ಪಡುವವು.

Karody Subba Rao. B. A.
Srikristna Sukthi office.
Udipy South Canara.

ಶ್ರೀಕೃಷ್ಣ

ಗುಣಜ್ಞನಾದ ವಿದ್ಯಾರ್ಥಿಯೊಬ್ಬನು ಶ್ರೀಕೃಷ್ಣ ಚರಿತ್ರೆಯನ್ನು ಪರ್ಯಾಲೋಚಿಸಲಿ! ಇದರ ಪರಿಣಾಮವೇನಾಗುವುದು? ಆಶ್ಚರ್ಯಕರವಾದ ಈ ದಿವ್ಯಸುಂದರ ಚರಿತ್ರೆಯನ್ನು ಕೇಳಿ ಆನಂದ ಭರದಿಂದ ಸ್ತಂಭೀಭೂತನಾಗಿ ನಿಲ್ಲುವನು. ಪ್ರೀತಿಜ್ಞಾನ ತ್ಯಾಗಗಳಿಗೆ ಶಿಖರಪ್ರಾಯವಾದ ಆಕೃತಿಯು ಎಲ್ಲೆಡೆಯಲ್ಲೂ ತನ್ನನ್ನು ಮುಸುಕುವಂತೆಯೂ ತನ್ನ ಇಡೀ ಶರೀರವನ್ನು ಕಾಂತಿಗೊಳಿಸುವಂತೆಯೂ ತೋರುವುದು. ಹೃದಯಾಂತರಂಗದಲ್ಲಿ ತದೇಕಚಿತ್ತನಾದ ಧ್ಯಾನಮಾತ್ರನಾಗುವನು. ಇಷ್ಟು ವಿಚಿತ್ರತರವಾದ ಈ ಯವತಾರವನ್ನು ವರ್ಣಿಸುವ ಎಂದರೆ ಶಬ್ದಗಳು ಅತ್ಯಲ್ಪವಾಗಿಯೂ ಅವ್ಯಕ್ತನಾಗಿಯೂ ಅಪೂರ್ಣನಾಗಿಯೂ ಇರುವವು. ಇಂತಹ ಶಬ್ದಗಳಿಂದ ವಿವರಿಸುವ ವರ್ಣನೆಯು ಬಾಲಭಾಷೆಯಾಗುವದು. ಆದರೆ ನಾವು ಪರ್ಯಾಲೋಚಿಸುವ ವಸ್ತುವಿನ ಸ್ವಾರಸ್ಯ ಲೇಶವಾದರೂ ಸೂಚಿತವಾಗುವ ಅಭಿಪ್ರಾಯವನ್ನು ಇತರರಿಗೆ ವ್ಯಕ್ತ ಪಡಿಸುವುದು ಅವಶ್ಯಕವಿದೆ. ಇದಕ್ಕೋಸ್ಕರ ಶಬ್ದಗಳನ್ನು ಪಯೋಗಿಸದೆ ನಿರ್ವಾಹವಿಲ್ಲ.

ಕೃಷ್ಣಶಬ್ದಕ್ಕೆ 'ಕಪ್ಪು' ಎಂದು ಅರ್ಥವಾಗುವುದು. ಈ ಕಪ್ಪು ಬಣ್ಣಕ್ಕಿಂತಲೂ ಹೆಚ್ಚು ತಾರಕವರ್ಣವು ನಮ್ಮನೇತ್ರಗಳಿಗೆ ಗೋಚರಿಸುವುದಿಲ್ಲ. ಚರಿತ್ರೆಕ್ರಮದಂತೆ ಲೋಕೋದ್ಧಾರಕರಲ್ಲಿ ಶ್ರೀಕೃಷ್ಣನು ಆದಿ ಪುರುಷನಾಗಿದ್ದಾನೆ. ಅತನು ಎಲ್ಲ ಅವತಾರ ಆಕಾರಗಳಿಗೆ ಮೂಲಕಾರಣನೂ ತ್ರಿಮೂರ್ತಿಗಳಲ್ಲಿ ದ್ವಿತೀಯ ಪುರುಷನೂ ಆದವಿಷ್ಣುವಿನ ಅಂತೀಯನೆಂದು ಲೇಖಿಸಲ್ಪಟ್ಟಿದೆ. ಒಂದು ಸಮಯ ಹಿಂದೆ ಭೂಲೋಕವು ಅನ್ಯಾಯಮಯವಾಗುವುದು. ಈ ಅನ್ಯಾಯವನ್ನು ಸಾಮಾನ್ಯಸತ್ವದಿಂದ ನಿವಾರಿಸಿ ಕ್ಷೇಮವನ್ನುಂಟು ಮಾಡುವುದು ಸಾಧ್ಯವಾಗಲಾರದು. ಅಂತಹ ಆಪತ್ಕಾಲದಲ್ಲಿ ಸಾಕ್ಷಾತ್ತು ಭಗವಂತನೇ ಅವತಾರವೆತ್ತುವನು. ಹೀಗೆ ಒಂದಾನೊಂದು ಕಾಲದಲ್ಲಿ ರಾಜರು ಸಂರಕ್ಷಣೆಯನ್ನು ಮರೆತು ಪ್ರಜೆಗಳನ್ನು ಪೀಡಿಸುವುದಕ್ಕೆ ಪ್ರಾರಂಭಿಸಿದರು. ಕ್ಷತ್ರಿಯರು ದುರ್ನೀತಿಪರರಾಗಿ ಕರ್ತವ್ಯವನ್ನು ನಿರ್ಲಕ್ಷಿಸುವುದಕ್ಕೆ ತೊಡಗಿದರು. ಅಂತಹ ಸಂದಿಗ್ಧ ಸಮಯದಲ್ಲಿ ಹಿಂದೂ ಜನಾಂಗದ ಉದ್ಧಾರಕ್ಕಾಗಿ ಶ್ರೀಕೃಷ್ಣನು ಅವತರಿಸಿದನು. ಆ ಸಮಯವು ಒಂದು ಯುಗಾಂತ್ಯದ ಕಾಲವಾಗಿತ್ತು. ಅಂತಹ ಕಾಲದಲ್ಲಿ ಅನ್ಯಾಯವು ಯಾವಾಗಲೂ ಅಸಹ್ಯಕರವಾಗುತ್ತೆ. ತನ್ನಿವಾರಕವಾಗಿ ಸಾಕ್ಷಾತ್ತು ಪರಮಾತ್ಮನೆ ಸಂದರ್ಭಕ್ಕೆ ಸಮನಾದ ಪಂಚಭೂತಾತ್ಮಕ ಶರೀರವನ್ನು ಧರಿಸಿ ಅವತಾರವನ್ನೆತ್ತಿ ಅನಾಯಕತ್ವವನ್ನು ನಿವಾರಿಸಿ ಹೊಸಯುಗದ ಅಸ್ತಿಭಾರವನ್ನಿಕ್ಕುವನು.

ಪ್ರಪಂಚ ಸೃಷ್ಟಿಪ್ರಾರಂಭದಲ್ಲಿ ಸಮುಂಜಸವಾಗಿ ಸ್ಥಾಪಿಸಲ್ಪಟ್ಟ ನಿಬಂಧನೆಗಳು ಅಸಮುಂಜಸವೆಂದು ತೋರಿ ಬಂದಿಲ್ಲ. ವಿಶ್ವನಿಯಾಮಕನಾದ ಮಹಾಮುನಿಯೇ ಅಂತಹ ನಿಬಂಧನೆಗಳನ್ನು ನಿರ್ಲಕ್ಷಿಸಲಾರೆನು. ಆದುದರಿಂದ ಸಾಕ್ಷಾತ್ ಪರಮಾತ್ಮನ ಅಂಶವಾದ ಅವತಾರನು ಲೋಕದಲ್ಲಿರುವ ಅನ್ಯಾಯವನ್ನು ಒಮ್ಮೆಯೇ ನಿರ್ಮೂಲಿಸಿ ನೀತಿಯನ್ನು ಫಕ್ಕನೆ ಕಾಪಾಡಲಿಕ್ಕಿಲ್ಲ. ಕಾರ್ಯಕಾರಣ ನಿಬಂಧನೆಯನ್ನು ನಿರ್ಬಂಧಪಡಿಸಕೂಡದು. ಅಣುವೇ ಆಗಲಿ ಅನಂತವೇ ಆಗಲಿ ಎಲ್ಲಾ ಪದಾರ್ಥಗಳೂ ಸಂಕಲ್ಪಿತ ಉದ್ದೇಶಕ್ಕೆ ತಕ್ಕಂತೆ ನಡೆಯಲೇ ಬೇಕು. ಸನ್ಮಾರ್ಗವನ್ನು ಬೋಧಿಸಿ ಅಭಿವೃದ್ಧಿಯನ್ನು ಉಂಟು ಮಾಡುವುದಕ್ಕೆ ಮಾತ್ರಮಹಾತ್ಮರ ಸಹಾಯವು ಅವಶ್ಯಕವಿದೆ. ಅಂತಹ ಸಂದರ್ಭದಲ್ಲಿ ಸೃಷ್ಟಿಕ್ರಮದ ನಿಬಂಧನೆಗನುಸಾರವಾಗಿ ದೇವಾಂಶೀಯರು ಅವತರಿಸಿ ಅರ್ತರನ್ನು ಉದ್ಧರಿಸುವರು. ಈ ರೀತಿಯಲ್ಲಿ ಶ್ರೀಕೃಷ್ಣನು ಅವತರಿಸಿದನು. ಮಗುವಾಗಿ ಹುಟ್ಟಿ ಬಾಲ್ಯಾವಸ್ಥೆಯನ್ನು ಕ್ರಮವಾಗಿ ಕಳೆದು ಪೂರ್ಣಯೌವನವನ್ನು ಪ್ರಾಪ್ತಿಸಿದನು. ಪ್ರತಿ ಅವಸ್ಥೆಯಲ್ಲೂ ಜ್ಞಾನಮಯನಾದರೂ ಪ್ರತಿ ಕ್ಷಣದಲ್ಲೂ ಸರ್ವತ್ರಾಣಿಯಾದರೂ ತಾತ್ಕಾಲಿಕ ಧರ್ಮಬದ್ಧನಾಗಿದ್ದನು. ಕುರುಕ್ಷೇತ್ರರಣಮಂಡಲಮಧ್ಯೆ ಕ್ಷತ್ರಿಯಕುಲ ನಾಶನವೆಂಬ ಫಲಿತಾಂಶದಲ್ಲಿ ಸಮಾಪ್ತಿಯಾಗುವಂತೆ ಕರ್ಮತಂತುಗಳನ್ನೆಲ್ಲಾ ಕ್ರಮೇಣ ಸವೂಪಕ್ಕೆ ಸೆಳೆದನು.

ಭೂಲೋಕದಲ್ಲಿ ಶ್ರೀಕೃಷ್ಣನು ತನ್ನ ಸಂಕಲ್ಪವನ್ನು ನೆರವೇರಿಸಿ ಕ್ರಿಸ್ತಶಕದ 3001 ವರ್ಷಗಳ ಮುಂಚೆ ಪರಂಧಾಮಕ್ಕೆ ಕರಳಿದನೆಂಬುದು ಹಿಂದು ಶಾಸ್ತ್ರಗಳಿಂದ ಕಂಡು ಬರುತ್ತಿದೆ. ಆದರೆ ನೂತನ ಕ್ರಮದಂತೆ ಕಾಲವನ್ನೆಣಿಸುವವರಿಗೆ ಖಂಡಿತವಾಗಬೇಕಾದರೆ ಶ್ರೀಕೃಷ್ಣಾವತಾರವಾಗಿ 5000 ವರ್ಷವಾಯಿತೆಂದು ಹೇಳಬೇಕು. ಈ ಕಾಲದಲ್ಲಿ ಮಥುರಾ ಪಟ್ಟಣದ ಅರಸಾದ ದುಷ್ಟಕಂಸನು ಹಿಂದೂದೇಶದ ಪ್ರಜೆಗಳನ್ನು ಪೀಡಿಸುತ್ತಿದ್ದನು. ಇಡೀ ರಾಜ್ಯವನ್ನು ಜೈಸಬೇಕೆಂಬುದು ಅವನ ದುರಾಶೆಯಾಗಿತ್ತು. ಈ ಉದ್ದೇಶದಿಂದ ಇನ್ನೊಬ್ಬ ಬಲಿಷ್ಠರಾಜಸೂಡನೆ ಸಖ್ಯವನ್ನು ಬೆಳೆಸಿದ್ದನು. ಯವನರ ಅಧಿಪತಿಯಾದ ಕಾಲಯಾವನೆಯೆಂಬ ಈ ಸಖನು ಕೆಟ್ಟಮಂತ್ರವಾದಿಯೂಗಿಯೂ ರಾಕ್ಷಸರ ಮಿತ್ರನಾಗಿಯೂ ಸರ್ವಾಧಿಕಶಕ್ತಿಗುರುವಾಗಿಯೂ ಇದ್ದನು. ಒಟ್ಟಿನ ಮೇಲೆ ಇಡೀ ದೇಶವು ಭೂಪತಿಗಳ ಭಯದಿಂದ ಗಡಗುಟ್ಟುತ್ತಿತ್ತು.

ಶ್ರೀಕೃಷ್ಣನ ಜನ್ಮಕಥೆಯು ಅನೇಕ ತೆರನಾಗಿದೆ. ಕಂಸನ ತಂಗಿಯಾದ ದೇವಕಿಯೆಂಬ ಕನ್ನೆಯಲ್ಲಿ ಹುಟ್ಟಿದ ಕಾನೀನನೆಂದು ಕೆಲವರಾಡುವರು. ದೇವಕಿಯು ಕೃಷ್ಣಯ್ಯನೆಂದೂ ವಸುದೇವನ ಮಡದಿಯೆಂದೂ ಇನ್ನು ಕೆಲವರೆನ್ನುವರು.

ಹೇಗಾದರೂ ಕಂಸನ ತಂಗಿಯಲ್ಲಿ ಹುಟ್ಟಿದವನೆಂಬುದು ಸಾಮಾನ್ಯವಾಗಿ ಎಲ್ಲರೂ ಒಪ್ಪುವಂಥ ಸಂಗತಿಯಾಗಿದೆ. ದೇವಕಿಯು ಎಷ್ಟು ಪರಿಶುದ್ಧಳಾಗಿಯೂ ಸದಾಚಾರಳಾಗಿಯೂ ಇದ್ದಳೊ ಕಂಸನು ಅಷ್ಟು ಅಪವಿತ್ರನಾಗಿಯೂ ದುರಾಚಾರನಾಗಿಯೂ ಇದ್ದನು. ತನ್ನನ್ನು ಜೈಸುವವನು ತಂಗಿಯಗರ್ಭದಲ್ಲಿ ಜನಿಸಲಿಕ್ಕಿದ್ದಾನೆಂಬ ಸುದ್ದಿಯು ಕಂಸನಿಗೆ ಗೊತ್ತಾಯಿತು. ಮಗುವನ್ನು ಕೊಲ್ಲುವ ಉಪಾಯವನ್ನು ಕಲ್ಪಿಸಿ ತನ್ನ ಪರಿಣಾಮದ ಮಾರ್ಗವನ್ನು ಕೂಡಲೇ ಅನುಸರಿಸಿದನು. ಬ್ರಾಹ್ಮಣನೊಬ್ಬನು ಎಚ್ಚರಿಸಿದ ಪ್ರಕಾರ ಕನ್ನೆಯಾದ ದೇವಕಿಯು ಅರಣ್ಯಗತಳಾಗಿ ಆಶ್ರಮವನ್ನೆಯದಿ ಸಾಧುಗಳಿಂದ ಸಂರಕ್ಷಿಸಲ್ಪಟ್ಟು ಪರಮಾತ್ಮನಾದ ಮಹಾದೇವನ ಅನುಗ್ರಹದಿಂದ ಗರ್ಭಿಣಿಯಾದಳೆಂದು ಉದಯವಾರ್ಧಿಶೂರನೆಂಬ (Edouard Shure) ಗ್ರಂಥಕರ್ತನು ವರ್ಣಿಸಿರುವನು. 'ವಸುದೇವದೇವಕಿಯರು ಕಾರಾಗೃಹದಲ್ಲಿ ಇಡಲ್ಪಟ್ಟಿದ್ದರು. ಬಂಧನಗೃಹವು ಬಹು ಸುರಕ್ಷಿತವಾಗಿತ್ತು. ಇವರಲ್ಲಿ ಹುಟ್ಟಿದ ಎಲ್ಲಾ ಮಕ್ಕಳನ್ನು ಕೊಲ್ಲಬೇಕೆಂದು ಕಂಸನು ಸಂಕಲ್ಪಿಸಿದ್ದನು,' ಎಂದು ಅನ್ನಿವಸಂತಳೆಂಬ (Annie Besant) ಇನ್ನೊಬ್ಬ ಗ್ರಂಥಕರ್ತಳು ಹೇಳುವಳು. ನಿಶೆಯಲ್ಲಿ ಶಿಶುಜನಿಸಿತು. ಕಾರಾಗೃಹವು ಕೂಸಿನ ದಿವ್ಯಕಾಂತಿಯಿಂದ ಪ್ರಜ್ವಲಿಸಿತು. 'ತನ್ನನ್ನು ಗೋಕುಲಕ್ಕೆ ಕೊಂಡ್ಯೊಯುವುದು. ಅಲ್ಲಿ ನಂದಗೋಪನ ಹೆಂಡತಿಗೆ ಪ್ರಸವಸಮಯನಾಗಿದೆ, ಆ ಮಗುವಿನೊಂಎಗೆ ತನ್ನನ್ನು ಬದಲಾಯಿಸಬೇಕು' ಎಂಬೀ ಕರ್ತವ್ಯವನ್ನು ತನ್ನ ತಂದೆ ತಾಯಿಗಳಿಗೆ ಬೋಧಿಸಿತು. ತಂದೆಯ ನಿರ್ಗಮನಕ್ಕೆ ತಕ್ಕಂತೆ ಕಾರಾಗೃಹದ ದ್ವಾರಗಳು ತಮ್ಮಂತೆಯೇ ತೆರೆಯಲ್ಪಟ್ಟವು. ಮಗುವಿನ ಅನುಜ್ಞೆಯಂತೆ ಸಕಲವೂ ಸಾಂಗವಾಯಿತು. ಪ್ರತಿಯಾಗಿ ತಂದ ಹೆಣ್ಣು ಶಿಶುವನ್ನು ಕಂಸನು ಸಂಹರಿಸಿದನು. ಇಲ್ಲಿಂದ ಮುಂದಿನ ಕಥೆಯಲ್ಲಿ ಸಾಮಾನ್ಯವಾಗಿ ಸಾಶಾಂತರ ಭೇದವಿಲ್ಲ. ಚಂದನ ವೃಕ್ಷಗಳ ಗಂಧಭರಿತನಾದ ಮಹಾಮೇರುವಿನ ಮೂಲದಲ್ಲಿರುವ ಹಿಮಾಚಲದ ತಪ್ಪಲಲ್ಲಿ ಈ ಗೋಪಾಲರ ಗೋಮಾಳವಿತ್ತೆಂದು ಗೋಚರವಾಗುವದು. ಇಲ್ಲಿ ಶ್ರೀಕೃಷ್ಣನು ನಂದಗೋಪನ ಪ್ರಾಣಮಗನಾದನು. ಸಹಪಾಠಿಗಳ ಸಹವಾಸದಲ್ಲಿ ಮೆರೆದಾಡಿದ ಬಾಲಲೀಲೆಯು ಈ ಸಂದರ್ಭದಲ್ಲಿ ಬಹು ಸಮಂಜಸವಾಗಿ ವರ್ಣಿಸಲ್ಪಟ್ಟಿದೆ.

ಮೋಸಹೋದೆನೆಂದರಿತು ಶಿಶುವನ್ನರಸಿ ನಾಶಮಾಡಬೇಕೆಂದು ಕಂಸನು ಹಲವೇಪದೇ ಬೇಹುಗಾರರನ್ನು ಅಟ್ಟುತ್ತಿದ್ದನು. ಆದರೆ ಮಗುವನ್ನಲ್ಲವತರಿಸಿದ ಅಪಾರಸಂಚಿತವಾದ ಶಕ್ತಿಯಿಂದ ಅವರ ಪ್ರಯತ್ನಗಳೆಲ್ಲ ನಿರರ್ಥಕವಾಗುತ್ತಿತ್ತು. ಸೃಷ್ಟಿ ಸ್ಥಿತಿಲಯ ಕಾರಣನಾದ ಪರಬ್ರಹ್ಮಸ್ವರೂಪವು ಎಂದಿಗೂ ಗ್ರಹಿಸಲಿಕ್ಕಾಗದ ಹಿಂದು ಭಾವನೆಯಾಗಿದೆ. ದೇವತನದಲ್ಲಿ ದಿವ್ಯಾಂತಃಕರಣವಿರಬೇಕು. ಇದಕ್ಕೆ

ಬದಲಾಗಿ ನೀತಿ ನಿಬಂಧನೆಗಳನ್ನು ಅತಿಕ್ರಮಿಸುವ ಕ್ರೂರಕೃತ್ಯಗಳೇ ಲೀಲಿಸಲ್ಪಟ್ಟವೆ. ಅದುದರಿಂದ ಲಯಮೂರ್ತಿಯ ಕ್ರಮವು ಕೇವಲ ಅಸಂಬದ್ಧನಾಗಿದೆಯೆಂಬುದು ತೋರುವುದು. ಹೀಗೆ ಚಿಕ್ಕ ಮಗುವಿನ ಕೊಲೆಕಳವು ವಂಚನೆ ಮೊದಲಾದವು ನಿರ್ದಯತೆಯನ್ನು ಓದಿದೊಡನೆಯೆ ನವನಾಗರಿಕರ ನಾಡಿಗಳು ಬಡಿನಾರವಾಗಿ ಹೊಡಕೊಳ್ಳುವವು. ಮನುಷ್ಯನ ಹೃದಯಾಂತರಂಗ ಶೋಧಕನೂ ಕರ್ಮನಿಬಂಧನೆಯ ಸಮಸ್ತಸೂಕ್ಷ್ಮ ಪರಿವರ್ತನೆಯನ್ನು ಅರಿತವನೂ ಪೂರ್ವಜಲ್ಮದ ಕರ್ಮವಿಪಾಕವನ್ನು ಫಕ್ಕನೆ ಪರಿಗ್ರಹಿಸುವವನೂ ಹಾನೇ ಅಂತರ್ಗತನಾಗಿ ನಡೆಸುವ ಶಕ್ತಿಗೆ ತಾನೇ ಬಾಹ್ಯ ಕರ್ಮ ಸಾಧಕನೂ ಉತ್ತಮೋತ್ತಮ ಸರ್ವೋತ್ತಮನೂ ಸತ್ಯಾತ್ಮಕವಿಧಿಯೂ ಆದ ಸರ್ವಜ್ಞನ ಚೈತನ್ಯವು ಮಗುವಿನ ಅಕೃತಿಯಲ್ಲಿ ನೆಲೆಗೊಂಡಿತ್ತೆಂಬುದನ್ನು ಮಂದ ಮತಿಗಳಾದ ನಾವು ನೆನೆಪಿಟ್ಟುಕೊಳ್ಳಬೇಕು. ಈಗ ನಡೆಯುತ್ತಿರುವ ನಾಸ್ತಿಕತ್ವದ ಕಾಲದಲ್ಲಿ ಮನುಷ್ಯನ ಸೂಕ್ಷ್ಮ ಸಾಮರ್ಥ್ಯವು ಜಡತ್ವದಿಂದ ಮುಚ್ಚಲ್ಪಟ್ಟಿದೆ. ಇಲ್ಲವೇ ಉಪಯೋಗಿಸದೆ ಮಲಿನವಾಗಿದೆ. ಹೀಗೆ ನಾಸ್ತಿಕಮಯವಾದ ನಾವು ಮಂತ್ರಶಕ್ತಿಯಿಂದ ಸೂಕ್ಷ್ಮಾಕಾರಗಳನ್ನು ಧರಿಸಿ ನೀಡೋಚ್ಚಗಳು ಪರಸ್ಪರ ಸಮ್ಮೇಳನ ವಾಗುತ್ತಿದ್ದ ಪೂರ್ವಕಾಲವನ್ನು ಪರ್ಯಾಲೋಚಿಸುತ್ತಿರುವೆವು. ಈಗಮಾತ್ರ ಅಂತಹ ಮಂತ್ರಶಕ್ತಿಯು ನೀಚಪಕ್ಷದಲ್ಲಿ ಪರಿಣಮಿಸಿ ಕೂಪಮಂತ್ರವೆಂಬ ಅಪವಾದ ಪ್ರಸ್ಥವಾಗಿದೆ. ಇವೆಲ್ಲವು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ಇನ್ನೊಂದು ಪ್ರಮೇಯವು. ಆ ಕಾಲದ ಮನುಷ್ಯರು ಪ್ರಬಲವಾದ ತಮ್ಮ ಜ್ಞಾನಶಕ್ತಿಯನ್ನು ದುರ್ವಿನಿಯೋಗ ಪಡಿಸುತ್ತಿದ್ದರು. ಅಂತಹ ಪ್ರಾಬಲ್ಯವನ್ನು ನಿವಾರಿಸುವುದು ಭಗವಂತನಿಂದಲ್ಲದೆ ಅನ್ಯರಿಂದ ಸಾಧ್ಯವಿರಲಿಲ್ಲ. ಅದುದರಿಂದಲೇ ಮಹಾವಿಷ್ಣುವಿನ ಅವತಾರಕ್ಕೆ ಕಾರಣವಾಯಿತು. ಮೃಗಾಕಾರದಿಂದ ತನಗೆ ವಿರೋಧಿಗಳಾಗಿ ಬಂದವರನ್ನು ಮಗುವು ಕೊಂದಿತೆಂದು ನಾವು ಕೇಳುವೆವು. ಇವರ ಅಭಿಪ್ರಾಯವೇನು. ಶತ್ರುಗಳಿಗೆ ಅಂತಹ ಆಕಾರಗಳನ್ನು ಧರಿಸುವ ಸಾಮರ್ಥ್ಯವಿತ್ತೆಂಬುದನ್ನಾಗಲಿ, ಇಲ್ಲವೆ ಇದೊಂದು ಶುದ್ಧ ಗೂಢತತ್ವವೆಂಬುದನ್ನಾಗಲಿ ನಾವು ಒಪ್ಪಿಕೊಳ್ಳಲೇಬೇಕು.

ಲೋಕೋದ್ಧಾರಕರ ಚರಿತ್ರೆಗಳಲ್ಲಿ ಗೂಢಾರ್ಥವಾವುದು ಯಥಾರ್ಥವಾವುದು ಎಂಬುದನ್ನು ನಿಶ್ಚೈಸುವದು ಸುಲಭಸಾಧ್ಯವಲ್ಲ. ಆದರೆ ಉಭಯಾರ್ಥಗಳೂ ಸಾರ್ಥಕವಾಗುವಂತೆ ವಿಧಿಗೆ ಅನುಸಾರವಾಗಿರುವುದೆ ಇಂತಹ ವಿಷಯಗಳ ಮೂಲಸ್ಥಲ್ಲಿರುವ ಅತ್ಯರ್ಥಕರವಾದ ಯಥಾರ್ಥವಾಗಿದೆ. ಒಳ್ಳೆಯದು! ವಿಧಿಯ ವಿಷಯವಾಗಿ ನಾವೇನು ಬಲ್ಲೆವು? ನಮ್ಮ ಸ್ಥಿತಿಗೂ ನಮ್ಮ ಮನೋಭಿವೃದ್ಧಿಗೂ ಸೃಷ್ಟಿಕ್ರಮದಲ್ಲಿ ನಮ್ಮ ಸಂಕೋಚ ಪರಿವೃತ್ತಿಗೂ ಅನ್ವಯಿಸತಕ್ಕ ಅಲ್ಪಭಾಗವನ್ನು ಮಾತ್ರ ನಾವು ತಿಳಿದಿರುವೆವು.

ವಿಧಿಗಳು ನಮ್ಮ ಇಚ್ಛೆಗೆ ಬಂಧನಗಳಾಗಿರುವವು. ಆದರೂ ಸಾರ್ವಕಾಲಿಕ ನಿರ್ಬಂಧಪ್ರಮಾಣಗಳಲ್ಲ. ಅನವಶ್ಯಕವಾದ ವಿಧಿಗಳು ಅದೃಶ್ಯವಾಗುತ್ತವೆ. ಅ ವುಗಳ ಸ್ಥಾನದಲ್ಲಿ ಬೇರೆ ನಿಬಂಧನೆಗಳು ನೆಲೆಗೊಳ್ಳುವವು. ಸಾಮಾನ್ಯ ಕರ್ತೃಗ ಳು ತಮ್ಮ ಅವಶ್ಯಕತೆಗೆ ಸಮನಾದ ಸಾಮಾನ್ಯ ನಿಬಂಧನೆಗಳನ್ನು ಮಾಡಿಕೊಳ್ಳು ವರು. ಈ ಮಿತಪರಿವರ್ತನೆಯ ನಿಬಂಧನೆಯು ಅನಾದಿಯ ಮುಖಾ ವಿಧಿಗಳನ್ನು ಅನುಕೂಲಿಸಿರುವುದು. ಆದರೆ ಮನುಷ್ಯರು ಪ್ರವರ್ಧಮಾನರಾಗುತ್ತಾ ಬಂದಹಾ ಗೂ ತಮಗೆ ತಾವೇ ನಿಬಂಧನೆಗಳಾಗುವರು. ಏಕೆಂದರೆ ಜ್ಞಾನವೂ ಪವಿತ್ರತೆ ಯೂ ವಿವೇಚನೆಯೂ ಅಭಿವೃದ್ಧಿಯಾದ ಹಾಗೂ ಸಮಸ್ತ ವಿಧಿಯ ಆದಿಕಾರಣನಾ ದ ಪರಮಾತ್ಮನ ಹೃದಯ ಸಾಮೀಪ್ಯವನ್ನೈದಿ ಜ್ಞಾನದೃಷ್ಟಿಯಿಂದ ಪರೀಕ್ಷಿಸಿ ಸ ತ್ಯಪ್ರವರ್ತಕರಾಗಿ ತಮ್ಮನ್ನು ತಾವೇ ನಂಬಿ ಸುರಕ್ಷಿತವಾಗಿ ನಡೆಯಬಹುದು.

ಅವತಾರ ಪುರುಷರ ಮತ್ತು ಮಹರ್ಷಿಗಳ ಕೆಲವು ಚರಿತ್ರೆಗಳು ದುರ್ನೀತಿ ಪ್ರದಗಳೆಂದು ದುರಾಗ್ರಹದಿಂದ ದೂಷಿಸುವುದನ್ನು ದಿನಂಪ್ರತಿಯೂ ನಾವು ಕೇಳುತ್ತಿ ರುವೆವು. ಗುರುಮೂಲವನ್ನು ಎತ್ತೆಣಿಸುವುದು ನಮ್ಮ ಕರ್ತವ್ಯವಲ್ಲ. ಅಂತಹ ಮಹಾನುಭಾವರಂತೆ ನಟಿಸುವುದು ನಮಗೆ ಯೋಗ್ಯವಲ್ಲ. ನಾವು ಅವರ ಸರಿಸ ಮಾನಸ್ಕಂದರಲ್ಲ. ಪೂರ್ವಪದ್ಧತಿಗಳು ಮಲಿನ ವಾಗುತ್ತಿರುವ ಸ್ಥಿತಿಯನ್ನು ಈ ಗ ತಾನೇ ಅತಿಕ್ರಮಿಸುತ್ತಿರುವೆವು. ನೀಚ ಜೀವನ ಸ್ಥಿತಿಗೆ ಅನುಸಾರವಾದ ಅ ಪೇಕ್ಷೆಯಿಂದ ಕೆಲವು ಪದ್ಧತಿಗಳು ಉಂಟಾಗಿರುವವು. ಅಂತಹ ಪದ್ಧತಿಯಿಂದ ನಾವು ಕ್ರಮೇಣವಾಗಿ ನಿವೃತ್ತಿಯನ್ನು ಹೊಂದುತ್ತಿರುವೆವು. ಇಡೀ ಪುರುಷಾವಸ್ಥೆ ಯ ಉದ್ದೇಶವನ್ನು ಇಂತಹ ನಮ್ಮ ಪದ್ಧತಿಗಳಿಗೆ ಹೋಲಿಸಿ ನೋಡಲು ಯತ್ನಿಸು ವ ನಾವು ಶುದ್ಧ ಮಂದಮತಿಗಳೇ ಸರಿ. ಈ ರೀತಿಯಾದ ಅಭ್ಯಾಸ ಕ್ರಮದಿಂದ ಒಂದೊಂದು ಇಂದ್ರಿಯವನ್ನೇ ಇತರ ಇಂದ್ರಿಯಗಳಿಗಿಂತಲೂ ಸೂಕ್ಷ್ಮಗೊಳಿಸಿರು ತ್ತೇವೆ. ಎಲ್ಲಾ ಸ್ಥಿತಿಯ ಜನಗಳಲ್ಲಿಯೂ ಇದೇ ರೀತಿ ಇರುತ್ತೆಂತಲೂ ಇದೇ ಸಾ ಮಾನ್ಯಪ್ರಮಾಣವೆಂತಲೂ ಊಹಿಸುತ್ತೇನೆ. ಆದರೆ ಇದು ಹೀಗಿರುವುದಿಲ್ಲ. ವಶೀ ಕರಣ ಸಾಧನ ಶಕ್ತಿಯಿಂದ ಯಾವ ಇಂದ್ರಿಯವನ್ನಾದರೂ ಬೇರೊಂದು ಇಂದ್ರಿಯ ಕ್ಕಿಂತಲೂ ಹೆಚ್ಚು ಸೂಕ್ಷ್ಮಸ್ಥಿತಿಗೆ ತರಬಹುದು. ಇಂದ್ರಿಯವೆಂಬುದು ಇಡೀ ಜೀ ವಶಕ್ತಿಯ ಒಂದುನಾಪನಪಾತ್ರವಾಗಿದೆ. ಇಂತಹ ಶಕ್ತಿಯು ಬೇರೆ ಕಡೆಯಲ್ಲಿ ಪ ರಿಣಮಿಸಿದರೆ ಈ ಇಂದ್ರಿಯವು ಸ್ತಬ್ಧವಾಗುವುದು. ಎಲ್ಲಾ ಇಂದ್ರಿಯಗಳಲ್ಲಿಯೂ ಏಕರೀತಿಯಾಗಿ ಪರಿಣಮಿಸಿದರೆ ಇಡೀ ಶರೀರದ ವ್ಯಾಪಾರವು ಹೊಂದಿಕೆಯಾಗು ತ್ತೆ. ಒಂದರಲ್ಲಿಯೂ ಸ್ಥಾಪಿಸದಂತೆ ನಿರ್ಬಂಧಿಸಿದರೆ ಇಂದ್ರಿಯಗಳೆಲ್ಲವೂ ಶರೀರ ಯಂತ್ರದಲ್ಲಿರುವ ನಿರ್ಜೀವವಸ್ತುಗಳಂತೆ ಕಂಡು ಬರುವವು. ಮೂಲಾಧಾರ ಸತ್ವ

ವನ್ನು ನಿಲ್ಲಿಸಿದಾಗ ಜಲಸಮೆ ಸ್ಥಬ್ಧವಾಗಿ ನಿಂತಿರುವ ಇತರ ಯಂತ್ರಗಳಂತೆ ತೋ ರುವುದು. ಒಳ್ಳೆಯದು! ಋಷಿಗೂ ಸಾಮಾನ್ಯ ಮನುಷ್ಯನಿಗೂ ವ್ಯತ್ಯಾಸವೇನು? ಋಷಿಯೂ ವಿಧಿಬದ್ಧನಲ್ಲ. ಪದ್ಧತಿಯನ್ನತಿಕ್ರಮಿಸುವ ಅವಸ್ಥೆಯನ್ನು ದಾಟಿ ತನ್ನ ಶರೀರವನ್ನು ಕೈವಶಮಾಡಿ ಕೊಂಡಿರುವನು. ನ್ಯಾಯ ತೋರಿದಂತೆ ಜೀವಸತ್ವವ ನ್ನು ಒಂದೊಂದು ಇಂದ್ರಿಯ ದ್ವಾರಾ ನಡೆಸುತ್ತಿರುವನು. ಈ ಇಂದ್ರಿಯದ ಮು ಖ್ಯೋದ್ದೇಶವು ಸಂಪೂರ್ಣವಾಗುವವರೆಗೂ ತದೇಕಚಿತ್ತನಾಗಿರುವನು. ಆ ಮೇಲೆ ಬಿಕ್ಕಸ್ವಾತಂತ್ರ್ಯವುಂಟಾಗುವದು. ಜ್ಞಾನಿಯು ಯಾವಾಗಲೂ ಇಡೀ ಪ್ರಪಂಚದ ಸುಖಕ್ಕೆ ಕೆಲಸ ಮಾಡುವನಲ್ಲದೆ ತನ್ನ ಇಚ್ಛಾ ಪೂರ್ತಿಗೆ ಮಾತ್ರವಲ್ಲ. ವಿಧಿಯ ನ್ನೆ ಆಳುವ ಸಮರ್ಥನಾದುದರಿಂದ ವಿಧಿ ಬದ್ಧನಲ್ಲ. ಇಷ್ಟು ಹೇಳಿದನಂತರ ಶ್ರೀ ಕೃಷ್ಣ ಚರಿತ್ರೆಯ ಕೆಲವಂಶಗಳ ರೀತಿಯೇ ಪ್ರತ್ಯೇಕವಾಗಿ ತೋರ ಬಹುದು.

ಸಾಕು ತಂದೆಯ ದನಕರುಗಳನ್ನು ಗುಡ್ಡ ಬೆಟ್ಟಗಳಲ್ಲಿ ಕಾಯುತ್ತಿರುವಾ ಗ ತನ್ನ ಸಹವಾಸಿಗಳಿಗೆಲ್ಲಾ ಶ್ರೀಕೃಷ್ಣನೇ ನಾಯಕನಾದನು. ಅವರ ಇಡೀತಂ ಡದಲ್ಲಿ ಶ್ರೀಕೃಷ್ಣನಷ್ಟು ಧೈರ್ಯಶಾಲಿಗಳೂ ಪ್ರೀತ್ಯಾಸ್ಪದರೂ ಸಂತೋಷಚಿತ್ತರೂ ಸಂರಕ್ಷಣಾನಿಪುಣರೂ ಬೇರೆ ಯಾರೂ ಇರಲಿಲ್ಲ. ಆದುದರಿಂದ ಇವನಂತೆಯೇ ನಿಯಮಿಸಲ್ಪಟ್ಟು ಇತರ ಗೋಪಾಲ ಬಾಲಕರು ಈತನಲ್ಲಿ ತುಂಬಾ ವಿಶ್ವಾಸಿಗಳಾದ ರು. ಪ್ರಾಣಿ ಮಾತ್ರಗಳುಕೂಡ ಇವನನ್ನು ಪ್ರೀತಿಸಿ ಇವನಾಜ್ಞೆಗೆ ಒಳಪಟ್ಟಿದ್ದವು. ಹೀಗೆ ಗೋಪಾಲರ ಕೆಲಸವು ಬಹಳ ಸುಲಭವಾಗಿದ್ದು ವಿನೋದಗಳಿಗೆ ತುಂಬಾ ವಿ ರಾಮ ಸಿಕ್ಕುತ್ತಿತ್ತು. ಬಾಲಕೃಷ್ಣನು ಗೊಲ್ಲಸತಿಯರ ಮನೆಗಳಿಗೆಹೊಕ್ಕು ಹಾ ಲು ಮೊಸರನ್ನು ಕದ್ದೋದಿ ಗೋಪಿನಿಯರಿಗೆ ಅನೇಕ ತುಂಟತನದ ತಂಟೆಗಳನ್ನು ಮಾಡುತ್ತಿದ್ದನೆಂತಲೂ ಇತರ ಮಕ್ಕಳಂತೆ ತಾಯಿತಂದೆಗಳಿಂದ ಬೈಗಳನ್ನೂ ಪೆ ಟ್ಟನ್ನೂ ತಿನ್ನುತಿದ್ದನೆಂತಲೂ ಉಕ್ತವಾಗಿದೆ. ಆದರೆ ಸ್ವಲ್ಪ ಕಣ್ಮರೆಯನ್ನಾದರೂ ಸಹಿಸದಂತೆ ಈತನು ಸರ್ವರಿಗೂ ಪ್ರೀತಿ ಪಾತ್ರನಾಗಿದ್ದನು. ದೇವತೆಗಳಿಗೆ ಇವ ನಲ್ಲಿ ಮತ್ಸರ ಹುಟ್ಟಿತು. ಇವನ ದೇವತನವನ್ನು ಪರೀಕ್ಷಿಸಲು ಅವರು ಪ್ರಯತ್ನಿ ಸಿದರು. ಬ್ರಹ್ಮನಿಂದ ಅಪಹೃತವಾದ ಗೋಸಂಕುಲವನ್ನು ಉಪನಿರ್ಮಾಣ ಮಾ ಡಿ ಶ್ರೀಕೃಷ್ಣನು ಅತನ ಗರ್ವಾಪಹಾರವನ್ನು ಮಾಡಿದನೆಂದೂ, ಗೋಕುಲವಾಸಿಗ ಳನ್ನು ಇಂದ್ರನ ಅಖಂಡ ವೃಷ್ಟಿಯಿಂದ ಸಂರಕ್ಷಿಸುವದಕ್ಕೋಸ್ಕರ ಗೋವರ್ಧನ ಪರ್ವತವನ್ನು ಕಿರಿ ಬೆರಳ ತುದಿಯಿಂದ ಏಳು ದಿನ ಪರ್ಯಂತರ ಎತ್ತಿಹಿಡಿದನೆಂದೂ ನಾವು ಕೇಳುವೆವು. ಈ ಪ್ರಮೇಯಗಳನ್ನು ಹೆಚ್ಚು ಚರ್ಚೆ ಮಾಡುವುದು ಉಪ ಯೋಗವಿಲ್ಲ. ಗೂಢಾರ್ಥವೇ ಆಗಲಿ ಯಥಾರ್ಥವೇ ಆಗಲಿ ಸಾಮಾನ್ಯ ಜ್ಞಾನ ಶ ಕ್ತಿಯ ಪರಿಶೀಲನೆಯಿಂದಕೂಡ ನಾವು ಇವುಗಳನ್ನು ನಿರ್ಧರಿಸುವ ಸ್ಥಿತಿಯಲ್ಲಿಲ್ಲ.

ಆತನ ಪಕ್ಷವನ್ನು ಪ್ರೀತಿ ಪೂರ್ವಕವಾಗಿ ಅನುಸರಿಸಲುಳ್ಳ ಅನೇಕರಿಗೆ ಅ

ನುಮಾನಕರವಾಗಿಯೂ ಆತನ ವಿರೋಧಿಗಳಿಗೆ ಕೈಕೋರಡೆಯಂತೆ ಉಪಯುಕ್ತವಾಗಿಯೂ ಇರುವ ಶ್ರೀಕೃಷ್ಣ ಚರಿತ್ರೆಯ ಒಂದು ಅಂಶವನ್ನು ಈಗ ನಾವು ಪರ್ಯಾಲೋಚಿಸುವ. ಇದಕ್ಕೆ ರಾಸಲೀಲೆಯೆಂಬ ಮುದ್ರಾಂಕಿತವು ಕೊಡಲ್ಪಟ್ಟಿದೆ. ಇದರ ಅಪಾರ್ಥದ ಶುದ್ಧ ಸಾರಾಂಶವು ಈ ರೀತಿಯಾಗಿದೆ. ಬಾಲಕರೆಲ್ಲರೂ ಆತನೇ ತಮ್ಮ ನಾಥನೆಂದು ಪ್ರೀತಿಸುತ್ತಿದ್ದರು. ಬಾಲಕಿಯರಾದರೊ ಆತನೇ ತಮ್ಮ ಭಾವಿ ಪತಿಯೆಂದು ಭಾವಿಸುತ್ತ ಆತನೇ ತಮ್ಮೆಲ್ಲರ ಸಾಮಾನ್ಯ ಪತಿಯಾಗ ಬೇಕೆಂದು ಜಯಪ್ರದೆಯಾದ ಪಾರ್ವತಿಯನ್ನು ಪ್ರಾರ್ಥಿಸಿಕೊಂಡರು. ಒಂದಾನೊಂದು ದಿನ ತಮ್ಮ ಸೀರೆಗಳನ್ನು ತೀರದಲ್ಲಿಟ್ಟು ಯಮುನೆಯ ವಾರಿಯಲ್ಲಿ ಸ್ನಾನಕ್ಕಿಳಿದರು. ಪೋರನಾದ ಶ್ರೀಕೃಷ್ಣನು ಆ ಬಳಿಗೆ ಜೋರತನದಿಂದ ಸಾರಿ ಬಂದು ನಾರಿಯರ ಸೀರೆಗಳನ್ನು ಅಪಹಾರ ಮಾಡಿ ಭೂರುಹವನ್ನೇರಿ ಕುಳಿತನು. ಬಳಿಕ ಗೋಪಿನಿಯರು ಈ ವೃತ್ತಾಂತವನ್ನು ತಿಳಿದು ವಾರಿಯನ್ನುಳಿದು ತೀರಕ್ಕೆ ಬರಲು ನಾಚಿಕೆಗೊಂಡು ತಮ್ಮ ವಸ್ತ್ರಗಳನ್ನು ದಯಪಾಲಿಸಬೇಕೆಂದು ದೈನ್ಯಭಾವದಿಂದ ಬೇಡಿಕೊಂಡರು. ಆದರೆ ಅದಿನ್ಯಾರ್ಥಕನು ಅವರ ಅಭಿಲಾಶೆಯನ್ನು ಸಲ್ಲಿಸಲಿಲ್ಲ. ನಿರ್ವಾಣರಾಗಿ ನೀರಿನಿಂದೆದ್ದು ತೀರಕ್ಕೆ ಬರುವಂತೆ ನಿರ್ಬಂಧಿಸಿದನು. 5000 ವರ್ಷಗಳನಂತರ ಪರಮ ಪವಿತ್ರರೆಂದು ಬಡಿವಾರ ಮಾಡುವ ಪಾಶ್ಚಿಮಾತ್ಯರಿಗೆ ದುರ್ನೀತಿ ಪ್ರದವಾಗಿ ತೋರುವ ಶುದ್ಧ ಅಭಾಸದ ಕಥೆಯೆಂದರೆ ಇದೇ ಆಗಿರುತ್ತದೆ. ಆದರೆ ಚನ್ನಾಗಿ ಯೋಚಿಸಿ ನೋಡಿ ಈ ಸಂಗತಿಯಿಂದ ನಮಗೇನು ವ್ಯಕ್ತವಾಗುತ್ತೆಂದು ಪರೀಕ್ಷಿಸುವ. ಅನ್ಯವಸಂತೆ ಹೇಳುವಂತೆ ಅರು ವರ್ಷದ ಶಿಶುವಿನ ಆಕೃತಿಯಲ್ಲಿ ಸಾಕ್ಷಾತ್ಪರಮಾತ್ಮನೇ ಪ್ರತ್ಯಕ್ಷನಾಗಿದ್ದನೆಂದು ಪ್ರಥಮತಃ ನಾವು ನೆನಪಿಟ್ಟು ಕೊಳ್ಳ ಬೇಕು. ಇಂತಹ ದೇವರಿಗೆ ಗೋಚರವಾಗದ ವಸ್ತುವೇ ಇಲ್ಲ. ಈತನು ಸರ್ವರ ಹೃದಯಾಂತರಂಗವನ್ನು ಶೋಧಿಸ ಬಲ್ಲನು. ತಾನೇ ಸರ್ವಾಂತರ್ಗತನಾಗಿರುವನು. ಅದುಕಾರಿಂದ (ವಯಸ್ಸಿನ ಸಂಗತಿಯಂತಿರಲಿ) ಈತನು ಯಾವ ವಿಧದ ಇಚ್ಛಾತುರನಾಗಿ ಪ್ರವರ್ತಿಸಲಿಕ್ಕೂ ಕಾರಣವಿಲ್ಲ. ಗೋಪಿನಿಯರೆಂದರೆ ಪರಮ ಜ್ಞಾನಿಗಳಾದ ಮಹರ್ಷಿಗಳೆಂದು ತಿಳಿಯ ಬೇಕು. ಇವರು ಕೇವಲ ಸಂಭೋಗ ಸುಖಾಪೇಕ್ಷೆಯನ್ನೂ ಜೈಸಿ ಚಿದಾನಂದ ಮೂರ್ತಿಯಲ್ಲಿ ಪರಮ ಪ್ರೀತಿಪೂರಿತರಾಗಿರುವರು. ಪರಮಾತ್ಮನ ಸಂಕಲ್ಪವು ನೆರವೇರುವಂತೆ ಸಹಾಯಮಾಡಲೋಸುಗ ಅವತರಿಸಿ ಅವನನ್ನು ಪರಿವರ್ತಿಸಿರುವರು. ಈ ಮುಖ್ಯವಿಷಯದ ಮೂಲತತ್ವವನ್ನು ತಿಳಿದು ಕೊಂಡನಂತರ ಮುಂದಿನ ಸಂದರ್ಭಗಳಲ್ಲಿ ಯಾವ ವಿಸ್ತಾರ ವರ್ಣನೆಗಳು ಬಂದರೂ ನಮಗೇನು ಬಾಧಕವು ? ಈ ಮಹಾವತಾರವನ್ನು ನಂಬದವರ ಮನಸ್ಸಿನಲ್ಲಿ ಅಪರಿಶುದ್ಧವಾದ ಆಲೋಚನೆಯು ಒಂದು ಕ್ಷಣ ಮಾತ್ರವೂ ಹುಟ್ಟಿಲಿಕ್ಕಿಲ್ಲ.

ಪ್ರಥಮತಃ ಈ ಅವತಾರ ವಿಷಯವನ್ನು ಯಥಾರ್ಥವೆಂದಿಡಿಸುವದಾದರೆ, ಈ ವಿದ್ಯಾರ್ಥಿಗಳು ತನ್ನ ಶಿಷ್ಯರ ಸದ್ಬೋಧನೆಗೆ ಇಂತಹ ಮಾರ್ಗವನ್ನೇ ಹಿಡಿಯಲಿ ಕ್ಕಾಗಿ ಅನುಸರಿಸಿದನೆಂದು ಆರ್ಷಕಲ್ಪನೆ ಮಾಡುವುದು ನ್ಯಾಯ ಸಮ್ಮತವಾಗಿದೆ. ಇದರಿಂದಲೇ ಮಹಿಮರಾದವರು ಅವರು ತಕ್ಕಾಲದ ನಿಬಂಧನೆಗಳನ್ನು ಅನುಸರಿಸಲೇ ಬೇಕಿತ್ತು. ಬಾಲ್ಯದಿಂದ ಜೊಗಳ ಮಂಗಳಾದಿಯನ್ನು ವಿಧಿ ನಿರ್ವಾಹದಿಂದ ನಿರ್ವಹಿಸಲು ಬಾರದಿತ್ತು. ಅಪವ ಇಪ್ಪತ್ತೈದಿಂದು ಅರ್ಥವನ್ನು ಅನುಸರಿಸುವದಾದರೆ— ಜೀವನ ದೃಷ್ಟಿಗೆ ಗೋಚರಿಸದ ಪದಾರ್ಥವಿಲ್ಲ, ಎಂಬ ನೀತಿಯನ್ನು ಅವರು ಕಲಿಯುವಂತೆ ತನ್ನವರಿಗೆ ನಿರ್ವಾಹದಿಂದ ಮೇಲಕ್ಕೆ ಬರಬೇಕೆಂದು ದಿನ್ಯೋಪದೇಶವಾದ ವರವಾಕ್ಯವು ಅವರನ್ನು ಏಕೇನರ್ಬಂಧ ಪಡಿಸ ಕೂಡದು ? ಹಾಗಲ್ಲದೆ ಈ ಕಥೆಯ ಗೂಢಾರ್ಥವನ್ನು ಗ್ರಹಿಸುವದಾದರೆ ಆತ್ಮವು ತನ್ನ ಗುಪ್ತನಾದ ಅಜ್ಞಾನವನ್ನು ತ್ಯಜಿಸಿ ನಿಜ ಸ್ವರೂಪದಿಂದ ದೇವರ ಸಮ್ಮುಖವನ್ನು ಸಾರಬೇಕೆಂದು ಇತರ ಸತ್ಕಥೆಗಳು ಸಹ ನಮಗೆ ಬೋಧಿಸುವುದಿಲ್ಲವೆ ? ಆತ್ಮಕ್ಕೆ ಇದೊಂದು ವಿಧಿ ದೋಷನಿವೆಯೆಂದು ನಾವು ಭಾವಿಸುವದಾದರೆ ಆತ್ಮವು ತನ್ನ ಬೆಡಗು ಮುಸುಕಿನ ಮಾನ ಮರ್ಯಾದೆ ಶ್ವೇತಜ ಭೂಷಣ ಮುಂತಾದವುಗಳನ್ನು ಬಿಟ್ಟು, ಮುಕ್ತಿಪುರಿಯನ್ನು ಬೇಡದೆ ಯಥಾ ವಿಹಿತವನ್ನು ವಿಧಿ ನಟಿಸದೆ ಪರಮಾತ್ಮನ ಸಮ್ಮುಖದಲ್ಲಿ ಸ್ವಭಾವ ಸಿದ್ಧವಾಗಿ ನಿಲ್ಲಬೇಕೆಂಬುದು ಸಹಜವಲ್ಲವೆ ?

ಜಿಯೋ ಶಾಸ್ತ್ರ ಸಂಗ್ರಹದಲ್ಲಿ ಅನೇಕ ಪುರಾಣ ಕಥೆಗಳಿವೆ. ಇವುಗಳೆಲ್ಲಾ ಪಾಶ್ಚಿಮಾತ್ಯರಿಗೆ ಆಶ್ಚರ್ಯಕರವಾದ ಬಾಹ್ಯಾರ್ಥ ಸೂಚಕಗಳಾದರೂ ಕೇವಲ ಗೂಢ ತಕ್ಕಾರ್ಥಗರ್ಭಿತಗಳಾಗಿವೆ. ಆದರೆ ಕ್ರೈಸ್ತಮತ ಗ್ರಂಥಗಳಲ್ಲಿಯೂ ಇಂತಹ ಗೂಢ ತಕ್ಕಾರ್ಥ ಗರ್ಭಿತವಾದ ಕಥೆಗಳಿವೆ ಯೆಂದು ಇತರ ಗ್ರಂಥಕರ್ತರಿಂದ ವ್ಯಕ್ತವಾಗುತ್ತಿದೆ. ಇಂತಹ ಬಾಹ್ಯಾರ್ಥ ಮಾತ್ರದಿಂದ ಅವುಗಳು ಸಹಾ ಅಭಾಸವೆಂದೇ ತೋರುವವು. ಗೋಪಿನಿಯರು ಪ್ರಾರ್ಥಿಸಿದಂತೆ ತಾನೇ ಅವರೆಲ್ಲರ ಸಾಮಾನ್ಯ ಪತಿಯಾಗುವೆನೆಂದು ಶ್ರೀಕೃಷ್ಣ ವಾಗ್ದಾನ ಮಾಡಿರುವನು. ರಾಸ ಕ್ರೀಡಾನಿಶೋದಯದಲ್ಲಿ ಕರೆದ ಶಬ್ದ ಅಭಾಸದ ಮುದ್ದೆಯೆಂದು ಪರಿಣಮಿಸಿದೆ. ಭಗವದ್ಗೀತೆಯಲ್ಲಿ ವರ್ಣಿಸುವಂತೆ ಸಮಸ್ತ ಲೋಕಕ್ಕೆ ತಂದೆಯೂ ತಾಯಿಯೂ ಗಂಡನೂ ವಿಧಿಯೂ ಆಶ್ರಯವೂ ಆದ ಪರಮಾತ್ಮನು ಸರ್ವರ ಸಾಮಾನ್ಯ ಪತಿಯಾಗಿ ಏಕರ ಕೂಡುವ ? ಪರಮಾತ್ಮನನ್ನು ಸರ್ವರ ತಂಬೆ ಯೆನ್ನ ಬಹುದಂತೆ! ಹಾಗೆಯೆ ಸಾಮಾನ್ಯ ಪತಿಯೆನ್ನುವದು ಪಾತ್ರ ಅಭಾಸವಾಗುವದು ಹೇಗೆ ? ನಮ್ಮ ಚಿತ್ತವೃತ್ತಿ ಇದನ್ನೇ ಅವಸೇ ಆಶ್ರಯಿಸಿದೆ? ಪ್ರೀತಿ ಎಂಬುದು ಫಲಿತಾಂಶದಲ್ಲಿ ಒಂದೇ ವಿ ... ಇತರ ಸಂದರ್ಭ ... ಕ್ಯವಾಗಿದೆ. ಸ್ವಯಂಚಿತ ವಸ್ತು ಸ್ವ ದೂರಗಾ. ... ಪ್ರೀತಿ ಸಾರಾಂಶದ ಪ್ರಭೇದ ಮಾತ್ರಗಳಾಗಿವೆ ಸ ವಿಧ್ಯೆ

ಮಾನವು ನಮ್ಮ ಅನುಭವಕ್ಕೆ ಬರ ಬೇಕು. ಜೀವವೇ ಮುಖ್ಯವಲ್ಲವೆ ಆಕಾರವು ಮುಖ್ಯವಲ್ಲವೆಂಬ ಧೃಡವಿರ ಬೇಕು. ಹಾಗಾದರೆ ನಾವು ಪ್ರೀತಿಸುವ ವಸ್ತುವಿಗೆ ಯಾವ ಹೆಸರಿಟ್ಟರೇನು ಬಾಧಕವು ? ಪ್ರೀತಿ ಸಾರಾಂಶವೇ ದೇವರು. ಆದುದರಿಂದ ಪರಮಾತ್ಮನು ಆತುರ ಪಡುವ ಆತ್ಮವು ಯೋಚಿಸಿದಂತೆಯೇ ಇರುವನು.

ಶ್ರೀಕೃಷ್ಣನು ಗೋಪಿಯರೊಡನೆ ವರ್ತುಲಾಕಾರವಾಗಿ ನರ್ತಿಸಿದಾಗ ಪ್ರತಿ ಗೋಪಿನಿಯೂ ಪಾಣಿಗ್ರಹಣಮಾಡುವಂತೆ ತನ್ನ ಆಕೃತಿಯನ್ನು ದ್ವಿಪ್ರತಿಗೊಳಿಸಿದ ನೆಂಬುದು ತಪ್ಪುತಿಳುವಳಿಕೆಯನ್ನುಂಟು ಮಾಡುವ ಇನ್ನೊಂದು ವಿಷಯವಾಗಿದೆ. ಆ ಕಾಲದಲ್ಲಿ ಮನುಷ್ಯನ ಸ್ವಸಾಮರ್ಥ್ಯವು ಜನಗಳಿಗೆ ಗೊತ್ತಿತ್ತು. ಈಗ ಇಂದ್ರಜಾಲಗಳೆಂದು ತೋರುವ ವಿಷಯಗಳನ್ನು ಆಗಿನವರು ಸ್ವಭಾವಿಕವಾಗಿ ಕಾಣುತ್ತಿದ್ದರು. ಶ್ರೀಕೃಷ್ಣನೂ ಅತನ ಅವಿಚ್ಛಿನ್ನ ಭಕ್ತರಾದ ಋಷಿಗಳೂ ಈಗಿನ ಅನುಭವ ಪ್ರಕಾರ ಜನಗಳು ಯೋಚಿಸಿ ನೋಡುವಂತೆ ವಿಮತಚಿತ್ತವೃತ್ತಿಯುಳ್ಳವರಾಗಿರಲಿಲ್ಲ. ನರ್ತನವೆಂಬುದು ಸ್ವಭಾವಿಕವಾಗಿ ದೂಷ್ಯವಲ್ಲ. ಸ್ವಭಾವ ಸೌಂದರ್ಯವನ್ನು ಚಿತ್ರಿಸುವದಕ್ಕೆ ಅನೇಕ ಮಾರ್ಗಗಳಿವೆ. ಇವುಗಳಲ್ಲಿ ಮನೋಹರವಾದ ಅಂಗವಿನ್ಯಾಸವು ಒಂದಾಸೊಂದಾಗಿದೆ. ಈ ದಿವ್ಯ ನಾಟ್ಯವು ನಮ್ಮ ಈಗಿನ ನಡವಳಿತೆಯಲ್ಲಿ ರೂಢಿಯಲ್ಲಿಲ್ಲ. ಆದರೆ ಇಂತಹ ಪರಿಶುದ್ಧನಾಟ್ಯ ಸೌಂದರ್ಯದ ಅನೇಕ ವರ್ಣನೆಗಳು ಪ್ರಾಚೀನ ಗ್ರಂಥಗಳಿಂದ ಕಂಡು ಬರುತ್ತಿವೆ. ಶ್ರೀಕೃಷ್ಣನ ಪ್ರಿಯ ಶಿಷ್ಯನಾದ ಅರ್ಜುನನು ದೇವ ಲೋಕಕ್ಕೆ ಹೋಗಿ ಭರತ ಶಾಸ್ತ್ರವನ್ನು ಕಲಿತನೆಂದು ಮಹಾ ಭಾರತದಲ್ಲಿ ಹೇಳಿದೆ. ತಮ್ಮ ಅತ್ಯಂತ ಪ್ರೀತಿ ಪಾತ್ರನನ್ನು ಕುರಿತು ಗೋಪಿನಿಯರು ಆಡಿ ತೋರಿದ ಸರಸಸಲ್ಲಾಪಗಳಿಗೆ ಭಾಷಾಂತಕಾರರು ದುರ್ನೀತಿಪ್ರದಗಳೆಂಬ ಅಪಾರ್ಥವನ್ನು ಕಲ್ಪಿಸಿ ವಿಕಾರಗೊಳಿಸಿರುವರು. ಸ್ವರ್ಗಲೋಕದವರ ಕೈವಲ್ಯ ಪ್ರೀತಿ ವಾತ್ಸಲ್ಯಕ್ಕೂ ಮರ್ತ್ಯಲೋಕದವರ ಅತ್ಯಂತ ಭಕ್ತಿ ಭಾವಕ್ಕೂ ಪರಸ್ಪರ ವ್ಯತ್ಯಾಸವಿದೆ. ಅಂತಹ ದೇವಯೋಗ್ಯವಾದ ಪ್ರೀತಿಸಾರಾಂಶವನ್ನು ಒಲ್ಲ ಜ್ಞಾನಿಗಳಿಗೆ ಈ ವಿದ್ಯಮಾನವು ವ್ಯಕ್ತವಾಗಿರುವುದು. ಸ್ವರ್ಗದಲ್ಲಿರುವ ಭಗವಂತನನ್ನು ಭಾವಿಸುವಾಗ ಅಥವ ಪರಮಾತ್ಮನಲ್ಲಿ ನಮ್ಮ ಹೃದಯಾಂತರಂಗವನ್ನು ಸಮರ್ಪಿಸುವಾಗ ಈ ಭೂಲೋಕ ಸಂಬಂಧವಾದ ಆ ಲೋಚನೆಗಳು ಅಡ್ಡ ಬರಲಾರವು. ದೇವರ ಪ್ರೀತಿಯು ನಮ್ಮ ಮೇಲೆ ಮಾತ್ರ ಆಗಬೇಕೆಂದು ನಾವು ಕೇಳುವುದಿಲ್ಲ. ತದೇಕ ಚಿತ್ತರಾಗಿ ಧ್ಯಾನಿಸುವ ಇತರರಿಗೂ ಅಂತಹ ಪ್ರೀತಿಯು ನಮ್ಮಂತೆಯೇ ದೊರೆಯ ಬೇಕು. ನಮ್ಮನ್ನು ಮು

ಸುಕುವ ಪ್ರೀತಿ ಪ್ರವಾಹವೆಂಬ ಪರಿಶುದ್ಧನಾದ ಆಶೀರ್ವಾದಕ್ಕೆ ಸರ್ವರೂ ಸಮ ಭಾಗಿಗಳಾಗಿರುವರೆಂಬುದು ನಮಗೆ ಸಮ್ಮತವಾಗಿದೆ. ಅಂತಹ ಪ್ರೀತಿಯ ಮೂಲಾಧಾರವು ಅಪಾರವಾಗಿಯೂ ಯಥೇಷ್ಟನಾಗಿಯೂ ಇದೆ ಯೆಂಬುದು ನಮಗೆ ಧೃಡವಾಗಿದೆ. ಹೀಗೆಯೇ ಲೋಕದಲ್ಲಿ ಸತ್ಪುತ್ರರೂ ಮಾತಾಪಿತೃಗಳೂ ಪರಸ್ಪರ ಪ್ರೀತಿಸುವರು, ಮಾತ್ಸರ್ಯವೂ ಅಪವಾದವೂ ಈ ಸಂಬಂಧವನ್ನು ಬಾಧಿಸುವದಿಲ್ಲ. ನಾವು ನಂಬಿ ಹಂಬಲಿಸುವ ದೇವರು ಮನುಷ್ಯಾಕೃತಿಯಿಂದ ಈಗ ಪ್ರತ್ಯಕ್ಷನಾಗುತ್ತಾನೆಂದು ಭಾವಿಸುವ. ಇದುವರೆಗೆ ಧ್ಯಾನಮಾತ್ರದಲ್ಲಿದ್ದ ಪ್ರೀತಿಭಾವವನ್ನು ಬಾಯಿ ಬಿಟ್ಟು ಕೊಂಡಾಡುತ್ತ ಭಕ್ತಿಭಾವದಿಂದ ಈತನ ಸಾಮೀಪ್ಯವನ್ನು ಸಾರುವುದಿಲ್ಲವೆ? ರೂಪಾಂತರವು ಭಕ್ತಿಯಲ್ಲಿ ವ್ಯತ್ಯಾಸವನ್ನುಂಟು ಮಾಡಲಾರದು. ಬಾಲಕ್ರೈಸ್ತನು ಈ ಹೊತ್ತು ನಮ್ಮಲ್ಲಿ ಜನಿಸಿ ರೂಪಾಂತರ ಋಷಿಗಳಾದ ಗೋಪಿನಿಯರಂತೆ ಈ ಸಂಗತಿಯು ನಮಗೆ ಗೊತ್ತಾದರೆ ಪ್ರೀತಿ ಸೂಚಕವಾದ ಸಂತೋಷ ವಚನವನ್ನು ತಡೆಯಲಿಕ್ಕಾಗಲಾರದು. ಒಳ್ಳೆಯದು! ಮುಂದೊಂದು ಕಾಲದಲ್ಲಿ ಆಂಗ್ಲ ಭಾಷೆಯು ವ್ಯುತಿಸಿ ಹೋಗುತ್ತೆಂದು ಭಾವಿಸುವ! ಅಂದಿನ ಭಾಷಾಂತರಕಾರರ ಅಪಾರ್ಥ ಗ್ರಹಿಕೆಗೆ ಇದೇ ಒಂದು ಆಧಾರ ಭೂತವಾಗಿ ಒದಗಬಹುದಲ್ಲವೆ?

ಇದು ವರೆಗೂ ವರ್ಣಿತನಾಗದ ಬಾಲ ಲೀಲೆಗಳಲ್ಲಿ ಅತ್ಯಂತ ಸುಂದರವಾದ ವರ್ಣನೆಯು ಶ್ರೀಕೃಷ್ಣನ ಬಾಲ್ಯಾವಸ್ಥೆಯ ಚರಿತ್ರೆಯಲ್ಲಿ ನಮಗೆ ಕಂಡು ಬರುತ್ತಿದೆ. ಈ ಚರಿತ್ರೆಯನ್ನು ಓದಿ ಮೋಹಿಸುವವರ ಹೃದಯವು ಪವಿತ್ರನಾದ ಸಂತೋಷ ಪೂರದಲ್ಲಿ ತೇಲಾಡುವುದು. ಇಂತಹ ಪವಿತ್ರಪೂರವನ್ನು ದೂಷಕರ ದುರ್ವಚನವು ಳಕ್ಕನೆ ಅಪವಿತ್ರಗೊಳಿಸಲಾರದು. 'ಹಸುಕೂಸಿನಂತೆ ಇದ್ದವನಾ ನಿನಗೆ ಸ್ವರ್ಗ ಪ್ರವೇಶಸಿಕ್ಕಲಾರದು' ಎಂಬ ಯೇಹೂಹನ ವಾಕ್ಯವು ಈ ಸಂದರ್ಭದಲ್ಲಿ ಸಂಪೂರ್ಣ ಸಾರ್ಥಕವೆಂದು ಕಂಡು ಬರುತ್ತೆ. ಮುಂದಿನ ಲೋಕೋದ್ಧಾರಕನಾದ ಇವನ ವಾಕ್ಯಗಳಿಂದ ಪೂರ್ವಾವತಾರಿಯಾದ ಶ್ರೀಕೃಷ್ಣನ ಬಾಲಲೀಲೆಯನ್ನು ನಾವು ಹಿಂದಿರುಗಿ ನೋಡುವೆವು. ಲೋಕೋದ್ಧಾರಕನ ಬಾಲ್ಯಾವಸ್ಥೆಯ ಶಾಶ್ವಿತ ಸಚ್ಚರಿತ್ರೆಯುಳ್ಳ ಅವತಾರಗಳೆರಡಕ್ಕೂ ಅದ್ವೈತಕಾರಣವಾದ ಪರಮಾತ್ಮನನ್ನು ಸಂಪ್ರಾರ್ಥಿಸುವೆನು,

ಬಾಲಕೃಷ್ಣನ ಅಪವಾದ ಗ್ರಸ್ತವಾದ ಕಥೆಗಳು ಇಷ್ಟುಮಾತ್ರವೇ ಅಲ್ಲ. ಗೋಪಿನಿಯರು ಅನ್ಯಪತಿಗಳನ್ನು ಮನುವೆಯಾಗಿದ್ದರೂ ಅನುರಾಗವೇನೋ ತಮ್ಮ ಸ್ವಾಮಿಯಲ್ಲಿಯೇ ಐಕ್ಯವಾಗಿತ್ತು. ನಂದನದಿಂದ ಅಮಂದಾನಂದ ಪ್ರದವಾಗಿ ಬಂದ ವೇಣುನಾದವನ್ನು ಕೇಳಿ ಬಂಧುಜನವನ್ನುಳಿದು ನಡೆತಂದು ಅವನನ್ನು ಸಂಧಿಸಿ

ದರು. ಅವರಲ್ಲೊಬ್ಬಳಿಗೆ ಆತನ ಬಳಿಗೆ ಹೋಗಲಿಕ್ಕಾಗಲಿಲ್ಲ, ಕಾರಣ ಕಣ್ಮುಚ್ಚಿ ತದೇಕ ಚಿತ್ತಳಾಗಿ ಕಾಲಕಳೆದಳು. ಅದರಿಂದ ಅವಳ ಸೂಕ್ಷ್ಮಶರೀರವು ಸ್ವತಂತ್ರವಾಗಿ ಮಿಕ್ಕವರಿಂಗಿಂತಲೂ ಆತನ ಕೇವಲ ಸವಿೂಪಗತಳಾದಳು. ಈ ವಿಷಯವು ಉಪಲೋಲೆಯ (Apollo) ಇತಿಹಾಸವನ್ನು ನೆನಪಿಗೆ ತರುತ್ತೆ. ಅದರ ಗೂಢತತ್ವಾರ್ಥವೇನೋ ನಮಗೆ ಗೊತ್ತೇಇದೆ. ಶ್ರೀಕೃಷ್ಣಕಥೆಯೂ ಹಾಗೆಯೇ ಗೂಢತತ್ವವೆಂದು ಭಾವಿಸುವದಾದರೆ ಅಂತಹ ತತ್ವಾರ್ಥವೆ ನನಗೆ ಬೇಕಾಗಿರುವುದು. ದೇವತಾ ಪುರುಷನ ಗಾನಪರವಶನಾದವನು ಇತರ ವಿಷಯಗಳನ್ನೆಲ್ಲಾ ಬಿಟ್ಟು ಅದನ್ನೇ ಅನುಸರಿಸುವನು. ಅಂತಹ ದಿವ್ಯಗಾನವನ್ನು ಅನುಸರಿಸುವವನು ಕುಚ್ಛಿತವಾದ ಅನ್ಯ ಶಬ್ದಗಳಿಗೆ ಕಿವಿಗೊಡನು.

ಮೃತಭಾಷೆಯನ್ನು ಓದುವವನು ಅಂತಹ ಕಥೆಗಳ ಸಂಪೂರ್ಣಾಭಿಪ್ರಾಯವನ್ನು ಗ್ರಹಿಸುವುದು ಸಹಜವಾಗಿಯೂ ಕಷ್ಟವೇ ಸರಿ. ತತ್ವಾರ್ಥವುಹಾಗಿರಲಿ! ಚರಿತ್ರಾ ಕ್ರಮವನ್ನು ಹಿಡಿದು ಪರ್ಯಾಲೋಚಿಸುವೆವೆಂದು ಭಾವಿಸಬೇಕು. ಅದರೆ ಶ್ರೀಕೃಷ್ಣನು ದೇವಾಂಶೀಯನೆಂದೂ ಗೋಪನಿಯರು ಪುನರವತರಿಸಿದ ಋಷಿಗಳೆಂದೂ ಚರಿತ್ರೆಯು ಹೇಳುವುದು. ಈಗ ನಮಗೆ ಸ್ಥೂಲಾವಸ್ಥೆಯ ಜ್ಞಾನವು ಹೇಗೆ ಸ್ವಭಾವಿಕವಾಗಿದೆಯೋ ಪೂರ್ವದಲ್ಲಿ ಅವರಿಗೆ ಸೂಕ್ಷ್ಮಾವಸ್ಥೆಯ ಜ್ಞಾನವು ಹಾಗೆಯೇ ಸಹಜನಾಗಿತ್ತೆಂಬುದು ಇದರ ತಾತ್ಪರ್ಯವು. ಹಾಗಾದರೆ ಪ್ರಾಣಿಮಾತ್ರಕ್ಕೆ ಸಾಮಾನ್ಯವಾದ ಮೋಹದಿಂದ ಅವರು ಭ್ರಾಂತರಾಗುವುದೆಂದರೇನು! 'ಉತ್ತಮತ್ವವನ್ನು ನಿರೀಕ್ಷಿಸುವವನು ಅಧಮತ್ವವನ್ನು ಲಕ್ಷಿಸುವುದಿಲ್ಲ'. ಇವು ಇತರ ಅಧಾರದಿಂದ ಎತ್ತಿ ಬರೆದ ಮಾತುಗಳು. ನಿಜವೆಂಬುದನ್ನು ಖಂಡಿತ ನಂಬಲೇಬೇಕು. ಸೂಕ್ಷ್ಮಾವಸ್ಥೆಯಲ್ಲಿ ಋಷಿಗಳಿಗೆ ಸ್ವಾಮಿಯು ಪ್ರತ್ಯಕ್ಷನಾಗುತ್ತಿದ್ದನು. ಈ ಸೂಕ್ಷ್ಮಾವಸ್ಥೆಯು ನಿಬಂಧನೆಗಳೇಬೇರೆ. ಸ್ಥೂಲಾವಸ್ಥೆಯ ನಿಬಂಧನೆಗಳಂತಲ್ಲ. ಕಾಮಾಪೇಕ್ಷೆಯೆಂಬುದು ಸ್ಥೂಲ ಶರೀರಕ್ಕೆ ಮಾತ್ರವೇ ಸರಿ. ಆದುದರಿಂದ ಸೂಕ್ಷ್ಮದೆಶೆಯಲ್ಲಿರುವ ಈ ಋಷಿಗಳು ಕಾಮಾಪೇಕ್ಷೆಯಿಂದ ನ್ಯಾಮೋಹಿತರಾದರೆನ್ನಲಿಕ್ಕೆ ಕಾರಣವಿಲ್ಲ. ಸ್ಥೂಲಾವಸ್ಥೆಯನ್ನುಳಿದು ಮೇಲಕ್ಕೇಳುವ ಪ್ರಾಣಿಗಳಿಗೆ ಒಂದು ಮುಖ್ಯೋದ್ದೇಶವಿನಾ ಅಂತಹ ಕಾಮ ಸಂಗಮವು ಅವಶ್ಯಕನೇ ಇಲ್ಲ. ಮಹರ್ಷಿಯೊಬ್ಬನು ಲಿಂಗದೇಹದಿಂದ ಪುತ್ರೋತ್ಪತ್ತಿಗೆ ಕಾರಣನಾಗ ಬಹುದು. ಅದು ಕಾಮಾಪೇಕ್ಷೆಯ ಪ್ರೇರಣೆಯಿಂದಲ್ಲ. ಪವಿತ್ರಾತ್ಮದ ಅವತಾರದಿಂದ ಮುಂದೊಂದು ಸಂತತಿ ಬೆಳೆಯುವಂತೆ ಅಂತಹ ಆತ್ಮಕ್ಕೊಂದು ಶುದ್ಧ ಶರೀರವನ್ನು ಕಲ್ಪಿಸುವುದಕ್ಕೆಂದು ಭಾವಿಸಬೇಕು. ಲಿಂಗ ಸಂಬಂಧದ ಸಹಜವಾದ ಉದ್ದೇಶವು ಒಂದು ಸಂತತಿಯನ್ನು ಅಭಿವೃದ್ಧಿಗೊಳಿಸುವುದಕ್ಕಲ್ಲದೆ ಕಾಮಾಪೇಕ್ಷೆಯನ್ನೇ ಪೂರ್ತಿಗೊ

ಳಿಸಲಿಕ್ಕಲ್ಲ. ಕಾಮವೆಂಬುದು ಮಾಯಾಪಾಶ; ಪದ್ಧತಿಯಫಲ; ಇಂದ್ರಿಯವನ್ನು ಮುಖ್ಯವಾಗಿ ಒಂದು ವಿಷಯದಲ್ಲಿಯೇ ಆಸಕ್ತಗೊಳಿಸುವ ಕ್ರಮ. ಈ ವ್ಯಾಮೋಹಮಾರ್ಗವನ್ನು ಬಹು ಕಾಲದಿಂದಲೂ ಮಹರ್ಷಿಗಳು ಜೈಸಿದ್ದರು. ತಮ್ಮ ಕು ಲಾಭವ್ಯಧ್ಯಿಗೊಳಿಸುವುದರಲ್ಲಿ ಜ್ಞಾನವನ್ನನುಸರಿಸುತ್ತಿದ್ದರಲ್ಲದೆ ಕಾಮಮೋಹಿತರಾ ಗುತ್ತಿರಲಿಲ್ಲ.

ಬಾಲ್ಯಾವಸ್ಥೆಯಲ್ಲಿ ತನಗೆ ಮನೋಹರವಾದ ಗುತ್ತಬೆಟ್ಟಗಳನ್ನೂ ಹಿತಕರವಾದ ಸಹವಾಸಿಗಳನ್ನೂ ಬಿಟ್ಟು ಶ್ರೀಕೃಷ್ಣನು ಕಂಸಾಸುರನ ಸಂಹಾರಾರ್ಥವಾಗಿ ಹೊರಡ ಬೇಕಾದ ಸಮಯವು ಬಂದೊದಗಿತು. ಈ ವಿಷಯವಾಗಿ ಅನೇಕ ಆಧಾರಗಳಿಂದ ಸಂಗ್ರಹಿಸಿದ ವರ್ತಮಾನವು ಅತ್ಯಲ್ಪವಾಗಿಯೂ ನಂಬ ಕೂಡದ್ದಾಗಿಯೂ ಇದೆ. ಆದುದರಿಂದ ಕಥಾವಿಸ್ತಾರವನ್ನು ಬಿಟ್ಟು ಪ್ರಾಂತ್ಯಫಲವನ್ನು ಮಾತ್ರ ಹೇಳುವದು ಸಾರ್ಥಕವೆಂದು ತೋರುತ್ತೆ. 'ತನ್ನ ಭಾವಿ ಸಂಹಾರಕನು ಗಂಗಾನದಿಯ ತೀರದಲ್ಲಿ ಶಿಷ್ಯರಿಗೆ ಉಪದೇಶ ಮಾಡುತ್ತಿರುವದು ಕಂಸನಿಗೆ ಗೊತ್ತಾಗಿ ಸ್ನೇಹಿತನ ಮಗಳಾದ ತನ್ನ ಹೆಂಡತಿಯಿಂದ ಪ್ರೇರಿಸಲ್ಪಟ್ಟು ಶ್ರೀಕೃಷ್ಣನನ್ನು ಹಿಡಿತರಲು ಸೈನಿಕರನ್ನು ಕಳುಹಿಸುವನು' ಎಂಬುದು ಉದಯವಾರ್ಧಿಶೂರನ (Edouard Schuree) ಮತವಾಗಿದೆ. ಶ್ರೀಕೃಷ್ಣನು ಅವರನ್ನು ಕಂಡು "ನೀವಾರೆಂಬುದು ನನಗೆ ಗೊತ್ತಿದೆ, ನಿಮ್ಮೊಡನೆ ಬರಲು ಸಿದ್ಧವಿರುವೆನು" ಎಂದು ಹೇಳಿ ಅವರೊಡನೆ ತತ್ವವಿಚಾರದ ಮಾತುಗಳನ್ನಾಡುತ್ತಿರಲು, ಅದನ್ನು ಕೇಳಿ ಆಯುಧಗಳನ್ನಿಳುಹಿ ಅವರು ಅತನ ಶಿಷ್ಯರಾಗುವರು. ಆ ಮೇಲೆ ಕಂಸನು ಸಂಕೋಲೆಯನ್ನಿಕ್ಕಿ ಶತ್ರುವನ್ನು ಹಿಡತರಬೇಕೆಂದು ತನ್ನ ರಾಜ್ಯದಲ್ಲಿ ಬಹುನಂಬಿಗೆಸ್ತರಾದವರಿಗೆ ಆಜ್ಞಾಪಿಸಿ ಕಳುಹುವನು. ಆದರೆ ಪಾಪ ಪುಣ್ಯವೆಂಬ ಬಂಧ ಮೋಕ್ಷವನ್ನು ಕುರಿತು ಅವರೊಡನೆ ಶ್ರೀಕೃಷ್ಣನು ಆಡುವ ಮಾತುಗಳನ್ನು ಕೇಳಿ ಅತನ ಶರೀರವನ್ನು ಬಂಧಿಸಲಿಕ್ಕೆ ಬಂದವರು ಕೂಡ ತಮ್ಮ ಆಯುಧಗಳನ್ನು ಅತನಲ್ಲಿ ಸಮರ್ಪಿಸುವರು. ಅಲ್ಲಿಂದ ಹಿಂತಿರುಗಿ ಬಂದು "ಶ್ರೀಕೃಷ್ಣನು ಪರಮ ಯೋಗಿಯು, ಆವನಿಂದೇನೂ ಭಯವಿಲ್ಲ" ಎಂದು ಅವರು ಕಂಸನೊಡನೆ ಹೇಳುವರು. ಈಗ ಕಂಸನು ತನ್ನ ಅಂಗರಕ್ಷಕರನ್ನು ಇಮ್ಮಡಿಗೊಳಿಸುತ್ತ, ಅರಮನೆ ಬಾಗಿಲುಗಳನ್ನೆಲ್ಲಾ ಸಂಕೋಲೆಗಳಿಂದ ಸುರಕ್ಷಿತ ಪಡಿಸುತ್ತ ರಾಜ್ಯನಾಶನವನ್ನು ನೆನೆದು ಗಡಗುಟ್ಟುತ್ತಾ ಅಡಗಿ ಕುಳಿತಿರುವನು. ಒಂದಾನೊಂದು ದಿನ ಮಹಾಕೋಲಾಹಲವೂ ಸಂತೋಷ ಸಮ್ಮಾನದ ಕಲಕಲವೂ ಪಟ್ಟಣದಲ್ಲಿ ಕೇಳಿ ಬರುವದು. ಕೃಷ್ಣನು ಮಧುರೆಯನ್ನು ಪ್ರವೇಶಿಸುವನೆಂದೂ ಜನಗಳು ರಾಜದ್ವಾರಗಳನ್ನು ಭೇದಿಸುವರೆಂದೂ ಕಾವಲುಗಾರರು ಕಂಸನಿಗೆ ತಿಳುಹುವರು.

ಧ್ವಜ ಪ್ರಪ್ಪಗಳಿಂದ ಇಡಿರುಗೊಂಡು ವಿಷ್ಣುವಿನ ಅವತಾರವೆಂದು ಪೂಜಿಸು ತ್ತಾ ಸುತ್ತಲೂ ಮುತ್ತಿಬರುವ ಶಿಷ್ಯರೊಡನೆ ಶ್ರೀಕೃಷ್ಣನು ಅರಮನೆಯನ್ನು ಪ್ರ ವೇಶಿಸುವನು. ಇಲ್ಲಿ ಕಂಸನನ್ನು ಕೊಲ್ಲದೆ, ದುರ್ಜಡತಗಾಗಿ ಆತನನ್ನು ದೂಷಿಸಿ, ಕೆಲವು ಬ್ರಾಹ್ಮಣರೊಡನೆ ಅರಣ್ಯಕ್ಕೈದುವಂತೆ ಅಪ್ಪಣೆಯನ್ನು ಕೊಡುವನು. ಆ ಮೇಲೆ ತನ್ನ ಶಿಷ್ಯನಾದ ಅರ್ಜುನನಿಗೆ ಮಥುರೆಯ ಪಟ್ಟಗಟ್ಟುವನು. ಪರ್ವತಗ ಳ ಮಧ್ಯ ಪ್ರದೇಶದಲ್ಲಿ ಸುಂದರವಾದ ಒಂದು ಪಟ್ಟಣವು ಭದ್ರವಾಗಿ ಕಟ್ಟಲ್ಪಡು ವದು. ಇದಕ್ಕೆ ದ್ವಾರಕೆಯೆಂಬ ಹೆಸರನ್ನಿಟ್ಟು ಶ್ರೀಕೃಷ್ಣನು ತನ್ನ ಪ್ರಿಯಜನರಿಂ ದ ಕೂಡಿ ಇಲ್ಲಿ ವಾಸಮಾಡುವನು. ಮುಖ್ಯವಾದ ನೆಲಮಾಳಿಗೆಗಳುಳ್ಳ ಉಪದೇ ಶ ಮಂದಿರವು ಈ ಪಟ್ಟಣದ ಮಧ್ಯದಲ್ಲಿರುವೆಯೆಂದು ತಿಳಿದು ಬರುವದು.

ಹಿಂದೂ ಶಾಸ್ತ್ರಗಳನ್ನು ತಕ್ಕ ಮಟ್ಟಿಗೆ ತಿಳಿಯುವ ಜ್ಞಾನವೂ ಸಮಯವೂ ಇಲ್ಲದೆ ಶ್ರೀಕೃಷ್ಣಚರಿತ್ರೆಯ ಕಥಾಭಾಗಗಳನ್ನು ಯಥಾ ವಿಹಿತವಾಗಿ ಸಂಗ್ರಹಿಸು ವದು ಕಠಿಣವಾಗಿದೆ. ಭಾಷಾಂತರಗಾರರು ಒಂದೇ ವಿಷಯವನ್ನು ಕುರಿತು ಅನೇ ಕ ಪಾಠಾಂತರಗಳನ್ನೂ ಹೇಳುವರು. ಇದರ ಫಲದಿಂದ ತಲೆ ಬರಡಾಗುತ್ತೆ. ಆ ದರೂ ಕುರುವಂಶದ ವಿರೋಧ ಪಕ್ಷಗಳೆರಡರ ಮಹಾ ಯುದ್ಧವು ಕಂಸ ನಿರ್ಗಮ ನದ ನಂತರ ನಡೆಯಿತೆಂದು ತೋರಿ ಬರುವದು.

ಈ ಮಹಾಯುದ್ಧವು ಶ್ರೀಕೃಷ್ಣಾವತಾರದ ಫಲಸಮಾಪ್ತಿಯಾಗಿದೆ. ಜೊ ತ್ಸಾರೂಪವಾದ ಈ ಯುದ್ಧದ ವಿವರವು ಅನೇಕ ಕಥೆಗಳಾಗಿ ಪರಿಣಮಿಸಿರುತ್ತೆ. ನೀತ್ಯವೂ ಅನುಸರಿಸ ಬೇಕಾದ ತತ್ತ್ವೋಪದೇಶಗಳು ಈ ಕಥೆಗಳಲ್ಲಿ ಗರ್ಭಿತವಾಗಿವೆ. ಮತ್ತು ಆತ್ಮ ವಿಷಯಕವಾದ ಸೂಕ್ಷ್ಮ ವಿಚಾರಗಳನ್ನು ಈ ಕಥೆಗಳು ಸೂಚಿಸುತ್ತಿ ವೆ. ನಮ್ಮ ಈಗಿನ ಗ್ರಹಿಕೆಯ ಪ್ರಕಾರ ಈ ಕಥೆಗಳು ವಿಚಿತ್ರತರವಾಗಿಯೂ ದು ರ್ನೀತಿಕರವಾಗಿಯೂ ಅಸಾಧ್ಯಪರವಾಗಿಯೂ ಪ್ರಾಯಶಃ ಕಂಡು ಬರುವವು. ಆ ದರೆ ನಾವು ಈ ರೀತಿಯಲ್ಲಿ ಗ್ರಹಿಸುವದು ನ್ಯಾಯವಲ್ಲ. ಮನುಷ್ಯರು ತಮ್ಮ ಸ್ವ ಸಾಮರ್ಥ್ಯವನ್ನು ಸುಸಿಕ್ಷಿತಗೊಳಿಸಿದ್ದ ಪೂರ್ವಕಾಲವನ್ನು ಈಗ ಪರೀಕ್ಷಿಸುತ್ತಿರು ವವೆಂದು ಪೂರ್ವೋಕ್ತವಾಗಿದೆ. ಇಂತಹ ಸಾಮರ್ಥ್ಯಗಳು ಮುಂದೆ ಇನ್ನೊಮ್ಮೆ ವ್ಯವಸಾಯವಾಗಲಿಕ್ಕುಂಟು. ನಮ್ಮಲ್ಲಿ ಗುಪ್ತವಾಗಿರುವ ಸಾಮರ್ಥ್ಯಗಳ ಪರಿ ಜ್ಞಾನವನ್ನು ಈಗ ಕಾನೆ ಹೊಂದುತ್ತಿರುವೆವು. ಪ್ರಪಂಚದ ಜನಾಂಗಗಳಲ್ಲಿ ಶಿಕ್ಷಿ ಣ ಜನರು (saxon race) ಪ್ರಸಿದ್ಧಿ ಪಥವನ್ನು ಹೊಂದುವ ಹಾಗೆಲ್ಲಾ ನಾವು ಇಂತಹ ಗುಪ್ತ ಸಾಮರ್ಥ್ಯವನ್ನು ಕ್ರಮೇಣ ವ್ಯವಸಾಯ ಮಾಡುತ್ತೇವೆ. ಇಂತ

ಹ ಸಂದರ್ಭದಲ್ಲಿ ನಾವ್ ತಿಳಿಯಲಾರದ ವಿಷಯವನ್ನು ದೂಷಿಸಪೆ ಸುಮ್ಮನಿರಬೇಕು. ಮತ್ತು ಈಗ ಅಸಂಬದ್ಧವೆಂದು ತೋರುವ ಅನೇಕ ವಿಷಯಗಳು ಏಕ ಪ್ರಕಾರ ಸಹಜವಾಗಿರುವದು ಸಾಧ್ಯವೆಂಬುದನ್ನು ಒಪ್ಪಿಕೊಳ್ಳಲೇಬೇಕು.

ಕುರುರಾಯನೆಂಬ ಮಹಾಯೋಗಿಯು ಸಂತತಿಯವರ ಚರಿತ್ರೆಯೂ ಕಾಟುಂಬದ ಯಾಜವಾನ್ಯವನ್ನು ಕುರಿತು ಉಭಯ ಶಾಪೆಗಳ ವ್ಯಾಜ್ಯವೂ ಈ ಮಹಾಯುದ್ಧದ ಕಥೆಯಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಮಾವರು ಪ್ರತಿಸ್ಪರ್ಧಿ ಸಹೋದರರಲ್ಲಿ ಹಿರಿಯನಾದ ಪಾಂಡುಪುತ್ರರ ಪಕ್ಷವನ್ನು ಶ್ರೀಕೃಷ್ಣನು ವಹಿಸಿರುವನು. ಈ ಯುದ್ಧವು ಮನುಷ್ಯವರ್ಗಗಳ ಕರ್ಮಾರ್ಜಿತ ಫಲವಾಗಿತ್ತು. ಇಂತಹ ಪ್ರತಿಸ್ಪರ್ಧಿಯುದ್ಧವೆಲ್ಲಿ ಸಾಕ್ಷಾತ್ತು ದೇವತೆಗಳೇ ಮನುಷ್ಯಾವತಾರವೆತ್ತಿ ಹೋರಾಡಿದರು. ತ್ರಿಮೂರ್ತಿಗಳಲ್ಲಿ ಎರಡನೆಯವನಾದ ವಿಷ್ಣುವೇ ಶ್ರೀಕೃಷ್ಣನಾಗಿ ಶಿಷ್ಟರನ್ನು ಪರಿಪಾಲಿಸಿದನು.

ನೀತಿಜ್ಞನಾದ ಯುಧಿಷ್ಠಿರನೂ ಬಲಿಷ್ಠನಾದ ಭೀಮನೂ ಧನವಂತನಾದ ಅರ್ಜುನನೂ ಸಭ್ಯಕ್ಕೆ ಅರ್ಥವ್ಯಕ್ತನಾಗದ ನಕುಲ ಸಹದೇವರೂ ಪಾಂಡುರಾಯನ ಕುಮಾರರಾಗಿದ್ದರು. ಶ್ರೀಕೃಷ್ಣನು ಈ ಪಂಚಪಾಂಡವರ ಪರಮ ಮಿತ್ರನೂ ಸಂರಕ್ಷಣಾಶೂರನೂ ಆಗಿದ್ದನು. ಇವರುಗಳಲ್ಲಿ ಅರ್ಜುನನು ತನ್ನ ಸ್ವಾಮಿಗೆ ಅತ್ಯಂತ ಪ್ರೀತಿಪಾತ್ರನು. ಮತ್ಸರವನ್ನು ಬೆಳಸಿ ರಾಜ್ಯಾಪಹಾರವನ್ನು ಸಾಧಿಸುವ ದಾಯಿವಾದಿಗಳೊಡನೆ ಪಾಂಡವರಿಗೆ ಯುದ್ಧವು ಸಂಭವಿಸಲೇ ಬೇಕಾಗುವುದು. ಇಡೀ ಜನಾಂಗವನ್ನೇ ಅಪಾರ ಕಷ್ಟಕ್ಕೆ ಗುರಿಪಡಿಸಲುಳ್ಳ ರಾಜ್ಯ ಕಂಟಕವನ್ನು ನಿವಾರಿಸುವ ಯತ್ನ ಮಾಡಬೇಕೆಂಬ ದೃಢಸಂಕಲ್ಪದಿಂದ ಶ್ರೀಕೃಷ್ಣನು ಪಾಂಡವರ ರಾಯಭಾರಿಯಾಗಿ ಕೌರವನ ಬಳಿಗೈದಿ ವಿವೇಕ ಬೋಧನೆಯನ್ನೂ ನ್ಯಾಯಸಮ್ಮತವನ್ನೂ ನಯನುಡಿಗಳಿಂದ ಪ್ರತಪಡಿಸುವನು. ಇಂತಹ ನೀತಿಬೋಧನೆಯು ನಿಷ್ಫಲವಾಗುವದು. ಸಂಗ್ರಾಮವನ್ನೇ ಸಂಕಲ್ಪಿಸಿ ಮಂತ್ರಾಲೋಚನೆಯನ್ನು ಹೇಳಿ ರುಧಿರಮಯನಾದ ಘೋರಯುದ್ಧದಲೆಲ್ಲಾ ಪಾಂಡವರ ಪಕ್ಷನಾಗಿ ಪ್ರೋತ್ಸಾಹಿಸುವನು. ಪ್ರಾಂತ್ಯದಲ್ಲಿ ಶತ್ರುಗಳು ಪರಾಜಿತರಾಗಿ ಪಾಂಡವರು ಮರಳಿ ರಾಜ್ಯಪದವಿಯನ್ನು ನಿರ್ವಹಿಸುವರು.

ಈ ಅನಾಹುತಗಳೆಲ್ಲಾ ನಡೆದು ಮಹಾ ಯೋಗಿಯಾದ ಕುರುರಾಯನ ತಪೋಭೂಮಿಯು ರಣಮಂಡಲವಾಗಬೇಕೆಂಬುದು ಕರ್ಮಾರ್ಜಿತ ಫಲವಾಗಿದೆ. ಈ ಕರ್ಮಾನುಸಾರದಿಂದಲೇ ಸಾಕ್ಷಾತ್ತು ದೇವಾಂಶೀಯನಾದ ಶ್ರೀಕೃಷ್ಣನೇ ಮುಖಂಡನಾಗಿ ಬಾಹ್ಯಕಾರಣರಾದ ಮನುಷ್ಯಮಾತ್ರರಿಂದ ಈ ಕಾರ್ಯವನ್ನು ನಿರವೇರಿಸುವನು. ಕೊನೆಯುಸ್ಸಿದ ಸಮಾಪ್ತಿಯಲ್ಲಿ ತನ್ನ ಅಸ್ತ್ರದಿಂದ ಪಡಿದರೆಂದು ತೋರು

ವರನ್ನು ಬಡಿದಿಕ್ಕುತ್ತಾ ಕಂಡಿದಿರಿಗೆ ಸುಳಿದಾಡುವ ಮಹಾತ್ಮದ ಮಹಿಮೆಯೇ ನೆಂದು ಅರ್ಜುನನು ಸ್ವಾಮಿಯೊಡನೆ ವಿಜ್ಞಾಪಿಸಿ ಕೊಳ್ಳುವನು. ಈ ಮಹಾತ್ಮನು ಮಹಾದೇವನಾದ ಪರಮಾತ್ಮನೆಂದೂ ನೀನು ಕೊಂದದ್ದೆಂಬುವರು ಮೊದಲೇ ಈ ಮಹಾದೇವನಿಂದ ಕೊಲ್ಲಲ್ಪಟ್ಟವರೆಂದೂ ಶ್ರೀಕೃಷ್ಣನು ಪ್ರತ್ಯುತ್ತರನ್ನು ಹೇಳುವನು.

ಭಗವದ್ಗೀತೆಯು ಮಹಾಭಾರತದ ಮುಕ್ತಾಫಲವೆಂದು ಕರೆಯಲ್ಪಟ್ಟಿದೆ. ಇದರಲ್ಲಿ ಕುರುಕ್ಷೇತ್ರದ ರಣಮಂಡಲದ ಮುಖ್ಯ ಶ್ರೀಕೃಷ್ಣನು ತನ್ನ ಪ್ರಿಯಶಿಷ್ಯನಾದ ಅರ್ಜುನನಿಗೆ ಉಪದೇಶಿಸಿದ ಬುದ್ಧಿವಾದಗಳೂ ಅರ್ಥವಿವರಣೆಗಳೂ ಗರ್ಭಿತವಾಗಿವೆ. ಮತ್ತು ಇದು ನ್ಯಾಯಾನ್ಯಾಯ ಸೂಕ್ಷ್ಮ ವಿಚಾರವನ್ನು ಕುರಿತು ಪೇಚಾಡುವವರಿಗೆ ಯಾವಾಗಲೂ ಮಾರ್ಗತೋರಿಸುವ ಮೂಲಾಧಾರವಾಗಿ ಪರಿಣಮಿಸಬಹುದು.

ಯುದ್ಧವು ಮುಗಿಯುವದು. ತನ್ನ ಸಂಧಾನ ಸಲಹೆಗಳನ್ನು ನಿರಾಕರಿಸಿದ ರಾಜಸ್ಥಾನಕ್ಕೆ ಶ್ರೀಕೃಷ್ಣನು ಮರಳಿ ಹೋಗುವನು. ಯುದ್ಧ ರಂಗದಲ್ಲಿ ಹತರಾದ ವರ ತಂದೆತಾಯಿಗಳನ್ನು ದೇವ ಯೋಗ್ಯನಾದ ಪ್ರೀತಿ ವಿಶ್ವಾಸದಿಂದ ಸಮಾಧಾನಗೊಳಿಸಿ, ಮನುಷ್ಯಮಾತ್ರರಾದ ಅವರ ಸಂಕಟದಲ್ಲಿ ತಾನೂ ಸಮಭಾಗಿಯಾಗಿ ಕಂಣೀರು ತೆಗಿಯುತ್ತಾ, ಪಶ್ಚಾತ್ತಾಪದಿಂದ ಪೇಚಾಡುತ್ತಿರುವವರಿಗೆ ಧೈರ್ಯಹೇಳುವನು. ಆ ಮೇಲೆ ರಾಜ್ಯದ ವ್ಯವಸ್ಥೆಯನ್ನೆಲ್ಲಾ ಸುರಕ್ಷಿತ ಪಡಿಸುವ ಪರ್ಯಂತರ ಪಾಂಡವರೊಡಗೂಡಿ ಬುದ್ಧಿವಾದವನ್ನು ಉಪದೇಶಿಸುತ್ತಿರುವನು. ತದನಂತರ ತನ್ನ ಸ್ವಗ್ರಹವಾದ ದ್ವಾರಕೆಗೆ ಹೋಗಿ ದೇಹವನ್ನು ಬಿಡುವ ಕಾಲ ಪರ್ಯಂತರ ಅಲ್ಲಿಯೇ ವಾಸನಾಗಿರುವನು.

ಸುಂದರ ತರವಾಥ ದ್ವಾರಕಾ ಪಟ್ಟಣದಲ್ಲಿ ಶ್ರೀಕೃಷ್ಣನು ತನ್ನ ತಂದೆತಾಯಿಗಳಾದ ವಸುದೇವದೇವಕಿಯರನ್ನೂ ಅಂಣತಂಗಿಯರಾದ ಬಲರಾನು ಸುಭದ್ರೆಯರನ್ನೂ ಪುನಪ ಸೇರಿ ಕೊಂಡಿದ್ದನೆಂದು ಕೆಲವು ಗ್ರಂಥಕರ್ತರು ಹೇಳುವರು. ಆದರೆ ಶ್ರೀಕೃಷ್ಣಕಥೆಯಂತೆ ಚರಿತ್ರಾರ್ಥವೂ ಗುಢಾರ್ಥವೂ ಸಮ್ಮೇಳನವಾಗಿರುವ ಸಂದರ್ಭದಲ್ಲಿ ಯಥಾರ್ಥವನ್ನು ನಿಶ್ಚೈಸುವದು ಸಧ್ಯಕ್ಕೆ ಸಾಧ್ಯವಿಲ್ಲ.

ಕುರುಕ್ಷೇತ್ರದ ಯುದ್ಧವು ಮುಗಿದ ಮೂವತ್ತಾರು ವರ್ಷಗಳ ಮೇಲೆ ನೂರಾಯಿಪ್ಪತ್ತನೆಯ ವಯಸ್ಸಿನಲ್ಲಿ ಶ್ರೀಕೃಷ್ಣ ನಿರ್ಯಾಣವು ಸಂಭವಿಸಿತೆಂದು ಹೇಳಲ್ಪಟ್ಟಿದೆ. ಪಾಂಡವರ ಶತ್ರುಶೇಷದವರಾದ ಕ್ಷತ್ರಿಯರನ್ನು ಮೃತಿ ಹೊಂದಿಸುವದೇ ಶ್ರೀಕೃಷ್ಣಾವತಾರದ ಅಂತ್ಯಭಾಗದ ಕೆಲಸವಾಗಿತ್ತು. ಕಾಮ ಮರಣಗಳಿಗೆ ಅಭಿಮಾನದೇವತೆಯ ಕಾಲವಾದ ಕಲಿಯುಗವು ಪ್ರಾಪ್ತಿಸುವದು. ಇದಕ್ಕನುಗುಣವಾಗಿ ಎಲ್ಲೆಡೆಯಲ್ಲೂ ಭಯಂಕರವಾದ ಸೂಚನೆಗಳು ಗೋಚರಿಸುವವು. ಸೂರ್ಯ

ಕಾಂತಿಯು ಮಂಡೈಸುವದು. ಸೂರ್ಯಚಂದ್ರರ ಸುತ್ತಲೂ ಉಗಿಯುವ ಪವಿತ್ರ ಪಗಳು ತೋರಿ ಬರುವವ್ವ. ಶ್ರೀಕೃಷ್ಣನ ಚಕ್ರವು ಅಂತರ್ಧಾನನಾಗುವದು. ಆತನ ಸುಪ್ರಸಿದ್ಧ ತುರಗಗಳು ದೇವಯಾನದೊಡನೆ ಪಲಾಯನವಾಗುವವ್ವ. ಧ್ವಜವನ್ನು ಖೇಚರರಾದ ಗಂಧರ್ವರು ಕೊಂಡೊಯ್ಯುವರು. ತನ್ನ ನಿರ್ಯಾಣಕಾಲವು ಸಮೀಪಿಸಿತೆಂದು ತಿಳಿದು ಶ್ರೀಕೃಷ್ಣನು ಅರ್ಜುನನನ್ನು ಕರೆಯಿಸಿ ದ್ವಾರಕೆಯಲ್ಲಿ ಆಳುವಂತೆ ಆಜ್ಞಾಪಿಸಿ ತನ್ನ ಸಹೋದರನಾದ ಬಲರಾಮನನ್ನು ಪ್ರಾಪ್ತಿಸುವದಕ್ಕೋಸ್ಕರ ಏಕಾಂಗಿಯಾಗಿ ಅರಣ್ಯಕ್ಕೈದುವನು. ಅಲ್ಲಿ ಬಲರಾಮನು ಯೋಗಾರೂಢನಾಗಿ ಕುಳಿತಿರಲು ಶಾಸ್ತ್ರದಲ್ಲಿ ಮಹಾಶೇಷನೆಂದು ಕರೆಯಲ್ಪಟ್ಟ ಆತನ ಅತ್ಮನ ಮುಖದಿಂದ ಹೊರಸೂಸುತ್ತಿರುವದು. ಶ್ರೀಕೃಷ್ಣನು ಕಾಷಾಂಬರವನ್ನು ಧರಿಸಿ ಸಾಮಾನ್ಯಮನುಷ್ಯರು ಸಾಯುವಂತೆ ಆತನ ಬಳಿಯಲ್ಲಿ ಮಲಗಿ ಕೊಳ್ಳುವನು. ತನ್ನ ಅಂಗಾಲು ಮಾತ್ರ ಶಸ್ತ್ರಹತಿಗೆ ನೋಯತಕ್ಕದ್ದಾಗಿತ್ತು. (ಇದರಿಂದ ಅಂಗಾಲಿನಲ್ಲಿ ಮಟ್ಟಿಗೆ ಘಾಯವಾಗಲುಳ್ಳ ಅಕಿಲುಸನ (Achilles) ಇತಿಹಾಸವು ನೆನಪಿಗೆ ಬರುತ್ತೆ). ಇಂತಹ ಅಂಗಾಲನ್ನು ಮುಚ್ಚಿ ತೆರದಿಡುವನು. ಆಗ ವ್ಯಾಧನೊಬ್ಬನು ಜಿಂಕೆಯೆಂದೆಣಿಸಿ ಬಾಣಹೊಡೆಯುವನು. ಆದರೆ ಈ ಪ್ರಮಾದವನ್ನು ಕಂಡು ವ್ಯಾಧನು ಅತ್ಯಂತಚಿಂತಾಕ್ರಾಂತನಾಗುವನು. ಶ್ರೀಕೃಷ್ಣನು ಆತನನ್ನು ಸಮಾಧಾನಗೊಳಿಸಿ ಮಹಾ ಮಹಿಮೆಯಿಂದ ಸ್ವರ್ಗಾರೋಹಣವನ್ನು ಮಾಡುವನು. ಭಗವಂತನು ಹಿಂತಿರುಗಿ ಬರುತ್ತಿರಲು ದೇವತೆಗಳ ಸಂತೋಷಘೋಷವು ದಿಗಂತವಿಶ್ರಾಂತವಾಗುವುದು—ಎಂಬಲ್ಲಿ

'ಶ್ರೀಕೃಷ್ಣಂ'

ಸಂಪೂರ್ಣಂ.

—ಶ್ರೀಕೃಷ್ಣಾರ್ಪಣಮಸ್ತು—

ಲೋಕಿಕೆ.

ಅಮರಗ್ರಹ (America) ಭೂಖಂಡದಲ್ಲಿ ನವದ್ವಾರಕಾ (Newyork) ಯೆಂಬ ಮುಖ್ಯಪಟ್ಟಣವುಂಟು. ಅಲ್ಲಿ ದಿವ್ಯಜ್ಞಾನಸಭೆಯ ಉಪಸಂಘವೊಂದು ಸ್ಥಾಪಿತವಾಗಿದೆ. ಈ ಸಂಘದವರ ಪ್ರಯೋಜನಾರ್ಥವಾಗಿ ಅನ್ಯಮತಮೋಹಿನಿಯೆಂಬ (Mrs Annie Mc queen) ಪ್ರಸಿದ್ಧ ಪುರುಷಳಿಂದ ಶ್ರೀಕೃಷ್ಣ ವಿಷಯವಾದ ದಿವ್ಯೋಪನ್ಯಾಸವು ಇಂಗ್ಲಿಷ್ ಭಾಷೆಯಲ್ಲಿ ಕೊಡಲ್ಪಟ್ಟಿತು. ದಿವ್ಯಜ್ಞಾನಿಯೆಂಬ (The Theosophist) ಮಾಸಪತ್ರಿಕೆಯಲ್ಲಿ ಪ್ರಕಟಿತವಾದ ಈ ದಿವ್ಯವಿಷಯವನ್ನು ಕನ್ನಡಕ್ಕೆ ಭಾಷಾಂತರ ಮಾಡಬೇಕೆಂದು ಮ. ಶ್ರೀ. ಒ. ವಿ. ನಂಜುಂಡೈಯರವರು ಪರಮ ಪ್ರೀತಿಯಿಂದ ಆಜ್ಞಾಪಿಸಿದರು. ಪ್ರಾಜ್ಞಶಿರೋಮಣಿಗಳ ಆಜ್ಞೆಯಿಂದ ಪ್ರೋತ್ಸಾಹಿತನಾಗಿ ಈ ಕನ್ನಡ ಭಾಷಾಂತರವನ್ನು ಪ್ರಕಟಿಸಿರುವೆನು.

ಶುದ್ಧ ಭಾಷಾಂತರವಾದುದರಿಂದ ವಿಷಯವರ್ಣನೆಯು ಲೋಪದೋಷಕ್ಕೆ ನಾನು ಸ್ವತಹ ಬಾಧ್ಯನಲ್ಲ. ಶಾಸ್ತ್ರಸಮ್ಮತವಲ್ಲದ ನ್ಯೂನಾತಿರಿಕ್ತಗಳಿರಬಹುದು. ಅನ್ಯಸ್ತ್ರೀಯು ಅನ್ಯಶಾಸ್ತ್ರದ ಅನ್ಯಭಾಷೆಯ ಅನ್ಯವಿಷಯವನ್ನು ಅನ್ಯದೇಶದಲ್ಲಿ ವರ್ಣಿಸಿ ಹೇಳಿದ ನಮ್ಮ ಶಾಸ್ತ್ರಾರ್ಥವಾಗಿದೆ. ಆದುದರಿಂದ ಹೆಚ್ಚು ಕಡಿಮೆಯನ್ನು ಎತ್ತೈಸದೆ ಕೇವಲ ಗುಣವನ್ನೇ ಗ್ರಹಿಸುವದು ಸರ್ವಪ್ರಕಾರದಲ್ಲಿಯೂ ಸಾರ್ಥಕವು.

ಭಾಷೆಯು ಕಠಿಣವೆಂದು ಕೆಲವರಿಗೆ ತೋರಬಹುದು. ಶಾಸ್ತ್ರೋಕ್ತವಾದ ವಿಷಯ ಗೌರವಕ್ಕೆ ತಕ್ಕ ಗಂಭೀರ ಶಬ್ದಗಳನ್ನಿಟ್ಟು ತಕ್ಕಷ್ಟು ಸುಲಭಶೈಲಿಯಲ್ಲಯೇ ಬರೆದಿರುವೆನು. ಇನ್ನು ಪ್ರಮಾದ ಜನ್ಯದ ಲೋಪದೋಷಗಳಿದ್ದರೆ ಕುದ್ಧಾಂತಃಕರಣಿಗಳು ತಿದ್ದಿ ತೀರಿ ಪ್ರೋತ್ಸಾಹಿಸಬೇಕಾಗಿ ವಿಜ್ಞಾಪಿಸುವ ಪ್ರಾಜ್ಞಶಿರೋಮಣಿಗಳ ಆಜ್ಞಾಧಾರಕ.

Karody Subba Rao.

ದೇಶಾಭಿಮಾನಿಗಳಾದ ವಾಚಕವರ್ಗದವರೇ.

ಶ್ರೀಕೃಷ್ಣಸೂಕ್ತಿ.

ಇದು ಶುದ್ಧ ಕರ್ಣಾಟಕ ಮಾಸಪತ್ರಿಕೆಯು. ಇದನ್ನು ಜನವರಿ ತಿಂಗಳಿಂದ ಪ್ರಕಟಿಸುತ್ತಿರುವೆನು. ಇದರಿಂದ ಸಮಸ್ತ ವಿಷಯವನ್ನೂ ತಿಳಿಯಬಹುದು. ಇದಕ್ಕೆ ಅನೇಕರು ಆಶ್ರಯ ಕೊಡುತ್ತಿರುವರು. ಇದರ ದೆಶೆಯಿಂದ ದೇಶೀಯರ ಅನ್ಯೋನ್ಯಾಭಿವೃದ್ಧಿಯಾಗುತ್ತೆ. ಇದರ ಚಂದಾದರ ಒಂದೂವರೆ ರೂಪಾಯಿಮಾತ್ರವಾಗಿದೆ. ಇದರಲ್ಲಿ ನಮ್ಮ ಸ್ವಪ್ರಯೋಜನವೇನೂ ಇಲ್ಲ. ಹೀಗೆ ಸಪ್ತ ವಿಭಕ್ತಿಗಳಲ್ಲಿ ನಾಕಷ್ಟು ವಿವರಿಸಿದಂತಾಯಿತು.

ಇಷ್ಟುಮಾತ್ರವಲ್ಲ. ಕರ್ಣಾಟಕ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಚನ್ನಾಗಿ ಪರಿಶ್ರಮವೂ, ಕಾಲದೇಶರೀತ್ಯಾನುಗುಣವಾದ ಲೋಕಾನುಭವವೂ, ಸಂಪೂರ್ಣ ಅನುಕೂಲವಾದ ಕಾಲವ್ಯವಧಾನವೂ, ಉಡುಪಿ ಹಿಂದೂ ಮುದ್ರಾಕ್ಷರ ಶಾಲೆಯವರ ಸಹಾಯವೂ, ಸಮ್ಮಿಳಿತವಾಗಿರುವುದರಿಂದ ಇಂತಹ ಸತ್ಕಾರ್ಯ ನಿರ್ವಾಹಕ್ಕೆ ನಾವು ಸಂಪೂರ್ಣ ಸಮರ್ಥರೆಂದು ಸಾರಬಹುದಿತ್ತು. ಆದರೆ ಆತ್ಮಸ್ತುತಿಯೆಂಬ ಲೋಕಾಪವಾದ ಭೀತಿ ಬಾಧಿಸುತ್ತಿದೆ.

ಪ್ರಕೃತ ಹಲವು ಮಾತೇಕೆ? ಮುಖ್ಯವಾಗಿ ನಾವು ನಂಬಿ ಸಂಬೋಧಿಸಿರುವ ಶ್ರೀಕೃಷ್ಣಸ್ವಾಮಿಯ ಮೇಲೆ ದೃಷ್ಟಿಯನ್ನಿಡಿರಿ! ದೇಶಾಭಿಮಾನಿಗಳೆಲ್ಲರೂ ನಮ್ಮ ಮಾಸ ಪತ್ರಿಕೆಯನ್ನು ತರಿಸಿಕೊಳ್ಳಿರಿ! ಸುಜ್ಞಾನವನ್ನೂ ಅನ್ಯೋನ್ಯಾಭಿವೃದ್ಧಿಯನ್ನೂ ಪಡೆಯಿರಿ! ಪತ್ರಿಕಾಕರ್ತರಾದ ನಮ್ಮನ್ನೂ ಕೃತಾರ್ಥಗೊಳಿಸಿರಿ! ಮತ್ತೇನು ಹೇಳುವ? ಇಂತಹ ಸತ್ಕಾರ್ಯದಲ್ಲಿ ಪ್ರೋತ್ಸಾಹಕರಾದ ನಿಮ್ಮೆಲ್ಲರ ವಿಶ್ವಾಸವನ್ನು ಆಶಿಸುತ್ತಿರುವ,

Dated 30—7—06.
Udipi-

Karody Subba Rao. B. A.
Editor Sirkristna Sukthi.
Udipi South Canara.

Postal Registered No. M. 587.

1906

ಸತ್ಸಂಪ್ರದಾಯ ದೀಪಿಕಾ.

ಸಂಪುಟ ೧] ಆಶ್ವಿಜ, ಕಾರ್ತಿಕ. [ಸಂಚಿಕೆ ೪-೫

೧. ಆಚಾರಕಾಂಡ-ಪುಟ ೪೯ ಲಾ॥ ೪೦.

ಗ್ರಾಮದಲ್ಲಿರುವ ವಿದ್ವಾ॥ ಸೋಮಯಾಜಿ ಯಾನ್‌ಪಾನ್ ಜನಾರ್ದನ್ಸೈಯಂಗಾರ್ಯರವರಿಂದಾ.

೨. ಸಕಲಪ್ರಮಾಣ ತಾತ್ಪರ್ಯ-ಪುಟ ೧೬ ಲಾ॥ ೩೨.

ಉಭಯಭಾಷಾಪಂಡಿತ ಜಟಾವಲ್ಲಭಂ ಅಪ್ಪಯ್ಯೀಯ ಐಯ್ಯಂಗಾರ್ಯರವರಿಂದಾ ಬರೆಯಲ್ಪಟ್ಟು,

ಬೆಂಗಳೂರು:

ಟಿವ್ಯ ಮುದ್ರಾಕ್ಷರ ಶಾಲೆಯಲ್ಲಿ ಹರಿರಾಮ ಮಿಶ್ರರವರಿಂದ ಮುದ್ರಿಸಿ,

ಹಾಸನದಲ್ಲಿರುವ ಎಂ. ರಂಗಸ್ವಾಮ್ಯೈಯಂಗಾರ್ರಿಗೋಸ್ಕರ

ಪ್ರಚುರ ಮಾಡಲ್ಪಟ್ಟಿತು.

೧೯೦೬.

ಕಾಪಿರೈಟ್.

ಹಿಂದುಧರ್ಮಶಾಸ್ತ್ರ.

ಅವಿಭಕ್ತ ಕುಟುಂಬವು— ಈ ಕುಟುಂಬದ ಮುಖ್ಯಲಕ್ಷಣಗಳು ಯಾವುವೆಂದರೆ—೧. ಪುರುಷರೆಲ್ಲರು ಕುಟುಂಬದ ಆಸ್ತಿಯನ್ನು ಮಾಲ್ಕೀ ದೃಷ್ಟಿಯಿಂದ ಕೂಡಿ ಅನುಭೋಗಿಸುತಕ್ಕದ್ದು. ೨. ಇಂಥ ಆಸ್ತಿಯು ಸಂಬಂಧದಿಂದ ಒಬ್ಬನು ಮತ್ತೊಬ್ಬನ ಹಕ್ಕಿಗೆ ಬಾಧೆ ಬರುವಂತೆ ಏನೂ ವ್ಯವಹಾರ ಮಾಡಕೂಡದು, ೩. ಎಲ್ಲರೂ ಕುಟುಂಬದ ಆಸ್ತಿಯನ್ನು ತಮ್ಮ ಸಾಲಕ್ಕೆ ಹೊಣೆ ಮಾಡಬಹುದು; ೪. ತಮಗೆ ಬೇಕಾದಾಗ್ಗೆ ಸದರಿ ಆಸ್ತಿಯನ್ನು ಅವರು ತಮ್ಮೊಳಗೆ ಹಂಚಿಕೊಳ್ಳಬಹುದು. ೫. ಮತ್ತು ಕುಟುಂಬದ ಆಸ್ತಿಯು ಕುಟುಂಬದವರಲ್ಲಿ ಒಬ್ಬಿಬ್ಬರಿಂದ ಸಂಪಾದಿಸಲ್ಪಡಬಹುದಾದರೆ ಎಲ್ಲರಿಂದಲೂ ಸಂಪಾದಿಸಲ್ಪಡಬಹುದು, ಅಥವಾ ಕುಟುಂಬದ ಪೂರ್ವಜನಿಂದಾದರೂ ಸಂಪಾದಿಸಲ್ಪಡತಕ್ಕದ್ದು. ಪಾಲನ್ನು ಬೇಡುವವನು ಮೂಲ ಪುರುಷನಿಂದ ಮೂರು ಪೀಢಿಯಕಿಂತ ಹೆಚ್ಚು ಅಂತರದ ಸಂಬಂಧಿಕನಿದ್ದರೂ ಚಿಂತೆಯಿಲ್ಲ; ಕಡೆಯ ವಾರಸದಾರನಿಂದ ಮೂರು ಪೀಢಿಯ ಸಂಬಂಧವಿದ್ದರೆ ಸಾಕು.

ಅವಿಭಕ್ತ ಆಸ್ತಿಯು ಇದರಲ್ಲಿ ನಾಲ್ಕು ವರ್ಗಗಳು ಮಾಡಲ್ಪಟ್ಟಿವೆ. ಯಾವವೆಂದರೆ—೧. ಪಿತ್ರಾರ್ಜಿತ, ಅಂದರೆ ಪೂರ್ವಜರಿಂದ ಸಂಪಾದಿಸಲ್ಪಟ್ಟದ್ದು. ೨ ಎಲ್ಲರೂ ಕೂಡಿ ಸಂಪಾದಿಸಿದ್ದು; ೩. ಬೇರೆ ಬೇರೆ ಜನರಿಂದ ಸಂಪಾದಿಸಲ್ಪಟ್ಟು ಸಮೂಹಿಕತನದಲ್ಲಿ ಇಡಲ್ಪಟ್ಟದ್ದು ಮತ್ತು ಪಾಲು ಮಾಡಲಿಕ್ಕೆ ಬಾರದಂಥ ಆಸ್ತಿಯು

ಪಿತ್ರಾರ್ಜಿತ ಆಸ್ತಿಯು ಅಪ್ರತಿಬಂಧ ವಾರಸ ಹಕ್ಕಿನಿಂದ ಬಂದ ಆಸ್ತಿಗೆ ಪಿತ್ರಾರ್ಜಿತ ಆಸ್ತಿಯನ್ನುವರು. ಅಂದರೆ ತನ್ನಿಂದ ಮೂರು ಪೀಢಿಯಕಿಂತ ಹೆಚ್ಚು ಅಂತರವಿರದ ಪೂರ್ವಜನಿಂದ ನೈಸರ್ಗಿಕ ಹಕ್ಕಿನಿಂದ ಒಂದದ್ದು, ಇಂಥ ಆಸ್ತಿಯು ಪುನಹಾ ಇವನ ಮತ್ತು ಇವನ ಮಕ್ಕಳ ಪಿತ್ರಾರ್ಜಿತ ಆಸ್ತಿಯಾಗುವದು. ಅಂದರೆ ಇದರಲ್ಲಿ ಅವನ ಮಕ್ಕಳಿಗೆ ಹುಟ್ಟಿದ ಕೂಡಲೆ ತಂದೆಯ ಕೂಡ ವಾರಸ ಹಕ್ಕುಗಳು ಉಂಟಾಗುತ್ತವೆ. ಅಣ್ಣತಮ್ಮಂದಿರಿಂದ ಅಥವಾ ಸ್ತ್ರೀಯಳಿಂದ ಅದವಾ ನಾಲು ಪೀಢಿಯಕಿಂತ ಹೆಚ್ಚಿನ ಅಂತರವುಳ್ಳ ಮೂಲಪುರುಷನಿಂದ ಬಂದ ಆಸ್ತಿಯು ಪಿತ್ರಾರ್ಜಿತವಾಗುವದಿಲ್ಲ; ಇದಕ್ಕೆ ಸಪ್ರತಿಬಂಧ ಆಸ್ತಿಯನ್ನುತ್ತಾರು. ಅಂದರೆ ಇಂಥ ಆಸ್ತಿಯಲ್ಲಿ ಬಬ್ಬನಿಗೆ ನೈಸರ್ಗಿಕ ಹಕ್ಕುಗಳಿಲ್ಲ.

ಕ್ಷಸ್ತಿಯಿಂದ ಉಳಿದ ಸಿಲಕ್ಷ, ಅದರಿಂದ ಹೂಡಿ ಅಥವಾ ಕೊಂಡ ಆಸ್ತಿಯೂ ಸಹ ಪಿತ್ರಾರ್ಜಿತ ಆಸ್ತಿಯನ್ನಿಸಿಕೊಳ್ಳುವದು. ಪಿತ್ರಾರ್ಜಿತ ಆಸ್ತಿಯ ಸಹಾಯವು ತೀರ ತುಸು ಇದ್ದು ಒಬ್ಬನ ಶ್ರಮದಿಂದ ಅಥವಾ ಬುದ್ಧಿಯಿಂದಲೇ ವಿಶೇಷವಾಗಿ ಯಾವದಾದರು ಆಸ್ತಿಯು ಸಂಪಾದಿಸಲ್ಪಟ್ಟಿದ್ದರೆ ಅದು ಸಂಪಾದಿಸಿದವನ ಸ್ವಂತ ಮಾಲ್ಕಿಯ ಆಸ್ತಿಯಾಗುತ್ತದೆ. ಪಿತ್ರಾರ್ಜಿತ ಆಸ್ತಿಯನ್ನೆ ಪತ್ತೀಹಾಕಿ ಅದರಿಂದ ಬಂದ ದುಡ್ಡಿನಿಂದ ಎರಡನೆಯ ಯಾವದಾದರೊಂದು ಆಸ್ತಿಯನ್ನು ಖರೀದಿ ತಕ್ಕೊಂಡರೆ ಅದೂ ಸಹ ಪಿತ್ರಾರ್ಜಿತವೆನಿಸಿಕೊಳ್ಳುವದು. ಅದರಂತೆ ಪಿತ್ರಾರ್ಜಿತ ಜಂಗಮ ಆಸ್ತಿಯಿಂದ ಸ್ಥಾವರ ಆಸ್ತಿಯನ್ನು ಕೊಂಡರೆ ಅದೂಸಹ ಪಿತ್ರಾರ್ಜಿತವೇ ಸರಿ ಒಬ್ಬನು ತಂನ ಮಗನಿಗೆ ತನ್ನ ಸ್ವಸಂಪಾದಿತ ಆಸ್ತಿಯನ್ನು ಮೃತ್ಯುಪತ್ರದಿಂದ ಕೊಟ್ಟರೆ ಅದು ಮಗನ ಕೈಯಲ್ಲಿ ಪಿತ್ರಾರ್ಜಿತವಾಗುವದಿಲ್ಲ; ಅಂದರೆ ಮಗನ ಮಕ್ಕಳಿಗೆ ಅದರಲ್ಲಿ ಹಕ್ಕಿಲ್ಲ. ಆದರೆ ಕರಾರಿನಿಂದ ಸ್ವಸಂಪಾದಿತ ಆಸ್ತಿಯು ಪಿತ್ರಾರ್ಜಿತವಾಗುವದು.

ಕೂಡಿ ಸಂಪಾದಿಸಿದ ಆಸ್ತಿಯು—ಈ ಆಸ್ತಿಯು ಪಿತ್ರಾರ್ಜಿತವಿರಲಿ ವಿದ್ದರೂ ಸಮೂಹಿಕವಿರುತ್ತದೆ. ಸಂಪಾದಿಸಿದವರ ಮಕ್ಕಳು ಇದನ್ನು ಸಂಪಾದಿಸುವದಕ್ಕೆ ಸಹಾಯ ಮಾಡದಿದ್ದರೂ ಅವರಿಗೆ ಆಗುರಲ್ಲಿ ನೈಸರ್ಗಿಕ ಹಕ್ಕುಗಳಿವೆ. ಈ ಆಸ್ತಿಯು ಮಗನಿಗೆ ಬಂದ ಮೇಲೆ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಅವಿಭಕ್ತ ಕುಟುಂಬದವರಲ್ಲಿ ಒಬ್ಬರಿಗೂ ಕೂಡಿ ಒಂದು ಆಸ್ತಿಯು ಕೊಡಲ್ಪಟ್ಟು, ಅವರಲ್ಲಿ ಒಬ್ಬನು ಮೃತಪಾದರೆ ಈ ಆಸ್ತಿಯಲ್ಲಿಯ ಅವನ ಪಾಲು ಅವನ ವಾರಸದಾರರಿಗೆ ಹೋಗುತ್ತದಲ್ಲದೆ ಎರಡನೆಯವನಿಗೆ ಬರುವದಿಲ್ಲ. ಆದರೆ ಅವಿಭಕ್ತ ಕುಟುಂಬದಲ್ಲಿ ಯಾವನಾಬರೊಬ್ಬನು ಉಳಿದವರು ಕುಟುಂಬದ ಆಸ್ತಿಗೆ ವಾರಸದಾರರಾಗುತ್ತಾರೆ

ಒಂದು [illegible] ಯವ್ರವರು

ಮಾನ್ಯ [illegible] ಸೋದರರಿಗೆಲ್ಲಾ, ಕಲ್ಲಾಗಿಲ್ಲಾ ಅವಲ್ಲಿ ವಿರುವ ಪ್ರತಿಯೊಂದು [illegible] ತರುಣರ ಸಾಹಸದಿಂದಲೇ ನಡೆದಿರುವುದು; ಮುಂದಿನವರಿಗೆ ಇವರಿಂದಲೇ ನೆಂಪೇರುವದು. ಅವನು ಸಹಾಯದ ಹೊರತು ಯಾವದೇಶದಲ್ಲಿಯೂ ಯಾವ ಕಾರ್ಯವೂ ಸಾಧ್ಯವಾಗಿಲ್ಲ. ಇಟಲೀ ದೇಶದ ಸ್ವಾತಂತ್ರ್ಯವನ್ನು ಸಂಪಾದಿಸಲಿಕ್ಕೆ ಮಿ. ಮ್ಯಾಝಿನಿಯು ಮಾಡಿದ ಪ್ರಯತ್ನಗಳು ಫಲದ್ರೂಪವಾಗಿದ್ದವು ಅವನು ಅಲ್ಲಿಯ ತರುಣರ ಅಂತಃಕರಣಗಳಲ್ಲಿ ಉಂಟು ಮಾಡಿದ ಭ್ರಾತೃತ್ವ ದೇಶಭಕ್ತಿಯಿಂದಲೇ. ಹಿಂದುಸ್ಥಾನದಲ್ಲಿ ಸ್ವದೇಶೀ ಜಾಗರಣವು ಸಮಾಜದ ಎಲ್ಲ ಭಾಗಗಳಲ್ಲಿ ನಂಜರಿಸುತ್ತಿದ್ದು ನಮ್ಮವರಿಯ ತರುಣರ ಅವಿಶ್ರಾಂತ ಶ್ರಮದಿಂದಲೇ. ಅದುದರಿಂದ ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸಬೇಕಾದರೆ ನಾವು ನಮ್ಮ ತರುಣ ದೇಶಾಭಿಮಾನಿಗಳ ಬೆಳಿಗೆಗೂ, ಅವರ ಉತ್ಸಾಹಕ್ಕೂ ಅಡ್ಡ ಬರುವ ವಿಘ್ನಗಳನ್ನು [illegible] ಮಾಡಲಿಕ್ಕೆ ಯತ್ನಿಸಬೇಕು. ಬಾಲವಿವಾಹದಿಂದ ನಮ್ಮ ತರುಣರ ಮೇಲೆ ದುಷ್ಟ ಪರಿಣಾಮಗಳು ಉಂಟಾಗುತ್ತವೆ. ಯ ಕಂದರೆ ಹುಡುಗಹುಡುಗಿಯರು ಪೂರ್ಣ ಬೆಳಿಗೆಯನ್ನು ಹೊಂದುವದರ ಒಳಗಾಗಿ ಅವರ [illegible] ಭೀರದ ಕ್ಷೀಣತೆಯು ಪ್ರಾರಂಭವಾಗುವದೆಂಬದು ಅನುಭವಸಿದ್ಧವಾದ ಮಾತಾಗಿದೆ. ಇದಲ್ಲದೆ, ಚಿಕ್ಕವಂದಿನಲ್ಲಿ ಇವರಿಗೆ ಸಂಸ್ಕಾರ [illegible] ಇವರ ಮೋಹಪಾಶದಲ್ಲಿ ಒಂಮೆ ಬಿದ್ದರೆಂದರೆ ದೇಶಕಾರ್ಯಕ್ಕಾಗಿ [illegible] ತರಗಳಿಗೆ ಎದಿರೊಟ್ಟು ನಿಂತು ಒದಗುವ ಸಂಕಟಗಳನ್ನು ಸೋಸುವಧೈರ್ಯವು ಇವರಲ್ಲಿ ಇಲ್ಲದಂತೆ ಆಗುತ್ತದೆ. ವ್ಯಾಪಂಚಿಕ ಮಾಯಕ್ಕೆ ಬಲಿಗಾಗದವರು ಇರಬಹುದು, ಅದರೆ ಅವರು ಅಪವಾದಗಳಾಗಿರುವರು. ಒಹುತರವಾಗಿ ನಮ್ಮಲ್ಲಿಯ ಹುಡುಗರು [illegible] ವರ್ಷದವರಾದ ಕೂಡಲೆ ಅವರ ತಾಯಿತಂದೆಗಳು ಮಕ್ಕಳ ಇಚ್ಛೆಯ ಹಣೆಗೂ, ಅವರ ಹಿತಾಹಿತದ ಕಡೆಗೂ ಲಕ್ಷ ಕೊಡದೆ ಅವರ ಮದುವೆ ಮಾಡಿ ಬಿಡುತ್ತಾರೆ. ಕುಟುಂಬದ ಭಾರವು ಅವರ ಮೇಲೆ ಬಿದ್ದು ಕುಟುಂಬ ಸಂರಕ್ಷಣೆಗಾಗಿ [illegible] ಘಾತಕರಿಂದ ಗಗನವನ್ನು ಒಂಮ ತಂಮ ಹೆಗಲ ಮೇಲ ಹೇರಿಕೊಂದುಂದರಿ ತಾರುಣ್ಯದಲ್ಲಿರತಕ್ಕ ಉತ್ಸಾಹತೆಯೂ, ಬೇಕಾದ ಕೆಲಸವನ್ನು ಮಾಡೇನಂಬ ಹುರುಪೂ, ಉಜ್ಜ್ವತರದ ಕಲ್ಪನೆಗಳೂ, ಮಹತ್ವಾಕಾಂಕ್ಷೆಯೂ, ಸ್ವಾರ್ಥತ್ಯಾಗವೂ ಅವರಲ್ಲಿ ನಿರ್ಮೂಲವಾಗಿ, ಅವರು ಸ್ವಾರ್ಥಮಯವಾದ ವಾತಾವರಣದಲ್ಲಿ ಬೆಳೆದು ಶರೀರದಿಂದಲೂ, ಮನಸಿನಿಂದಲೂ ದುರ್ಬಲರಾಗಿ ನಿಕರದ ಪ್ರಸಂಗಗಳಲ್ಲಿ ತಂಮ ಮಕ್ಕಳ ತಮ್ಮ ಹೆಂಡರುಮಕ್ಕಳ ಸಂರಕ್ಷಣೆ ಮಾಡಿಕೊಳ್ಳಲಿಕ್ಕೆ ತೀರ ಅಸಮರ್ಥರಾಗುತ್ತಾರೆ, ವೀತರನ್ನಯಿಂತೂ ಇರಲಿ. ಈಗಂತೂ ಜೀವನ ಕಲಹವು ಅತ್ಯಂತ ತೀಕ್ಷ್ಣವಾಗಿದತ್ತಿದೆ. ಉದ್ಯೋಗ ಧಂದೆಗಳನ್ನು ಹುಟ್ಟಿಸಲಿಕ್ಕಾಗಲೀ, ಹೊಟ್ಟೆಗತಂಜೆಕೆಲ್ಲಿಲಿಕ್ಕಾಗಲೀ ದೂರಿನ ಪ್ರದೇಶಗಳಿಗೆ ಹೋಗುವ ಪ್ರಸಂಗ ಬರಬಹುದು. ಇಂಥ ಕಾರ್ಯಗಳು ಪ್ರಾಯಶ್ಚಾರಿಗಳಿಗೇನೆ ಸಾಧ್ಯವಲ್ಲದೆ ಉಳಿದವರಿಗೆ ಸಾಧ್ಯವಲ್ಲ. ಈಗಂತೂ ಪರರಾಜರ ಅಳಿಕೆಯಲ್ಲಿ ನಮ್ಮ ಮಾನಸಿಕ ಮತ್ತು ಕಾರೀರಿಕ ಸ್ವೋದ್ಧಾರ ವ್ಯಾಪಾರಗಳೆಲ್ಲ ಎಂದು ಆಗಿ ನಾಶ್ಯನಿಸಿತ್ವರಾಗಿದ್ದೇವೆ. ಇದೇ ಕ್ರಮವು ಮುಂದೆ ನಡೆದರೆ ನಾವು ನಾಮಶೇಷರಾಗುವೆವೆಂಬದರಲ್ಲಿ ಸಂಶಯವಿಲ್ಲ. ಈಗಿನ ಪರಿಸ್ಥಿತಿಯನ್ನು ನೋಡಿದರೆ ಜೀವನ ರಕ್ಷಣೆಗಾಗಿ ತೀವ್ರವಾ ಯೋಗ್ಯ ಉಪಾಯಗಳನ್ನು ಮಾಡಬೇಕಾಗುವದು, ಅನೇಕ ಸಂಕಟಗಳನ್ನು ಸೋಸಬೇಕಾಗುವದು. ಮತ್ತು ಅತ್ಯಂತ ಸ್ವಾರ್ಥತ್ಯಾಗ ಮಾಡಬೇಕಾಗುವದು. ಅದ್ದರಿಂದ ನಮ್ಮಲ್ಲಿ ಕೆಲಸಕಾರರು ದೇಶಕಾರ್ಯಕ್ಕಾಗಿ ಬ್ರಹ್ಮಚರ್ಯವ್ರತದಿಂದಿರಬಕ್ಕದ್ದು. ಸಾವಿರಾರು ದುರ್ಬಲ ಮತ್ತು ಹೇಡಿಯಾದ ಜನರಿಗಿಂತ ಇಂಥ ನೂರಾರು ತರುಣ ಬ್ರಹ್ಮಚಾರಿಗಳಿಂದ ಹೆಚ್ಚು ದೇಶಕಾರ್ಯಗಳಾಗುವವು. ಇದನ್ನು ಸಿದ್ಧಪಡಿಸಿ ತೆರೆದಿನಲಿಕ್ಕೆ ಹಳೇ [illegible] ಪುಟಗಳನ್ನು ತಿರುವಿ ಹಾಕುವ ಆವಶ್ಯಕತೆಯಿಲ್ಲ; ಬಂಗಾಲದ [illegible] ಉದಾಹರಣೆಗಳು ಎಲ್ಲರ ಎದುರಿಗೆ ಮುಕ್ತವಾಗಿವೆ. [illegible] ತಾರುಣ್ಯದ ಮಹತ್ವವನ್ನು, ಬಾಲವಿವಾಹದ ದುಷ್ಪರಿಣಾಮವನ್ನು ಕರ್ನಾಟಕ ಬಾಂಧವರಿಗೆ ತಿಳಿಸಲು ಪ್ರಯತ್ನಿಸುತ್ತೇವೆ

ವರ್ಷದ ಚಂದಾ ರೂ. ೨ ಅಂಚೆ ಸಹ

ಓತತ್ಸತ್

ಬ್ರಹ್ಮವಿದ್ಯಾ ಸಂ ಧ.

1908

(ವೈದಿಕ ಮಾಸಪತ್ರಿಕೆ.)

ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕದಾಚನ ॥ (ತೈತ್ತಿರೀಯೋಪನಿಷತ್.)

ಸಂಪುಟ ೦.] ಫೆಬ್ರವರಿ—೧೯೦೮. [ಸಂಚಿಕೆ ೫.

ಶ್ಲೋ॥ ನಿರಾಕಾರಂ ನಿರಾಧಾರಂ ನಿರಾಲಂಬಂ ನಿರಂಜನಂ ।
ನಿರ್ಗುಣಂ ಸಚ್ಚಿದಾನಂದಂ ಶಂಕರಂ ಸದ್ಗುರುಂ ಭಜೇ ॥

ವಿಷಯಸೂಚಿಕೆ.

೧ ತಲವಕಾರೋಪನಿಷತ್(ಕೇನ)...	...	೧— ೪
೨ ಭಗವದ್ಗೀತಾ (೨ ನೆಯ ಅಧ್ಯಾಯ)		೧— ೪
೩ ಅದ್ವೈತ ತಾರಾವಳಿ ...	...	೧— ೪
೪ ವಿವೇಕ ಚೂಡಾಮಣಿ ...	...	೨೫—೨೪
೫ ಅದ್ವೈತ ಮಕರಂದಂ ...	...	೧೩—೧೬

ಮೈಸೂರು :

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್.

೧೯೦೮

Annual Subscription Rs. 2—0—0.

ಲ್ಲರೂ ಅಗತ್ಯ ನೋಡತಕ್ಕದ್ದು.

ಬ್ರಹ್ಮಾನಂದ" ಮಾಸಪತ್ರಿಕೆಗೆ ಐದು ಜನ ಚಂದಾದಾ

ಸತಾತ್ಪರ್ಯ ಅದ್ವೈತತಾರಾವಳಿ ಎಂಬ ವೇದಾಂತಗ್ರಂಥವನು

ರಾಚಾರ್ಯರ, ಗಾಯತ್ರೀದೇವಿಯ, ಶ್ರೀ ಶೃಂಗಗಿರಿ ಜಗದ್ಗುರುಗಳವ

ನ್ನು.

ಹತ್ತು ಜನ ಚಂದಾದಾರರನ್ನ ಸೇರಿಸಿದವರಿಗೆ ಮೇರಲ್ಕಂಡ ಪುಸ್ತಕ ಫೊ

ಜೋಗಳಿಲ್ಲದೆ ಶ್ರೀಮಚ್ಛಂಕರಾಚಾರ್ಯರ 12 ಆ. ಕ್ರಯವುಳ್ಳ ಚರಿತ್ರೆಯೊಂದನು

25 ಜನ ಚಂದಾದಾರನ್ನ ಸೇರಿಸಿಕೊಟ್ಟವರಿಗೆ ಮೇಲ್ಕಂಡ ಬಹುಮಾನ

ಜೊತೆಗೆ ಶ್ರೀಮಚ್ಛಂಕರಾರ್ಯರ 6 ರೂ. ಕ್ರಯವುಳ್ಳ ಅಚ್ಚ ಬೆಳ್ಳಿಯ ಗಟ್ಟ ವಿಗ್ರ

ಒಂದನ್ನೂ ಉಚಿತವಾಗಿ ಕಳುಹಿಸಿಕೊಡುತ್ತೇವೆ.

ಷರಾ:— (ನಿಷ್ಕರ್ಷೆಯಾದ ಚಂದಾ ಮೊಬಲಗು ಪೂರ್ತಿಯಾಗಿ ನ

ಸಭೆಗೆ ಪಾವತಿಯಾದ ಹೊರತು ಬಹುಮಾಗಳನ್ನ ಕಳುಹಲಾಗುವದಿಲ್ಲ. ಮೊ

ಗನ್ನ ಒಟ್ಟಾಗಿಯಾದರೂ ಚಿಲ್ಲರೆಯಾಗಿಯಾದರೂ ಕಳುಹಿಸಬಹುದು.)

ಓಂ ತತ್ಸದ್ಬ್ರಹ್ಮಣೇನಮಃ

ಅಥ ಸಾಮವೇದೀಯ

ತಲವಕಾರೋಪನಿಷತ್

ಓಂ ಕೇನೇಷಿತಂ ಪತತಿ ಪ್ರೇಷಿತಂಮನಃ ಕೇನಪ್ರಾಣಃಪ್ರಥಮಃ ಪ್ರೈತಿಯುಕ್ತಃ | ಕೇನೇಷಿತಾಂ ವಾಚಮಿಮಾಂವದನ್ತಿ ಚಕ್ಷುಃಶ್ರೋತ್ರಂ ಉಉದೇವೋಯುನಕ್ತಿ ॥

ಪ್ರ॥ ಕೇನ —ಯಾರಿಂದ, ಇಷಿತಂಸತ್ — ಅಪೇಕ್ಷಿಸಲ್ಪಟ್ಟಂತಾದ್ದಾಗಿ, ಪ್ರೇಷಿತಂಸತ್—ಪ್ರೇರಿಸಲ್ಪಟ್ಟಂತಾದ್ದಾಗಿ, ಮನಃ—ಮನಸ್ಸು, ಪತತಿ—ಸ್ವವಿಷಯವನ್ನು ಕುರಿತು ಹೋಗುತ್ತದೆ. ಪ್ರಥಮಃ—ಮೊದಲನೆಯದಾದ, ಪ್ರಾಣಃ—ಪ್ರಾಣವು, ಕೇನ—ಯಾರಿಂದ, ಯುಕ್ತಸ್ಸನ್—ಪ್ರೇರಿಸಲ್ಪಟ್ಟಂತಾದ್ದಾಗಿ, ಪ್ರೈತಿ—ತನ್ನ ವ್ಯಾಪಾರವನ್ನು ಕುರಿತು ಹೋಗುತ್ತದೆ. ಕೇನ—ಯಾರಿಂದ, ಈಷಿತಾಂ—ಪ್ರೇರಿಸಲ್ಪಟ್ಟ, ಇಮಾಂ—ಈ ಶಬ್ದಲಕ್ಷಣವಾದ, ವಾಚಂ—ವಾಕ್ಯನ್ನು, ವದನ್ತಿ—ಲೌಕಿಕ ಜನಗಳು ಹೇಳುತ್ತಾರೆ. ಚಕ್ಷುಃ—ಕಣ್ಣನ್ನೂ, ಶ್ರೋತ್ರಂ—ಕಿವಿಯನ್ನೂ, ಉಉದೇವಃ—ಯಾವ ದೇವರು, ಯುನಕ್ತಿ—ತಮ್ಮ ತಮ್ಮ ವಿಷಯಗಳಲ್ಲಿ ಪ್ರೇರಿಸುತ್ತಾನೆ.

ತಾ॥ ಈ ಉಪನಿಷತ್ತಿನಲ್ಲಿ ವಿರಕ್ತನಿಗೆ ಬ್ರಹ್ಮವಿಚಾರವು ಶಿಷ್ಯಾಚಾರ್ಯರ ಪ್ರಶ್ನೋತ್ತರರೂಪದಿಂದ ಬೋಧಿಸಲ್ಪಡುತ್ತದೆ. ಹೇ ಸ್ವಾಮಿ! ಮನಸ್ಸು ಯಾರಿಂದ ಪ್ರೇರಿಸಲ್ಪಟ್ಟು ತನ್ನ ವಿಷಯಕ್ಕೆ ಹೋಗುತ್ತದೆ. ಪ್ರಾಣವು ಯಾರಿಂದ ಪ್ರೇರಿಸಲ್ಪಟ್ಟು ಸ್ವವ್ಯಾಪಾರವನ್ನು ಮಾಡುತ್ತದೆ. ಜನರು ಯಾರಿಂದ ಪ್ರೇರಿಸಲ್ಪಟ್ಟ ಈ ಮಾತನ್ನು ಹೇಳುತ್ತಾರೆ. ಕಣ್ಣು ಕಿವಿ ಮೊದಲಾದವುಗಳನ್ನು ಯಾವ ದೇವರು ತಮ್ಮ ತಮ್ಮ ವಿಷಯಗಳಲ್ಲಿ ಪ್ರೇರಿಸುತ್ತಾನೆ ಎಂಬದಾಗಿ ಶಿಷ್ಯನು ಗುರುಗಳನ್ನು ಪ್ರಶ್ನೆ ಮಾಡುತ್ತಾನೆ.

ಶ್ರೋತ್ರಸ್ಯಶ್ರೋತ್ರಂ ಮನಸೋ ಮನೋ ಯದ್ವಾಚೋಹವಾಚಂ ಸಉಪಾಣಸ್ಯಪ್ರಾಣಃ|ಚಕ್ಷುಷಶ್ಚಕ್ಷುರತಿಮುಚ್ಯಧೀರಾಃ ಪ್ರೇತ್ಯಾಸ್ಮಾಲೋ ಕಾದಮೃತಾಭವನ್ತಿ॥೨

ಸೂಚನೆ—ಈ ಮಾಸಿಕದ ಚಂದಾದಾರರು ಚಂದಾಹಣವನ್ನು ದ. ಮ. ಜೈನಸಭೆಯ ಮೇಂಬರ ವರ್ಗಣೀ ಹಣವನ್ನು ನಮ್ಮ ಕಚೇಗ ರವಾನಿಸಬೇಕು. ಈ ಮಾಸಪತ್ರವು ದೂರಿಗಾದರೂ ಮುಟ್ಟಿಸಿ ಇದ್ದಲ್ಲಿ ಅನೇಕ ಮಾಡಿ ತಮ್ಮ ವಿಳಾಸವನ್ನು ಸುವಾಚ್ಯ ಅಕ್ಷರದಿಂದ ನಮ್ಮ ಕಚೇಗೆ ಬರೆದು ಕಳಿಸಿದರೆ ತಪ್ಪದೇ ಅವರಿಗೆ ಮಾಸ ಪತ್ರಿಕ ಮುಟ್ಟುವಂತೆ ತದನುಕೂಲ ಮಾಡಲಾಗುವುದು. ಈ ವರ್ಷದ ಚಂದಾ ಹಣವನ್ನು ವರ್ಗಣೀ ಹಣವನ್ನೂ ಕಳುಹಿಸಬೇಕು. ಇಲ್ಲವಿದ್ದರೆ ಮುಂದಿನ ವರ್ಷದ ಕಿಯನ್ನು ವ್ಹಿ. ಪಿ. ಯಿಂದ ರವಾನಿಸುವೆವು.

ಅಣ್ಣಪ್ಪ ಚೌಗಲೆ,
ಬಿ. ಎ. ಎಲ್. ಎಲ್. ಬಿ.
ದ. ಮ. ಜೈನ ಸಭೆಯ ಸೆಕ್ರೆಟರಿ, ಬೆಳಗಾವಿ.

ಸೂಚನೆ—ಕರ್ನಾಟ ಶ್ರೀಜಿನವಿಜಯವುಜಲ್ಲಿ ಪ್ರಸಿದ್ಧ ಮಾಡುವದಕ್ಕೋಸ್ಕರ ಲೇಖಗಳನ್ನು ಬರೆಸುವವರು ಅವುಗಳನ್ನು ಸುವಾಚ್ಯ ರೀತಿಯಿಂದ ಕಾಗದದ ಒಂದೇ ಪುಟ್ಟಗಳಿಗೆ ಬರೆದು, ನಮ್ಮ ಕಚೇಗೆ ರವಾನಿಸಬೇಕು. ಮುಖ್ಯವಾಗಿ ಆ ಲೇಖನವು ಜೈನರ ಧರ್ಮಾಚ ನಾಮಾಜಿಕ ಮತ್ತು ವೈದ್ಯೋಗಿಕ ವಿಷಯಗಳ ಕುರಿತು ಇರಬೇಕಲ್ಲದೆ, ಭಾಷೆಯು ಶುದ್ಧವಾಗಿಯೂ ಪ್ರೌಢವಾಗಿಯೂ ಮನೋರಂಜಕವಾಗಿಯೂ ಇರಬೇಕು.

ಮಹಾನುಭಾವರಾದ ನಮ್ಮ ಸಹಯೋಗಿಗಳು ಶ್ರೀಜಿನವಿಜಯದ ಬದಲಾಗಿ ತಮ್ಮ ಸಂಚಿಕೆಗಳನ್ನು ಇನ್ನು ಮುಂದೆ ಕಳಿಗೆ ಸಹಿ ಮಾಡುವವರ ಕಚೇಗೆ ರವಾನಿಸುವ ಹಾಗದೇಕೆಂದು ಪ್ರಾರ್ಥನೆ ಇದೆ.

ಸಂಪಾದಕ:—ಕುಬೇರಪ್ಪ ಭರಮಪ್ಪ ಅಂಕಲಿ, ಬೆಳಗಾವ.

॥ ಶ್ರೀವೀತರಾಗಾಯ ನಮಃ ॥

ಶ್ರೀಜಿನವಿಜಯ

ಜಿನೇಶವಿಜಯಾಕಂಸೀತ್ಯೇತತ್ತನ್ನಾಮ ಕಥ್ಯತೇ ॥
ಗೃಹ್ಣೀಧ್ವಂ ಭೋ ಬುಧಾ ಯೂಯಂ ಪುತ್ರಿಕಾಮಿವ ಪತ್ರಿಕಾಮ್

೪ ನೇ ವರ್ಷ. { ಬೆಳಗಾವಿ, ಮೇ ೧೯೦೯. } ಸಂಚಿಕೆ ೪.

ಸೃಷ್ಟಿವಾದ ಪರೀಕ್ಷೆಯು.

ಲೋಕೋಽಯಂಕೃತ್ರಿಮೋ ಜ್ಞೇಯೋ ಜೀವಾದ್ಯರ್ಥಾವಗಾಹಕಃ ॥
ನಿತ್ಯಃ ಸ್ವಭಾವನಿರ್ವೃತ್ತಃ ಸೋಽನಂತಾಕಾಶಮಧ್ಯಗಃ ॥ ೧ ॥

ಅರ್ಥ— ಲೋಕವು ಬ್ರಹ್ಮನಿಂದ ಮಾಡಲ್ಪಟ್ಟಿಕೆಂದು ಮಿಥ್ಯಾದೃಷ್ಟಿಗಳು ಹೇಳುತ್ತಾರೆ. ಅದರೆ ಜೀವಾದ್ಯರ್ಥಾವಗಾಹವುಳ್ಳ (ಜೀವಮೊದಲಾದ ಅರು ದ್ರವ್ಯಗಳಿಂದ ತುಂಬಿದ) ಲೋಕವು ಅಕೃತ್ರಿಮವಾದದ್ದು, ನಿತ್ಯವಾದದ್ದು, ಸ್ವತಃ ಸಿದ್ಧವಾದದ್ದು ಇದ್ದು ಅನಂತಾಕಾಶದ ಮಧ್ಯದಲ್ಲಿ ಇರುತ್ತದೆ.

ಸ್ರಷ್ಟಾಸ್ಯ ಜಗತಃ ಕಶ್ಚದಸ್ತೀತ್ಯೇಕೇ ಜಗುರ್ಜಡಾಃ ॥
ತದ್ದುರ್ನಯನಿರಾಸಾರ್ಥಂ ಸೃಷ್ಟಿವಾದಃ ಪರೀಕ್ಷ್ಯತೇ ॥ ೨ ॥

ಅರ್ಥ— ಈ ಜಗತ್ತಿಗೆ ಯಾವನೋ ಒಬ್ಬ ಸೃಷ್ಟಿಕರ್ತನು ಇದ್ದಾನೆಂದು ಜಡಪುರುಷರು ಹೇಳುತ್ತಾರೆ. ಅವರ ದುರ್ನೀತಿಯನ್ನು ಹೋಗಲಾಡಿಸುವದಕ್ಕೋಸ್ಕರ ಸೃಷ್ಟಿವಾದವು ಪರೀಕ್ಷಿಸಲ್ಪಡುತ್ತದೆ.

ಸ್ರಷ್ಟಾ ಸರ್ಗಬಹಿರ್ಭೂತಃ ಕ್ವಸ್ಥಃ ಸೃಜತಿ ತಜ್ಜಗತ್ ॥
ನಿರಾಧಾರಶ್ಚ ಕೂಟಸ್ಥಃ ಸೃಷ್ಟೇವ್ಯತತ್ಕ್ವ ನಿವೇಶಯೇತ್ ॥ ೩ ॥

ಅರ್ಥ— ಸೃಷ್ಟಿಕರ್ತನು ಜಗದ್ಬಾಹ್ಯನಾಗಿರಬೇಕು. ಹಾಗಾದರೆ ಆಕಾಶಾದಿಗಳೆಲ್ಲ ಜಗತ್ತಿನಲ್ಲಿ ಸೇರಿದ್ದರಿಂದ ಇವನು ಎಲ್ಲಿದ್ದುಕೊಂಡು ಸೃಷ್ಟಿಮಾಡಿದನು? ಸೃಷ್ಟಿಕರ್ತನ ಹೊರತು ಪೊದಲು ಯಾವದೂ ಇರಲಿಲ್ಲವೆಂಬುವದು

ಮಾಸಿದ್ಧವಾಗಿದೆ; ಕೂಟಸ್ಥನು ನೀರಾಧಾರನಾದರೆ ಈ ಜಗತ್ತನ್ನು ಸೃಷ್ಟಿಮಾಡಿ ಎಲ್ಲಿ ಇಟ್ಟಾನು? (ಅಂದರೆ ಆಶ್ರಯಾಪೇಕ್ಷೆಯಾದ ಜಗತ್ತು. ಆಧಾರವಿಲ್ಲದೆ ನಿಲ್ಲುವದೆಲ್ಲೋ ಹ್ಯಾಗೆ ಎಂಬ ತಾತ್ಪರ್ಯವು).

ನೈಕೋ ವಿಶ್ವಾತ್ಮಕಸ್ಯಾಸ್ಯ ಜಗತೋ ಘಟನೇ ಪಟುಃ ॥
ವಿತನೋಶ್ಚ ನ ತನ್ನಾವಿ ಮೂರ್ತವಮುತ್ಪತ್ತುಮರ್ಹತಿ ॥ ೪ ॥

ಅರ್ಥ— ವಿಶ್ವಾತ್ಮಕವಾದ ಜಗತ್ತನ್ನು ಒಬ್ಬನೇ ಘಟನೆ ಮಾಡುವದಕ್ಕೆ ಸಮರ್ಥನಲ್ಲ; ಅವನು ಅಮೂರ್ತನಾದ್ದರಿಂದ (ದೇಹರಹಿತನಿರುವದರಿಂದ) ಮೂರ್ತವಾದ ಈ ಜಗತ್ತನ್ನು ನಿರ್ಮಾಣಮಾಡಲಾರನು.

ಕಫಂ ಚ ಸ ಸೃಜೇಲ್ಲೋಕಂ ವಿನಾನ್ಯೈಃ ಕರಣಾದಿಭಿಃ ॥
ತಾನಿ ಸೃಷ್ಟ್ವಾ ಸೃಜೇಲ್ಲೋಕಮಿತಿ ಚೇದನವಸ್ಥಿತಿಃ ॥ ೫ ॥

ಅರ್ಥ— ಕೂಟಸ್ಥನು (ಹಾನಿವೃದ್ಧಿಗಳಿಲ್ಲದ ಶಾಶ್ವತ ಸ್ಥಿತಿಯುಳ್ಳವನು) ಇತರ ಕರಣಾದಿಗಳು (ಸಾಧನಗಳು) ಇಲ್ಲದೇ ಹ್ಯಾಗೆ ಸೃಷ್ಟಿಮಾಡ್ಯಾನು? ಕರಣಗಳನ್ನು ಮೊದಲು ಹುಟ್ಟಿಸಿ, ಅಮೇಲೆ ಅವುಗಳಿಂದ ಸೃಷ್ಟಿಮಾಡಿದನೆಂದರೆ ಆ ಕರಣವಸ್ತುಗಳನ್ನು ಹುಟ್ಟಿಸುವಾಗ್ಗೆ ಅದಕ್ಕೆ ಬೇರೆ ಯಾವ ಕರಣವಿತ್ತೆಂದು ಮಾಡಿದ ಪ್ರಶ್ನೆಕ್ಕೆ ಸಮಾಧಾನವಿಲ್ಲದ್ದರಿಂದ ಅವನಸ್ಥಿತಿ ಎಂಬ ದೋಷವು ಬರುತ್ತದೆ.

ತೇಷಾಂ ಸ್ವಭಾವಸಿದ್ಧತ್ವೇ ಲೋಕೇಷ್ಯೇತತ್ಪ್ರಸಜ್ಯತೇ ॥
ಕಿಂ ಚ ನಿರ್ಮಾತೃವದ್ವಿಶ್ವಂ ಸ್ವತಃ ಸಿದ್ಧಿಮವಾಪ್ನುಯಾತ್ ॥ ೬ ॥

ಅರ್ಥ— ಕೆಲವು ಸಾಧನಗಳು ಸ್ವತಸ್ಸಿದ್ಧವಾಗಿರುತ್ತವೆ. ಈ ಲೋಕಕ್ಕಾದರೂ ಸ್ವಭಾವಸಿದ್ಧತ್ವವನ್ನು ಯಾಕೆ ಹೇಳಬಾರದು? ಲೋಕವನ್ನು ನಿರ್ಮಾಣಮಾಡುವವನಂತೆ (ನೀನು ಒಪ್ಪಿಕೊಳ್ಳುವ ಈಶ್ವರನಂತೆ) ಈ ಜಗತ್ತು ಸ್ವತಃ ಸಿದ್ಧತ್ವವನ್ನು ಹೊಂದುತ್ತದೆ.

ಸೃಜೇದ್ವಿಶ್ವಮಪಿ ಸಾಮಗ್ರ್ಯಾ ಸ್ವತಂತ್ರಃ ಪ್ರಭುರಿಚ್ಛಯಾ ॥
ಇತೀಚ್ಛಾಮಾತ್ರಮೇವೈತತ್ ಕಃ ಶ್ರದ್ಧಧ್ಯಾದಯುಕ್ತಿಕಂ ॥ ೭ ॥

ಅರ್ಥ— ಯಾವ ಸಾಧನಗಳಿಲ್ಲದೇ ಸ್ವತಂತ್ರನಾದ ಪುರುಷನು ಕೇವಲ ತನ್ನ ಇಚ್ಛೆಯಿಂದಲೇ ಈ ಜಗತ್ತನ್ನು ನಿರ್ಮಾಣ ಮಾಡುತ್ತಾನೆಂದರೆ ಯುಕ್ತಿರಹಿತವಾದ ಈ ಭಾಷಣವನ್ನು ಯಾರು ನಂಬ್ಯಾರು? ಯಾರೂ ನಂಬುವದಿಲ್ಲ.

ಕೃತಾರ್ಥಸ್ಯ ವಿನಿರ್ಮಾತ್ರಾ ಕಫಮೇವಾಸ್ಯ ಯುಜ್ಯತೇ ॥
ಅಕೃತಾತ್ಮೋಪಿ ನ ಸ್ರಷ್ಟಾ ವಿಶ್ವಮೀಷ್ಟೇ ಕುಲಾಲವತ್ ॥ ೮ ॥

ಅರ್ಥ— ಸೃಷ್ಟಿಯನ್ನು ನಿರ್ಮಾಣಮಾಡುವವನಿಗೆ ಯಾವ ಅಪೇಕ್ಷೆಯು ಇಲ್ಲವೆಂದರೆ, ಅವನು ವ್ಯರ್ಥವಾಗಿ ಈ ಸೃಷ್ಟಿಯನ್ನು ಮಾಡಲಿಕ್ಕಿಲ್ಲ; ಸೃಷ್ಟಿ ಮಾಡುವದರಲ್ಲಿ ಯಾವದೊಂದು ಪ್ರಯೋಜನ ಉಂಟೆಂದರೆ ಕೆಲವು ಮಡಿಕೆಗಳನ್ನು ಮಾಡುವ ಕುಂಬಾರನಂತೆ ಕೆಲವು ಸ್ವತಃ ಸಿದ್ಧವಾದ ದ್ರವ್ಯಕ್ಕೆ ರೂಪಾಂತರವನ್ನು ಕೊಡಬಹುದು. ಪರಮಾಣುರೂಪವಾದ ಮೊದಲ್ಗೊಂಡು ವಿಶ್ವವನ್ನೆಲ್ಲ ಸೃಷ್ಟಿಮಾಡಲು ಅಸಮರ್ಥನಾದಾನು?

ಅಮೂರ್ತೋ ನಿಃಕ್ರಿಯೋ ವ್ಯಾಪೀ ಕಥಮೇವ ಜಗತ್ಸೃಜೇತ್ ॥
ನ ಸಿಸೃಕ್ಷಾಪಿ ತಸ್ಯಾಸ್ತಿ ವಿಕ್ರಿಯಾರಹಿತಾತ್ಮನಃ ॥ ೯ ॥

ಅರ್ಥ—ದೇಹರಹಿತನಾದ, ಕ್ರಿಯಾಶೂನ್ಯನಾದ, ಸರ್ವವ್ಯಾಪಿಯಾದ ಈಶ್ವರನು ಈ ಸೃಷ್ಟಿಯನ್ನು ಹ್ಯಾಗೆ ಮಾಡ್ಯಾನು? ಯಾಕಂದರೆ, ವಿಕ್ರಿಯ (ವಿಕಾರ) ರಹಿತನಾದವನಿಗೆ ಸೃಷ್ಟಿಮಾಡಬೇಕೆಂಬ ಅಪೇಕ್ಷೆಯು ಹುಟ್ಟುವದಿಲ್ಲ.

ತಥಾಪ್ಯಸ್ಯ ಜಗತ್ಸರ್ಗೇ ಫಲಂ ಕಿಮಿತಿ ಮೃಗ್ಯತಾಂ ॥
ನಿಷ್ಕ್ರಿಯಾರ್ಥಸ್ಯ ಧರ್ಮಾದಿಪುರುಷಾರ್ಥೇಷ್ವನರ್ಥಿನಃ ॥ ೧೦ ॥

ಅರ್ಥ— ಅಪೇಕ್ಷೆಯು ಇಲ್ಲದಿದ್ದರೂ ಸೃಷ್ಟಿಯನ್ನು ಮಾಡುತ್ತಾನೆಂದರೆ ಸೃಷ್ಟಿಮಾಡುವದರಲ್ಲಿ ಏನಾದರೂ ಪ್ರಯೋಜನವಿರುವದುಂಟೋ ಹ್ಯಾಗೆ? ಇದನ್ನು ವಿಚಾರಿಸಬೇಕು; ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕೂ ಪುರುಷಾರ್ಥಗಳಲ್ಲಿ ಆ ಈಶ್ವರನಿಗೆ ಅಪೇಕ್ಷೆಯಿಲ್ಲದಿದ್ದರೆ ಈ ಜಗತ್‌ಸೃಷ್ಟಿಯಲ್ಲಿ ಏನು ಪ್ರಯೋಜನವು?

ಸ್ವಭಾವತೋ ವಿನೈವಾರ್ಥಾತ್ಸೃಜತೋನರ್ಥಸಂಗತಿಃ ॥
ಕ್ರೀಡೆಯಂ ಕಾಪಿ ಚೇದಸ್ಯ ದುರಂತಾ ಮೋಹಸಂತತಿಃ ॥ ೧೧ ॥

ಅರ್ಥ—ಯಾವದೂ ಪ್ರಯೋಜನವಿಲ್ಲದೆ ಸೃಷ್ಟಿಯನ್ನು ಮಾಡುತ್ತಾನೆಂದರೆ ಅನರ್ಥ ಸಂಗತಿಯು ಬರುತ್ತದೆ; "ಪ್ರಯೋಜನಮನುದ್ದಿಶ್ಯ ನ ಮಂದೋಪಿ ಪ್ರವರ್ತತೇ" ಪ್ರಯೋಜನವಿಲ್ಲದೆ ಮಂದನಾದಾಗ್ಯೂ ಒಂದು ಕಾರ್ಯಮಾಡಲಪೇಕ್ಷಿಸುವದಿಲ್ಲವೆಂಬ ನ್ಯಾಯಕ್ಕೆ ಅಸಂಗತಿಯು ಒದಗುತ್ತದೆಂಬ ತಾತ್ಪರ್ಯವು. ಈ ಸೃಷ್ಟಿಯನ್ನು ಈಶ್ವರನು ಲೀಲೆಯಿಂದ ಮಾಡುತ್ತಾನೆಂದರೆ ಕ್ರೀಡೆಯು ಮೋಹ ಸಂಬದ್ಧವಾದ್ದರಿಂದ ದುರಂತವಾದ ಮೋಹವು ಪ್ರಾಪ್ತವಾಗುತ್ತದೆ.

ಕರ್ಮಾಪೇಕ್ಷಃ ಶರೀರಾದಿ ದೇಹಿನಾಂ ಘಟಯೇದ್ಯದಿ ॥
ನನ್ವೇವಮೀಶ್ವರೋ ನ ಸ್ಯಾತ್ಪಾರತಂತ್ರ್ಯಾತ್ಕುಲಾಲವತ್ ॥ ೧೨ ॥

ಅರ್ಥ— ಜೀವಗಳ ಕರ್ಮಾನುಗುಣವಾಗಿ ಈಶ್ವರನು ಪ್ರಾಣಿಗಳ ಶರೀರ ಮುಂತಾದವುಗಳನ್ನು ಹುಟ್ಟಿಸುತ್ತಾನೆಂದರೆ. ಕುಲಾಲನಂತೆ (ಸೇಮುಕಾರನಂತೆ

ಅವನು ತಂತು (ನೂಲು) ಮುಂತಾದ ಸಾಧನಗಳಿಂದ ಪಟನವನ್ನು ಹುಟ್ಟಿಸುತ್ತಾನೆ. ಈಶ್ವರನು ಪರತಂತ್ರನಾದ್ದರಿಂದ (ಕರ್ಮಾಪೇಕ್ಷಿಯಾದ್ದರಿಂದ) ಪರಾಧೀನನಾ ದವನು ಈ ವಿಶ್ವವನ್ನು ನಿರ್ಮಿಸಲಾರನು.

ನಿಮಿತ್ತಮಾತ್ರಮಿಷ್ಯತೇಶ್ವರಾಯೇ ಕರ್ಮಾದಿಹೇತುಕೆ ॥
ಸಿದ್ಧೋಪಸ್ಥಾಯ್ಯಸೌ ಹಂತ ಪ್ರೇಷ್ಯತೇ ಕೇನಕಾರಣಂ ॥ ೧೩ ॥

ಅರ್ಥ— ಕರ್ಮಾದಿ ಕಾರಣಗಳಿಂದ ವಿಶ್ವವು ಹುಟ್ಟುತ್ತದೆ; ಈಶ್ವರನು ನಿಮಿ ತ್ತಮಾತ್ರನಾಗಿರುತ್ತಾನೆಂದರೆ, ಸಿದ್ಧೋಪಸ್ಥಾಯಿಯಾದ ಈಶ್ವರನು ಯಾಕೆ ಅಕಾ ರಣವಾಗಿ ಪ್ರೇಷಿಸಲ್ಪಡುತ್ತಾನೆ? (ಭಾವಾರ್ಥವೇನಂದರೆ, ಈಶ್ವರನನ್ನು ಬಿಟ್ಟು ಬೇರೆ ಕಾರಣದಿಂದ ಜಗತ್ಸರ್ಜನೆಯು ಆಗುತ್ತಿರಲು ಈಶ್ವರನು ಅನ್ಯಥಾ ಸಿದ್ಧನಾ ಗುತ್ತಾನೆ; ಇವನು ಜಗತ್ತಿಗೆ ಕಾರಣನೆಂತ ಒಪ್ಪಿಕೊಳ್ಳಬಾರದು).

ವತ್ಸಲಃ ಪ್ರಾಣಿನಾಮೇಕಃ ಸೃಜನ್ನನುಜಿಘೃಕ್ಷಯಾ ॥
ನನು ನೈರ್ಘೃಣ್ಯಮಯಿಂ ಸೃಷ್ಟಿಂ ವಿದಧ್ಯಾನುಪಪ್ಲುತಾಂ ॥ ೧೪ ॥

ಅರ್ಥ— ಈಶ್ವರನಿಗೆ ಸೃಷ್ಟಿಮಾಡುವದರಲ್ಲಿ ಬೇರೆ ಪ್ರಯೋಜನವಿಲ್ಲದಿದ್ದರೂ ಅವನು ಪ್ರಾಣಿಗಳ ಮೇಲೆ ಅನುಗ್ರಹ ಮಾಡುವದರ ಸಲುವಾಗಿ ಸೃಜಿಸುತ್ತಾನೆಂದರೆ ಪ್ರಾಣಿಗಳಿಗೆ ದುಃಖಮಯವಾದ ಸೃಷ್ಟಿಯನ್ನು ಮಾಡದೇ ಸುಖಮಯವಾದ ಸೃಷ್ಟಿಯನ್ನೇ ಮಾಡುತ್ತಿದ್ದನು.

ಸೃಷ್ಟಿಪ್ರಯಾಸವೈಯರ್ಥ್ಯಾಂ ಸರ್ಜನೇ ಜಗತಃ ಸತಃ ॥
ನಾತ್ಯನ್ತಮಸತಸ್ಸರ್ಗೇ ಯುಕ್ತೋ ವ್ಯೋಮಾರವಿಂದವತ್ ॥ ೧೫ ॥

ಅರ್ಥ— ಈಶ್ವರನು ಸತ್ಯಭೂತವಾದ ಜಗತ್ತನ್ನು ನಿರ್ಮಿಸುತ್ತಿದ್ದರೆ ಅವನ ಪ್ರಯಾಸವು ವ್ಯರ್ಥವು; ಮತ್ತು ಅಸತ್ಯವಾದ ಜಗತ್ತನ್ನು ಹುಟ್ಟಿಸುತ್ತಿದ್ದರೆ ಗಗನಾರವಿಂದ (ಆಕಾಶದಲ್ಲಿರುವ ಕಮಲ)ದಂತೆ ಆ ಸೃಷ್ಟಿಯು ಮಿಥ್ಯಾಭೂತವಾ ದದ್ದು; ಆದದರಿಂದ ಅವನು ಸತ್ಯ ಮತ್ತು ಅಸತ್ಯವಾದ ಜಗತ್ತನ್ನು ನಿರ್ಮಾಣ ಮಾಡಲಿಕ್ಕೆ ಅಯೋಗ್ಯನು. (ಪರಮಾಣುಗಳು ಸ್ಕಂಧರೂಪವಾಗುವದು ಸ್ಕಂಧಗಳು ಪರಮಾಣುಗಳಾಗುವದು ಸರ್ವ ದ್ರವ್ಯಗಳಲ್ಲಿಯೂ ಇಲ್ಲದೇ ಇರು ವದಿಲ್ಲ; ಗುಣಪರ್ಯಾಯವುಳ್ಳದ್ದೇ ದ್ರವ್ಯವಾಗುತ್ತದೆ; ಆದ್ದರಿಂದ ಸರ್ವ ದ್ರವ್ಯ ಗಳಲ್ಲಿ ಪರ್ಯಾಯವು ಸಿದ್ಧವಾಗಿದೆ).

ನೋದಾಸೀನಃ ಸೃಜೇತ್ಸೃಷ್ಟಿಂ ಸಂಸಾರೀ ನೋವ್ಯನೀಶ್ವರಃ ॥
ಸೃಷ್ಟಿವಾದವತಾನೋಯಂ ತತಶ್ಚಸ ಕುತಶ್ಚನ ॥ ೧೬ ॥

ಅರ್ಥ— ಈಶ್ವರನು ಮುಕ್ತನಿದ್ದರೆ ಉದಾಸೀನನಾಗುವದರಿಂದ ಆವನಿಗೆ ಸೃಷ್ಟಿಮಾಡುವ ಇಚ್ಛೆಯೇ ಆಗುವದಿಲ್ಲ; ಅವನು ಸಂಸಾರಿಯಾಗಿರುತ್ತಾನೆಂದರೆ ಕರ್ಮಾಪೇಕ್ಷಿಯಾಗುವದರಿಂದ ಸೃಜಿಸುವದಕ್ಕೆ ಅಸಮರ್ಥನಾಗುತ್ತಾನೆ. ಆದ್ದರಿಂದ ಯಾತರದೆಶೆಯಿಂದಲೂ ಸೃಷ್ಟಿವಾದವು ನಿಶ್ಚಿತವಾಗುವದಿಲ್ಲ.

ಮಹಾನಧರ್ಮಯೋಗೋಸ್ಯ ಸೃಷ್ಟ್ವಾ ಸಂಹರತಃ ಪ್ರಜಾಃ ॥
ದುಷ್ಟನಿಗ್ರಹಬುಧ್ಯಾ ಚೇದ್ವರಂ ದೈತ್ಯಾದ್ಯಸರ್ಜನಂ ॥ ೧೩ ॥

ಅರ್ಥ— ಮತ್ತು ಈ ಈಶ್ವರನು ಪ್ರಜೆಗಳನ್ನು ಸೃಷ್ಟಿಮಾಡಿ ಸಂಹಾರಮಾಡುತ್ತಾನೆ; ಆದಕಾರಣ ಅವನಿಗೆ ಪ್ರಜಾಸಂಹಾರರೂಪವಾದ ಅಧರ್ಮವು ಬಹಳೇ ಪ್ರಾಪ್ತವಾಗುತ್ತದೆ; ದುಷ್ಟರನ್ನು ನಿಗ್ರಹಿಸುವದಕ್ಕೋಸ್ಕರ ಸಂಹಾರಮಾಡಹತ್ತಿದ್ದರೆ ದುಷ್ಟರನ್ನು ಹುಟ್ಟಿಸದಿರುವದು ಯೋಗ್ಯವಲ್ಲವೆ?

ಬುದ್ಧಿಮದ್ಭೀತುಸಾಂನಿಧ್ಯೇ ತನ್ನಾದ್ಯುತ್ಪತ್ತುಮರ್ಹತಿ ॥
ವಿಶಿಷ್ಟಸನ್ನಿವೇಶಾದಿಪ್ರತೀತೇರ್ನಗರಾದಿವತ್ ॥ ೧೪ ॥

ಅರ್ಥ— ಬುದ್ಧಿಶಾಲಿಗಳಾದ ಶಿಲ್ಪಿಗರು ಭವ್ಯವಾದ ಅರಮನೆಗಳುಳ್ಳ ನಗರಗಳನ್ನು ನಿರ್ಮಾಣಮಾಡುವಂತೆ ಈಶ್ವರನಾದರೂ ತನ್ನ ಬುದ್ಧಿಬಲದಿಂದ ಶರೀರಾದಿಗಳುಳ್ಳ ಜೀವಮೊದಲಾದ ಸೃಷ್ಟಿಯನ್ನು ಮಾಡುತ್ತಾನೆಂಬುವದು ಈಶ್ವರಾಸ್ತಿತ್ವ ವಿಷಯದಲ್ಲಿ ಸಾಧಕವಾಗಲಾರದು; ಬುದ್ಧಿಮುಂತಾದ ವಿಶಿಷ್ಟಸನ್ನಿವೇಶಗಳಿಗೆ ಬೇರೆ ಉಪಪತ್ತಿಯನ್ನು ಹೇಳುತ್ತೇವೆ.

ಇತ್ಯಸಾಧನಮೇವೈತದೀಶ್ವರಾಸ್ತಿತ್ವಸಾಧನೇ ॥
ವಿಶಿಷ್ಟಸನ್ನಿವೇಶಾದೇರನ್ಯಥಾಪ್ಯುಪಪತ್ತಿತಃ ॥ ೧೫ ॥
ಚೇತನಾಧಿಷ್ಠಿತಂ ಸಿದ್ಧಂ ಕರ್ಮನಿರ್ಮಾತೃಚೇಷ್ಟಿತಂ ॥
ತನ್ನೈಕ್ಷಸುಖದುಃಖಾದಿವೈಶ್ವರೂಪ್ಯಾಯ ಕಲ್ಪತೇ ॥ ೨೦ ॥

ಅರ್ಥ— ಈ ವಿಶ್ವವು ಚೇತನವಾದ ಜೀವಗಳಿಂದ ಅಧಿಷ್ಠಿತವಾಗಿ ಮತ್ತು ಕರ್ಮವೆಂಬ ನಿರ್ಮಾತೃವಿನಿಂದ ಚೇಷ್ಟೆ ಮುಂತಾದ ಗತಿಗಳಳ್ಳದ್ದು ಆಗಿ, ಶರೀರ, ಇಂದ್ರಿಯ, ಸುಖದುಃಖ ಮುಂತಾದ ನಾನಾರೂಪಗಳನ್ನು ಧರಿಸುವದಕ್ಕೆ ಸಮರ್ಥವಾಗುತ್ತದೆ. ಚೇತನ ಮತ್ತು ಕರ್ಮ ಮುಂತಾದ ಸಿದ್ಧಪದಾರ್ಥಗಳಿಂದಲೇ ವಿಶ್ವದ ಉಪಪತ್ತಿಯಾಗುತ್ತಿರಲು ಬೇರೆ ಈಶ್ವರನನ್ನು ಒಪ್ಪಿಕೊಳ್ಳುವ ಕಾರಣವಿಲ್ಲ.

ನಿರ್ಮಾಣಕರ್ಮನಿರ್ಮಾತೃಕೌಶಲಾದಾವಿತೋದಯಂ ॥
ಅಂಗೋಪಾಂಗಾದಿವೈಚಿತ್ರ್ಯಮಂಗಿನಾಂ ಸಂಗಿರಾಮಹೇ ॥ ೨೧ ॥

ಅರ್ಥ— ಪ್ರಾಣಿಗಳಲ್ಲಿ ಕಂಡುಬರುವ ಶರೀರ ಬುದ್ಧಿಬಲ ಮೊಂತಾದ ನಾನಾರೂಪಗಳೂ ಮತ್ತು ವಿಶ್ವದಲ್ಲಿ ಕಾಣುವ ಅನೇಕ ವಿಚಿತ್ರರೂಪಗಳೂ ಕರ್ಮ ವೆಂಬ ಕುಶಲವಾದ ಸೃಷ್ಟಿಕರ್ತನ ಕೌಶಲ್ಯದಿಂದ ಉಂಟಾಗಿರುತ್ತವೆಂದು ಹೇಳು ತ್ತೇವೆ. (ಈಶ್ವರನನ್ನು ಬಡಂಬಡುವ ಕಾರಣವಿಲ್ಲ).

ತದೇತತ್ಕರ್ಮವೈಚಿತ್ರ್ಯಾದ್ಭವನ್ನಾನಾತ್ಮಕಂ ಜಗತ್ ॥
ವಿಶ್ವಕರ್ಮಾಣಮಾತ್ಮಾನಂ ಸಾಧಯೇತ್ಕರ್ಮಸಾರಥಿಂ ॥ ೨೨ ॥

ಅರ್ಥ— ಬೇರೆ ಬೇರೆ ಪ್ರಾಣಿಗಳ ಕರ್ಮಗಳು ಭಿನ್ನ ಭಿನ್ನವಾಗಿರುವದರಿಂದ ಆ ಕರ್ಮವೈಚಿತ್ರ್ಯದಿಂದ ಜಗತ್ತು ನಾನಾತ್ಮಕವಾದದ್ದಾಗಿ ಕರ್ಮಸಾರಥಿಯಾದ ವಿಶ್ವಕರ್ಮನಾದ ಆತ್ಮನನ್ನು ಸಾಧಿಸುತ್ತದೆ.

ವಿಧಿಃ ಸ್ರಷ್ಟಾ ವಿಧಾತಾ ಚ ದೈವಂ ಕರ್ಮ ಪುರಾಕೃತಂ ॥
ಈಶ್ವರಶ್ಚೇತಿ ಪರ್ಯಾಯಾ ವಿಜ್ಞೇಯಾಃ ಕರ್ಮವೇಧಸಃ ॥ ೨೩ ॥

ಅರ್ಥ—ಕರ್ಮವೆಂಬ ಬ್ರಹ್ಮನಿಗೆ ವಿಧಿ, ಸೃಷ್ಟಿಕರ್ತ, ಬ್ರಹ್ಮ, ದೈವ (ಪೂರ್ವದಲ್ಲಿ ಮಾಡಿದ ಕರ್ಮವು), ಈಶ್ವರ ಹೀಗೆ ಐದು ಪರ್ಯಾಯನಾಮಗಳು ಇರುತ್ತವೆ.

ಸ್ರಷ್ಟಾರಮಂತರೇಣಾಪಿ ವ್ಯೋಮಾದೀನಾಂ ಚ ಸಂಗರಾತ್ ॥
ಸೃಷ್ಟಿವಾದೀ ಸ ನಿಗ್ರಾಹ್ಯಃ ಶಿಷ್ಟೈರ್ದುರ್ಮತದುರ್ಮದೀ ॥ ೨೪ ॥

ಅರ್ಥ—ಆಕಾಶ ಮೊದಲಾದವುಗಳು ಸೃಷ್ಟಿಕರ್ತನಿಲ್ಲದೆ ಸಿದ್ಧವಾದದ್ದರಿಂದ (ಅದರಂತೆ ವಿಶ್ವನಿರ್ಮಿತಿಯೂ ಸಿದ್ಧವಾಗುವದರಿಂದ) ದುರ್ಮತ ದುರ್ಮದವುಳ್ಳ ಸೃಷ್ಟಿವಾದಿಯು ಶಿಷ್ಟರಿಂದ ನಿಗ್ರಹಿಸಲು ಯೋಗ್ಯನಾದನು.

ತತ್ಸೋಽಸಾವಕೃತೋನಾದಿಸಿಧನಃ ಕಾಲತತ್ವವತ್ ॥
ಲೋಕೋ ಜೀವಾದಿತತ್ವಾನಾಮಾಧಾರಾತ್ಮಾ ಪ್ರಕಾಶತೇ ॥ ೨೫ ॥

ಅರ್ಥ— ಕಾಲತತ್ವದಂತೆ ಲೋಕವು ಅನಾದಿನಿಧನವಾದದ್ದು (ಉತ್ಪತ್ತಿ ಮತ್ತು ಮರಣವಿಲ್ಲದ್ದು ಅಕೃತ್ರಿಮವಾದದ್ದು) ಜೀವಾದಿತತ್ವಗಳಿಗೆ ಆಧಾರವಾಗಿ ಪ್ರಕಾಶಿಸುತ್ತದೆ.

ಅಸೃಜ್ಯೋಯಮಸಂಹಾರ್ಯಃ ಸ್ವಭಾವನಿಯತಸ್ಥಿತಿಃ ॥
ಅಧಸ್ತಿರ್ಯಗೂಪರ್ಯಾಖ್ಯೈಸ್ತ್ರಿಭಿರ್ಭೇದೈಸ್ಸಮನ್ವಿತಃ ॥ ೨೬ ॥

ಅರ್ಥ—ಈ ವಿಶ್ವವು ಸೃಷ್ಟಿಯೋಗ್ಯವಾಗುವದಿಲ್ಲ ಮತ್ತು ಸಂಹಾರಯೋಗ್ಯವಲ್ಲ, ಸ್ವತಃ ಸಿದ್ಧವಾಗಿ ನಿಯತವಾದ ಸ್ಥಿತಿಯುಳ್ಳದ್ದು; ಅಧೋಲೋಕ ತಿರ್ಯಗ್ಲೋಕ ಊರ್ಧ್ವಲೋಕವೆಂಬ ಮೂರು ಭೇದಗಳುಳ್ಳದಿರುತ್ತದೆ.

ಮೇಲಿನ ಶ್ಲೋಕುಗಳು ಶ್ರೀಮಜ್ಜಿನಸೇನಾಚಾರ್ಯರು ರಚಿಸಿದ ಮಹಾ ಪುರಾಣದ ನಾಲ್ಕನೇ ಪರ್ವದಲ್ಲಿ ಸೇರಿವೆ. ಜೈನಮತದಲ್ಲಿ ಈ ಸೃಷ್ಟಿಯನ್ನು ಯಾರೂ ನಿರ್ಮಾಣಮಾಡಿಲ್ಲವೆಂತಲೂ, ಇದು ಸ್ವತಃಸಿದ್ಧವಾಗಿರುವುದೆಂತಲೂ ಆಗಮಪ್ರಮಾಣದಿಂದಲೂ, ಯುಕ್ತಿಯಿಂದಲೂ ಸಿದ್ಧಮಾಡಲ್ಪಟ್ಟಿದೆ. ಈ ಲೇಖವನ್ನು ಈ ಸಂಚಿಕೆಯಲ್ಲಿ ಮುದ್ರಿಸುವ ಅವಶ್ಯಕತೆಯು ಏನೆಂದರೆ ಜೈನರಲ್ಲಿ ಕೆಲವರು ಸ್ವಮತವನ್ನು ಅರಿಯದೆ ಭ್ರಾಂತಿಯಿಂದ ಪರಮತದವರಂತೆ ಸೃಷ್ಟಿಗೆ ಕರ್ತನು ಇರುವನೆಂದು ನಂಬುತ್ತಾರೆ. ಅದು ತಪ್ಪು ತಿಳುವಳಿಕೆಯೆಂದು ಖಂಡಿತವಾಗಿಯೂ ಶಾಸ್ತ್ರಾಧಾರಮೂಲಕವಾಗಿಯೂ ನಾವು ಹೇಳಬೇಕಾಗಿರುವದು. ಪರಮೇಶ್ವರನು ಕೃತಕೃತ್ಯನಾಗಿದ್ದು ಅವನಿಗೆ ಸೃಷ್ಟಿಯನ್ನು ನಿರ್ಮಾಣಮಾಡುವ ಇಚ್ಛೆಯೂ ಅವಶ್ಯಕತೆಯೂ ಇಲ್ಲೆಂಬ ಮಾತು ಸಿದ್ಧವಿದೆ. ಶ್ರೀಜಿನೇಶ್ವರನು ಸರ್ವಪ್ರಾಣಿಗಳಿಗೆ ಹಿತವನ್ನು ಉಪದೇಶಿಸಿ ಮೋಕ್ಷದ ಪ್ರಾಪ್ತಿಯ ಉಪಾಯವನ್ನು ತೋರಿಸಿದ್ದರಿಂದ, ಅವನ ವಚನಗಳಲ್ಲಿ ವಿಶ್ವಾಸವನ್ನಿಟ್ಟು ಅವನಿಂದ ಹೇಳಲ್ಪಟ್ಟ ಮಾರ್ಗವನ್ನು ಅನುಸರಿಸಿದರೆ ತಪ್ಪದೇ ಕಾಲಾಂತರದಲ್ಲಿ ಮುಕ್ತಿಯನ್ನು ಪಡೆಯಬಹುದು. ಆದರೆ ಅವನು ಸೃಷ್ಟಿಕರ್ತನಲ್ಲ. ಜಿನೇಶ್ವರನು ಎಲ್ಲ ಪ್ರಾಣಿಗಳಿಗೆ ಹಿತೋಪದೇಶವನ್ನು ಮಾಡಿದ ಮೂಲಕ ನಾವೆಲ್ಲರೂ ಅವನನ್ನು ಪೂಜಿಸುತ್ತೇವೆ. ಅವನ ಸೇವೆಯಿಂದ ತನಷ್ಯಜ್ಞಕ್ಕೆ ತಾನೇ ಪುಣ್ಯ ಬಂಧವು ಆಗುತ್ತದೆ. ಆದರೆ ಈ ಪುಣ್ಯವನ್ನು ತೀರ್ಥಕರರೂ ಸಾಕ್ಷಾತ್ ಕೈಯತ್ತಿ ಕೊಡುವದಿಲ್ಲ. ಪ್ರಾಣಿಗಳು ತಮ್ಮ ಪುಣ್ಯಪಾಪಗಳಿದ್ದಂತೆ ಸುಖದುಃಖಗಳನ್ನು ಪಡೆಯುತ್ತವೆ; ಕರ್ಮವು ತೀರಿದ ಮೇಲೆ ಮುಕ್ತಿಯನ್ನು ಹೊಂದುತ್ತವೆ. ಅದ್ವೈತವೇದಾಂತಿಗಳು ಸೃಷ್ಟಿಯನ್ನೂ ಸೃಷ್ಟಿಕರ್ತನನ್ನೂ ಒಡಂಬಡುವದಿಲ್ಲ. ಜಗತ್ತೇ ಅಸತ್ಯವಾದದ್ದು; ಬ್ರಹ್ಮ ಮಾತ್ರ ನತ್ಯವಾದದ್ದು; ಈ ಜಗತ್ತು ಮಾಯೆಯಿಂದ ಸತ್ಯವೆಂದು ತೋರುತ್ತದೆ; ಮಾಯೆಯು ನಷ್ಟವಾದ ಕೂಡಲೇ ನಿರ್ಗುಣವಾದ ಬ್ರಹ್ಮನೇ ಅನುಭವಗೋಚರವಾಗುತ್ತಾನೆ. ನೈಯ್ಯಾಯಿಕರೂ, ವೈಶೇಷಿಕರೂ ಜೈನರಂತೆ ಈ ಜಗತ್ತಿಗೆ ಕರ್ತನು ಇಲ್ಲವೆಂದು ಹೇಳುತ್ತಾರೆ. ಬೌದ್ಧರೂ ಹಾಗೇ ಒಪ್ಪುತ್ತಾರೆ. ಪರಮೇಶ್ವರನು ಜಗತ್ಕರ್ತನೆಂದು ವೈಷ್ಣವರು ಹೇಳುತ್ತಾರೆ. ಈ ವಿವೇಚನದ ಮೇಲಿಂದ ಕೆಲವರು ಜೈನರನ್ನು ನಾಸ್ತಿಕರೆಂದು ಭಾವಿಸಬಹುದು. ಆದರೆ ಆ ತಿಳುವಳಿಕೆಯು ಸರ್ವಥಾ ತಪ್ಪು ಇರುವದು. ನಾಸ್ತಿಕರು ಅಂದರೆ ಚಾರ್ವಾಕರು ಅಥವಾ ಶೂನ್ಯಜೀವವಾದಿಗಳು. ದೇಹವೇ ಹೆಚ್ಚಿನದು; ಜೀವವು ದೇಹದ ಗುಣವು; ದೇಹವು ನಷ್ಟವಾದಲ್ಲಿ ತದಾಶ್ರಿತಗುಣವಾದ ಜೀವವಾದರೂ ನಾಶಹೊಂದುತ್ತದೆಂದು ನಾಸ್ತಿಕರು ಹೇಳುವರು. ಪರಲೋಕದಲ್ಲಿಯೂ, ಆತ್ಮಾಸ್ತಿಕ್ಯದಲ್ಲಿಯೂ ಕರ್ಮಮೋಕ್ಷಗಳಲ್ಲಿಯೂ ನಂಬಿಗೆಯನ್ನಿಡುವ ಜೈನರು ನಾಸ್ತಿಕರಾಗಲಾರರು.

ಗಾಯಕವಾಡ ಶ್ರೀಮಂತ ಸಯಾಜೀರಾವ ಮಹಾರಾಜರ ಸನ್ಮಾನವೂ ಮತ್ತು ಜೈನಸಮಾಜದ ಉನ್ನತಿಯು.

ಈ ತಿಂಗಳ ಮೂರನೇ ತಾರೀಖಿಗೆ ಬಡೋದೆ ಸಂಸ್ಥಾನದ ಧೊರೆಗಳಾದ ಶ್ರೀಮಂತ ಸಯಾಜೀರಾವ ಗಾಯಕವಾಡ ಮಹಾರಾಜರವರ ಸವಾರಿಯು ಮುಂಜಾನೆ ಹನ್ನೊಂದುವರೆ ಘಂಟೆಗೆ ಕೊಲ್ಹಾಪುರಕ್ಕೆ ಬರ ಲಾಗಿ ಕೊಲ್ಹಾಪುರದ ಧೊರೆಗಳಾದ ಶಾಹೂಛತ್ರಪತಿ ಮಹಾರಾಜರೂ ಏಜಂಟಸಾಹೇಬರೂ ಮತ್ತು ಸಂಸ್ಥಾನದ ದೊಡ್ಡ ದೊಡ್ಡ ಅಮಲದಾರರೂ ಅವರನ್ನು ಅರಮನೆಗೆ ಬಹು ಸನ್ಮಾನದಿಂದ ಮುಟ್ಟಿಸಿದರು. ಮರುದಿ ವಸ ಮುಂಜಾನೆ ಉಭಯ ಧೊರೆಗಳು ರಾಜಾರಾಮಕಾಲೇಜ, ಅಲ್ಬರ್ಟ್ ಹಾಸ್ಪಿಟಲ್ ಮುಂತಾದ ಸಂಸ್ಥೆಗಳನ್ನು ನೋಡಿ. ಮಧ್ಯಾನ್ಹದ ನಂತರಾ ಆ ನಗರದಲ್ಲಿರುವ ಮರಾಠಾ ಬೋರ್ಡಿಂಗ ಎಂಬ ಸಂಸ್ಥೆಗೆ ದಯಪಾ ಲಿಸಿದರು; ಅಲ್ಲಿಯ ವ್ಯವಸ್ಥೆಯನ್ನು ನೋಡಿ ಅವರಿಗೆ ಬಹಳ ಸಮಾ ಧಾನವಾಯಿತು. ಆ ಬೋರ್ಡಿಂಗದ ವಿದ್ಯಾರ್ಥಿಗಳು ತಮ್ಮ ಸೆಕ್ರೆಟರಿಯ ವರ ಮುಖಾಂತರವಾಗಿ ಅವರಿಗೆ ಮಾನಪತ್ರವನ್ನು ಅರ್ಪಿಸಿದರು; ನಂತರ ಮಹಾರಾಜರು ಮರಾಠಾ ಜನರ ವಿದ್ಯಾಭಿವೃದ್ಧಿಯೆಗೋಸ್ಕರ ಒಳ್ಳೇ ಉಪದೇಶವನ್ನು ಮಾಡಿದ ಮೇಲೆ ಆ ಸಮಾರಂಭವು ತೀರಿತು. ಆ ಮೇಲೆ ಸಮೀಪದಲ್ಲಿದ್ದ ಜೈನ ಬೋರ್ಡಿಂಗವನ್ನು ನೋಡುವದಕ್ಕೋಸ್ಕರ ಅಲ್ಲಿಗೆ ತೆರಳಿದರು.

ಸಭಾಮಂಟಪದಲ್ಲಿ ಮಹಾರಾಜರು ಸ್ಥಾನಾಪನ್ನರಾದ ಮೇಲೆ ಜೈನ ವಿದ್ಯಾಲಯದ ಮಂತ್ರಿಗಳಾದ ಪ್ರೋಫೇಸರ ಲಠ್ಠೆ ಎಮ್. ಏ. ಇವರು ಜೈನ ಸಮಾಜದವರ ತರ್ಫನಿಂದ ಮಹಾರಾಜರ ಸ್ವಾಗತವನ್ನು ಮಾಡಿ ಅಂದದ್ದೇನೆಂದರೆ:—

ಈ ಪ್ರಾಂತದೊಳಗಿನ ಜೈನ ಸಮಾಜದಲ್ಲಿ ಉಚ್ಚ ಮತ್ತು ಮಧ್ಯಮ ಶಿಕ್ಷಣದ ಪ್ರಸಾರವಾಗಬೇಕೆಂದು ದಕ್ಷಿಣ ಮಹಾರಾಷ್ಟ್ರ ಜೈನ ಸಭೆಯ ವರು ಈ ಬೋರ್ಡಿಂಗವನ್ನು ಸ್ಥಾಪಿಸಿದ್ದಾರೆ. ಈ ಪ್ರಾಂತದೊಳಗಿನ

ಜೈನರಲ್ಲಿ ಕೇವಲ ಓದಬರಿ ಬಲ್ಲವರ ಸಂಖ್ಯೆಯು ನೂರಕ್ಕೆ ಹನ್ನೊಂದು ಇರುವದು; ಮತ್ತು ನಾಲ್ಕು ಸಾವಿರ ಜನರಲ್ಲಿ ಒಬ್ಬನಿಗೆ ಮಾತ್ರ ತಕ್ಕ ಮಟ್ಟಿಗೆ ಇಂಗ್ಲಿಷ ಭಾಷೆಯ ಜ್ಞಾನವುಂಟು. ಇದು ಗರ್ಲಂಗ ನ್ಲೋ ಇನ್ಸ್ಟಿಯ ಖಾನೆಸುಮಾರಿಯಿಂದ ಕಂಡುಬರುತ್ತದೆ. ಈ ದುಃಖಕರ ಸಂಗತಿಯನ್ನು ತಿಳಿದು ಮತ್ತು ಬಡೋದೆ ಸಂಸ್ಥಾನದೊಳಗಿನ ತಮ್ಮ ರಾಜನಿಷ್ಠರಾದ ಜೈನ ಪ್ರಜೆಗಳಲ್ಲಿ ಕಲಿತವರ ಪ್ರಮಾಣವು ೬೦ ರಿಂದ ೭೦ ರ ವರೆಗೆ ಇದ್ದದ್ದು ಕಂಡು, ಈ ಸಂಸ್ಥಾನದೊಳಗಿನ ಜೈನರ ವಿದ್ಯಾಭಿವೃದ್ಧಿಯನ್ನು ಮಾಡಬೇಕೆಂದು ಛತ್ರಪತಿ ಮಹಾರಾಜರು ಈ ಸಂಸ್ಥಾನದೊಳಗಿನ ಜೈನರನ್ನು ಪ್ರೋತ್ಸಾಹಗೊಳಿಸಿ ಅವರಿಗೆ ಸಹಾಯ ಮಾಡಿ ಈ ವಿದ್ಯಾರ್ಥಿಭವನವನ್ನು ಸಭೆಯವರಿಂದ ಕಟ್ಟಿಸಿದರು. ಈ ಬೋರ್ಡಿಂಗದಲ್ಲಿ ೫೦ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮಾಡುತ್ತಲಿದ್ದು, ಅವರಿಗೆ ಧಾರ್ಮಿಕ ಮತ್ತು ನೈತಿಕ ಶಿಕ್ಷಣವು ಕೊಡಲ್ಪಡುತ್ತದೆ. ಇದೇ ಮೇರೆಗೆ ಜೈನರಲ್ಲಿ ಸ್ತ್ರೀಶಿಕ್ಷಣದ ಪ್ರಸಾರವಾಗಬೇಕೆಂದು ಈ ನಗರದಲ್ಲಿ ಜೈನ ಸಭೆಯವರು ಒಂದು ಶ್ರಾವಿಕಾಶ್ರಮವನ್ನು ಸ್ಥಾಪಿಸಿದ್ದು, ಅಲ್ಲಿ ಬೆಳಗಾವಿ, ಸೊಲ್ಲಾಪುರ, ಮುಂಗಳೂರ ಮುಂತಾದ ಸ್ಥಳಗಳಿಂದ ಬಂದು ಹದಿನಾರು ವಿದ್ಯಾರ್ಥಿಣಿಯರು ವಿದ್ಯಾಭ್ಯಾಸವನ್ನು ಮಾಡುತ್ತಾರೆ. ಸ್ತ್ರೀಯರಿಗೆ ಚನ್ನಾಗಿ ವಿದ್ಯೆಯನ್ನು ಕಲಿಸಿ, ಅವರನ್ನು ಅಧ್ಯಾಪಿಕೆಯರನ್ನಾಗಿ ಮಾಡಬೇಕೆಂದು ಈ ಸಂಸ್ಥೆಯ ಉದ್ದೇಶವುಂಟು.

ವಿದ್ಯೆಯಲ್ಲಿ ಹಿಮ್ಮೆಟ್ಟಿದ ಸಮಾಜಗಳ ಉದ್ಧಾರ ಮಾಡಬೇಕೆಂಬ ತಮ್ಮ ದೃಢವಾದ ಇಚ್ಛೆಯೂ ಅವಿಶ್ರಾಂತ ಪ್ರಯತ್ನಗಳೂ ಜಗದ್ವಿಖ್ಯಾತವಾಗಿವೆ. ತಾವು ಒಂದೇ ಸಂಸ್ಥಾನದ ಮುಖ್ಯಸ್ಥರಲ್ಲದೆ, ಇಡೀ ಭರತಖಂಡದ ನಾಯಕರಿದ್ದು, ತಮ್ಮ ಉದ್ದೇಶವನ್ನು ನಮ್ಮ ಮಹಾರಾಜರವರು ಸಫಲಮಾಡುವದನ್ನು ಕಂಡು ನಮಗೆ ಬಹಳೇ ಆನಂದವಾಗುತ್ತದೆ. ತಮ್ಮ ಈ ಅಲೌಕಿಕವಾದ ವಿದ್ಯಾಭಿಮಾನವೂ ಎಲ್ಲ ಸಮಾಜದವರ ಹಿತಂಚಿತನೆಯೂ ಹೀಗೆಯೇ ಚಿರಕಾಲವಿರಲೆಂದು ನಾನು ಬೇಡಿಕೊಂಡು, ತಾವು ದಯವಿಟ್ಟು ನಮ್ಮನ್ನು ಅನುಗ್ರಹಿಸಿದ ಬಗ್ಗೆ ತಮ್ಮ ಉಪಕಾರಗಳನ್ನು ಸ್ಮರಿಸುತ್ತೇನೆ.

ಬಳಿಕ ಬಡೋದೆಯ ಧೊರೆಗಳು ಜೈನರನ್ನು ಕುರಿತು ಉಪದೇಶಮಾಡಿದ್ದೇನಂದರೆಃ— ಸಭ್ಯಗೃಹಸ್ಥರೇ, ಜೈನ ಸಮಾಜದವರು ಈ ನಗರದಲ್ಲಿ ಸ್ಥಾಪಿಸಿದ ಸದುದ್ಯೋಗವನ್ನು ನೋಡಿ ನಾನು ಬಹು ಸಂತೋಷಪಡುತ್ತೇನೆ. ಬಾಕಲರ ಶಿಕ್ಷಣದಂತೆ ಬಾಲಿಕೆಯರ ಶಿಕ್ಷಣವನ್ನು ಕುರಿತು, ನೀವು ನಡಿಸಿದ ಪ್ರಯತ್ನಗಳನ್ನು ನೋಡಿ ನನಗೆ ವಿಶೇಷ ಕೌತುಕವೆನಿಸುತ್ತದೆ. ಸಂಸಾರವೆಂಬ ರಥದ ಪತಿಪತ್ನಿಯೆಂಬ ಎರಡೂ ಚಕ್ರಗಳು ವ್ಯವಸ್ಥಿತವಾಗಿರದಿದ್ದರೆ ಆ ರಥವು ನಡೆಯುವ ಬಗೆಯೇನು? ಈ ಉದ್ಯೋಗವನ್ನು ನೀವು ಹೆಚ್ಚು ಶ್ರಮತೆಗೆದುಕೊಂಡು ನಿಮ್ಮ ಶ್ರಾವಿಕಾಶ್ರಮವನ್ನು ಸುಧಾರಿಸುತ್ತ ಹೋದರೆ ಆ ಸಂಸ್ಥೆಯು ಉಳಿದ ಸಮಾಜದವರಿಗೆ ನಿಸ್ಸಂದೇಹವಾಗಿ ಅನುಕರಣೀಯವಾಗುವದು.

ಹಿಂದೂ ಧರ್ಮದೊಳಗಿನ ತತ್ವಗಳಿಗಿಂತ ಕೆಲವು ಹೆಚ್ಚು ಮಹತ್ವವುಳ್ಳ ತತ್ವಗಳು ಜೈನಧರ್ಮದಲ್ಲಿ ಹೇಳಲ್ಪಟ್ಟವೆ. ಅವುಗಳಲ್ಲಿ "ಅಹಿಂಸಾ ಪರಮೋ ಧರ್ಮಃ" ಎಂಬದೊಂದು ತತ್ವವು ಇದ್ದು, ಅದರಿಂದ ಜೈನರು ನಿರ್ಬಲರೆಂದು ಕೆಲವರ ಆಕ್ಷೇಪವುಂಟು; ಆದರೆ ಈ ಆಕ್ಷೇಪವು ಭ್ರಾಂತಿಮೂಲಕವಾಗಿದೆ ಎಂದು ನಾನು ನಂಬುತ್ತೇನೆ. ಯಾಕಂದರೆ, ಎಷ್ಟೋ ಜೈನ ಕ್ಷತ್ರಿಯರು ದಿಗ್ವಿಜಯವನ್ನು ಮಾಡಿ, ತಮ್ಮ ವೈರಿಗಳನ್ನು ಕೊಂದು, ಚಕ್ರವರ್ತಿಗಳಾಗಿ, ಅದೇ ಭವದಲ್ಲಿ ಮೋಕ್ಷವನ್ನು ಪಡೆದರೆಂದು ಜೈನಶಾಸ್ತ್ರವು ಸಾರುತ್ತದೆ. ಗುಜರಾತದಲ್ಲಿ ಜೈನರ ಸಂಖ್ಯೆಯು ಬಹಳ ಇದ್ದು, ಅವರಾದರೂ ತಮ್ಮ ಸಮಾಜದೊಳಗಿನ ಅಜ್ಞಾನವನ್ನು ಹೋಗಲಾಡಿಸುವದಕ್ಕಾಗಿ ಬಹಳೇ ಪ್ರಯತ್ನ ಮಾಡುತ್ತಲಿದ್ದಾರೆ. ಅವರ ಪ್ರಯತ್ನಗಳು ಸಫಲವಾಗಲೆಂದು ನಾನು ಆಶಿಸುತ್ತೇನೆ.

ನನ್ನ ಪ್ರಜೆಗಳಲ್ಲಿ ಜ್ಞಾನದ ಪ್ರಸಾರದ ಬಗ್ಗೆ ನಾನು ಮಾಡಿದ ಪ್ರಯತ್ನಗಳನ್ನು ನೀವು ಕೊಂಡಾಡುತ್ತೀರಿ. ಆದರೆ ನನ್ನ ಪ್ರಯತ್ನವು ತೀರ ಸಣ್ಣದಾಗಿದ್ದು, ಈ ವಿಷಯದಲ್ಲಿ ನಾನು ಇನ್ನೂ ಬಹಳೇ ಶ್ರಮ ಪಡಬೇಕಾಗಿದೆ. ನನ್ನ ಪ್ರಜೆಗಳಲ್ಲಿ ಕೆಲವರಿಗೆ ಜುಲುಮೆಯಿಂದ ಶಿಕ್ಷಣವನ್ನು ಕೊಡುವ ನಿರ್ಬಂಧವನ್ನು ಮಾಡಿದ್ದೇನೆ. ಆದರೆ ಅಷ್ಟರಿಂದಲೇ ಸಮಾ

ಥಾನವಾಗುವಂತೆ ಇಲ್ಲ. ಶ್ರೀಯುತ ವಾಣಿಕಚಕರಿಂದ ಪಾನಾಚರಿಂದ ಇವರು ಈ ಬೋರ್ಡಿಂಗವನ್ನು ಕಟ್ಟಿಸಿದರು; ಆದರೆ ಪ್ರತಿ ಒಬ್ಬ ಜೈನನು ಈ ವಿದ್ಯಾಪ್ರಸಾರದ ಕಾರ್ಯಕ್ಕಾಗಿ ಶಕ್ತ್ಯನುಸಾರವಾಗಿ ಸಹಾಯವನ್ನು ಮಾಡದೆ ಇದ್ದಲ್ಲಿ ಈ ಭವ್ಯವಾದ ಮಂದಿರದಿಂದಲೇ ನಿಮ್ಮ ಜ್ಞಾನ ಪ್ರಸಾರದ ಕಾರ್ಯವು ಎಂದೂ ಸಿದ್ಧವಾಗಲಾರದು. ಅದೇ ಮೇರೆಗೆ ನಿಮ್ಮ ಲ್ಲಿದ್ದ ದುರ್ನಡತೆಗಳನ್ನು ನೀವು ತೆಗೆದು ಹಾಕಬೇಕು. ಆ ನಡತೆಗಳು ಪ್ರಾ ಚೀನಕಾಲದಿಂದ ನಡಗೊಂಡು ಬಂದಿದ್ದರೂ ಅವು ದುಷ್ಟವಾಗಿರುವ ಮೂ ಲಕ ಶಿಷ್ಟರು ಅವುಗಳನ್ನು ಸರ್ವಥಾ ಬಿಟ್ಟು ಬಿಡದಿದ್ದರೆ ಸಮಾಜದ ಹಿತವು ಎಂದಿಗೂ ಆಗಲಾರದು.

ಈಪ್ರಕಾರ ಧೊರೆಗಳ ಭಾಷಣವಾದ ಮೇಲೆ ವಿಳ್ಯ ಪುಷ್ಪಹಾರ ಗಳನ್ನು ಅರ್ಪಿಸಿದನಂತರ ಈ ಸಮಾರಂಭವು ಮುಗಿಯಿತು.

ಪತ್ರವ್ಯವಹಾರವು.

ಶ್ರೀ ವಾಚಕಮಹಾಶಯರೇ, ಶ್ರೀಕ್ಷೇತ್ರ ಶ್ರವಣಬೆಳಗುಳದ ಗೀರ್ವಾಣ ಭಾಷೋಜ್ಜೀವಿನೀ ಪಾಠಶಾಲೆಯ ಸರ್ವ ವಿದ್ಯಾರ್ಥಿಗಳು ಏರ್ಪಡಿಸಿಕೊಂಡಿ ರುವ ಶ್ರೀಜ್ಞಾನಾಭಿವರ್ಧಕ ಬಾಲಭಾರತೀಸಭೆಯ ೪ ನೇ ವಾರ್ಷಿಕ ಮಹೋತ್ಸವವು ಇಲ್ಲಿಯ ವಾಣೀವಿಲಾಸ ಪಾಠಶಾಲೆಯಲ್ಲಿ ಅತ್ಯಂತ ಮನೋ ಹರವಾಗಿ ಜರಗಿತು. ಶ್ರೀಯುತ ಮೋತೀಖನೀ ಆದಿರಾಜಯ್ಯನವರು ಸಭಾ ಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಪಾಠಶಾಲಾ ಅಧ್ಯಕ್ಷರಾದ ವೇ. ದೋರ್ಬ ಲಿ ಜಿನದಾಸ ಶಾಸ್ತ್ರಿಗಳವರು ಸ್ಥಳೀಯ ಮೇಂಬರುಗಳೇ ಮೊದಲಾದ ಪುರ ಮಹನೀಯರುಗಳೂ ಮತ್ತು ಪರಸ್ಥಳೀಯರು ವಿಶೇಷವಾಗಿ ನೆರೆದಿದ್ದರು. ಸಂಗೀತಪುರಸ್ಸರವಾದ ಭಗವತ್‌ಸ್ತೋತ್ರಪೂರ್ವಕವಾಗಿ ಸಭೆಯು ಪ್ರಾ ರಂಭಿಸಲ್ಪಟ್ಟಿತು. ಅನಂತರ ಸಂ ವಿದ್ಯಾರ್ಥಿಗಳಾದ ಕೆಲ್ಲರಶೈಯ್ಯ, ಶ್ರೀಧ ರಯ್ಯ, ಎ. ನೇಮಿರಾಜಯ್ಯ, ನಾಗಪ್ಪನವರು, ಅನಂತರಾಜಯ್ಯ, ಸಿ. ನೇಮಿ ರಾಜಯ್ಯನವರೇ ಮೊದಲಾದವರು ಮಾಡಿದ ಉಪನ್ಯಾಸಗಳು ಶೋಭಾಪೂ ರ್ವಕವಾಗಿದ್ದವು. ಸಭಾಧ್ಯಕ್ಷರು ಒಂದು ಲಲಿತವಾದ ಉಪನ್ಯಾಸವನ್ನು ಮಾಡಿದರು. ಹೊಳಲಕೆರೆ ಮಂ. ರಾ. ರಾ. ಬ್ರಹ್ಮಯ್ಯನವರು ಕೆಲವು ಪುಸ್ತ ಕಗಳನ್ನು, ಮಂ. ರಾ. ರಾ. ಪಂ ಧರಣಯ್ಯನವರು ಕೊಟ್ಟ ವಿತ್ತವನ ವಿದ್ಯಾರ್ಥಿಗಳಿಗೆ ಪಾರಿತೋಷಿಕವಾಗಿ ವಿತರಿಸಿದರು. ಅನಂತರ ಪ್ರೌ

ಸೋಗ್ರಾಸ ಮೊದಲಾದ ವಾದ್ಯಗಳು ಆನಂದಗೊಳಿಸುತ್ತಿರುವಾಗ್ಗೆ ಗಂಧ ಪುಷ್ಪ ತಾಂಬೂಲಾದಿಗಳನ್ನು ಕೊಟ್ಟರು. ಅನಂತರ ಶ್ರೀಭಗವತ್‌ಸ್ತೋತ್ರ ಕೊನೆಯಾಗಿ ಸಭೆಯು ಪೂರ್ತಿಮಾಡಲ್ಪಟ್ಟಿತು.

ಸಭಾ ಸೆ. ಡಿ. ಎಸ್.

ಸ್ವೀಕಾರ ಮತ್ತು ಅಭಿಪ್ರಾಯ.

ಬೆಳಗಾವಿಯ ಶ್ರೀಮಹಾವೀರ ಮುದ್ರಾಲಯದ ಅಧಿಪತಿಗಳಾದ ಮ. ರಾ. ರಾ. ಅಣ್ಣಪ್ಪಾ ಚೌಗುಲೆ ವಕೀಲರಿಂದ ಕಳುಹಿಸಲ್ಪಟ್ಟ ಗ ರತ್ನಕರಂಡಶ್ರಾವಕಾಚಾರ, ಅ ಶ್ರೀಪೂಜ್ಯಪಾದಸ್ವಾಮಿಕೃತ ಉಪಾಸಕಾಚಾರ, ಆ ಶ್ರೀಪದ್ಮನಂದಿಶ್ರಾವಕಾಚಾರ ಮತ್ತು ಳ ಮೃತ್ಯುಮಹೋತ್ಸವ ಈ ನಾಲ್ಕು ಪುಸ್ತಕಗಳನ್ನು ನಾವು ಬಹು ಸಂತೋಷದಿಂದ ಸ್ವೀಕರಿಸುತ್ತೇವೆ. ಜಿನಮತದ ಸಂಸ್ಕೃತ ಗ್ರಂಥಗಳನ್ನು ಎಲ್ಲರಿಗೂ ತಿಳಿಯುವಂತೆ ಭಾಷಾಂತ ರಮಾಡಿ ಕನ್ನಡದಲ್ಲಿ ಮೂಲ ಸಹಿತವಾಗಿ ಮುದ್ರಿಸುವ ಪದ್ಧತಿಯು ನಾಂಪ್ರತಕಾಲದ ಜೈನಸಮಾಜದ ಅವಸ್ಥೆಯನ್ನು ಲಕ್ಷಕ್ಕೆತಂದರೆ ಬಹಳೇ ಸಮಿತಕರವಾಗಿದ್ದು, ಅದರಿಂದ ಸಂಸ್ಕೃತ ಗ್ರಂಥದೊಳಗಿನ ಮರ್ಮವನ್ನು ತಿಳಕೊಳ್ಳುವದು ಬಹಳೇ ಸುಗಮವಾಗಿದೆ. ಮೇಲ್ಕಂಡ ಎಲ್ಲ ಗ್ರಂಥಗಳು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದ್ದು, ಅವುಗಳ ಕ್ರಯ ವಾದರೂ ತೀರ ಸ್ವಲ್ಪವಾಗಿರುತ್ತದೆ. ಶ್ರೀವಸುನಂದೀಶ್ರಾವಕಾಚಾರ, ಪ್ರಶ್ನೋತ್ತರಮಾಣಿಕ್ಯಮಾಲೆ ಮುಂತಾದ ಗ್ರಂಥಗಳು ಅವರಿಂದ ಮುದ್ರಿಸ ಲ್ಪಡುತ್ತಿಲಿವೆ. ಮಹಾಭಿಮಾನಿಗಳು ಈ ಸತ್ಕಾರ್ಯಕ್ಕೆ ತಮ್ಮ ಉದಾರ ಆಶ್ರಯವನ್ನು ಕೊಟ್ಟು ಪ್ರೋತ್ಸಾಹಗೊಳಿಸುವರೆಂದು ನಾವು ನಂಬುತ್ತೇವೆ.

ಬೆಳಗಾವಿ ಜಿಲ್ಲೆಕ್ಕೆ ಸೇರಿದ ವಕ್ಕುಂದ ಎಂಬ ಗ್ರಾಮದ ಕನ್ನಡ ಶಾಲೆಯ ಜೈನ ಶಿಕ್ಷಕರಾದ ಮ. ರಾ. ರಾ. ತಮನಪ್ಪಾ ಪದಮಪ್ಪಾ ಕಲ ಘಟಗಿಯವರು "ಬಾಲಕರನ್ನು ತಿದ್ದುವಿಕೆ" ಎಂಬುದೊಂದು ಸಣ್ಣ ಪುಸ್ತಕವನ್ನು ಕನ್ನಡದಲ್ಲಿ ಪ್ರಸಿದ್ಧ ಮಾಡಿರುತ್ತಾರೆ. ಈ ಪುಸ್ತಕವು ಉಪಯುಕ್ತವಾಗಿದ್ದು, ಭಾಷಾಸರಣಿಯೂ ವಿಷಯಪ್ರತಿಪಾದನಸನ್ನೂ ಮನೋಹರವಾಗಿರುವವೆಂದು ನಾವು ಆನಂದದಿಂದ ತಿಳಿಸುತ್ತೇವೆ.

ಸಂಪಾದಕ.

ಕಳವು.

ಲೇಖಕ:—ತವನಪ್ಪ ಪನ್ಮಪ್ಪ ಕುಲಘಟ್ಟಿಗಿ, ತಡಕೋಡ.

ಮುರವಿರ್ದುದ ನಿಕ್ಷೇಪಿಸಿಯಿರ್ದುದ । ನಿರುತೆ ಬಿದ್ದಿರ್ದ ವಸ್ತುಗಳಾ ॥
ಪರರ ತೆಗೆಯಹೇಳ ತಾಕೊಳ್ಳದಿರ್ಪುದು । ಧರೆಯೊಳು ಕಳನೆಂಬ
ವ್ರತವು ॥ ೧೧ ॥ ದ್ವಾದಶಾನುಪ್ರೇಕ್ಷೆ ॥

ತಾತ್ಪರ್ಯ:— ಮರೆತಂಥ, ಹುಗಿದಂಥ, ಬಿದ್ದಂಥ ವಸ್ತುಗಳನ್ನು ಪರರಿಗೆ ತೆಗೆಯಲಿಕ್ಕೆ ಹೇಳಬಾರದು ಹಾಗು ತಾನೂ ತಕ್ಕೊಳ್ಳಬಾರದು. ದಾನಾರ್ಹವಾದ ದ್ದನ್ನು ತೆಗೆದುಕೊಂಡರೆ. ಕಳವಾಗುತ್ತದೆ. ಅದರೆ ನೀರು ಮುಂತಾದ ದಾನ ಯೋಗ್ಯವಲ್ಲದ ವಸ್ತುಗಳನ್ನು ತೆಗೆದುಕೊಂಡರೂ ಕಳವು ಆಗುವದಿಲ್ಲ.

ಅದರೆ ಯಾವದೊಂದು ಕೃತ್ಯವು ಬುದ್ಧಿಪೂರ್ವಕವಾಗಿ ಅಥವಾ ಉದ್ದೇಶಪೂರ್ವಕವಾಗಿ ಮಾಡಿದರೆ ಮಾತ್ರ ಅಪರಾಧವಾಗುತ್ತದೆಂದು ವ್ಯವಹಾರದ ನಿಯಮಗಳಲ್ಲಿ ಬರೆದಿದ್ದರೆ, ಅಂಥ ಪ್ರಸಂಗದಲ್ಲಿ ಯಾವನೊಬ್ಬನು ಬುದ್ಧಿಪೂರ್ವಕವಾಗಿ ಅಥವಾ ಉದ್ದೇಶಪೂರ್ವಕವಾಗಿ ಆ ಕೃತ್ಯವನ್ನು ಮಾಡಿದರೆ ಕಳವಾಗುತ್ತದೆ. ಇಲ್ಲದಿದ್ದರೆ ಆಗುವದಿಲ್ಲ. ಉದಾಹರಣೆ:—ಒಬ್ಬನು ಬೇರೊಬ್ಬನ ಎತ್ತನ್ನು ಅವನ ಮನೆಯೊಳಗಿಂದ ಅವನನ್ನು ಕೇಳದೇ ತನ್ನ ಕೆಲಸಕ್ಕೆ ಉಪಯೋಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ತೆಗೆದುಕೊಂಡು ಹೋದರೆ, ಅವನು ಕಳವಿನ ಅಪರಾಧ ಮಾಡಿದನೆಂದು ತಿಳಿಯಬೇಕು. ಅದರೆ ಎತ್ತಿನ ಒಡೆಯನು ಅದಕ್ಕೆ ಕಾವಲಿಡದಾಗ ಅದನ್ನು ಯಾರಾದರೂ ತೆಗೆದುಕೊಂಡು ಹೋದಾರೆಂದು ಅವನಿಗೆ ಎಚ್ಚರ ಕೊಡುವದಕ್ಕಾಗಿ ಎತ್ತನ್ನು ಅವನಿಗೆ ತಿರುಗಿ ಕೊಡುವ ಉದ್ದೇಶದಿಂದ ಒಯ್ದು ಬೇರೊಬ್ಬನು ತನ್ನ ಮನೆಯಲ್ಲಿ ಕಟ್ಟಿದ್ದರೆ, ಅದು ಕಳವಿನ ಅಪರಾಧವಾಗುವದಿಲ್ಲ. ಅದುದರಿಂದ ಬುದ್ಧಿಪೂರ್ವಕವಾಗಿ ಯಾವದೊಂದು ಕೃತ್ಯವನ್ನು ಮಾಡಿದರೆ ಮಾತ್ರ ಅಪರಾಧವಾಗುತ್ತದೆ. ಇದು ವ್ಯವಹಾರನಿರ್ಣಯವಾಯಿತು. ಅದರೆ ಯಾವ ಸ್ಥಳದಲ್ಲಿ ಸರ್ವ ಜನಗಳು ಅಚೌರ್ಯ (ಕಳವು ಮಾಡದೆ ಇರೋಣ) ವ್ರತವನ್ನು ಪಾಲಿಸುವರೋ, ಅಲ್ಲೆ ಮರೆತಂಥ ವಸ್ತುಗಳನ್ನು ತರುವ ಮತ್ತು ಅದನ್ನು ತಿರುಗಿಕೊಡುವ ಕಾರಣವೇ ಬೀಳುವದಿಲ್ಲ; ಏಕಂದರೆ, ಆ ಒಡವೆಗಳನ್ನು ಯಾರೂ ಹಿಡಿಯುವದಿಲ್ಲ.

ಯಾವನೊಬ್ಬನು ಎರಡನೇಯವನ ಮನೆಯ ಕನ್ನಾ ಕೊರೆಯುತ್ತಿರಲು ಮನುಷ್ಯರ ಸುಳಿವಾಗಿ ಕಳವಿನ ಕೃತ್ಯ ಪೂರ್ಣವಾಗದೆ ಇದ್ದಾಗ್ಯೂ ಅವನ

ಕನ್ನಾ ಕೊರೆದು ಕಳವು ಮಾಡಿದ ಅಪರಾಧಕ್ಕೆ ಪಾತ್ರನಾಗುತ್ತಾನೆ. ಆದರೆ ಮನಸ್ಸಿನಲ್ಲಿ ಕಳವು ಮಾಡುವ ಇಚ್ಛೆ ಮಾತ್ರ ಇದ್ದು, ಆ ಇಚ್ಛೆಯ ಪ್ರಕಾರ ಆ ಕೆಲಸವನ್ನು ಮಾಡದಿದ್ದರೆ ಬರೀ ಮನಸ್ಸಿನೊಳಗಿನ ದುರಾಲೋಚನೆಯು ಅಪರಾಧವಾಗುವದಿಲ್ಲ. ಆದರೂ ಧರ್ಮಶಾಸ್ತ್ರಜ್ಞರು ತ್ರಿಕರಣಪೂರ್ವಕವಾಗಿ ಅಂದರೆ ಮನ-ವಚನ-ಕಾಯಗಳಿಂದ ಕಳವು ಮಾಡಬಾರದೆಂದು ಹೇಳುತ್ತಾರೆ.

ಹೆಂಗಸಿನ ಸಮ್ಮತಿಯಿಂದ ಆಕೆಯ ಸಂಗವನ್ನು ಮಾಡಿದರೆ, ಗಂಡನ ಸಮ್ಮತಿಯಿಂದ ಅವನ ಹೆಂಡತಿಯ ಸಂಗವನ್ನು ಮಾಡಿದರೆ ಅಪರಾಧವಾಗುವದಿಲ್ಲೆಂದು ಕಾಯ್ದೆಯು ಹೇಳುತ್ತದೆ. ಆದರೆ ಪರಸ್ತ್ರೀಯರನ್ನು ಗಮನ ಮಾಡಬಾರದೆಂದು ಜಿನಶಾಸ್ತ್ರವು ಕೂಗಿ ಹೇಳುತ್ತದೆ.

ನಡಾವಳಿ, ವ್ಯವಹಾರ ಇವೆರಡೂ ಸಂಗತಿಗಳು ಧರ್ಮಶಾಸ್ತ್ರದಲ್ಲಿ ಸಮಾವೇಶವಾಗಿರುತ್ತವೆ. ಅರಸರು ಅಡಳಿತೆಯು ವ್ಯವಸ್ಥೆಗಾಗಿ ರಚಿಸಿ ಪ್ರಸಿದ್ಧಿಸಿದಂಥ ನಿಯಮಗಳ ಸಂಗ್ರಹಕ್ಕೆ ಕಾಯ್ದೆಯೆನ್ನುವರು. ಆ ನಿಯಮಗಳನ್ನು ಪಾಲಿಸತಕ್ಕವರು ಇವುಗಳನ್ನು ಉಲ್ಲಂಘಿಸಿ ನಡೆದರೆ, ಅಧಿಕಾರಿಗಳು ಅವರನ್ನು ಶಿಕ್ಷಿಸಿ ಬಲಾತ್ಕಾರದಿಂದ ಈ ನಿಯಮಗಳಿಗೆ ಅಂಕಿತರಾಗಿ ಮಾಡುವರು. ಆದರೆ ನೀತಿಯನ್ನು ಉಲ್ಲಂಘಿಸುವವನು ತಾನು ಕೆಡುವದಲ್ಲದೆ, ಪರರಿಂದ ದೂಷಿಸಲ್ಪಡುತ್ತಾನೆ. ಮತ್ತು ಪಾಪಕ್ಕೆ ಗುರಿಯಾಗುತ್ತಾನೆ. ನೀತಿಯ ನಿಯಮಗಳು ಉಪದೇಶರೂಪವಾಗಿರುತ್ತವೆ. ಕಾಯ್ದೆಯ ನಿಯಮಗಳು ಅಧಿಕಾರರೂಪವಾಗಿರುತ್ತವೆ. ಆದದರಿಂದ ಶ್ರೀ ಜಿನಧರ್ಮಶಾಸ್ತ್ರದ ನಿಯಮಗಳಂತೆ ನಡೆಯುವವನು ಕಾಯ್ದೆಯ ನಿಯಮಗಳನ್ನು ಸಹ ಪಾಲಿಸಿದಂತಾಗುತ್ತದೆ.

ಕಳವು ಮಾಡುವದು:—ಈಬಗ್ಗೆ ದ್ವಾದಶಾನುಪ್ರೇಕ್ಷೆಯಲ್ಲಿ ಹೇಳಿದ್ದೀಸಂದರೆ,

ಕಳವು ಮಾಡುವವರಿಗೆ ಮುಳಿವುದು ಜಗವೆಲ್ಲ।
ಇಳೇಗೀಶರು ಕೇಳಿದರೇ ॥
ತಳುವದೆ ಶಿರಹಸ್ತ ಪಾದವ ಛೇದಿಪ।
ರಿಳಿವರು ಮುಂದೆ ನಾರಕಕೆ ॥ ೧ ॥
ಹಲವು ಭಯವು ರೋಗ ದಾರಿದ್ರ ದುಃಖಕೆ।
ನೆಲೆಯಾಗಿ ಭವ ಭವದಲ್ಲಿ ॥
ಬಹು ನರಕದ ಬಲು ದುಃಖವ ಭುಂಜಿಪ।
ರಲಸದೆ ಕಳವ ಮಾಡುವರೂ ॥ ೨ ॥

ತಾತ್ಪರ್ಯ:—ಕಳವು ಮಾಡುವವರಿಗೆ ಜಗವೆಲ್ಲ ಮುಳಿಯುವದು; ಅರಸ ನಿಂದ ಶಿಕ್ಷೆಯಾಗುವದು; ಮುಂದೆ ನರಕಗತಿಯಾಗುವದು; ಹಲವು ಭಯಗಳುಂಟಾ ಗುವವು; ದಾರಿದ್ರತನ ಬೆಂಬಳಿಸುವದು; ಭವ ಭವದಲ್ಲಿ ದುಃಖವು ಹಿಂಬಾಲಿಸು ವದು; ಘೋರವಾದ ನರಕದುಃಖವನ್ನುಣ್ಣುವರು.

ಕಳ್ಳತನವು ಗಳಿಸಿದ ಕೀರ್ತಿಯನ್ನು, ಸಮ್ಯಗ್ದರ್ಶನಚಾರಿತ್ರಾತ್ಮಕ ಧರ್ಮ ವನ್ನು ಸಂಹಾರ ಮಾಡುವದು. ಸರ್ವ ಅಪರಾಧಗಳಿಗೆ ಕಾರಣವಾಗುವದು; ಕೊಲೆಗೆ ಸಹಾಯಮಾಡುವದು; ಸಂಕಟಕರವಾದ ಆಪತ್ತನ್ನು ಬೆಳೆಸುವದು; ದುರ್ಗ ತಿಗೆ ಮುಖ್ಯವಾಗಿರುವದು; ಶುಭಕಾರ್ಯಗಳಿಗೆ ಎಡರು ತರುವದು. ಆದ್ದರಿಂದ ಕಳ್ಳತನವನ್ನು ಬುದ್ಧಿಹೀನನು ಮಾಡುತ್ತಾನಲ್ಲದೆ, ಬುದ್ಧಿಶಾಲಿಗಳು ಮಾಡುವದಿಲ್ಲ.

ಈಬಗ್ಗೆ ಜಿನಭಾರತದಲ್ಲಿ ಹೇಳಿದ್ದು ಹ್ಯಾಗಂದರೆ:—

ಪಿಶಿತೆ ವ್ಯಸನದಿ ಬಕನು ವೇಶ್ಯಾ।
ವ್ಯಸನನಾದ ಸುಚಾರುದತ್ತನು।
ಅಸುವ ಅಪಹರವ್ಯಸನನಾ ಭಗದತ್ತ ಭವಭೂತೀ॥
ಹುಸಿಯ ವ್ಯಸನದಿ ಕಳವಿಲಂಜನೆ।
ರಸಿಕನತಿ ಕಾಂಕ್ಷೆಯಲಿ ರುದ್ರರು।
ಸಿಶಿತಚಪಲ ರಾವಣನು ಪರಸತಿ ಯೊಲವಿಗಾಚರಿಸೀ॥೧॥

ಸಿರಿಯನೆಲ್ಲವ ನೀಗಿ ಯೇನಾ।
ಗಿರುವರಾಕಥೆ ಪೇಳ್ವಡತಿ ವಿ।
ಸ್ತರಗಳಾದುದರಿಂದ ಲವಲಾವಾವ ವೆಸನದಲೀ॥
ಚರಿಸಿದರೋ ಆ ಕರುಹ ನಿನಗಾ।
ನರುಹಿದೆನು ಜೂಜಿಂದಲವರಿಗೆ।
ಸರಿಯು ನೀವೆನಿಸಿರ್ದಿರಣು ಗರೆಯಂದನಾ ವಿದುರಾ॥೨॥

ತಾತ್ಪರ್ಯ:— ಮಾಂಸ ಸೇವನೆಯಿಂದ ಬಕನು; ವೇಶ್ಯಾಸಂಗದಿಂದ ಚಾರುದತ್ತನು: ಬೇಟೆಯ ವ್ಯಸನದಿಂದ ಭಗದತ್ತನು; ಹುಸಿಯಿಂದ ಭವಭೂತಿಯು; ಕಳವಿನ ವ್ಯಸನದಿಂದ ಅಂಜನಚೋರನು; ಅತಿಕಾಂಕ್ಷೆಯಿಂದ ರುದ್ರನು; ಪರಸ ತಿಯ ವ್ಯಸನದಿಂದ ರಾವಣನು ಇವರೆಲ್ಲರೂ ಸಿರಿಯನೆಲ್ಲವ ನೀಗಿದರು. ಆ ಕಥೆ ಗಳು ವಿಸ್ತಾರಗಳಾದುದರಿಂದ ಉದಾಹರಣಗಳನ್ನು ಅರುಹಿದೆನು. ಅದದ್ದರಿಂದ ಮಕ್ಕಳಿರಾ, (ಕೌರವರೇ) ಜೂಜಿನ ವ್ಯಸನದಿಂದ ಕೆಡಬೇಡಿರಿ, ಎಂದು ವಿದು ರನು ಹೇಳಿದನು.

ಕಳವು ಮಾಡದಿರುವದುಃ—

ಕಳವನುಳಿದ ಮನುಜರು ಅನವರತವು ।
ಯಿಳೆಗತಿ ಪೂಜಿತರಹರು ॥
ಸತಿಸ್ವರ್ಗದ ಸುಖಭಾಗಿಗಳಾಗಿಯೆ ॥
ನೆಲೆಯರಪ್ಪರು ಮೋಕ್ಷಸುಖಕೆ ॥ ೨ ॥ ದ್ವಾದಶಾನುಪ್ರೇಕ್ಷೆ ॥

ತಾತ್ಪರ್ಯಃ— ಕಳವು ಮಾಡದ ಜನರು ಯಾವಾಗಲೂ ಲೋಕಕ್ಕೆ ಅತಿ ಪೂಜ್ಯರಾಗುವರು; ಸ್ವರ್ಗಸುಖದ ಭಾಗಿಗಳಾಗುವರು; ಮೋಕ್ಷ ಸುಖವನ್ನು ಹೊಂದುವರು.

ಅಚೌರ್ಯವ್ರತಕ್ಕೆ ವಾರಿಷೇಣನ ದೃಷ್ಟಾಂತವಃ—ರಾಜಗೃಹ ಪಟ್ಟಣದಲ್ಲಿ ಶ್ರೇಣಿಕನೆಂಬ ದೊರೆ ಇರುವನು. ಆತನ ಮಗನಾದ ವಾರಿಷೇಣನೆಂಬವನು ಪರ್ವತಿಥಿಯಲ್ಲಿ ಉಪವಾಸ ಮಾಡಿ ರಾತ್ರಿಯಲ್ಲಿ ಪ್ರತಿಮಾಯೋಗವನ್ನು ಮಾಡುತ್ತಾ ನಿಂತಿದ್ದನು. ಆಗ ಒಬ್ಬ ಕಳ್ಳನು ರತ್ನಹಾರವನ್ನು ಕದ್ದು ಓಯ್ಯುತ್ತಿರಲು ರಾಜದಂಡರು ಬೆನ್ನುಹತ್ತಲು ರಾತ್ರಿಯಲ್ಲಿ ಪ್ರತಿಮಾಯೋಗವನ್ನು ಮಾಡುತ್ತ ನಿಂತಿದ್ದ ವಾರಿಷೇಣನ ಮುಂದೆ ಚೆಲ್ಲಿ ಹೋದನು. ಅದನ್ನು ನಿಸ್ಪೃಹನಾಗಿ ವಾರಿಷೇಣನು ಮುಟ್ಟದಿದ್ದರಿಂದ ಬಂದ ವಿಪತ್ತುಗಳನ್ನೆಲ್ಲ ನೀಗಿ ಈ ಜನ್ಮದಲ್ಲಿ ಕೀರ್ತಿಯನ್ನು ಪಡೆದು, ಉತ್ತರ ಜನ್ಮದಲ್ಲಿ ಸ್ವರ್ಗಸುಖವನ್ನು ಅನುಭವಿಸಿದನು.

ವಿಶೇಷಪ್ರಕಾರದ ಕಳವುಗಳು.

ಚೋರಪ್ರಯೋಗ, ಚೋರಾರ್ಥದಾನ, ಹೀನಾಧಿಕಮಾನ, ಸದೃಶಮಿಶ್ರ, ವಿರುದ್ಧರಾಜ್ಯಾಧಿಕ್ರಮಣ ಎಂದು ಕಳವಿನಲ್ಲಿ ಬೇಧಗಳು.

ಚೋರಪ್ರಯೋಗಃ— ಕಳ್ಳರನ್ನು ಕಳುಹಿಸಿ ಕದ್ದು ತರಿಸುವದು, ಕಳ್ಳರಿಗೆ ಸಹಾಯ ಮಾಡುವದು, ವಸ್ತುಗಳನ್ನು ಕದ್ದು ತಂದವನಿಗೆ ಇನಾಮು ಕೊಡುವದು, ಅವನಿಗೆ ಕಳ್ಳಬಂಟನೆಂದು ಬಿರಿದು ಕೊಡುವದು, ಕಳವು ಮಾಡುವದಕ್ಕೆ ಅನುಮೋದನ ಕೊಡುವದು, ಮಾರಾಟಕಾಲಕ್ಕೆ ಚಲೋ ಜೀನಸು ತೋರಿಸಿ, ಕಪಟದಿಂದ ಮೊಟ್ಟೆ ಜೀನಸು ಕೊಡುವದು, ಯಾವದೊಂದು ಪದಾರ್ಥವನ್ನು ನೋಡುವದಕ್ಕೆ ತಕ್ಕೊಂಡಾಗ್ಗೆ ವ್ಯಾಪಾರಸ್ಥರ ಕಣ್ಣುಮರೆಯಾಗಲು ಅದನ್ನು ಅಪಹರಿಸುವದು, ಯಾವದೊಂದು ಒಡವೆಯನ್ನು ತನ್ನ ಸ್ವಾಧೀನದಲ್ಲಿ ಯಾವದೊಂದು ಉದ್ದೇಶದಿಂದ ಕೊಟ್ಟರಲು ಅದನ್ನು ಎರಡನೇ ಕೆಲಸಕ್ಕೆ ಹಚ್ಚುವದು, ಅದರ ಧಾರಣಿ ಸಂಬಂಧದಿಂದ ಹೆಚ್ಚು ಕಡಿಮೆ ಮಾಡುವದು, ಒಬ್ಬನು ಮತ್ತೊಬ್ಬನ ಹೆಸರಿನಿಂದ ಪರೀಕ್ಷೆಗೆ ಕೂಡ್ರುವದು, ಪರೀಕ್ಷೆಯಲ್ಲಿ ವಿಷಯಗಳ ಕಾಪಿ ಮಾಡುವದು ಮುಂತಾದವು ಚೋರಪ್ರಯೋಗವೆಂಬ ಗಿನೆಯ ಅತಿಚಾರವು.

(ಅಪೂರ್ಣ.)

ಉಚಿತ ಕೇರುವಾಜೆ ಪ್ರೆಸಿನಲ್ಲೂ ಅನಂತರ್ಕ್ಕೂ!

ಕ್ತಾ ಪ್ರೇರಕರಿಬ್ಬರಿಗೂ ಸಮರ್ಪಿತವಾದ ಸಮ್ಮಾನಿಗಳು.

ಕೊಳ್ಳಿ ಗ್ರಾಹಕರಾಗಿರಿ!

ಶ್ರೀಂ.

ವೇದಾರ್ಥ-ಪ್ರಕಾಶ

ಎಂಬ

ವೇದಭಾಷ್ಯವೇಭಾಷಾನುವಾದವು.

ಮೊದಲೇ ತಾಲೂಕಿನ ಪ್ರಜ್ಞೋತ್ಪನ್ನ!!

ಹಿಂದೆ ಕೈದರೂ ಮೊದಲಿಂದ

ಪಡೆಯಬೇಕಾಗುವದು.

—ಃಂಃ—

ಪ್ರಿಯಮಿತ್ರರೇ ಬಾಂಧವರಿರಾ !

ನಾವೂ ನೀವೂ ಸಪ್ತ ವೇದೋಕ್ತಿತ ಸದ್ಧರ್ಮಾನುಷ್ಠಾನ ಪರರಾದ ಮಹರ್ಷಿಗಳ ಪಾರಂಪರ್ಯ ಕುಟುಂಬದವರಾಗಿದ್ದು ಕೊಂಡು ಪ್ರತ್ಯಕ್ಷಪಲ್ಲಿಯೂ ನಮ್ಮ ನೆಮ್ಮ ಗೋತ್ರಪ್ರವರ ಪ್ರವರ್ತಕ ಮಹರ್ಷಿಗಳ ನಾಮೋಚ್ಚಾರಣೆಯನ್ನು ಮಾಡುವುದರಿಂದ ಧನ್ಯರಾಗುವೆವೆಂದು ತಿಳಿದು ಆಚರಿಸುತ್ತಾ ಇದ್ದೇವೆ. ಇದರಿಂದ ನಮಗೂ, ನಿಮಗೂ, ನಮ್ಮ ಪೂರ್ವೀಕ ಮಹರ್ಷಿಗಳಿಗೂ, ನಿಮ್ಮ ಪೂರ್ವೀಕ ಮಹರ್ಷಿಗಳಿಗೂ, ಅನಾದಿಸಿದ್ಧ ಧರ್ಮನಿಧಿಯಾಗಿಯೂ, ಜ್ಞಾನಕೋಶವಾಗಿಯೂ ಇರತಕ್ಕ ವೇದವು—ತನ್ನ ಉದಾತ್ತಾದಿ ಸ್ವರಗಳಿಂದ ಕೂಡಿ ಭುವ ಮಂತ್ರ ಘೋಷಗಳಿಂದ ಸಮುದ್ರದಂತೆ ಧ್ವನಿಮಾಡುತ್ತಾ ನಮ್ಮನ್ನಾವರಿಸಿರುವಲ್ಲಿ, ಅದರಲ್ಲಿ ಪರಿಚಯವೂ ನಂಬಿಕೆಯೂ, ವಿಶ್ವಾಸವೂ, ಅದೇ ನಮ್ಮ ಮೋಕ್ಷಕ್ಕೆ ಪಥಪ್ರದರ್ಶಕ ವೆಂಬ ಅನನ್ಯಭಾವನೆಯೂ, ಸ್ಥಿರವಾಗಿರುತ್ತಿರುವದು—ಬರಿಮತೀಯರಾದ ಅನ್ಯಜನಾಂಗಗಳ ಮಧ್ಯೆಪಲ್ಲಿ ಈ ವಿಷಯವನ್ನು ಪ್ರಕಟಿಸಲಾರಂಭಿಸಿದಂತೆ— „ ವೇದವದ್ಯದೇನು ? ” „ ಅದರಲ್ಲಿ ಏನುಹೇಳುತ್ತಿದೆ ? ” ಎಂದು ಮುಂತಾದ ವ್ಯರ್ಥ ಬರವಣಿಗೆಗಳನ್ನು ಬಳಸುವದು ಸಮುಚಿತವೋರಲಿಲ್ಲ: ಯಾಕಂದರೆ—ಎಂತಹ ಬ್ರಾಹ್ಮಣರಾದರೂ, ಈ ವೊವಲೇ ಅದರ ವಿಷಯವನ್ನು ತಿಳಿದುಕೊಂಡು, ಅದರ ಕೆಲವು ಮಂತ್ರಗಳನ್ನಾದರೂ ಅರಿತಿರುವನೆಲ್ಲದೆ ಅದನ್ನು ದಿನೆಂಪ್ರತಿ ಹೇಳಿಕೊಳ್ಳುತ್ತಲೂ ಇರುತ್ತಾನೆ. ಇದರಿಂದ ತಿಳಿದ ವಿಷಯವನ್ನು ತಿಳಿಸುವುದು ಪಿಷ್ಟಪೇಷಣ ದೋಷವಾದೀತಲ್ಲವೆ? ಆದರೂ ಸ್ವಲ್ಪಮಾತ್ರ ಬರಿಯುವೆವು.

ಸಂಗಚ್ಛಧ್ವಂ ಸಂವದಧ್ವಂ-ಸಂವೋಮನಾಂಸಿ ಜಾನತಾಮ್ ॥ ದೇವಾಭಾಗಂ ಯಥಾಪೂರ್ವೇ ಸಂಜಾನಾನಾ ಉಪಾಸತೇ॥ ಋಗ್ವೇದ ೮-೪-೫೯—೦॥ (ಅರ್ಥ) (ಎಲೈ ಮನುಜರಿರಾ) ಪಕ್ಷಪಾತರಹಿತನ್ಯಾಯ ಸತ್ಯಾಚರಣದಿಂದ ಕೂಡಿರುವ ವೇದೋಕ್ತ ಧರ್ಮವನ್ನು ಗ್ರಹಣಮಾಡಿರಿ; ಅದಕ್ಕೆ ವಿಪರೀತವಾಗಿ ನಡಿಯಬೇಡಿರಿ; ಅದರ ಪ್ರಾಪ್ತಿಗಾಗಿ ವಿರೋಧವನ್ನು ಬಿಟ್ಟು, ಪರಸ್ಪರ ಸಮ್ಮತಿಯಿಂದ ಇದ್ದರೆ ನಿಮ್ಮ ಉತ್ತಮಸುಖವು ದಿನೇದಿನೇ ವೃದ್ಧಿಯಾಗುವದು. ಮತ್ತು ನೀವು ವಿತಂಡಾವಾದ ವಾದಗಳನ್ನು ತ್ಯಜಿಸಿ ಪರಸ್ಪರ ಪ್ರೀತಿಯುಕ್ತ ಪ್ರಶ್ನೋತ್ತರಗಳಿಂದ ಧರ್ಮ ಸೂಕ್ಷ್ಮತನ್ನರಿತು ನಿಮ್ಮಜ್ಞಾನವನ್ನು ದಿನೇದಿನೇ ವೃದ್ಧಿಪಡಿಸಿಕೊಳ್ಳಿರಿ; ಇದರಿಂದ ನಿಮ್ಮ ಪುರುಷಾರ್ಥವು ವೃದ್ಧಿಯಾಗಿ ನಿತ್ಯಾನಂದ ಭಾಗಿಗಳಾಗುವಿರಿ, ಹೀಗೆ ಧರ್ಮವನ್ನು ಸೇವಿಸಿರಿ, ಅಧರ್ಮವನ್ನು ತ್ಯಜಿಸಿರಿ; ಹೀಗೆ ಪಕ್ಷಪಾತರಹಿತರಾದಧರ್ಮಾತ್ಮರಾದ ವಿದ್ವಾಂಸರು ವೇದೋಕ್ತ ಧರ್ಮಾಚರಣೆಯನ್ನು ಮಾಡುತ್ತಾ ಇದ್ದಾರೋ ಹಾಗೆಯೇ ಮಾಡಿರಿ. ಧರ್ಮದಜ್ಞಾನವು ಮೂರು ತೆರನಾಗಿ ಲಭಿಸುವುದು; ೧ ಧರ್ಮಾತ್ಮರಾದ ವಿದ್ವಾಂಸರ ಆಚರಣೆಯನ್ನನುಸರಿಸುವಿಕೆಯಿಂದ —(ಇದನ್ನೆ ತೈತ್ತಿರೀಯೋಪನಿಷತ್ತಿನಲ್ಲಿ “ಯೇತತ್ರಬ್ರಾಹ್ಮಣಾಸ್ಸಮ್ಯಕ್ಶರ್ಶಿನಃ ಯುಕ್ತಾ ಆಯುಕ್ತಾ ಅಲೂಕ್ಷಾಧರ್ಮಕಾಮಾಸ್ಯುಃ ಯಥಾತೇ ತತ್ರ ವರ್ತ್ತೇರನ್ ತಥಾತತ್ರವರ್ತೇಥಾಃ ,, ಎಂದು ತಿಳಿಸುವುದು.) ೨. ಆತ್ಮನ ಶುದ್ಧೀಕರಣತ್ವದಿಂದ—(ಇದನ್ನು “ನಾವಿರತೋದುಶ್ಚರಿತಾನ್ನಾಶಾಂತೋನಾಸಮಾಹಿತಃ ॥ ನಾಶಾಂತಮಾನಸೋವಾಪಿ ಪ್ರಜ್ಞಾನೇನೈನಮಾಪ್ನುಯಾತ್ ॥ (ಅರ್ಥ) ಯಾವವರಿಗೆ ಮನುಷ್ಯನು ದುಷ್ಟಕರ್ಮಗಳಿಂದ ವಿರಮಿಸುವನ್ನು ನಡಿಯುವದಿಲ್ಲವೊ, ಮನಸ್ಸಿಗೆ ಶಾಂತಿಯನ್ನೊ, ಸಮಾಹಿತ ಚಿತ್ತವೃತ್ತಿಯನ್ನೂ ಹೊಂದುವದಿಲ್ಲವೋ, ಹಾಗೆಯೇ ಅಂತರಂಗ ವ್ಯವಹಾರಗಳನ್ನು ಶುದ್ಧೀಕರಿಸದೇ ಇರುವನೋ ಅದುವರಿಗೆ ಅವನು ಬೇಕಾದಷ್ಟು ಓದಲಿ, ಕೇಳಲಿ ಅವನಿಗೆ ಪರಮೇಶ್ವರಪ್ರಾಪ್ತಿಯು ಎಂದೆಂದಿಗೂ ಆಗಲಾರದೆಂದು ಕಠವಲ್ಲಿಯಲ್ಲಿದೆ) ಮತ್ತು ಸತ್ಯಗ್ರಹಣದಲ್ಲಿ ಇಚ್ಛೆಯಿಂದ ಹಾಗೆಯೇ ಪರಮೇಶ್ವರೀಯ ವೇದವಿದ್ಯೆಯನ್ನು ಯಥಾವತ್ ತಿಳಿಯುವಿಕೆಯಿಂದ ಸಪ್ತ ಮನುಷ್ಯನಿಗೆ ಪರಮ ಪುರುಷಾರ್ಥಪ್ರಾಪ್ತಿಯಾಗುವದಲ್ಲದೆ ಅನ್ಯಥಾ ಆಗಲಾರದು.

ಈ ವೇದವು ವಿದಜ್ಞಾನೇ, ವಿದಸತ್ತಾಯಾಂ, ವಿದ್ಲೃಲಾಭೆ, ವಿದವಿಚಾರಣೆ ಎಂಬ ಧಾತುಗಳ ಮೇಲೆ “ಹಲಶ್ಚ” ಎಂಬ ಸೂತ್ರದಿಂದ ಘಞ್ ಪ್ರತ್ಯಯವು ಬಂದು ವೇದವೆಂಬ ಶಬ್ದವಾಗುವದು. ಯಾವವರಿಂದ ಸಕಲರೂ ಸರ್ವಸತ್ಯವಿದ್ಯೆಗಳನ್ನು ತಿಳಿಯುವರೋ, ಸರ್ವಸುಖಲಾಭವನ್ನು ಪಡೆಯುವರೋ, ಸತ್ಯಾಸತ್ಯವಿಚಾರವನ್ನು ಮಾಡುವರೋ, ವಿದ್ವಾಂಸರಾಗುವರೋ ಅದೇ ವೇದವು ಹೀಗೆ ವೇದವು ಜ್ಞಾನದ ಅಪಾರಸಮುದ್ರವಾಗಿದೆ. ಇದರ ಅನುಪೇಮ ವ್ಯಾಪಕತ್ವವನ್ನು ನಮ್ಮವಾಣಿಯು ನಿಲುಕಲರಿಯದು. ಇದಕ್ಕಾಗಿಶ್ರೀಮತ್ಪಾಣಿನಿ ಮಹರ್ಷಿಗಳು ತನ್ನ ವ್ಯಾಕರಣ ಶಾಸ್ತ್ರದಲ್ಲಿ ಎಲ್ಲಿ

ನೋಡಿದರೂ ವೇದಾರ್ಥದ ನಿರ್ವಿಚಾರಣೀಯವಾದ ಸ್ವರ ಕಿಲ್ಬಿಷ. ಅರ್ಥವೊಳ್ಳೀಕಕಪ್ರಕ್ರಿಯೆಯುಂತಾದ್ದನ್ನು ತಿಳಿಸುವುದನ್ನೇ ತಿಪಲನೇ ಗುರಿಯಾಗಿಟ್ಟುಕೊಂಡಿದ್ದಾರೆ. ಹಾಗೆಯೇ ಜಗ ಪ್ರಖ್ಯಾತ ಪ್ರತಿಭಾನ್ವಿತರಾಷ್ಟ್ರಷ್ಟಡ್ಡರ್ಶನಕಾರರು ಈ ವೇದ ಕ್ಕಿಗೆ ತೋರಿಸುವಷ್ಟು ಮರ್ಯಾದೆಯನ್ನು ಬರಿದುಲಿಕ್ಕಾಗು ದಿಲ್ಲ. ಯುವನೇಕವು ವೇದದ ದಿವ್ಯ ಬೋಧೆಯುಂಬ ಸರ್ವ ಜನೆಯಿಂದ ಧರ್ಮಭೂಮಿಯೆಂಬದಾಗಿ ಸಕಲ ವಿಕ್ತಟಗಳ ಯೂ ಖ್ಯಾತಿಗೊಂಡಿತ್ತೋ ? ಯಾವವೇಶದ ಆರಣ್ಯಾಮ ವ್ಯದಲ್ಲಿದ್ದ ಮುಷ್ಯಾಶ್ರಮುಗಳಲ್ಲಿ ವೇಪಘೋಷವೂ, ವೇದೋ ಧ್ವನ್ಯಾನುಷ್ಠಾನವೂ ವಿಚ್ಛೇದವಿಲ್ಲದೆ ಜರಗುತಿತ್ತಾ ಇತ್ತೋ? ನಾವ ದೇಶದ ಬ್ರಾಹ್ಮಣೋತ್ತಮರು ಅದ್ಯಾವಧಿ ಆ ವೇ ೋಕ್ತ ಧ್ಯಾನುಷ್ಠಾನ ಪರರಾದ ಮಹರ್ಷಿಗಳ ಸಂತಾನ ನೆಂದನಿಸಿಕೊಂಡು ಸಂತೋಷಿಸುವರೋ ? —ಇಂತಹ ರತಖಂಡದಲ್ಲಿ ವೇದ ಮತ್ತು ವೈದಿಕ ಧರ್ಮಗಳ ನಿರ್ಮೂ ಪೂರ್ವಕವಾಗಿ ಇತರ ಮತಗಳು ತಲೆಯೆತ್ತಬೇಕಾಗಿ ಷ್ಟೇ ಸಾಹಸಪಟ್ಟವು—ಪಡುತ್ತಲೂ ಇವೆ. ಆದರೆ ಮ್ಮ ಪೌರ್ವಿಕರಾದ ಮಹರ್ಷಿಗಳ ತಪಃ ಪ್ರಭಾವವೂ, ೇದಗಳ ಮಹಿಮೆಯೂ ಅನ್ಯಾದೃಶವಾದದ್ದು ! ಯಾವ ಟಕಕ್ಕೂ ಜಗ್ಗದೆ ಈ ವೈದಿಕ ಸಂತಾನವು ಜಗತ್ತಿನಲ್ಲಿ ವ್ಯವಾಗಿದೆ.

ಅನೇಕರು ಅರ್ಥತಿಳಿಯದೇ ವೇದ ಮಂತ್ರಗಳನ್ನು ಠಪಠಿಸುತ್ತಿದ್ದಾರೆ. ಅರ್ಥವನ್ನು ತಿಳಿಯದಿದ್ದರೆ ಫಲವೆಯು ಹುಟ್ಟಲಾರದು ಇದನ್ನು ಕುರಿತು—

ಸ್ಥಾಣುರಯಂಭಾರಹಾರಃ ಕಿಲಾಭೂದಧೀತ್ಯವೇದಂ ನವಿ ಜಾನಾತಿಯೋರ್ಥಮ್ ॥ ಯೋರ್ಥಜ್ಞ ಇತ್ಸಕಲಭದ್ರಮು ತೇ ನಾಕಮೇತಿ ಜ್ಞಾನವಿಧೂತಪಾಪ್ಮಾ ॥ ನಿರುಕ್ತ ॥

ಎ) ಯಾವನು ಅರ್ಥತಿಳಿಯದೆ ವೇದವನ್ನು ಓದುವನೋ ಸುಜನನನ್ನು ತಿಳಿಯಲಾರದೆ ಭಾರವನ್ನು ಹೊರತಕ್ಕ ಸ್ಥಾಣುವಿನಂತಿರುವನು,, ಎಂದಿದೆ.

ಈ ಮಧ್ಯೆ ಬೌದ್ಧಜೈನಾದಿ ಪರಮತೀಯರ ನಿರ್ಬಂಧ ದಲ್ಲಿ ಚದರಿಹೋಗಿ ಸರ್ವತೋಮುಖವಾಗಿ ಬ್ರಾಹ್ಮಣರ ಗತವಾಗಿ ಇದ್ದ ವೇದವನ್ನು ಶ್ರೀಮದ್ವಿದ್ಯಾರಣ್ಯ (ಮಾ ತೀರ್ಥ) ರನರು ತಮ್ಮ ಮಂತ್ರಿಪದದ ಅನುಕೂಲತೆ ಸ ಕ್ರಮವಾಗಿ ಲಕ್ಷಣಾನುಸಾರವಾಗಿ ಮಂತ್ರಗಳನ್ನು ತಿಸಿ, ಋಗ್ವೇದದ ಆದಿ ಮಂತ್ರದಿಂದ ಆಥರ್ವಣವೇದದ ಯಕ್ಕೆನವರಿಗೂ, ಹಾಗೆಯೇ ಇವುಗಳ ಮೇಲಿನ ಬ್ರಾ ಆರಣ್ಯಕಗಳು ಮುಂತಾದ ಎಲ್ಲವಕ್ಕೂ ನಿರುಕ್ಷೆಪ್ಟ ಭಾಷ್ಯವನ್ನೇರ್ಪಡಿಸಿ ಮಹದುಪಕಾರವನ್ನು ಮಾಡಿ, ಬ್ರಾಹ್ಮಣರನ್ನೂ ಸಬಲರನ್ನಾಗಿ ಮಾಡಿದ್ದಾರೆ.

ಇಂತಹ ಅಪೂರ್ವ ಪುಸ್ತಕಗಳನ್ನು ಸುಲಭವಾಗಿ ನಮ್ಮ ಪೌರ್ವೀಕರು ಪಡಿಯುವದು ಸ್ವಪ್ನ ವೆಲ್ಲಿಯೂ ಸಾಧ್ಯವೆನಿಲ್ಲ. ಈಗ ಭಾಷಾಜ್ಞಾನಗಳ ಅನುಕೂಲತೆಯಿಂದ ಕನ್ನಡ ಭಾಷಾಂತರಸಹಿತ ವೇದಭಾಷ್ಯವನ್ನು ಪ್ರಾಪಿಸಲು ಯತ್ನಿಸಿದ್ದೇವೆ.

ವೇದವು ಒಂದೇ ಆದರೂ ಭಿನ್ನಭಿನ್ನ ವಿದ್ಯಾಪ್ರಯೋಜನಾರ್ಥವಾಗಿ ನಾಲ್ಕು ಭಾಗಗಳಾಗಿವೆ. ಇವು ಕ್ರಮವಾಗಿ ವಿಜ್ಞಾನ, ಕರ್ಮ, ಉಪಾಸನಾ ಜ್ಞಾನಕಾಂಡಗಳೆಂದು ಸ್ಥೂಲವಿಭಾಗ ಮಾಡುತ್ತಾ ಇವೆ. ೪ ವೇದಗಳೂ ಬ್ರಾಹ್ಮಣನ ಸ್ವತ್ತಿಗಿವೆ.

ಇತ್ತಲಾಗಿ ಕೆಲವರು ವೇದಭಾಷ್ಯಗಳುಳ್ಳಲೆ ಆಕ್ಷೇಪಕಾರ್ಥವನ್ನು —ವೇದಗಳು ಆಧುನಿಕಗಳೆಂತಲೂ, ಕಾಲಾನುಸಾರವಾಗಿ ಮಂತ್ರಗಳನ್ನುರಚಿಸುತ್ತಾ ಬಂದರೆಂದು,. ಮುಂತಾಗಿ ಈ ಪರಿತಿಪ್ಪ ಭಾಗದಲ್ಲಿ ತೋರಿಸುವಂತೆ ವೇದ ಖಂಡನೆಯನ್ನು ಪ್ರಕಟಿಸಿ, ತನ್ಮೂಲಕ ವೇದಪ ಸ್ಯಾಯವಾದ ಸತ್ಕೃತಿಭಂಗ ಪಡಿಸಿದ್ದಾರೆ. ಹೀಗೆ ವಿದ್ಯಾರಣ್ಯಭಾಷ್ಯವು ಪರಾನ್ನವಾಗಿ ಹೋಗಿದ್ದರೂ, ನಮ್ಮ ದಾಕ್ಷಿಣಾತ್ಯ ಪಂಡಿತವರ್ಯರೂ ಈ ಭಾಗದಲ್ಲಿ ಸ್ವಲ್ಪವೂ ಗಮನಿಕೆಯನ್ನೇ ಕೊಡದೆ ತಮ್ಮ ಆವರಣಾತ್ರಿಯ ನಿದ್ರಾಸುಖಮಗ್ನರಾಗಿದ್ದಾರೆ. ಇದಕ್ಕಾಗಿ ಔತ್ತರೀಯರಾದ ಕೆಲ ಪಂಡಿತರು ನಮ್ಮ ಪಾಂಡಿತ್ಯಬಲದಿಂದ ವೇದದಲ್ಲಿ ಇಂತಹ ಅಕ್ಷೇಪಣೆಗಳಿಗೆ ಆಸ್ಪದವಿಲ್ಲವೆಂದೂ ಮತ್ತು ವೇದದ ನೈಜವಾದ ಅರ್ಥವನ್ನು ತಿಳಿಯಲು ನಾವ್ಯಾರೂ ಸಮರ್ಥರಲ್ಲವೆಂದೂ ವೇದಶಕ್ಯೋದ್ಧಾರಕಾರ್ಥಗಳನ್ನು ಪ್ರಕಟಿಸಿದ್ದಾರೆ.

ಈಗ ನಾವು ಋಗ್ವೇದವನ್ನು ಪ್ರಾರಂಭಿಸಿ,— ೧ ವೇದಲು ಮಂತ್ರ, ೨ಸವೆ, ೩ ಭಾಷ್ಯಾನುಸಾರ ಸಂಸ್ಕೃತಾರ್ಥ, ೪ ಇದರ ನ್ನಡ ಭಾಷಾಂತರ, ೫ವೈಷ್ಣವಶಾಖಾಚಾರ್ಯ ಶ್ರೀಮನ್ಮಧ್ವಾಚಾರ್ಯಕರವರ ಮಗ್ಭಾಷ್ಯ, ೬ ಇದರಕನ್ನಡ ಭಾಷಾಂತರ, ೭ ಈ ಮಂತ್ರದ ವೇಲೆ ಇತರರು ಬರೆದಿರುವ ವಿಕ್ಷೇಪಣೆ, ೮ ಇದರ ಸಮಾಧಾನ—ಈಕ್ರಮವಾಗಿ ಇದಷ್ಟನ್ನು ತೀವ್ರವಾಗಿ ನಮ್ಮ ಗ್ರಾಹಕರಿಗೆ ವೇದ ಭಾಷ್ಯಪುಸ್ತಕಗಳು ದೊರಿಯಲೆಂಬ ಚೇತುವಿನಿಂದ ಈ ಸಾಹಿತ್ಯಕೃತ್ಯಕ್ಕೆ ಕೈಯಿಕ್ಕಿರುವೆವು.

ಪ್ರಕಟಣೆಯಕ್ರಮ.

(ಈ ಪ್ರಕಟನೆಗಾಗಿ ಮದರಾಸಿನಿಂದ ಉತ್ತಮತರಹಾದವ್ವವಾದ ಕಾಗದವನ್ನು ಒಟ್ಟಾಗಿತರಿಸಿಕೊಂಡು, ಡಿಮ್ಮಿ ೪ ಪೇಜಿನಲ್ಲಿ ಕೊನೆಯವರಿಗೂ ಒಂದೇ ವಿಧವಾಗಿ ಛಾಪಿಸುತ್ತಾ ಬರುವೆವು.) ಮೊದಲು ವೇದಗಳಲ್ಲಿರುವ ಅಸಾಧಾರಣ ವಿಷಯಗಳೆಂಬ ಭಾಷ್ಯಪ್ರಸ್ತಾವನೆಯನ್ನು ಇದೇ ೧೯೧೫ನೆ ಅಕ್ಟೋಬರಿನಿಂದ ಪ್ರತಿ ತಿಂಗಳಿಗೆ ಡಿಮ್ಮಿ ೫ ಫಾರಂಗಳಂತೆ ೩ ತಿಂಗಳು ೩ ಸಂಚಿಕೆಗಳನ್ನು ಪ್ರಕಟಿಸುವೆವು. ಇಷ್ಟು ಕಾಲದೊಳಗಾಗಿ ಗ್ರಾಹಕರ ಸಂಖ್ಯೆಯನ್ನು ಕ್ರಮವರಿಸಿಕೊಂಡು ೧೯೧೬ ನೇ ಜನವರಿಯಿಂದ ಋಗ್ವೇದವ ಲವಿ ಪೊದಲ್ಗೊಂಡು ಪ್ರತಿ ತಿಂಗಳಿಗೆ (ಮೇಲಿನ ನೈಜನಂತೆ)

೧೦ ಫೂರಂಗಳ ಅತಿ ಭೂಪಿಸುತ್ತಾ ಸಂಪುಟಿಗಳನ್ನು ಬೈಂಡು ಮಾಡಿಸಿ ಕಳುಹಿಸುತ್ತಾ ಶ್ವರೆಯಾಗಿ ಪೂರೈಸುವೆವು.

ಚಂದಾ ವಿವರ.

ಇದ ನುಮಾನ್ಯವಾದದ್ದಷ್ಟಿ, ಬುದ್ಧನವೂ, ಸಂಪಿತಗಳಾಯಿ ಪೂ. ಬೇಕಾಗಿದೆ. ನಮ್ಮ ಗ್ರಾಹಕರನ್ನು ತಿ ತರಗತಿ ವಿಂಗಡಿಸಿಕೊಳ್ಳಲಾಗಿದೆ. ಯಾರು ಇದೆ ಗಾಗಿ ನೇ ನೆಪ್ಟಂಬರ್ ನೊಳಗಾಗಿ ಈ ಪಾಡಕ್ಕಾರ್ಯಕ್ಕಾಗಿ ಬಂದ ರೂಪ ಯಿಯನ್ನು ಮಾತ್ರ ಮುಂಗಡವಾಗಿ ಕಳುಹಿಸುವವರು ಇನೇ ತರಗತಿ ಯವರು. ಇವರಿಗೆ ನಮ್ಮ ವೈದ ಸಂಚಿಕೆಗಳನ್ನು ರೂ ೧೯೯ ೨೦ ಫೂರಂ (೧೬೦ ಪುಟ್ ದಂತೆ ಕಳುಹಿಸುವೆವು. ಹಾಗೆ ಅಡ್ವಾನ್ಸ್ ಕೊವೆದೆ ಆಗಾಗ್ಗೆ ವಿ. ಪಿ. ಯಮೇಲೆ ಸಂಪ್ರೇಷನ್ನು ಪಡಿಯುವರು ತನೇ ತರಗತಿದುವರು ಇವುಗೆ ರೂ ೧೯೯ ೧೬ ಫೂರಂ (೧೩೪ ಪುಟ್ ದಂತೆ ಕಳುಹಿಸುವೆವು.

ಮುತ್ತೂ ಅನುಕೂಲ !

ಮೊದಲನೇ ತರಗತಿವು ೧೦ ಗ್ರಾಹಕರನ್ನ ಒಟ್ಟು ಕೆರಿಸಿ ನಮ್ಮಲ್ಲಿಗೆ ಅವರ ಅಡ್ವಾನ್ಸ್ ಸಮೇತ ಬರಿಯೆವಪಟ್ಟಿಗೆ ೧ ಪ್ರತಿಯೆನ್ನು ಎಂದೆಂದಿಗೂ ಉಚಿತವಾಗಿ ಕೊಡುವೆವು. ಇವರ ಪೆಸರಿಗೆ ಒಟ್ಟಾಗಿ ಯಾವಾಗಲೂ ಕಳುಹಿಸುವೆವು.

ಟಪ್ಪಾಲ್ ಹಾಸಿಲು ನಿಯಮ.

ಪ್ರತಿ ೩ ಸಂಚಿಕೆಗಳ ಒಟ್ಟು ಕ್ರಯವನ್ನ ಮೊದಲನೇ ಸಂಚಿಕೆಯನ್ನು ವಿ. ಪಿ ಮೇಲೆ ಕಳುಹಿಸುವುದುಂದ ಎಲ್ಲಿಂದಲೂ ಪಡಿಯುತ್ತಾ, ಹಿಗೆಲ್ಲಾ ಸಂಚಿಕೆಗಳೂ ವಿಳಾಸಕ್ಕೆ ಕ್ರಮವಾಗಿ ಕಾಲ ಕಾಲಕ್ಕೆ ತಲುಪುವುದಕ್ಕಾಗಿ ರಿಜಿಸ್ಟರ್ ಮಾಡಿಸಿಯೇ ಕಳುಹಿಸುವೆವು. ಹಿಗೆ ಮೊದಲಿನ ೩ ಸಂಚಿಕೆಗಳಲ್ಲಿ ಪ್ರತಿ ತಿಂಗಳಿಗೆ ೧೦ ಸಂಚಿಕೆಯು ಪ್ಯಾಕಿಂಗ್ ಪೋಸ್ಟೇಜ್ ೦-೫-೬ ರಿಜಿಸ್ಟರ್ ೦-೩-೦ ಒಟ್ಟು ೦-೮-೬ ಆಗುವುದುಂದ ಇವು ೧೯೯ ೫ಪೈ ಮಾತ್ರ ಒಟ್ಟಿನಲ್ಲಿ ಬರುತ್ತದೆ. ಹಿಗೆ ಮೊದಲಿನ ೩ ಸಂಚಿಕೆಗಳ ೧೦ ಫೂರಂಗಳಿಗೆ (೩ ತಿಂಗಳಿಗೆ) ಮೊದಲನೇ ತರಗತಿಯವರಿಗೆ ಕ್ರಯ ೦-೧೩-೦ ಇವರ ಹಿಸ್ಸೆಯ ೩ ತಿಂಗಳ ಪೋಸ್ಟೇಜ್ ೦-೫-೩ ಒಟ್ಟು ೦-೧೮-೩ ಯೆಂತೆ ೧೦ ಜನರ ಒಟ್ಟು (೪-೧೪-೬) ಗೆ ಮೊದಲನೇ ತಿಂಗಳ ೧೦ ಸಂಚಿಕೆಗಳನ್ನು ವಿ. ಪಿ ಮಾಡಿ ಒಟ್ಟು ೩ ತಿಂಗಳ ಕ್ರಯವನ್ನು ಪಡಿಯುವೆವು. ಆನಂತರ ೧೯೧೪ ಜನವರಿಯಿಂದ ಪ್ರತಿ ಸಂಚಿಕೆ ೧೦ ಫೂರಂಗೆ ಕ್ರಯ ಒಬ್ಬೊಬ್ಬರಿಗೆ ೦-೪-೦ ರಂತೆ ೩ ತಿಂಗಳ ೩ ಸಂಚಿಕೆಯ ಒಟ್ಟಾಕ್ರಯಕ್ಕೆ ವಿ.ಪಿ. ಮಾಡುವುದರಿಂದ ಮೇಲಿನವಕ್ಕೆ ದುಪ್ಪಟ್ಟು ಬೀಳುವದು. ಈಗಿನ ಮುಂಗಡ ರೂಪಾಯಿನ್ನು ಕೊನೆಗೆ ಕಟಾಯಿಸಿಕೊಡುವೆವು.

ಇದೇ ತನೇ ತರಗತಿಯವರಿಗಾದರೆ (ಅವರು ಒಟ್ಟಾಗಿ ತರಿಸದೆ ಬಿಡಿಯಾಗಿ ತರಿಸುವವರಿಂದ) ಪೋಸ್ಟೇಜಿನಲ್ಲಿಯೂ ದುಬಾರಿ ಯಾಗುವದು. ೧ ವಿಳಾಸಕ್ಕೆ ಒಂದೇ ಸಂಚಿಕೆಯಾದರೆ ಮೊದಲಿನ ೩ ಸಂಚಿಕೆಗಳ ೧೯೯ ಫೂರಂ ಕ್ರಯ ೧೪೪ ಆಣೆ, ಪ್ರತಿ ತಿಂಗಳ ಪೋಸ್ಟೇಜ್ ರಿಜಿಸ್ಟರ್ ಖರ್ಚು ೦-೩-೦ (೩ ತಿಂಗಳಿಗೆ) ೦-೫-೬ ಆಗುವದು. ಇದರಲ್ಲಿ ೨-೩-೦ ಸಂಚಿಕೆದುದಾದರೂ ಕಳುಹಿಸಲಬಹುದಾಗಿದೆ.

ಸರಿಯಾಸ್ತುಗಳಲ್ಲಿ ವಿವರವಾಗಿ ಪೂರ್ತಿಯಾದ ಪೆಸರು, ಗ್ರಾಮ, ಪೋಸ್ಟಾಪೀಸು, ಡಿಸ್ಟ್ರಿಕ್ಟ್ ಸ್ಪಷ್ಟವಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯುವದು.

ಮ್ಯಾನೇಜರ್.

"ಮೈಸೂರ್ ವಿದ್ಯಾಲಯಂ"

ಬೆಂಗಳೂರು ಸಿಟಿ.

ಪೈಕ್ಷಪೆಟ್ಟೆ,

ಇದಕ್ಕೆ ಈ ಕೆಳಗೆ ವೇದದ ಮೇಲೆ ಪರರ ಖಂಡನೆಯನ್ನು ಸ್ವೀಕರಿಸಿದ್ದೇವೆ. ಇದೇ ನಮ್ಮ ಆರ್ಡರೆಂದು ತಿಳಿಬೇಕಾಗಿ, ಇದೇ ವೇದಕ್ಕೆ ಗ್ರಹಣ !! ಇಂಗ್ಲಿಷ್‌ನಿಂದ ಬಿದಿದವರು ಇದಕ್ಕಾಗಿಯೇ ವೇದವನ್ನು ಅಸಡ್ಡೆ ಮಾಡುವರು.

ಪರಿಶಿಷ್ಟ,

ಋಗ್ವೇದ ಭಾಷ್ಯದ ಮೇಲೆ ಸಾರಾಂಕಾರ್ಥವನ್ನು ಸಂಸ್ಕೃತ ಮುಂತಾದ ಇಂಗ್ಲಿಷ್‌ನಲ್ಲಿ "ವೇದಾರ್ಥಯತ್ನ", ವೆಂಬ ಪತ್ರಿಕೆಯಿಂದ ಪ್ರತಿಮುಂತ್ರದ ಮೇಲೆ ಭಾಷಿಸುತ್ತಾ ಋಗ್ವೇದವನ್ನು ಪೂರೈಸಿದ್ದಾರೆ. ಪ್ರತಿಮುಂತ್ರವಷಡಿಯಲ್ಲಿ ಅದರವರ ಖಂಡನೆಯು ಬರಿಯಲ್ಪಟ್ಟಿದೆ. ಇದುಸಂಪೂರ್ಣವಾಗಿ ವಿದ್ವಾರಣ್ಯ ಭಾಷ್ಯದೊಂದಿಗೆ ವೇದವನ್ನು ನಿಸ್ಸಾರವುಳ್ಳದ್ದಾಗಿ ಮಾಡಿದೆ ಇಲ್ಲಿ ಅವರ ಖಂಡನೆಯ ಟಪ್ಪಣಿಗಳನ್ನು ಮಾದರಿಗಾಗಿ ತೋರಿಸಲೆಳಸುವೆವು. ನಮ್ಮ ಆಥಷ್ಟಹೀಗಿರಲಾರದು.

"ಈ ಇಂದ್ರನ ಪ್ರೀತ್ಯರ್ಥವಾಗಿಯೇ ದಿವ್ಯ ದೇವ ಪತ್ನಿಗಳು ಸಹಾ ವೃತ್ತ ಯುದ್ಧದ ಕಾಲದಲ್ಲಿ ಗೀತ ಹಾಡುವವರಾದರು", ಅಷ್ಟ ೧-೪-೬೧-೪. "ಯಾವ್ಯಾವವು ಉತ್ತಮ ಸ್ತೋತ್ರಗಳೆ ಎಂದು ತಿಳುಕೊಳ್ಳುತ್ತಾರೋ, ಮತ್ತು ಯಾವವುಗಳಿಂದ ಸ್ತುತಿಸುವವರಿಗೆ ಸ್ವರ್ಗ ಪ್ರಾಪ್ತಿಯಾಗುತ್ತದೆಯೋ, ಅಂಥಾಸ್ತೋತ್ರಗಳನ್ನು ನನ್ನ ಬಾಯಿಯಿಂದ ರಚಿಸಿ ಇಂದ್ರನ ಪ್ರೀತ್ಯರ್ಥವಾಗಿ ಹೇಳುತ್ತಿರುತ್ತೇನೆ. "ಸೂ ೬೧-೪-" ಯುದ್ಧ ಪ್ರಸಂಗವು ಬಂದರೆ ಯಾವನಿಗೆ ಮನುಷ್ಯ ಲೋಕವ್ಯವಯೋಜನೆಮಾಡಿ ..... ಅಗ್ನಿಗೆ ನಮ್ಮ ಅಂತಃಕರಣದಿಂದ ಹುಟ್ಟುವ ಈ ಕೇವಲ ನೂತನ ಸುಸ್ತೋತ್ರವು ಮುಟ್ಟುವದಾಗಲಿ", ಸೂ ೬೧-೪.

ಖಂಡನೆ-ವೇದವು ಅಪೌರುಷೇಯವಾದರೆ ಇವರಲ್ಲಿ ತನ್ನೆ ಸೊತ್ರಕ್ಕೆ ನೂತನವೆಂದು ಯಾತಕ್ಕೆ ಹೇಳಬೇಕು? ಹೇ ಇಂದ್ರಾಗ್ನಿಗಳೇ ಪೂರ್ವದಲ್ಲಿ ಮಾಡಿದ ಪರಾಕ್ರಮ ..... ಸಖ್ಯಿಗಳನ್ನೂ ಕೂಡಿಕೊಂಡ್ಡುಬಂದು ನಿವ್ಧವಿರುವ ಸೋಮರಸವನ್ನು ಕುಡಿಯಿರಿ", ಅಷ್ಟ ೧-೧೬-೨೧-೫

ಖಂಡನೆ - ವೇದಮಂತ್ರಗಳ ಕರ್ತರು ತಮಗೂ ಪೂರ್ವದಲ್ಲಿ ಕಾಲಗತಿಸಿ ಹೋಗುವದಾಯಿತು ಎಂದು ಇಂದ್ರನು ಪೂರ್ವದಲ್ಲಿ ಮಾಡಿದ ಪರಾಕ್ರಮಗಳೊಂದಿಗೆ ಈಗ ಬರದ್ದೇಕೆಂಬದಾಗಿ ಹೇಳಿದ್ದರಿಂದ ವೇದ ಅನಾದಿಯಲ್ಲ.

ಪಂಪನನೆಂಬ ಮನುಷ್ಯ ಭೂಮಿಯಲ್ಲಿ ಬಿದ್ದನು. ಆತನೆನ್ನು ಜಜ್ಜಿಸಿಗಳು ಮೇಲಕ್ಕೆತ್ತಿದರು", ೧೪-೧೧೩-೫ "ರೇಫೆ ನೆಂಬ ಮನುಷಿಯನ್ನು ಮನುಷ್ಯರು ಭೂಮಿಯಲ್ಲಿ ನೂಕಿದರು. ಜಜ್ಜಿಸಿಗಳು ಮೇಲಕ್ಕೆತ್ತಿದರು.", ಮಂ ೮. "ಆತ್ರಿ ಮನುಷಿದ್ಯನ್ನು ಮನುಷ್ಯರು ಕತ್ತಲಾವ ಕೂಪಿಯಲ್ಲಿ ಜೊಬ್ಬಿ ಜೊಂಕಿ ಪಕ್ಷಿ ಕೊಲ್ಲುವುದಕ್ಕೆ ಯತ್ನಿಸಿದರು, ಜಜ್ಜಿಸಿಗಳು ಬಿಡಿಸಿದರು.", ಮಂ ೫.

ಖಂಡನೆ—ಹಿಗ ಆ ವಾದಕರ್ತಾರವ ಋಷಿಗಳೂ ನಮ್ಮಂತೆ ದುಃಖಿತರಾಗಿದ್ದರೆಷ್ಟೆ!

"ಜೇ ಅಗ್ನಿಯೇ, ನಮ್ಮ ಪುತ್ರರು ಪಿಶಾಚ್ಯಾದಿತ ಸಂಪತ್ತಿಗೆ ಧನಿಗಳಾಗಿ ನೂರು ವರ್ಷ ಬದುಕುವವರಾಗಲಿ" ೧–೪೫–೭೯–೯.

ಖಂಡನೆ—ಇದು ವಸಿಷ್ಠರ ಋಷಿಯಂ ಪ್ರಾರ್ಥನೆ, ಪ್ರಾಚೀನ ಋಷಿಗಳು ಅಪೋಲನದಿಂದ ಸಾವಿರಾರು ವರ್ಷ ಬದುಕುತ್ತಿದ್ದರೆಂದುಹೇಗೆ!

"ಜೇ ಶೂರ ಅಶ್ವಿನಿಗಳೇ ನೀವು ನಿಮ್ಮನ್ನು ಸ್ತುತಿಸುವ ಪಜ್ರಿಯಕಕ್ಷೀವಾನನಿಗೆ ಬಹಳ ಬುದ್ಧಿಯನ್ನು ಕೊಟ್ಟಿರಿ, ನಿಮ್ಮ ವೀರ್ಯವುಳ್ಳ ಕುದುರೆಯ ದಬಡೆ ಯಂಥಾ ಗೊರಸಿಗಳಿಂದ .. ... ನೂರು ಕೊಡಗಳನ್ನು ತುಂಬಿಸಿದಿರಿ" ೪–೧೧೬–೩

ಖಂಡನೆ—ಆ ಕಾಲದಲ್ಲಿ ಮದ್ಯವನ್ನು ಕುಡಿಯುತ್ತಿದ್ದರೆಂದು ತೋರುತ್ತದೆ.

"ಜೇ ಅಶ್ವಿನಿಗಳೆ, ನೀವು ಶೈತ್ಯದಿಂದ ಅತ್ರಿಯನ್ನು ಸುಡುವ ಅಗ್ನಿಯನ್ನು ನಿವಾರಣೆಮಾಡಿದಿರಿ" ೪ ೧೧೬–೪

ಖಂಡನೆ—ಆ ಕಾಲದಲ್ಲಿ ಅಪರಾಧಿಗಳಿಗೆ ಹುಲ್ಲುಸುತ್ತಿ ಸುಡುತ್ತಿದ್ದರೆಂದು ಕಾಣುತ್ತದೆ.

ಒಬ್ಬನು ೪೦ ಲಕ್ಷ ಆಕಳನ್ನು ನೀರಿನಬಳಿಗೆ ಆಟ್ಟಿಕೊಂಡು ಹೋಗುತ್ತಾನೆ. ಇನ್ನೊಬ್ಬನು ಚೂರಿಯಿಂದ ತೆಗೆದ ... ವಸ್ತುವನ್ನು ತುಂಬುತುಂಬು ಮಾಡುತ್ತಾನೆ," ೪ ೫–೧೯–೧೦.

ಖಂಡನೆ—ಸಾಯಣಾಚಾರ್ಯಾನದ ಬೆಂಲೆಗೆ ಈ ಆಕಳು ಯಜ್ಞಕ್ಕಾಗಿ ಕೊಂದದ್ದು. ವೇದದ ಬೇರೆ ಸ್ಥಳಗಳಲ್ಲಿಯೂ ಇಂಥಾ ಯಜ್ಞದ ಲೆಖ್ಖಗಳವೆ. ಗೌಸೀಮಿಷಿ ರಲ್ಲಿ ,, ಉಷ್ಟ್ರಾಣಾಂ ಶತ್ಮಿಂ ಅಯಚಾನಾ ... ತಾನಿ ಧರ್ಮಾಣಿ ಪ್ರಥಮಾ ಪ್ರಾಶ್ಯಸ್ತ ,, ಅಂದರೆ ಚಿತ್ರ ಶಿಖಿಸ್ಯದ ಪತ್ನಿಯು ನೂರು ಒಂಟೆಗೆ ನೂಡುವದು ಸನಾತನ ಧರ್ಮವಾಗಿದೆ ಎಂದು ಹೇಳಿದೆ.

ನಾನು ದೇವತೆಗಳನ್ನು ಭಜಿಸದ ಅನಾರ್ಯರಾದ ಶತ್ರುಗಳೊಡನೆ ಯುದ್ಧಮಾಡುವದಕ್ಕೆ ಸಿದ್ಧಮಾಡುವಾಗ ಜೇ ಇಂದ್ರ ನೀ ನಿನಗೆ ಕೊಬ್ಬಿದ ... ... ಬೇಯಿಸುವೆನು. ೧೦–೮೬–೨.

"ಯದೀಪಹಂ ಯುಧಯೇ ಸನ್ನಯಾನಿ ಆದೇವ ಯೂರ್ ... ಕೇತುಭ್ಯಃ ವೃಷಭಂ ಪಚಾನಿ," ಎಂದು ಬೇರೆ ಸ್ಥಳದಲ್ಲಿ, ಕೋಣಗಳನ್ನು ... ... ಕೊಡುತ್ತಿದ್ದರೆಂದು ಹೇಳಿದ.

"ಜಾತವೇದಸೇ ಸುನವಾಮಸೋಮಂ ——— ದುರ್ಗಾಣಿ ವಿಶ್ವಾನಾವೇನಸಿಂಧುಂ ದುರಿತಾತ್ಯಗ್ನಿಃ," ನಾವು ಜಾತವೇದನಿಗಾಗಿ ಸೋಮತೆಗೆದೋಣ, ಅವನು ನಮ್ಮ ಶತ್ರುಗಳಧನವನ್ನು ಸುಟ್ಟುಹಾಕಲಿ, ಅವನು ನಮ್ಮನ್ನು ಸಕಲದುಃಖಗಳಿಂದ ಪಾರಗಾಣಿಸಲಿ.

ಖಂಡನೆ—ಇಲ್ಲಿ ಬರುವ ದುರ್ಗಾಣಿ ಎಂಬುದರ ಅರ್ಥವನ್ನು ತಿಳಿಯದೆ ಣಿ ಎಂಬ ಅಕ್ಷರವನ್ನು ಬಿಟ್ಟು ದುರ್ಗಾ ದೇವಿಗೆ ಈ ಮಂತ್ರವನ್ನು ಪಠಿಸುತ್ತಾರೆ.

"ಪುನಃಪುನರ್ಜಾಯಮಾನಾ ಪುರಾಣೀಸಮಾನಂವರ್ಣಂ ... ... ಮತ್ಯಸ್ಯ ದೇವೀಜರಯಂತ್ಯಾಯುಃ" ಪ್ರತಿರುಗಿ ತಿರುಗಿ ಜನ್ಮಕ್ಕೆ ಬರುವಂಥಾ ಜಂದೇರೂಪದಿಂದ ಕೂಡಿಸುವ ಉಷಾದೇವಿಯು ಧೂರ್ತರೂ ಸುಲುಕೊಳ್ಳುವವರೂ ಆದ ಜಾಯಗಾರರಂತೆ ಮರ್ತ್ಯರ ಆಯುವನ್ನು ಮೆಲ್ಲಿಗೆ ಅಪಹರಿಸುವಳು

ಖಂಡನೆ—ಈ ವಿಧನಾದ ಮಂತ್ರಗಳಲ್ಲಿ ಆಯುಃ ಎಂಬಶಬ್ದವಿರುವದರಿಂದ ಆಯುರ್ವರ್ಧಿಗಾಗಿ ಲಕ್ಷಾಣದಕ್ಕೆ ಬಿಟ್ಟರು ಈ ಮಂತ್ರವನ್ನು ಹೇಳುವರು. ಹೊಪೆ!! ಇದರಲ್ಲಿ ಆಯುರ್ವರ್ಧನವುಂಗಲೆಂಬ ಅರ್ಥವನ್ನು ಅವರು ತಿಳಿಯರು!!

"ಯದಕ್ರಂದಃ ಪ್ರಥಮಂಜಾಯಮಾನ ಉದ್ಯಂತ್ಸಮುದ್ರಾದುತ ವಾಪುರೀಷಾತ್" ಎಲ್ಲಿ ಅಶ್ವವೇ ನೀನು ಹೊಮಲು ಪುಟ್ಟಿದಾಗ ಸಮುದ್ರಕ್ಕಿಂತಲೂ ಮೇಲೆ ಹಾರಿ ಹೇಷಾರವಮಾಡಿದಿ, ನಿನಗೆ ಜೋಗೆಯರೆಕ್ಕೆಯೂ ಪರಿಣಾದಕಾಲೂ ಇವ್ವವು, ಅವುಗಳಿಗಿಂತ ನಿನ್ನ ಜನ್ಮವು ಮಹಾಸ್ತುತ್ಯವಾಗಿದೆ.

ಖಂಡನೆ—ಈ ಮಂತ್ರದಲ್ಲಿ ಅಂದ ಎಂಬ ಶಬ್ದವಿರುವದರಿಂದ ಇದನ್ನು ಸ್ಕಂದನಿಗೆಂದು ವಿನಿಯೋಗಿಸುತ್ತಾರೆ. ವೇದದಲ್ಲಿ ಈ ವಿವರಕ್ಕೆ ಅವಕಾಶವಿಲ್ಲ.

"ಈ ಕಾಲದಲ್ಲಿ ವೈದಿಕಮತವನ್ನು ಪ್ರಚಾರಪಡಿಸಬೆಕೆಂದು ವೇದಗಳ ಅರ್ಥತಿಳಿಯದೆ ಯತ್ನಿಸುತ್ತಾರೆ ಎಂಬೆ ಧಾಪಲ್ಲಟಗಳನ್ನು ಮಾಡಬೇಕಾಗುವದೆಂದು ವೇದಮಂತ್ರಗಳಿಂದ ತಿಳಿಯುತ್ತದೆ. ಎಲ್ಲಾ ದೇವಸ್ಥಾನಗಳನ್ನೂ ಮುಚ್ಚಬೇಕು, ತೀರ್ಥಯಾತ್ರೆಗಳನ್ನು ನಿರಿಸಬೇಕ ಎಲ್ಲಾ ಪುರಾಣಗಳನ್ನೂ, ಪುರಾಣಗಳನ್ನೂ ತೆಗದುಹಾಕಬೇಕು, ಈಗಿನ ಬ್ರಹ್ಮಕ್ರಿಯಾಯನ್ನು ಬದಲಾಯಿಸಬೇಕು; ವಿಷ್ಣು, ಶಿವ, ಗಣಪತಿ ದುರ್ಗಾ ಮುಂತಾದ ದೇವತೆಗಳನ್ನು ಕೆಳಗಿಳಿಸಿ, ಇಂದ್ರ, ವಾಯು, ವರುಣ, ಮರುತ್ತು ಉಷ, ಪೂಷ, ಇಳೆ ಮುಂತಾದವರ ಆರಾಧನೆಯನ್ನು ನಡಿಸಬೇಕು; ಅವರಿಗೆ ಪಂಚಕಜ್ಜಾಯನ್ನದ ನೈವೇದ್ಯ ಮೆಚ್ಚದು ಅವರಿಗೆ ... ... ಬೇಕು ಅವರಿಗೆ ನಿಜವಾದ ಸೋಮರಸವೆಂಬ ಅಮಲಾಗತಕ್ಕದ್ದು ಬೇಕು. ಅದನ್ನು "ಸಿಧ್ಮೇಹಿ ಗೋರೇಧಿತ್ಯಚೆ," ಎಂದರೆ ಅದನ್ನು ಎತ್ತಿನ ಚರ್ಮದ ಮೇಲಿಟ್ಟು ಜಜ್ಜಿಸಬೇಕು; ಇಷ್ಟಾದರೂ ಅವರಿಗೆ ಹೊದಲಿದ್ದ ಅಧಿಕಾರವನ್ನು ಕೊಡಬೇಕು, ಬ್ರಹ್ಮ ವಿಷ್ಣು ಶಿವಾದಿಗಳು ತಮ್ಮ ಅಧಿಕಾರವನ್ನು ಬಿಡಬೇಕು, ಇವರಿಗೆ ವೇದದಲ್ಲಿ ಅಧಿಕಾರವಿಲ್ಲ ಎಂದು ನುಂತಾಗಿ ಖಂಡನೆಯನ್ನು ಬರಿಯುತ್ತಾರೆ,"

———ಇದಕ್ಕಾಗಿ ನಾವು ಪ್ರತಿ ಮಂತ್ರದ ಮೇಲೆಯೂ ಈ ಖಂಡನೆಯ ಬಗ್ಗೆ ಪೌತ್ತರೀಯರ ಸಮಾಧಾನವನ್ನು ಪ್ರಕಟಿಸಿ ವೇದಜ್ಞೈತಕ್ಕೋದ್ಧಾರಕ್ಕಾಗಿ ಯತ್ನಿಸುವೆವು.

ಇದಕ್ಕಾಗಿ ತ್ರಿಮತಗಳ ಗುರುಪೀಠಾಲಂಕೃತ ಶ್ರೀ ಶ್ರೀ ಸ್ವಾಮಿಗಳವರ ಸಂಸ್ಥಾನದವರೂ, ಸಾಹುಕಾರರು, ಮುಂತಾದ ಮಹನೀಯರನ್ನು ಪೋಷಕರನ್ನಾಗಿ ತಿಳಿದು ಸಂಜಿಕೆಗಳನ್ನು ಕಳುಹಿಸುತ್ತಾ ಬರುವೆವು.

ಮ್ಯಾನೇಜರ್ ವೇದಕಾರ್ಯಾಲಯ.

ಖಂಡನೆ—ಹಿಂಗೆ ಆ ವೇದಕರ್ತರಾದ ಋಷಿಗಳೂ ನಮ್ಮಂತೆ ದುಃಸ್ಥಿತಿಯುಳ್ಳವರಾಗಿದ್ದರಷ್ಟೆ!

,, ಹೇ ಅಗ್ನಿಯೇ, ನಮ್ಮ ಪುತ್ರರು ಪಿತ್ರಾರ್ಜಿತ ಸಂಪತ್ತಿಗೆ ಧನಿಗಳಾಗಿ ನೂರು ವರ್ಷ ಬದುಕುವವರಾಗಲಿ ,, ೧—೪೩—೭೩೯—೯.

ಖಂಡನೆ—ಇದು ಪರಾಶರ ಋಷಿಯು ಪ್ರಾರ್ಥನೆ, ಪ್ರಾಚೀನ ಋಷಿಗಳು ಆಪ್ತೋಪಲದಿಂದ ಸಾವಿರಾರು ವರ್ಷ ಬದುಕುತ್ತಿದ್ದರೆಂಬುದೇ!

,,ಹೇ ಶೂರ ಅಶ್ವಿನಿಗಳೇ ನೀವು ನಿಮ್ಮನ್ನು ಸ್ತುತಿಸುವ ಪಜ್ರಿಯಕಕ್ಷಿ ವಾನಸಿಗೆ ಬಹಳ ಬುದ್ಧಿಯನ್ನು ಕೊಟ್ಟಿರಿ, ನಿಮ್ಮ ವೀರ್ಯವುಳ್ಳ ಕುದುರೆಯ ದಬಡೆ ಯಂಥಾ ಗೊರಸಿಗಳಿಂದ .. ... ನೂರು ಕೊಡಗಳನ್ನು ತುಂಬಿಸಿದಿರಿ,, ೪—೧೧೬—೭

ಖಂಡನೆ—ಆ ಕಾಲದಲ್ಲಿ ಪುಣ್ಯವನ್ನು ಕೂಡಿಯುತ್ತಿದ್ದರೆಂದು ತೋರುತ್ತದೆ.

,,ಹೇ ಅಶ್ವಿನಿಗಳೆ, ನೀವು ಶೈತ್ಯದಿಂದ ಅತ್ರಿಯನ್ನು ಸುಡುವ ಅಗ್ನಿಯನ್ನು ನಿವಾರಣೆಮಾಡಿದಿರಿ,, ೪ ೧೧೬-೪

ಖಂಡನೆ—ಆ ಕಾಲದಲ್ಲಿ ಅಪರಾಧಿಯಮೈಗೆ ಹುಲ್ಲುಸುತ್ತಿ ಸುಡುತ್ತಿದ್ದರೆಂದು ಕಾಣುತ್ತದೆ.

ಒಬ್ಬನು ಕುಂಟು ಆಕಳನ್ನು ನೀರಿನಬಳಿಗೆ ಅಟ್ಟಿಕ್ಕೊಂಡು ತರುತ್ತಾನೆ. ಇನ್ನೊಬ್ಬನು ಚೂರಿಯಿಂದ ತೆಗದ ... ವನ್ನು ತುಂಡುತುಂಡು ಮಾಡುತ್ತಾನೆ,, ಅ೫-೧೪೧-೧೦.

ಖಂಡನೆ—ಸಾಯಣಾಚಾರ್ಯವ್ಯಾಖ್ಯಾನದ ಮೇರೆಗೆ ಈ ಆಕಳು ಯಜ್ಞಕ್ಕಾಗಿ ಕೊಂಡದ್ದು. ವೇದದ ಜಿಲ್ಲೆ ಸ್ಥಳಗಳಲ್ಲಿಯೂ ಇಂಥಾ ಯಜ್ಞದ ಲೆಖ್ಖಗಳವೆ. [illegible] ಉಕ್ಷ ಣಾಂವೆ ಶ್ನಿಂ ಅಯಚಾನಾ- - - ಹುನಿ ಭರ್ಮಾಣಿ ಪೃಥಮಾ ನ್ಯಸಕ್ತ,, ಅಂಬುದೆ ಚಿತ್ರಾ ಬಿಜಿಸ್ಯದ್ಯಮಿತ್ಯನ್ನು [illegible] ಮಾಡಿದವನು ನಾತನ ಧರ್ಮವಾಗಿದೆ ಎಂದು ಹೇಳಿದೆ.

ನಾನು ದೇವತೆಗಳನ್ನು ಭಳಿಸಿದ ಆನಾರ್ಯರಾದ ಶತ್ರುಗಳಿಂಡನೆ ಯುದ್ಧಮಾಡುವದಕ್ಕೆ ಸಿದ್ಧಮಾಡುವಾಗ ಹೇ ಇಂದ್ರನೇ ನಿನಗೆ ಕೊಬ್ಬಿದ ... ... ಬೇಯಿಸುವೆನು. ೧೦—೮೬—೧೪.

,,ಸುದೀಪಹಂ ಯುಧಯೇ ಸನ್ನಯಾನಿ ಅಜೇವ ಯೂಥ ... ಕೇತುಭ್ಯಃ ವೃಷಭಂ ಪಚಾನಿ,, ಎಂದು ಬೇರೆ ಸ್ಥಳದಲ್ಲಿ, ಕೋಣಗಳನ್ನು ... ... ಕೊಡುತ್ತಿದ್ದರೆಂದು ಹೇಳಿದೆ.

,, ಜಾತವೇದಸೇ ಸುನವಾಮಸೋಮ ... ... ದುರ್ಗಾಣಿ ವಿಶ್ವಾನಾವೇವಸಿಂಧುಂ ದುರಿತಾತ್ಯಗ್ನಿಃ,, ನಾವು ಜಾತವೇದನಿಗಾಗಿ ಸೋಮತೆಗಿದೇವೋಣ, ಅವನು ನಮ್ಮ ಶತ್ರುಗಳಧನವನ್ನು ಸುಟ್ಟುಪಾಕಲಿ, ಅವನು ನಮ್ಮನ್ನು ಸಕಲ ದುಃಖಗಳಿಂದ ಪಾರಗಾಣಿಸಲಿ.

ಖಂಡನೆ—ಇಲ್ಲಿ ಬರುವ ದುರ್ಗಾಣಿ ಎಂಬುದರ ಅರ್ಥವನ್ನು ತಿಳಿಯದೆ ಣಿ ಎಂಬ ಅಕ್ಷರವನ್ನು ಬಿಟ್ಟು ದುರ್ಗಾದೇವಿಗೆ ಈ ಮಂತ್ರವನ್ನು ಪಲ್ಲೋಗಿಸುತ್ತಾರೆ.

,, ಪುನರೂರ್ಜನಿರ್ವರ್ತಮಾನಾ ಪುರಾಣೀಸಮಾನೇವಣಾ... ... . ಮೃತ್ಯೋಸ್ಯ ದೇವೀರಯಂತ್ಯಾಯುಃ ॥ ತಿರುಗಿ ತಿರುಗಿ ಜನ್ಮಕ್ಕೆ ಬರುವಂಥಾ ಬಂದೀರೂಪದಿಂದ ಕೂಗಿಸುವ ಉಷಾದೇವಿಯು ಧೂರ್ತರೂ ಸುಲುಕೊಳ್ಳುವವರೂ ಆದ ಪೂಜಾಗಾರರಂತೆ ಮೃತ್ಯುವಿನ ಆಯುವನ್ನು ಪೆಟ್ಟಿಗೆ ಆಪಹರಿಸುವಳು

ಖಂಡನೆ—ಈ ವಿಧವಾದ ೬ ಮಂತ್ರಗಳಲ್ಲಿ ಆಯುಃ ಎಂಬಶಬ್ದವಿರುತ್ತಿರುವುದರಿಂದ ಆಯುರ್ವೃದ್ಧಿಗಾಗಿ ಆಶ್ವಾಳದಕ್ಕೆ ಬಂದವರು ಈ ಮಂತ್ರವನ್ನು ಹೇಳುವರು. ಹೊಸ!! ಇದನ್ನಲ್ಲಿ ಆಯುರ್ವರ್ಧಿಸುಗೆಲೆಂಬ ಅರ್ಥವನ್ನು ಅವರು ತಿಳಿಯರು !!

,,ಯದಕ್ರಂದಃ ಪ್ರಥಮಂಜಾಯಮಾನ ಉದ್ಯಂತ್ಸಮು ದ್ರಾದುತ ವಾಪುರೀಷಾತ್,, ಎಲ್ಲಿ ಆಕ್ಸವೇ ನೀನು ಮೊದಲು ದುಃಖಿಸಿದಾಗ ಸಮುದ್ರಕ್ಕಿಂತಲೂ ಮೇಲೆ ಹಾರಿ ದೇಹಾರವನ್ನು ಪಡೆದಿ, ನಿನಗೆ ಜೇಗೆಯಾರೆಕ್ಕೆಯೂ ಹರಿಣಜಕಾಲೂ ಇನ್ನವು, ಅವುಗಳಿಗಿಂತ ನಿನ್ನ ಜನ್ಮವು ಮಹಾಸ್ತುತ್ಯವಾಗಿದೆ.

ಖಂಡನೆ—ಈ ಮಂತ್ರದಲ್ಲಿ ಅಂಧ ಎಂಬ ಶಬ್ದವಿರುವುದರಿಂದ ಯಾರೋ ಇದನ್ನು ಸ್ಕಂದನಿಗೆಂದು ವಿನಿಯೋಗಿಸುತ್ತಾರೆ. ವೇದದಲ್ಲಿ ಈ ಪದಕ್ಕೆ ಆ ಅರ್ಥವಿಲ್ಲ.

,,ಈ ಕಾಲದಲ್ಲಿ ವೈದಿಕಮತವನ್ನು ಪ್ರಚಾರಪಡಿಸದೆ ಕೆಲವು ವೇದಗಳ ಅರ್ಥತಿಳಿಯದೆ ಯತ್ನಿಸುತ್ತಾರೆ ಎಂಥೆಂಥಾ ಪಲ್ಲಟಗಳನ್ನು ಮಾಡಬೇಕಾಗುವದೆಂದು ವೇದಮಂತ್ರಗಳಿಂದಲೇ ತಿಳಿಯುತ್ತದೆ. ಎಲ್ಲಾ ದೇವಸ್ಥಾನಗಳನ್ನೂ ಮುಚ್ಚಬೇಕು, ತೀರ್ಥಯಾತ್ರೆಗಳನ್ನು ಮರಿಸಬೇಕು; ಎಲ್ಲಾ ಹುಬ್ಬುಗಳನ್ನೂ, ಪುರಾಣಗಳನ್ನೂ ತೆಗದುಹಾಕಬೇಕು, ಈಗಿನ ಬ್ರಹ್ಮಕ್ಷತ್ರಿಯಯಜ್ಞವನ್ನು ಬಿಡಲಾಯಿಸಬೇಕ , ವಿಷ್ಣು, ಶಿವ, ಗಣಪತಿ ದುರ್ಗಾ ಮುಂತಾದ ದೇವತೆಗಳನ್ನು ಕೆಳಗಿಳಿಸಿ, ಇಂದ್ರ, ವಾಯು, ವರುಣ, ಮರುತ್ತು ಉಷ, ಪೂಷ, ಇಳೆ ಮುಂತಾದವರ ಆರಾಧನೆಯನ್ನು ನಡಿಸಬೇಕು; ಅವರಿಗೆ ಪಂಚಕಕ್ಷಾವ್ಯನ್ನದ ನೈವೇದ್ಯ ಮೆಚ್ಚದು ಅವರಿಗೆ ... ... ಬೇಕು ಅವರಿಗೆ ನಿಜವಾದ ಸೋಮರಸವೇಬೇಕು ಅಮಲಾಗತಕ್ಕದ್ದು ಬೇಕು. ಅದನ್ನು ,,ಸಿಧೇಹಿ ಗೋರೇಧಿತ್ಯಜಿ,, ಎಂದರೆ ಅದನ್ನು ಎತ್ತಿನ ಚರ್ಮದ ಮೇಲಿಟ್ಟು ಉರ್ಪಿಸಬೇಕು; ಇಷ್ಟಾದರೂ ಅವರಿಗೆ ಮೊದಲಿದ್ದ ಅಧಿಕಾರವನ್ನು ಕೊಡಬೇಕು, ಬ್ರಹ್ಮ ವಿಷ್ಣು ಶಿವಾದಿಗಳು ತಮ್ಮ ಅಧಿಕಾರವನ್ನು ಬಿಡಬೇಕು, ಇವರಿಗೆ ವೇದದಲ್ಲಿ ಅಧಿಕಾರವಿಲ್ಲ ಎನ್ನುವ ಮುಂತಾಗಿ ಖಂಡನೆಯನ್ನು ಬರಿಯುತ್ತಾರೆ,,

——ಇದಕ್ಕಾಗಿ ನಾವು ಪ್ರತಿ ಮಂತ್ರದ ಮೇಲೆಯೂ ಈ ಖಂಡನೆಯ ಬಗ್ಗೆ ಶ್ರೌತ್ತರೀಯರ ಸಮಾಧಾನವನ್ನು ಪ್ರಕಟಿಸಿ ವೇದಜ್ಞೈತನ್ಯೋದ್ಧಾರಕ್ಕಾಗಿ ಯತ್ನಿಸುವೆವು.

ಇದಕ್ಕಾಗಿ ತ್ರಿಮತಗಳ ಗುರುಪೀಠಾಲಂಕೃತ ಶ್ರೀ ಶ್ರೀ ಸ್ವಾಮಿಗಳವರ ಸಂಸ್ಥಾನದವರೂ, ಸಾಹುಕಾರರು, ಮುಂತಾದ ಮಹಜನೀಯರನ್ನು ಪೋಷಕರನ್ನಾಗಿ ತಿಳಿದು ಸಂಚಿಕೆಗಳನ್ನು ಕಳುಹಿಸುತ್ತಾ ಬರುವೆವು.

ಶ್ರೀ ಮ್ಯಾನೇಜರ್ ವೇದಕಾರ್ಯಾಲಯಂ

ವೈಶಾಖ | ವಾರ್ಷಿಕ ಚಂದಾ ಅಂಚೆಖರ್ಚು ಸೇರಿ | ಸಾಮ್ಯ
May. | ಒಂದು ರೂಪಾಯಿ ಎಂಟಾಣೆ. | 1909.

CIVIL, CRIMINAL, REVENUE.

ಲಾ ಗೆಜೆಟ್

ಲೋಕೋಪಯುಕ್ತವಾದ ಕನ್ನಡ ನ್ಯಾಯಪತ್ರಿಕೆ.

THE LAW GAZETTE

A WELLKNOWN MONTHLY MAGAZINE.

ಪುಸ್ತಕ ೩. Vol. III.] ಬೆಂಗಳೂರು ಶಿಟಿ. [No. 1. ಅಂಕ ೧.

ಬಿ. ಎ., ಬಿ. ಎಲ್. ಪರೀಕ್ಷೆಗಳಲ್ಲಿ ತೇರ್ಗಡೆಯಾದ ಅಡ್ವೊಕೇಟ್ರುಗಳ
ಸಹಾಯದಿಂದಲು, ಜಡ್ಜಿಗಳ ಸಹಾಯದಿಂದಲು ತೀರ್ಮಾನಿಸಿದ
ವಿಶಿಷ್ಟವ್ಯಾಜ್ಯಗಳನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ತರ್ಜುಮೆ ಮಾಡಲ್ಪಟ್ಟು
ಪ್ರತಿ ಮಾಸವೂ ಪ್ರಚುರಿಸಲ್ಪಡುವದು.
ಯಾವ್ದೇ ಪತ್ರಿಕೆಯಂತೆ ಓದಿ ವಿಸಾಡತಕ್ಕದ್ದಲ್ಲವು.

R. N. KRISHNA RAO, Manager & Publisher.

ಆರ್. ಎನ್. ಕೃಷ್ಣರಾವ್, ಮ್ಯಾನೇಜರ್ ಮತ್ತು ಪಬ್ಲಿಷರ್

ಸರ್ವಸ್ವಾಧೀನವಾದ ಬಾಧ್ಯತೆಯನ್ನು ಸೊಂತ ಳಿಸಿಕೊಂಡಿದೆ.

॥ ಶ್ರೀ ವಿನಾಯಕ ನಮಃ ॥

ದಕ್ಷಿಣ ಮಹಾರಾಷ್ಟ್ರ ಜೈನ ಸಭೆಯ ಪಕ್ಷ

ಜಿನವಿಜಯ

ಕನ್ನಡ ಮಾಸಿಕ ಪುಸ್ತಕ ಪತ್ರಿಕೆ

(KANARESE MONTHLY MAGAZINE.)

MAY 1908. [ಸಂ. ೩.

ವೈಶಾಖ ವೀರಶಕ ೨೪೩೪.

ಜಿಯ ಜಯ ಜಿಯ ದುರಿತಾಂತಕ ।
ಜಿಯ ಜಿಯ ಜಯ ವಿಮಳಬೋಧ ಜಯಜಿಯನಿ ॥
ಸ್ವರ್ಗಾಯ ಲಕ್ಷ್ಮೀಪತಿ ಜಯ ಜಿಯ ।
ಜಿಯ ಚಂದ್ರಪ್ರಭಜಿನೇಂದ್ರ ವಿಘಟಿತ ಚರಾಚ್ರಾ ॥

ವಿಷಯಗಳು.

ಪುಟ.

೧ ಸೃಷ್ಟಿವಾದ ಪರೀಕ್ಷೆಯು. ೪೯
೨ ಗಾಯಕವಾಡ ಶ್ರೀಮಂತ ಸಯಾಜೀರಾವು ಮಹಾರಾಜರ ಸನ್ಮಾನವು ಮತ್ತು ಜೈನಸಮಾಜದ ಉನ್ನತಿಯು. ೫೭
೩ ಪತ್ರವ್ಯವಹಾರ. ೫೯
೪ ಸ್ವೀಕಾರ ಮತ್ತು ಅಭಿಪ್ರಾಯ. ೮೦
೫ ಕಳವು ೮೧

ಬೆಳಗಾವಿ "ಶ್ರೀಮಹಾವೀರ" ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟಿತು.

ವರ್ಷಕ್ಕೆ ಚಂದಾ ೧. ರೂ. ೪ ಆಣೆ.

ಸೂಚನೆ—ಈ ಪುಸ್ತಿಕಾದ ಕರಡುಪ್ರತಿಯು ಕರ್ನಾಟಕ ಪ್ರಾಂತ್ಯದ ದ. ಮ. ಜೈನಸಭೆಯ ಮೇಲಿನ ಪದಾಧಿಕಾರಿಗಳಿಗೆ ಕಳುಹಿಸಿ ಕೊಡಲಾಗಿತ್ತು. ಈ ಪುಸ್ತಕದಲ್ಲಿ ಏನಾದರೂ ಮುಚ್ಚಳಿಕೆ ಇದ್ದಲ್ಲಿ ಅವರು ಯಜಮಾನಿ ತಪ್ಪದೆ ಸಭೆಯನ್ನು ಸೂಚಿಸಿದ್ದಲ್ಲಿ ಅದನ್ನು ನಮ್ಮ ಕಡೆಗೆ ಬರೆದು ಕಳಿಸಿದರೆ ಅದನ್ನೇ ಅಚ್ಚಿನಲ್ಲಿ ಮುಟ್ಟಿಸಲಾಗುವುದು. ಈ ಪುಸ್ತಕದ ಪ್ರಕಾಶನದಲ್ಲಿ ನಿಮ್ಮ ಅಮೂಲ್ಯ ಧನವನ್ನು ಕಳುಹಿಸಬೇಕಾಗಿ ವಿನಂತಿ. ಇಲ್ಲವಿದ್ದರೆ ಹೆಚ್ಚಿನ ಸಂಖ್ಯೆಯ ಪುಸ್ತಕಗಳನ್ನು ವಿ. ಪಿ. ಯಿಂದ ರವಾನಿಸುವೆವು.

ಅಣ್ಣಪ್ಪ ಜೌಗುಲಿ,
ಬಿ. ಎ. ಎಲ್. ಎಲ್. ಬಿ.
ದ. ಮ. ಜೈನ ಸಭೆಯ ಸೆಕ್ರೆಟರಿ, ಬೆಳಗಾವಿ.

ಸೂಚನೆ—ಕಷ್ಟದ ಶ್ರೀಜಿನವಿಜಯದಲ್ಲಿ ಪ್ರಸಿದ್ಧ ಮಾಡುವದಕ್ಕೋಸ್ಕರ ಕೆಲವುಗಳನ್ನು ಬಿಳಿಸುವದು ಉಳಿದವುಗಳನ್ನು ಸುವಾಚ್ಯ ರೀತಿಯಿಂದ ಕಾಗದದ ಬಂದೇ ಮುನ್ನಲಿಗೆ ಒರೆದು, ನಮ್ಮ ಕಡೆಗೆ ರವಾನಿಸಬೇಕು. ಮುಖ್ಯವಾಗಿ ಈ ವಿಷಯಗಳು ಜೈನರ ಧಾರ್ಮಿಕ ನಾವಣಿಕ ಮತ್ತು ಔದ್ಯೋಗಿಕ ವಿಷಯಗಳನ್ನು ಕುರಿತು ಗರಬೇಕಲ್ಲದೆ, ಭಾಷೆಯು ಶುದ್ಧವಾಗಿಯೂ ಪ್ರೌಢವಾಗಿಯೂ ಮನೋರಂಜಕವಾಗಿಯೂ ಇರಬೇಕು.

ಸುಜ್ಞಾನಿಭಾವಿಗಳಾದ ನಮ್ಮ ಸಹಯೋಗಿಗಳು ಶ್ರೀಜಿನವಿಜಯದ ಒದಲಾಗಿ ತಮ್ಮ ಸಂಚಿಕೆಗಳನ್ನು ಇನ್ನು ಮುಂದೆ ಕೆಳಗೆ ಸಹಿ ಮಾಡುವವರ ಕಡೆಗೆ ರವಾನಿಸುತ್ತಿರಬೇಕೆಂದು ಪ್ರಾರ್ಥನೆ ಅಷ್ಟೆ.

ಸಂಪಾದಕ:— ಕುಬೇರಪ್ಪ ಭರಮಪ್ಪ ಅಂಕಲಿ. ಬೆಳಗಾವ



॥ ಶ್ರೀವೀತರಾಗಾಯ ನಮಃ ॥

ಜಿನವಿಜಯ

ಜಿನೇಶವಿಜಯಮಿತ್ಯೇತತ್ತನ್ನಾಮ ಕಥ್ಯತೇ ॥
ಗೃಹ್ಣೀಧ್ವಂ ಭೋ ಬುಧಾ ಯೂಯಂ ಪುತ್ರಿಕಾಮಿವ ಪತ್ರಿಕಾಮ್

೪ ನೇ ವರ್ಷ.	ಬೆಳಗಾವಿ, ಮೇ ೧೯೦೯.	ಸಂಚಿಕೆ ೪.

ಸೃಷ್ಟಿವಾದ ಪರೀಕ್ಷೆಯು.

ಲೋಕೋಽಯಂಕೃತ್ರಿಮೋ ಜ್ಞೇಯೋ ಜೀವಾದ್ಯರ್ಥಾವಗಾಹಕಃ ॥
ನಿತ್ಯಃ ಸ್ವಭಾವನಿರ್ವೃತ್ತಃ ಸೋಽನಂತಾಕಾಶಮಧ್ಯಗಃ ॥ ೧ ॥

ಅರ್ಥ— ಲೋಕವು ಬ್ರಹ್ಮನಿಂದ ಮಾಡಲ್ಪಟ್ಟತೆಂದು ಮಿಥ್ಯಾಸೃಷ್ಟಿಗಳು ಹೇಳುತ್ತಾರೆ. ಅದನೆ ಜೀವಾದ್ಯರ್ಥಾವಗಾಹವುಳ್ಳ (ಜೀವಮೊದಲಾದ ಅರು ದ್ರವ್ಯಗಳಿಂದ ತುಂಬಿದ) ಲೋಕವು ಅಕೃತ್ರಿಮವಾದದ್ದು, ನಿತ್ಯವಾಡದ್ದು, ಸ್ವತಃ ಸಿದ್ಧವಾದದ್ದು ಇದ್ದು ಅನಂತಾಕಾಶದ ಮಧ್ಯದಲ್ಲಿ ಇರುತ್ತದೆ.

ಸ್ರಷ್ಟಾಸ್ಯ ಜಗತಃ ಕಶ್ಚಿದಸ್ತೀತ್ಯೇಕೇ ಜಗುರ್ಜಡಾಃ ॥
ತದ್ದುರ್ನಯನಿರಾಸಾರ್ಥಂ ಸೃಷ್ಟಿವಾದಃ ಪರೀಕ್ಷ್ಯತೇ ॥ ೨ ॥

ಅರ್ಥ— ಈ ಜಗತ್ತಿಗೆ ಯಾವನೋ ಒಬ್ಬ ಸೃಷ್ಟಿಕರ್ತನು ಇದ್ದಾನೆಂದು ಜಡಪುರುಷರು ಹೇಳುತ್ತಾರೆ. ಅವರ ದುರ್ನೀತಿಯನ್ನು ಹೋಗಲಾಡಿಸುವದಕ್ಕೋಸ್ಕರ ಸೃಷ್ಟಿವಾದವು ಪರೀಕ್ಷಿಸಲ್ಪಡುತ್ತದೆ.

ಸ್ರಷ್ಟಾ ಸರ್ಗಾಬಹಿರ್ಭೂತಃ ಕ್ವಸ್ಥಃ ಸೃಜತಿ ತಜ್ಜಗತ್ ॥
ನಿರಾಧಾರಶ್ಚ ಕೂಟಸ್ಥಃ ಸೃಷ್ಟೇರ್ವಕ್ತವ್ಯತಾಕ್ಷತಿ ನಿವೇಶಯೇತ್ ॥ ೩ ॥

ಅರ್ಥ— ಸೃಷ್ಟಿಕರ್ತನು ಜಗದ್ಬಾಹ್ಯನಾಗಿರಬೇಕು. ಹಾಗಾದರೆ ಆಕಾಶಾದಿಗಳೆಲ್ಲ ಜಗತ್ತಿನಲ್ಲಿ ಸೇರಿದ್ದರಿಂದ ಇವನು ಎಲ್ಲಿದ್ದುಕೊಂಡು ಸೃಷ್ಟಿಮಾಡಿದನು? ಸೃಷ್ಟಿಕರ್ತನ ಹೊರತು ಪೊದಲು ಯಾವದೂ ಇರಲಿಲ್ಲವೆಂಬುವದು

ಯಾಸಿದ್ಧವಾಗಿದೆ; ಕೂಟಸ್ಥನು ನೀರಾಧಾರನಾದರೆ ಈ ಜಗತ್ತನ್ನು ಸೃಷ್ಟಿಮಾಡಿ ಎಲ್ಲಿ ಇಟ್ಟಾನು? (ಅಂದರೆ ಆಶ್ರಯಾಪೇಕ್ಷೆಯಾದ ಜಗತ್ತು ಆಧಾರವಿಲ್ಲದೆ ನಿಲ್ಲುವದೊ ಹ್ಯಾಗೆ ಎಂಬ ತಾತ್ಪರ್ಯವು).

ನೈಕೋ ವಿಶ್ವಾತ್ಮಕಸ್ಯಾಸ್ಯ ಜಗತೋ ಘಟನೇ ಪಟುಃ ॥
ವಿತನೋಶ್ಚ ನ ತನ್ಮಾವಿ ಮೂರ್ತಮುತ್ಪತ್ತುಮರ್ಹತಿ ॥ ೪ ॥

ಅರ್ಥ— ವಿಶ್ವಾತ್ಮಕವಾದ ಜಗತ್ತನ್ನು ಒಬ್ಬನೇ ಘಟನೆ ಮಾಡುವದಕ್ಕೆ ಸಮರ್ಥನಲ್ಲ; ಅವನು ಅಮೂರ್ತನಾದ್ದರಿಂದ (ದೇಹರಹಿತನಿರುವದರಿಂದ) ಮೂರ್ತವಾದ ಈ ಜಗತ್ತನ್ನು ನಿರ್ಮಾಣಮಾಡಲಾರನು.

ಕಥಂ ಚ ನ ಸೃಜೇಲ್ಲೋಕಂ ವಿನಾನ್ಯೈಃ ಕರಣಾದಿಭಿಃ ॥
ತಾನಿ ಸೃಷ್ಟ್ವಾ ಸೃಜೇಲ್ಲೋಕಮಿತಿ ಚೇದನವಸ್ಥಿತಿಃ ॥ ೫ ॥

ಅರ್ಥ— ಕೂಟಸ್ಥನು (ಹಾನಿವೃದ್ಧಿಗಳಿಲ್ಲದ ಶಾಶ್ವತ ಸ್ಥಿತಿಯುಳ್ಳವನು) ಇತರ ಕರಣಾದಿಗಳು (ಸಾಧನಗಳು) ಇಲ್ಲದೇ ಹ್ಯಾಗೆ ಸೃಷ್ಟಿಮಾಡ್ಯಾನು? ಕರಣಗಳನ್ನು ಮೊದಲು ಹುಟ್ಟಿಸಿ, ಅಮೇಲೆ ಅವುಗಳಿಂದ ಸೃಷ್ಟಿಮಾಡಿದನೆಂದರೆ ಆ ಕರಣವಸ್ತುಗಳನ್ನು ಹುಟ್ಟಿಸುವಾಗ್ಗೆ ಅದಕ್ಕೆ ಬೇರೆ ಯಾವ ಕರಣವಿತ್ತೆಂದು ಮಾಡಿದ ಪ್ರಶ್ನೆಕ್ಕೆ ಸಮಾಧಾನವಿಲ್ಲದ್ದರಿಂದ ಅವನಸ್ಥಿತಿ ಎಂಬ ದೋಷವು ಬರುತ್ತದೆ.

ತೇಷಾಂ ಸ್ವಭಾವಸಿದ್ಧತ್ವೇ ಲೋಕೇಽಪ್ಯೇತತ್ಪ್ರಸಜ್ಯತೇ ॥
ಕಿಂ ಚ ನಿರ್ಮಾತೃವದ್ವಿಶ್ವಂ ಸ್ವತಃ ಸಿದ್ಧಿಮವಾಪ್ನುಯಾತ್ ॥ ೬ ॥

ಅರ್ಥ— ಕೆಲವು ಸಾಧನಗಳು ಸ್ವತಸ್ಸಿದ್ಧವಾಗಿರುತ್ತವೆ. ಈ ಲೋಕಕ್ಕಾದರೂ ಸ್ವಭಾವಸಿದ್ಧತ್ವವನ್ನು ಯಾಕೆ ಹೇಳಬಾರದು? ಲೋಕವನ್ನು ನಿರ್ಮಾಣಮಾಡುವಷನಂತೆ (ನೀನು ಒಪ್ಪಿಕೊಳ್ಳುವ ಈಶ್ವರನಂತೆ) ಈ ಜಗತ್ತು ಸ್ವತಃ ಸಿದ್ಧತ್ವವನ್ನು ಹೊಂದುತ್ತದೆ.

ಸೃಜೇದ್ವಿನಾಪಿ ಸಾಮಗ್ರ್ಯಾ ಸ್ವತಂತ್ರಃ ಪ್ರಭುರಿಚ್ಛಯಾ ॥
ಇತೀಚ್ಛಾಮಾತ್ರಮೇವೈತತ್ ಕಃ ಶ್ರದ್ಧ್ಯಾದಯುಕ್ತಿಕಂ ॥ ೭ ॥

ಅರ್ಥ— ಯಾವ ಸಾಧನಗಳಿಲ್ಲದೇ ಸ್ವತಂತ್ರನಾದ ಪುರುಷನು ಕೇವಲ ತನ್ನ ಇಚ್ಛೆಯಿಂದಲೇ ಈ ಜಗತ್ತನ್ನು ನಿರ್ಮಾಣ ಮಾಡುತ್ತಾನೆಂದರೆ ಯುಕ್ತಿರಹಿತವಾದ ಈ ಭಾಷಣವನ್ನು ಯಾರು ನಂಬ್ಯಾರು? ಯಾರೂ ನಂಬುವದಿಲ್ಲ.

ಕೃತಾರ್ಥಸ್ಯ ವಿನಿರ್ಮಾತ್ರಾ ಕಥಮೇವಾಸ್ಯ ಯುಜ್ಯತೇ ॥
ಅಕೃತಾತ್ಮೋಽಪಿ ನ ಸ್ರಷ್ಟುಂ ವಿಶ್ವಮೀಷ್ಟೇ ಕುಲಾಲವತ್ ॥ ೮ ॥

ಅರ್ಥ— ಸೃಷ್ಟಿಯನ್ನು ನಿರ್ಮಾಣಮಾಡುವವನಿಗೆ ಯಾವ ಅಪೇಕ್ಷೆಯು ಇಲ್ಲವೆಂದರೆ, ಅವನು ವ್ಯರ್ಥವಾಗಿ ಈ ಸೃಷ್ಟಿಯನ್ನು ಮಾಡಲಿಕ್ಕಿಲ್ಲ; ಸೃಷ್ಟಿ ಮಾಡುವದರಲ್ಲಿ ಯಾವದೊಂದು ಪ್ರಯೋಜನ ಉಂಟೆಂದರೆ ಕೆಲವು ಮಡಿಕೆಗಳನ್ನು ಮಾಡುವ ಕುಂಬಾರನಂತೆ ಕೆಲವು ಸ್ವತಃ ಸಿದ್ಧವಾದ ದ್ರವ್ಯಕ್ಕೆ ರೂಪಾಂತರವನ್ನು ಕೊಡಬಹುದು. ಪರಮಾಣುರೂಪವಾದ ಮೊದಲ್ಗೊಂಡು ವಿಶ್ವವನ್ನೆಲ್ಲ ಸೃಷ್ಟಿಮಾಡಲು ಅಸಮರ್ಥನಾದಾನು?

ಅಪೂರ್ತೋ ನಿಃಕ್ರಿಯೋ ವ್ಯಾಪೀ ಕಥಮೇವ ಜಗತ್ಸೃಜೇತ್ ॥
ನ ಸಿಸೃಕ್ಷಾಪಿ ತಸ್ಯಾಸ್ತಿ ವಿಕ್ರಿಯಾರಹಿತಾತ್ಮನಃ ॥ ೯ ॥

ಅರ್ಥ—ದೇಹರಹಿತನಾದ, ಕ್ರಿಯಾಶೂನ್ಯನಾದ, ಸರ್ವವ್ಯಾಪಿಯಾದ ಈಶ್ವರನು ಈ ಸೃಷ್ಟಿಯನ್ನು ಹ್ಯಾಗೆ ಮಾಡ್ಯಾನು? ಯಾಕಂದರೆ, ವಿಕ್ರಿಯ (ವಿಕಾರ) ರಹಿತನಾದವನಿಗೆ ಸೃಷ್ಟಿಮಾಡಬೇಕೆಂಬ ಅಪೇಕ್ಷೆಯು ಹುಟ್ಟುವದಿಲ್ಲ.

ತಥಾಪ್ಯಸ್ಯ ಜಗತ್ಸರ್ಗೇ ಫಲಂ ಕಿಮಿತಿ ಮೃಗ್ಯತಾಂ ॥
ನಿಷ್ಕೃತಾರ್ಥಸ್ಯ ಧರ್ಮಾದಿಪುರುಷಾರ್ಥೇಷ್ವನರ್ಥಿನಃ ॥ ೧೦ ॥

ಅರ್ಥ— ಅಪೇಕ್ಷೆಯು ಇಲ್ಲದಿದ್ದರೂ ಸೃಷ್ಟಿಯನ್ನು ಮಾಡುತ್ತಾನೆಂದರೆ, ಸೃಷ್ಟಿಮಾಡುವದರಲ್ಲಿ ಏನಾದರೂ ಪ್ರಯೋಜನವಿರುವದುಂಟೋ ಹ್ಯಾಗೆ? ಇದನ್ನು ವಿಚಾರಿಸಬೇಕು; ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕೂ ಪುರುಷಾರ್ಥಗಳಲ್ಲಿ ಆ ಈಶ್ವರನಿಗೆ ಅಪೇಕ್ಷೆಯಿಲ್ಲದಿದ್ದರೆ ಈ ಜಗತ್‌ಸೃಷ್ಟಿಯಲ್ಲಿ ಏನು ಪ್ರಯೋಜನವು?

ಸ್ವಭಾವತೋ ವಿನೈವಾರ್ಥಾತ್‌ಸೃಜತೋನರ್ಥಸಂಗತಿಃ ॥
ಕ್ರೀಡೆಯಂ ಕಾಪಿ ಚೇದಸ್ಯ ದುರಂತಾ ಮೋಹಸಂತತಿಃ ॥ ೧೧ ॥

ಅರ್ಥ—ಯಾವದೂ ಪ್ರಯೋಜನವಿಲ್ಲದೆ ಸೃಷ್ಟಿಯನ್ನು ಮಾಡುತ್ತಾನೆಂದರೆ ಅನರ್ಥ ಸಂಗತಿಯು ಬರುತ್ತದೆ; "ಪ್ರಯೋಜನಮನುದ್ದಿಶ್ಯ ನ ಮಂದೋಪಿ ಪ್ರವರ್ತತೇ" ಪ್ರಯೋಜನವಿಲ್ಲದೆ ಮಂದನಾದಾಗ್ಯೂ ಒಂದು ಕಾರ್ಯಮಾಡಲು ಪೇಕ್ಷಿಸುವದಿಲ್ಲವೆಂಬ ನ್ಯಾಯಕ್ಕೆ ಅಸಂಗತಿಯು ಒದಗುತ್ತದೆಂಬ ತಾತ್ಪರ್ಯವು. ಈ ಸೃಷ್ಟಿಯನ್ನು ಈಶ್ವರನು ಲೀಲೆಯಿಂದ ಮಾಡುತ್ತಾನೆಂದನೆ ಕ್ರೀಡೆಯು ಮೋಹ ಸಂಬದ್ಧವಾದ್ದರಿಂದ ದುರಂತವಾದ ಮೋಹವು ಪ್ರಾಪ್ತವಾಗುತ್ತದೆ.

ಕರ್ಮಾವೇಕ್ಷಃ ಶರೀರಾದಿ ಜೀವಿನಾಂ ಘಟಯೇದ್ಯದಿ ॥
ನನ್ವೇವಮೀಶ್ವರೋ ನ ಸ್ಯಾತ್ಸ್ವಾತಂತ್ರ್ಯಾತ್ಕುಲಾಲವತ್ ॥ ೧೨ ॥

ಅರ್ಥ— ಜೀವಗಳ ಕರ್ಮಾನುಗುಣವಾಗಿ ಈಶ್ವರನು ಪ್ರಾಣಿಗಳ ಶರೀರ ಮುಂತಾದವುಗಳನ್ನು ಹುಟ್ಟಿಸುತ್ತಾನೆಂದರೆ, ಕುಲಾಲನಂತೆ (ಸೋಮಾರಿಕಾರನಂತೆ

ಅವನು ತಂತು (ನೂಲು) ಮುಂತಾದ ಸಾಧನಗಳಿಂದ ಪಟನವನ್ನು ಹುಟ್ಟಿಸುತ್ತಾನೆ. ಈಶ್ವರನು ಪರತಂತ್ರನಾದ್ದರಿಂದ (ಕರ್ಮಾಪೇಕ್ಷಿಯಾದ್ದರಿಂದ) ಪರಾಧೀನನಾದವನು ಈ ವಿಶ್ವವನ್ನು ನಿರ್ಮಿಸಲಾರನು.

ನಿಮಿತ್ತಮಾತ್ರಮಿಷ್ಯತೇ ಕರ್ತಾಽಸ್ಯಾರ್ಯೋ ಕರ್ಮಾದಿಹೇತುಕೆ ॥
ಸಿದ್ಧೋಪಸ್ಥಾಯ್ಯಸೌ ಹಂತ ಪೋಷ್ಯತೇ ಕಿಮಕಾರಣಂ ॥ ೧೩ ॥

ಅರ್ಥ— ಕರ್ಮಾದಿ ಕಾರಣಗಳಿಂದ ವಿಶ್ವವು ಹುಟ್ಟುತ್ತದೆ; ಈಶ್ವರನು ನಿಮಿತ್ತಮಾತ್ರನಾಗಿರುತ್ತಾನೆಂದರೆ, ಸಿದ್ಧೋಪಸ್ಥಾಯಿಯಾದ ಈಶ್ವರನು ಯಾಕೆ ಅಕಾರಣವಾಗಿ ಪೋಷಿಸಲ್ಪಡುತ್ತಾನೆ? (ಭಾವಾರ್ಥವೇನಂದರೆ, ಈಶ್ವರನನ್ನು ಬಿಟ್ಟು ಬೇರೆ ಕಾರಣದಿಂದ ಜಗತ್ಸರ್ಜನೆಯು ಆಗುತ್ತಿರಲು ಈಶ್ವರನು ಅನ್ಯಥಾ ಸಿದ್ಧನಾಗುತ್ತಾನೆ; ಇವನು ಜಗತ್ತಿಗೆ ಕಾರಣನೆಂತ ಒಪ್ಪಿಕೊಳ್ಳಬಾರದು).

ವತ್ಸಲಃ ಪ್ರಾಣಿನಾಮೇಕಃ ಸೃಜನ್ನನುಜಿಘೃಕ್ಷಯಾ ॥
ನನು ಸೌಖ್ಯಮಯೀಂ ಸೃಷ್ಟಿಂ ವಿದಧ್ಯಾನುಪಪ್ಲುತಾಂ ॥ ೧೪ ॥

ಅರ್ಥ— ಈಶ್ವರನಿಗೆ ಸೃಷ್ಟಿಮಾಡುವದರಲ್ಲಿ ಬೇರೆ ಪ್ರಯೋಜನವಿಲ್ಲದಿದ್ದರೂ ಅವನು ಪ್ರಾಣಿಗಳ ಮೇಲೆ ಅನುಗ್ರಹ ಮಾಡುವದರ ಸಲುವಾಗಿ ಸೃಜಿಸುತ್ತಾನೆಂದರೆ ಪ್ರಾಣಿಗಳಿಗೆ ದುಃಖಮಯವಾದ ಸೃಷ್ಟಿಯನ್ನು ಮಾಡದೇ ಸುಖಮಯವಾದ ಸೃಷ್ಟಿಯನ್ನೇ ಮಾಡುತ್ತಿದ್ದನು.

ಸೃಷ್ಟಿಪ್ರಯಾಸವೈಯರ್ಥ್ಯಂ ಸರ್ಜನೇ ಜಗತಃ ಸತಃ ॥
ನಾತ್ಯನ್ತಮಸತಸ್ಸರ್ಗೋ ಯುಕ್ತೋ ವ್ಯೋಮಾರವಿಂದವತ್ ॥ ೧೫ ॥

ಅರ್ಥ— ಈಶ್ವರನು ಸತ್ಯಭೂತವಾದ ಜಗತ್ತನ್ನು ನಿರ್ಮಿಸುತ್ತಿದ್ದರೆ ಅವನ ಪ್ರಯಾಸವು ವ್ಯರ್ಥವು; ಮತ್ತು ಅಸತ್ಯವಾದ ಜಗತ್ತನ್ನು ಹುಟ್ಟಿಸುತ್ತಿದ್ದರೆ ಗಗನಾರವಿಂದ (ಆಕಾಶದಲ್ಲಿರುವ ಕಮಲ)ದಂತೆ ಆ ಸೃಷ್ಟಿಯು ಮಿಥ್ಯಾಭೂತವಾದದ್ದು; ಆದದರಿಂದ ಅವನು ಸತ್ಯ ಮತ್ತು ಅಸತ್ಯವಾದ ಜಗತ್ತನ್ನು ನಿರ್ಮಾಣ ಮಾಡಲಿಕ್ಕೆ ಅಯೋಗ್ಯನು. (ಪರಮಾಣುಗಳು ಸ್ಕಂಧರೂಪವಾಗುವದು ಸ್ಕಂಧಗಳು ಪರಮಾಣುಗಳಾಗುವದು ಸರ್ವ ದ್ರವ್ಯಗಳಲ್ಲಿಯೂ ಇಲ್ಲದೇ ಇರುವದಿಲ್ಲ; ಗುಣಪರ್ಯಾಯವುಳ್ಳದ್ದೇ ದ್ರವ್ಯವಾಗುತ್ತದೆ; ಆದ್ದರಿಂದ ಸರ್ವ ದ್ರವ್ಯಗಳಲ್ಲಿ ಪರ್ಯಾಯವು ಸಿದ್ಧವಾಗಿದೆ).

ನೋದಾಸೀನಃ ಸೃಜೇನ್ಮುಕ್ತಃ ಸಂಸಾರೀ ಸೋಽನೀಶ್ವರಃ ॥
ಸೃಷ್ಟ್ವಾಽವತಾರೋಽಯಂ ತತಶ್ಚಿನ್ನ ಕೃತಶ್ಚನ ॥ ೧೬ ॥

ಅರ್ಥ— ಈಶ್ವರನು ಮುಕ್ತನಿದ್ದರೆ ಉದಾಸೀನನಾಗುವದರಿಂದ ಆವನಿಗೆ ಸೃಷ್ಟಿಮಾಡುವ ಇಚ್ಛೆಯೇ ಆಗುವದಿಲ್ಲ; ಅವನು ಸಂಸಾರಿಯಾಗಿರುತ್ತಾನೆಂದರೆ ಕರ್ಮಾಪೇಕ್ಷಿಯಾಗುವದರಿಂದ ಸೃಜಿಸುವದಕ್ಕೆ ಅಸಮರ್ಥನಾಗುತ್ತಾನೆ ಆದ್ದರಿಂದ ಯಾತರದೆಶೆಯಿಂದಲೂ ಸೃಷ್ಟಿವಾದವು ನಿಶ್ಚಿತವಾಗುವದಿಲ್ಲ.

ಮಹಾನಧರ್ಮಯೋಗೋಸ್ಯ ಸೃಷ್ಟ್ವಾ ಸಂಹರತಃ ಪ್ರಜಾಃ ॥
ದುಷ್ಟನಿಗ್ರಹಬುಧ್ಯಾ ಚೇದ್ವರಂ ದೈತ್ಯಾದ್ಯಸರ್ಜನಂ ॥ ೧೭ ॥

ಅರ್ಥ— ಮತ್ತು ಈ ಈಶ್ವರನು ಪ್ರಜೆಗಳನ್ನು ಸೃಷ್ಟಿಮಾಡಿ ಸಂಹಾರಮಾಡುತ್ತಾನೆ; ಆದಕಾರಣ ಅವನಿಗೆ ಪ್ರಜಾಸಂಹಾರರೂಪವಾದ ಅಧರ್ಮವು ಬಹಳೇ ಪ್ರಾಪ್ತವಾಗುತ್ತದೆ; ದುಷ್ಟರನ್ನು ನಿಗ್ರಹಿಸುವದಕ್ಕೋಸ್ಕರ ಸಂಹಾರಮಾಡಹತ್ತಿದ್ದರೆ ದುಷ್ಟರನ್ನು ಹುಟ್ಟಿಸದಿರುವದು ಯೋಗ್ಯವಲ್ಲವೆ?

ಬುದ್ಧಿಮದ್ಭೀತುಸಾಂನಿಧ್ಯೇ ತನ್ಮಾದ್ಯುತ್ಪತ್ತುಮರ್ಹತಿ ॥
ವಿಶಿಷ್ಟಸನ್ನಿವೇಶಾದಿಪ್ರತೀತೇರ್ನಗರಾದಿವತ್ ॥ ೧೮ ॥

ಅರ್ಥ— ಬುದ್ಧಿಶಾಲಿಗಳಾದ ಶಿಲ್ಪಿಗರು ಭವ್ಯವಾದ ಅರಮನೆಗಳುಳ್ಳ ನಗರಗಳನ್ನು ನಿರ್ಮಾಣಮಾಡುವಂತೆ ಈಶ್ವರನಾದರೂ ತನ್ನ ಬುದ್ಧಿಬಲದಿಂದ ಶರೀರಾದಿಗಳುಳ್ಳ ಜೀವವೊದಲಾದ ಸೃಷ್ಟಿಯನ್ನು ಮಾಡುತ್ತಾನೆಂಬುವದು ಈಶ್ವರಾಸ್ತಿತ್ವ ವಿಷಯದಲ್ಲಿ ಸಾಧಕವಾಗಲಾರದು; ಬುದ್ಧಿಮುಂತಾದ ವಿಶಿಷ್ಟಸನ್ನಿವೇಶಗಳಿಗೆ ಬೇರೆ ಉಪಪತ್ತಿಯನ್ನು ಹೇಳುತ್ತೇವೆ.

ಇತ್ಯಸಾಧನಮೇವೈತದೀಶ್ವರಾಸ್ತಿತ್ವಸಾಧನೇ ॥
ವಿಶಿಷ್ಟಸನ್ನಿವೇಶಾದೇರನ್ಯಥಾಪ್ಯುಪಪತ್ತಿತಃ ॥ ೧೯ ॥
ಚೇತನಾಧಿಷ್ಠಿತಂ ಹೀದಂ ಕರ್ಮನಿರ್ಮಾತೃಚೇಷ್ಟಿತಂ ॥
ತನ್ಮೇಕ್ಷಸುಖದುಃಖಾದಿವೈಶ್ವರೂಪ್ಯಾಯ ಕಲ್ಪತೇ ॥ ೨೦ ॥

ಅರ್ಥ— ಈ ವಿಶ್ವವು ಚೇತನವಾದ ಜೀವಗಳಿಂದ ಅಧಿಷ್ಠಿತವಾಗಿ ಮತ್ತು ಕರ್ಮವೆಂಬ ನಿರ್ಮಾತೃವಿನಿಂದ ಚೇಷ್ಟೆ ಮುಂತಾದ ಗತಿಗಳಳ್ಳದ್ದು ಆಗಿ, ಶರೀರ, ಇಂದ್ರಿಯ, ಸುಖದುಃಖ ಮುಂತಾದ ನಾನಾರೂಪಗಳನ್ನು ಧರಿಸುವದಕ್ಕೆ ಸಮರ್ಥವಾಗುತ್ತದೆ. ಚೇತನ ಮತ್ತು ಕರ್ಮ ಮುಂತಾದ ಸಿದ್ಧಪದಾರ್ಥಗಳಿಂದಲೇ ವಿಶ್ವದ ಉಪಪತ್ತಿಯಾಗುತ್ತಿರಲು ಬೇರೆ ಈಶ್ವರನನ್ನು ಒಪ್ಪಿಕೊಳ್ಳುವ ಕಾರಣವಿಲ್ಲ.

ನಿರ್ಮಾಣಕರ್ಮನಿರ್ಮಾತೃಕೌಶಲಾದಾಹಿತೋದಯಂ ॥
ಅಂಗೋಪಾಂಗಾದಿವೈಚಿತ್ರ್ಯಮಂಗಿನಾಂ ಸಂಗಿರಾಮಹೇ ॥ ೨೧ ॥

ಅರ್ಥ— ಪ್ರಾಣಿಗಳಲ್ಲಿ ಕಂಡುಬರುವ ಶರೀರ ಬುದ್ಧಿಬಲ ಮುಂತಾದ ನಾನಾರೂಪಗಳೂ ಮತ್ತು ವಿಶ್ವದಲ್ಲಿ ಕಾಣುವ ಅನೇಕ ವಿಚಿತ್ರರೂಪಗಳೂ ಕರ್ಮ ವೆಂಬ ಕುಶಲವಾದ ಸೃಷ್ಟಿಕರ್ತನ ಕೌಶಲ್ಯದಿಂದ ಉಂಟಾಗಿರುತ್ತವೆಂದು ಹೇಳು ತ್ತೇವೆ. (ಈಶ್ವರನನ್ನು ಬಡಂಬಡುವ ಕಾರಣವಿಲ್ಲ).

ತದೇತತ್ಕರ್ಮವೈಚಿತ್ರ್ಯಾದ್ಭವನ್ನಾನಾತ್ಮಕಂ ಜಗತ್ ॥
ವಿಶ್ವಕರ್ಮಾಣಮಾತ್ಮಾನಂ ಸಾಧಯೇತ್ಕರ್ಮಸಾರಥಿಂ ॥ ೨೨ ॥

ಅರ್ಥ— ಬೇರೆ ಬೇರೆ ಪ್ರಾಣಿಗಳ ಕರ್ಮಗಳು ಭಿನ್ನ ಭಿನ್ನವಾಗಿರುವದರಿಂದ ಆ ಕರ್ಮವೈಚಿತ್ರ್ಯದಿಂದ ಜಗತ್ತು ನಾನಾತ್ಮಕವಾದದ್ದಾಗಿ ಕರ್ಮಸಾರಥಿಯಾದ ವಿಶ್ವಕರ್ಮನಾದ ಆತ್ಮನನ್ನು ಸಾಧಿಸುತ್ತದೆ.

ವಿಧಿಃ ಸ್ರಷ್ಟಾ ವಿಧಾತಾ ಚ ದೈವಂ ಕರ್ಮ ಪುರಾಕೃತಂ ॥
ಈಶ್ವರಶ್ಚೇತಿ ಪರ್ಯಾಯಾ ವಿಜ್ಞೇಯಾಃ ಕರ್ಮವೇಧಸಃ ॥ ೨೩ ॥

ಅರ್ಥ—ಕರ್ಮವೆಂಬ ಬ್ರಹ್ಮನಿಗೆ ವಿಧಿ, ಸೃಷ್ಟಿಕರ್ತ, ಬ್ರಹ್ಮ, ದೈವ (ಪೂರ್ವ ದಲ್ಲಿ ಮಾಡಿದ ಕರ್ಮವು), ಈಶ್ವರ ಹೀಗೆ ಐದು ಪರ್ಯಾಯನಾಮಗಳು ಇರುತ್ತವೆ.

ಸ್ರಷ್ಟಾರಮಂತರೇಣಾಪಿ ವ್ಯೋಮಾದೀನಾಂ ಚ ಸಂಗರಾತ್ ॥
ಸೃಷ್ಟ್ಯಾದೀ ನ ನಿಗ್ರಾಹ್ಯಃ ಶಿಷ್ಟೈರ್ದುರ್ಮತದುರ್ಮದೀ ॥ ೨೪ ॥

ಅರ್ಥ—ಆಕಾಶ ಮೊದಲಾದವುಗಳು ಸೃಷ್ಟಿಕರ್ತನಿಲ್ಲದೆ ಸಿದ್ಧವಾದದ್ದರಿಂದ (ಆದರಂತೆ ವಿಶ್ವನಿರ್ಮಿತಿಯೂ ಸಿದ್ಧವಾಗುವದರಿಂದ) ದುರ್ಮತ ದುರ್ಮದವುಳ್ಳ ಸೃಷ್ಟ್ಯಾದಿಯು ಶಿಷ್ಟರಿಂದ ನಿಗ್ರಹಿಸಲು ಯೋಗ್ಯನಾದನು.

ತತ್ಸೋಽಸಾವಕೃತೋನಾದಿಸಿದ್ಧಃ ಕಾಲತತ್ತ್ವವತ್ ॥
ಲೋಕೋ ಜೀವಾದಿತತ್ತ್ವಾನಾಮಾಧಾರಾತ್ಮಾ ಪ್ರಕಾಶತೇ ॥ ೨೫ ॥

ಅರ್ಥ— ಕಾಲತತ್ವದಂತೆ ಲೋಕವು ಅನಾದಿನಿಧನವಾದದ್ದು (ಉತ್ಪತ್ತಿ ಮತ್ತು ಮರಣವಿಲ್ಲದ್ದು ಅಕೃತ್ರಿಮವಾದದ್ದು) ಜೀವಾದಿತತ್ವಗಳಿಗೆ ಆಧಾರವಾಗಿ ಪ್ರಕಾ ಶಿಸುತ್ತದೆ.

ಅಸೃಜ್ಯೋಽಯಮಸಂಹಾರ್ಯಃ ಸ್ವಭಾವನಿಯತಸ್ಥಿತಿಃ ॥
ಅಧಸ್ತಿರ್ಯಗೂರ್ಧರೂಪೈಸ್ತ್ರಿಭಿರ್ಭೇದೈಸ್ತ್ರಿಧಾ ಸ್ಥಿತಃ ॥ ೨೬ ॥

ಅರ್ಥ—ಈ ವಿಶ್ವವು ಸೃಷ್ಟ್ಯಯೋಗ್ಯವಾಗುವದಿಲ್ಲ ಮತ್ತು ಸಂಹಾರಯೋ ಗ್ಯವೆಲ್ಲ, ಸ್ವತಃ ಸಿದ್ಧವಾಗಿ ನಿಯತವಾದ ಸ್ಥಿತಿಯುಳ್ಳದ್ದು; ಅಧೋಲೋಕ ತಿರ್ಯ ಗ್ಲೋಕ ಊರ್ಧ್ವಲೋಕವೆಂಬ ಮೂರು ಭೇದಗಳುಳ್ಳದ್ದಿರುತ್ತದೆ.

ಮೇಲಿನ ಶ್ಲೋಕುಗಳು ಶ್ರೀಮಜ್ಜಿನಸೇನಾಚಾರ್ಯರು ರಚಿಸಿದ ಮಹಾ ಪುರಾಣದ ನಾಲ್ಕನೇ ಪರ್ವದಲ್ಲಿ ಸೇರಿವೆ. ಜೈನಮತದಲ್ಲಿ ಈ ಸೃಷ್ಟಿಯನ್ನು ಯಾರೂ ನಿರ್ಮಾಣಮಾಡಿಲ್ಲವೆಂತಲೂ, ಇದು ಸ್ವತಃಸಿದ್ಧವಾಗಿರುವುದೆಂತಲೂ ಆಗಮಪ್ರಮಾಣದಿಂದಲೂ, ಯುಕ್ತಿಯಿಂದಲೂ ಸಿದ್ಧಮಾಡಲ್ಪಟ್ಟಿದೆ. ಈ ಲೇಖವನ್ನು ಈ ಸಂಚಿಕೆಯಲ್ಲಿ ಮುದ್ರಿಸುವ ಅವಶ್ಯಕತೆಯು ಏನೆಂದರೆ ಜೈನರಲ್ಲಿ ಕೆಲವರು ಸ್ವಮತವನ್ನು ಅರಿಯದೆ ಭ್ರಾಂತಿಯಿಂದ ಪರಮತದವರಂತೆ ಸೃಷ್ಟಿಗೆ ಕರ್ತನು ಇರುವನೆಂದು ನಂಬುತ್ತಾರೆ. ಅದು ತಪ್ಪು ತಿಳುವಳಿಕೆಯೆಂದು ಖಂಡಿತವಾಗಿಯೂ ಶಾಸ್ತ್ರಾಧಾರಮೂಲಕವಾಗಿಯೂ ಸಾರಿ ಹೇಳಿಬೇಕಾಗಿರುವದು, ಪರಮೇಶ್ವರನು ಕೃತಕೃತ್ಯನಾಗಿದ್ದು ಅವನಿಗೆ ಸೃಷ್ಟಿಯನ್ನು ನಿರ್ಮಾಣಮಾಡುವ ಇಚ್ಛೆಯೂ ಅವಶ್ಯಕತೆಯೂ ಇಲ್ಲೆಂಬ ಮಾತು ಸಿದ್ಧವಷೆ. ಶ್ರೀಜಿನೇಶ್ವರನು ಸರ್ವಪ್ರಾಣಿಗಳಿಗೆ ಹಿತವನ್ನು ಉಪದೇಶಿಸಿ ಮೋಕ್ಷದ ಪ್ರಾಪ್ತಿಯ ಉಪಾಯವನ್ನು ತೋರಿಸಿದ್ದರಿಂದ, ಅವನ ವಚನಗಳಲ್ಲಿ ವಿಶ್ವಾಸವನ್ನಿಟ್ಟು ಅವನಿಂದ ಹೇಳಲ್ಪಟ್ಟ ಮಾರ್ಗವನ್ನು ಅನುಸರಿಸಿದರೆ ತಪ್ಪದೇ ಕಾಲಾಂತರದಲ್ಲಿ ಮುಕ್ತಿಯನ್ನು ಪಡೆಯಬಹುದು. ಆದರೆ ಅವನು ಸೃಷ್ಟಿಕರ್ತನಲ್ಲ. ಜಿನೇಶ್ವರನು ಎಲ್ಲ ಪ್ರಾಣಿಗಳಿಗೆ ಹಿತೋಪದೇಶವನ್ನು ಮಾಡಿದ ಮೂಲಕ ನಾವೆಲ್ಲರೂ ಅವನನ್ನು ಪೂಜಿಸುತ್ತೇವೆ. ಅವನ ಸೇವೆಯಿಂದ ತನ್ನಷ್ಟಕ್ಕೆ ತಾನೇ ಪುಣ್ಯ ಬಂಧವು ಆಗುತ್ತದೆ. ಆದರೆ ಈ ಪುಣ್ಯವನ್ನು ತೀರ್ಥಂಕರರೂ ಸಾಕ್ಷಾತ್ ಕೈಯತ್ತಿ ಕೊಡುವದಿಲ್ಲ. ಪ್ರಾಣಿಗಳು ತಮ್ಮ ಪುಣ್ಯಪಾಪಗಳಿದ್ದಂತೆ ಸುಖದುಃಖಗಳನ್ನು ಪಡೆಯುತ್ತವೆ; ಕರ್ಮವು ತೀರಿದ ಮೇಲೆ ಮುಕ್ತಿಯನ್ನು ಹೊಂದುತ್ತವೆ. ಅದ್ವೈತವೇದಾಂತಿಗಳು ಸೃಷ್ಟಿಯನ್ನೂ ಸೃಷ್ಟಿಕರ್ತನನ್ನೂ ಒಡಂಬಡುವದಿಲ್ಲ. ಜಗತ್ತೇ ಅಸತ್ಯವಾದದ್ದು; ಬ್ರಹ್ಮ ಮಾತ್ರ ನತ್ಯವಾದದ್ದು; ಈ ಜಗತ್ತು ಮಾಯೆಯಿಂದ ಸತ್ಯವೆಂದು ತೋರುತ್ತದೆ; ಮಾಯೆಯು ನಷ್ಟವಾದ ಕೂಡಲೇ ನಿರ್ಗುಣವಾದ ಬ್ರಹ್ಮನೇ ಅನುಭವಗೋಚರವಾಗುತ್ತಾನೆ. ನೈಯ್ಯಾಯಿಕರೂ, ವೈಶೇಷಿಕರೂ ಜೈನರಂತೆ ಈ ಜಗತ್ತಿಗೆ ಕರ್ತನು ಇಲ್ಲವೆಂದು ಹೇಳುತ್ತಾರೆ. ಬೌದ್ಧರೂ ಹಾಗೇ ಒಪ್ಪುತ್ತಾರೆ. ಪರಮೇಶ್ವರನು ಜಗತ್ಕರ್ತನೆಂದು ವೈಷ್ಣವರು ಹೇಳುತ್ತಾರೆ. ಈ ವಿವೇಚನದ ಮೇಲಿಂದ ಕೆಲವರು ಜೈನರನ್ನು ನಾಸ್ತಿಕರೆಂದು ಭಾವಿಸಬಹುದು. ಆದರೆ ಆ ತಿಳುವಳಿಕೆಯು ಸರ್ವಥಾ ತಪ್ಪು ಇರುವದು. ನಾಸ್ತಿಕರು ಅಂದರೆ ಚಾರ್ವಾಕರು ಅಥವಾ ಶೂನ್ಯಜೀವವಾದಿಗಳು. ದೇಹವೇ ಹೆಚ್ಚಿನದು; ಜೀವವು ದೇಹದ ಗುಣವು; ದೇಹವು ನಷ್ಟವಾದಲ್ಲಿ ತದಾಶ್ರಿತಗುಣವಾದ ಜೀವವಾದರೂ ನಾಶಹೊಂದುತ್ತದೆಂದು ನಾಸ್ತಿಕರು ಹೇಳುವರು. ಪರಲೋಕದಲ್ಲಿಯೂ, ಆತ್ಮಾಸ್ತಿಕ್ಯದಲ್ಲಿಯೂ ಕರ್ಮಮೋಕ್ಷಗಳಲ್ಲಿಯೂ ನಂಬಿಗೆಯನ್ನಿಡುವ ಜೈನರು ನಾಸ್ತಿಕರಲಾಗಲಾರರು.

ಗಾಯಕವಾಡ ಶ್ರೀಮಂತ ಸಯಾಜೀರಾವ ಮಹಾರಾಜರ ಸನ್ಮಾನವೂ ಮತ್ತು ಜೈನಸಮಾಜದ ಉನ್ನತಿಯು.

ಈ ತಿಂಗಳ ಮೂರನೇ ತಾರೀಖಿಗೆ ಬಡೋದೆ ಸಂಸ್ಥಾನದ ಧೊರೆಗಳಾದ ಶ್ರೀಮಂತ ಸಯಾಜೀರಾವ ಗಾಯಕವಾಡ ಮಹಾರಾಜರವರ ಸವಾರಿಯು ಮುಂಜಾನೆ ಹನ್ನೊಂದುವರೆ ಘಂಟೆಗೆ ಕೊಲ್ಹಾಪುರಕ್ಕೆ ಬರಲಾಗಿ ಕೊಲ್ಹಾಪುರದ ಧೊರೆಗಳಾದ ಶಾಹೂಛತ್ರಪತಿ ಮಹಾರಾಜರೂ ಎಜಂಟಸಾಹೇಬರೂ ಮತ್ತು ಸಂಸ್ಥಾನದ ದೊಡ್ಡ ದೊಡ್ಡ ಅಮಲದಾರರೂ ಅವರನ್ನು ಅರಮನೆಗೆ ಬಹು ಸನ್ಮಾನದಿಂದ ಮುಟ್ಟಿಸಿದರು. ಮರುದಿವಸ ಮುಂಜಾನೆ ಉಭಯ ಧೊರೆಗಳು ರಾಜಾರಾಮಕಾಲೇಜ, ಅಲ್ಬರ್ಟ ಹಾಸ್ಪಿಟಲ್ ಮುಂತಾದ ಸಂಸ್ಥೆಗಳನ್ನು ನೋಡಿ. ಮಧ್ಯಾನ್ಹದ ನಂತರ ಆ ನಗರದಲ್ಲಿರುವ ಮರಾಠಾ ಬೋರ್ಡಿಂಗ ಎಂಬ ಸಂಸ್ಥೆಗೆ ದಯಪಾಲಿಸಿದರು; ಅಲ್ಲಿಯ ವ್ಯವಸ್ಥೆಯನ್ನು ನೋಡಿ ಅವರಿಗೆ ಬಹಳ ಸಮಾಧಾನವಾಯಿತು. ಆ ಬೋರ್ಡಿಂಗದ ವಿದ್ಯಾರ್ಥಿಗಳು ತಮ್ಮ ಸೆಕ್ರೆಟರಿಯವರ ಮುಖಾಂತರವಾಗಿ ಅವರಿಗೆ ಮಾನಪತ್ರವನ್ನು ಅರ್ಪಿಸಿದರು; ನಂತರ ಮಹಾರಾಜರು ಮರಾಠಾ ಜನರ ವಿದ್ಯಾಭಿವೃದ್ಧಿಯೆಗೋಸ್ಕರ ಒಳ್ಳೇ ಉಪದೇಶವನ್ನು ಮಾಡಿದ ಮೇಲೆ ಆ ಸಮಾರಂಭವು ತೀರಿತು. ಆ ಮೇಲೆ ಸಮೀಪದಲ್ಲಿದ್ದ ಜೈನ ಬೋರ್ಡಿಂಗವನ್ನು ನೋಡುವದಕ್ಕೋಸ್ಕರ ಅಲ್ಲಿಗೆ ತೆರಳಿದರು.

ಸಭಾಮಂಟಪದಲ್ಲಿ ಮಹಾರಾಜರು ಸ್ಥಾನಾಪನ್ನರಾದ ಮೇಲೆ ಜೈನ ವಿದ್ಯಾಲಯದ ಮಂತ್ರಿಗಳಾದ ಪ್ರೋಫೇಸರ ಲಠ್ಠೆ ಎಮ್. ಏ. ಇವರು ಜೈನ ಸಮಾಜದವರ ತರ್ಫನಿಂದ ಮಹಾರಾಜರ ಸ್ವಾಗತವನ್ನು ಮಾಡಿ ಅಂದದ್ದೇನೆಂದರೆ:—

ಈ ಪ್ರಾಂತದೊಳಗಿನ ಜೈನ ಸಮಾಜದಲ್ಲಿ ಉಚ್ಚ ಮತ್ತು ಮಧ್ಯಮ ಶಿಕ್ಷಣದ ಪ್ರಸಾರವಾಗಬೇಕೆಂದು ದಕ್ಷಿಣ ಮಹಾರಾಷ್ಟ್ರ ಜೈನ ಸಭೆಯವರು ಈ ಬೋರ್ಡಿಂಗವನ್ನು ಸ್ಥಾಪಿಸಿದ್ದಾರೆ. ಈ ಪ್ರಾಂತದೊಳಗಿನ

ಜೈನರಲ್ಲಿ ಕೇವಲ ಓದಬರಿ ಬಲ್ಲವರ ಸಂಖ್ಯೆಯು ನೂರಕ್ಕೆ ಹನ್ನೊಂದು ಇರುವದು; ಮತ್ತು ನಾಲ್ಕು ಸಾವಿರ ಜನರಲ್ಲಿ ಒಬ್ಬನಿಗೆ ಮಾತ್ರ ತಕ್ಕ ಮಟ್ಟಿಗೆ ಇಂಗ್ಲಿಸ ಭಾಷೆಯ ಜ್ಞಾನವುಂಟು. ಇದು ಗರ್ಂಗ ನ್ಮೇ ಇನ್ಸ್ಟಿಯೆ ಖಾನೆಸುಮಾರಿಯಿಂದ ಕಂಡುಬರುತ್ತದೆ. ಈ ದುಃಖಕರ ಸಂಗತಿಯನ್ನು ತಿಳಿದು ಮತ್ತು ಬಡೋದೆ ಸಂಸ್ಥಾನದೊಳಗಿನ ತಮ್ಮ ರಾಜನಿಷ್ಠರಾದ ಜೈನ ಪ್ರಜೆಗಳಲ್ಲಿ ಕಲಿತವರ ಪ್ರಮಾಣವು ೬೦ ರಿಂದ ೭೦ ರವರೆಗೆ ಇದ್ದದ್ದು ಕಂಡು, ಈ ಸಂಸ್ಥಾನದೊಳಗಿನ ಜೈನರ ವಿದ್ಯಾಭಿವೃದ್ಧಿಯನ್ನು ಮಾಡಬೇಕೆಂದು ಛತ್ರಪತಿ ಮಹಾರಾಜರು ಈ ಸಂಸ್ಥಾನದೊಳಗಿನ ಜೈನರನ್ನು ಪ್ರೋತ್ಸಾಹಗೊಳಿಸಿ ಅವರಿಗೆ ಸಹಾಯ ಮಾಡಿ ಈ ವಿದ್ಯಾರ್ಥಿಭವನವನ್ನು ಸಭೆಯವರಿಂದ ಕಟ್ಟಿಸಿದರು. ಈ ಬೋರ್ಡಿಂಗದಲ್ಲಿ ೫೦ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮಾಡುತ್ತಲಿದ್ದು, ಅವರಿಗೆ ಧಾರ್ಮಿಕ ಮತ್ತು ನೈತಿಕ ಶಿಕ್ಷಣವು ಕೊಡಲ್ಪಡುತ್ತದೆ. ಇದೇ ಮೇರೆಗೆ ಜೈನರಲ್ಲಿ ಸ್ತ್ರೀಶಿಕ್ಷಣದ ಪ್ರಸಾರವಾಗಬೇಕೆಂದು ಈ ನಗರದಲ್ಲಿ ಜೈನ ಸಭೆಯವರು ಒಂದು ಶ್ರಾವಿಕಾಶ್ರಮವನ್ನು ಸ್ಥಾಪಿಸಿದ್ದು, ಅಲ್ಲಿ ಬೆಳಗಾವಿ, ಸೊಲ್ಲಾಪುರ, ಮಂಗಳೂರ ಮುಂತಾದ ಸ್ಥಳಗಳಿಂದ ಬಂದು ಹದಿನಾರು ವಿದ್ಯಾರ್ಥಿಣಿಯರು ವಿದ್ಯಾಭ್ಯಾಸವನ್ನು ಮಾಡುತ್ತಾರೆ. ಸ್ತ್ರೀಯರಿಗೆ ಚನ್ನಾಗಿ ವಿದ್ಯೆಯನ್ನು ಕಲಿಸಿ, ಅವರನ್ನು ಅಧ್ಯಾಪಿಕೆಯೆರನ್ನಾಗಿ ಮಾಡಬೇಕೆಂದು ಈ ಸಂಸ್ಥೆಯ ಉದ್ದೇಶವುಂಟು.

ವಿದ್ಯೆಯಲ್ಲಿ ಹಿಮ್ಮೆಟ್ಟಿದ ಸಮಾಜಗಳ ಉದ್ಧಾರ ಮಾಡಬೇಕೆಂಬ ತಮ್ಮ ದೃಢವಾದ ಇಚ್ಛೆಯೂ ಅವಿಶ್ರಾಂತ ಪ್ರಯತ್ನಗಳೂ ಜಗದ್ವಿಖ್ಯಾತವಾಗಿವೆ. ತಾವು ಒಂದೇ ಸಂಸ್ಥಾನದ ಮುಖ್ಯಸ್ಥರಲ್ಲದೆ, ಇಡೀ ಭರತಖಂಡದ ನಾಯಕರಿದ್ದು, ತಮ್ಮ ಉದ್ದೇಶವನ್ನು ನಮ್ಮ ಮಹಾರಾಜರವರು ಸಫಲವಾಡುವದನ್ನು ಕಂಡು ನಮಗೆ ಬಹಳೇ ಆನಂದವಾಗುತ್ತದೆ. ತಮ್ಮ ಈ ಅಲೌಕಿಕವಾದ ವಿದ್ಯಾಭಿಮಾನವೂ ಎಲ್ಲ ಸಮಾಜದವರ ಹಿತಂಚಿತನೆಯೂ ಹೀಗೆದೇ ಚಿರಕಾಲವಿರಲೆಂದು ನಾನು ಬೇಡಿಕೊಂಡು, ತಾವು ದಯವಿಟ್ಟು ನಮ್ಮನ್ನು ಅನುಗ್ರಹಿಸಿದ ಬಗ್ಗೆ ತಮ್ಮ ಉಪಕಾರಗಳನ್ನು ಸ್ಮರಿಸುತ್ತೇನೆ.

ಬಳಿಕ ಬಡೋದೆಯ ಧೊರೆಗಳು ಜೈನರನ್ನು ಕುರಿತು ಉಪದೇಶಮಾಡಿದ್ದೇನಂದರೆ:— ಸಭ್ಯಗೃಹಸ್ಥರೇ, ಜೈನ ಸಮಾಜದವರು ಈ ನಗರದಲ್ಲಿ ನಡಿಸಿದ ಸದುದ್ಯೋಗವನ್ನು ನೋಡಿ ನಾನು ಬಹು ಸಂತೋಷಪಡುತ್ತೇನೆ. ಬಾಕಲರ ಶಿಕ್ಷಣದಂತೆ ಬಾಲಿಕೆಯರ ಶಿಕ್ಷಣವನ್ನು ಕುರಿತು, ನೀವು ನಡ್ಡಿಸಿದ ಪ್ರಯತ್ನಗಳನ್ನು ನೋಡಿ ನನಗೆ ವಿಶೇಷ ಕೌತುಕವೆನಿಸುತ್ತದೆ. ಸಂಸಾರವೆಂಬ ರಥದ ಪತಿಪತ್ನಿಯೆಂಬ ಎರಡೂ ಚಕ್ರಗಳು ವ್ಯವಸ್ಥಿತವಾಗಿರದಿದ್ದರೆ ಆ ರಥವು ನಡೆಯುವ ಬಗೆಯೇನು? ಈ ಉದ್ಯೋಗವನ್ನು ನೀವು ಹೆಚ್ಚು ಶ್ರಮತೆಗೆದುಕೊಂಡು ನಿಮ್ಮ ಶ್ರಾವಿಕಾಶ್ರಮವನ್ನು ಸುಧಾರಿಸುತ್ತ ಹೋದರೆ ಆ ಸಂಸ್ಥೆಯು ಉಳಿದ ಸಮಾಜದವರಿಗೆ ನಿಸ್ಸಂದೇಹವಾಗಿ ಅನುಕರಣೀಯವಾಗುವದು.

ಹಿಂದೂ ಧರ್ಮದೊಳಗಿನ ತತ್ವಗಳಿಗಿಂತ ಕೆಲವು ಹೆಚ್ಚು ಮಹತ್ವವುಳ್ಳ ತತ್ವಗಳು ಜೈನಧರ್ಮದಲ್ಲಿ ಹೇಳಲ್ಪಟ್ಟವೆ. ಅವುಗಳಲ್ಲಿ "ಅಹಿಂಸಾ ಪರಮೋ ಧರ್ಮಃ" ಎಂಬದೊಂದು ತತ್ವವು ಇದ್ದು, ಅದರಿಂದ ಜೈನರು ನಿರ್ಬಲರೆಂದು ಕೆಲವರ ಆಕ್ಷೇಪವುಂಟು; ಆದರೆ ಈ ಆಕ್ಷೇಪವು ಭ್ರಾಂತಿಮೂಲಕವಾಗಿದೆ ಎಂದು ನಾನು ನಂಬುತ್ತೇನೆ. ಯಾಕಂದರೆ, ಎಷ್ಟೋ ಜೈನ ಕ್ಷತ್ರಿಯರು ದಿಗ್ವಿಜಯವನ್ನು ಮಾಡಿ, ತಮ್ಮ ವೈರಿಗಳನ್ನು ಕೊಂದು, ಚಕ್ರವರ್ತಿಗಳಾಗಿ, ಅದೇ ಭವದಲ್ಲಿ ಮೋಕ್ಷವನ್ನು ಪಡೆದರೆಂದು ಜೈನಶಾಸ್ತ್ರವು ಕೂಗುತ್ತದೆ. ಗುಜರಾತದಲ್ಲಿ ಜೈನರ ಸಂಖ್ಯೆಯು ಬಹಳ ಇದ್ದು, ಅವರಾದರೂ ತಮ್ಮ ಸಮಾಜದೊಳಗಿನ ಅಜ್ಞಾನವನ್ನು ಹೋಗಲಾಡಿಸುವದಕ್ಕಾಗಿ ಬಹಳೇ ಪ್ರಯತ್ನ ಮಾಡುತ್ತಲಿದ್ದಾರೆ. ಅವರ ಪ್ರಯತ್ನಗಳು ಸಫಲವಾಗಲೆಂದು ನಾನು ಆಶಿಸುತ್ತೇನೆ.

ನನ್ನ ಪ್ರಜೆಗಳಲ್ಲಿ ಜ್ಞಾನದ ಪ್ರಸಾರದ ಬಗ್ಗೆ ನಾನು ಮಾಡಿದ ಪ್ರಯತ್ನಗಳನ್ನು ನೀವು ಕೊಂಡಾಡುತ್ತೀರಿ. ಆದರೆ ನನ್ನ ಪ್ರಯತ್ನವು ತೀರ ಸಂಕುಚಿತವಾಗಿದ್ದು, ಈ ವಿಷಯದಲ್ಲಿ ನಾನು ಇನ್ನೂ ಬಹಳೇ ಶ್ರಮ ಪಡಬೇಕಾಗಿದೆ. ನನ್ನ ಪ್ರಜೆಗಳಲ್ಲಿ ಕೆಲವರಿಗೆ ಜುಲುಮೆಯಿಂದ ಶಿಕ್ಷಣವನ್ನು ಕೊಡುವ ನಿರ್ಬಂಧವನ್ನು ಮಾಡಿದ್ದೇನೆ. ಆದರೆ ಅಷ್ಟರಿಂದಲೇ ಸಮಾ

ಥಾನವಾಗುವಂತೆ ಇಲ್ಲ. ಶ್ರೀಯುತ ವಾಣಿಕಚಕೆರಿಂದ ಪಾನಾಚೆರಿಂದ ಇವರು ಈ ಬೋರ್ಡಿಂಗವನ್ನು ಕಟ್ಟಿಸಿದರು; ಆದರೆ ಪ್ರತಿ ಒಬ್ಬ ಜೈನನು ಈ ವಿದ್ಯಾಪ್ರಸಾರದ ಕಾರ್ಯಕ್ಕಾಗಿ ಶಕ್ತ್ಯನುಸಾರವಾಗಿ ಸಹಾಯವನ್ನು ಮಾಡದೆ ಇದ್ದಲ್ಲಿ ಈ ಭವ್ಯವಾದ ಮಂದಿರದಿಂದಲೇ ನಿಮ್ಮ ಜ್ಞಾನ ಪ್ರಸಾರದ ಕಾರ್ಯವು ಎಂದೂ ಸಿದ್ಧವಾಗಲಾರದು. ಅದೇ ಮೇರೆಗೆ ನಿಮ್ಮ ಲ್ಲಿದ್ದ ದುರ್ನಡತೆಗಳನ್ನು ನೀವು ತೆಗೆದು ಹಾಕಬೇಕು. ಆ ನಡತೆಗಳು ಪ್ರಾ ಚೀನಕಾಲದಿಂದ ನಡಗೊಂಡು ಬಂದಿದ್ದರೂ ಅವು ದುಷ್ಟವಾಗಿರುವ ಮೂ ಲಕ ಶಿಷ್ಟರು ಅವುಗಳನ್ನು ಸರ್ವಥಾ ಬಿಟ್ಟು ಬಿಡದಿದ್ದರೆ ಸಮಾಜದ ಹಿತವು ಎಂದಿಗೂ ಆಗಲಾರದು.

ಈಪ್ರಕಾರ ಘೋರೆಗಳ ಭಾಷಣವಾದ ಮೇಲೆ ವಿಳ್ಯ ಪುಷ್ಪಹಾರ ಗಳನ್ನು ಅರ್ಪಿಸಿದನಂತರ ಈ ಸಮಾರಂಭವು ಮುಗಿಯಿತು.

ಪತ್ರವ್ಯವಹಾರವು.

ಘೋ ವಾಚಕಮಹಾಶಯರೇ, ಶ್ರೀಕ್ಷೇತ್ರ ಶ್ರವಣಬೆಳಗುಳದ ಗೀರ್ವಾಣ ಭಾಷೋಜ್ಜೀವಿನೀ ಪಾಠಶಾಲೆಯ ಸರ್ವ ವಿದ್ಯಾರ್ಥಿಗಳು ಏರ್ಪಡಿಸಿಕೊಂಡಿ ರುವ ಶ್ರೀಜ್ಞಾನಾಭಿವರ್ಧಕ ಬಾಲಭಾರತೀಸಭೆಯ ೪ ನೇ ವಾರ್ಷಿಕ ಮಹೋತ್ಸವವು ಇಲ್ಲಿಯ ವಾಣೀವಿಲಾಸ ಪಾಠಶಾಲೆಯಲ್ಲಿ ಅತ್ಯಂತ ಮನೋ ಹರವಾಗಿ ಜರಗಿತು. ಶ್ರೀಯುತ ಮೋತೀಖನೀ ಆದಿರಾಜಯ್ಯನವರು ಸಭಾ ಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಪಾಠಶಾಲಾ ಅಧ್ಯಕ್ಷರಾದ ವೇ. ದೋರ್ಬ ಲಿ ಜಿನದಾಸ ಶಾಸ್ತ್ರಿಗಳವರು ಸ್ಥಳೀಯ ಮೇಂಬರುಗಳೇ ಮೊದಲಾದ ಪುರ ಮಹನೀಯರುಗಳೂ ಮತ್ತು ಪರಸ್ಥಳೀಯರು ವಿಶೇಷವಾಗಿ ನೆರೆದಿದ್ದರು. ಸಂಗೀತಪುರಸ್ಸರವಾದ ಭಗವತ್ಸ್ತೋತ್ರಪೂರ್ವಕವಾಗಿ ಸಭೆಯು ಪ್ರಾ ರಂಭಿಸಲ್ಪಟ್ಟಿತು. ಅನಂತರ ಸಂ ವಿದ್ಯಾರ್ಥಿಗಳಾದ ಕೆಲ್ಲರಶೈಯ್ಯ, ಶ್ರೀಧ ರಯ್ಯ, ಎ. ನೇಮಿರಾಜಯ್ಯ, ನಾಗಪ್ಪನವರು, ಅನಂತರಾಜಯ್ಯ, ಸಿ. ನೇಮಿ ರಾಜಯ್ಯನವರೇ ಮೊದಲಾದವರು ಮಾಡಿದ ಉಪನ್ಯಾಸಗಳು ಶೋಭಾಪೂ ರ್ಣವಾಗಿದ್ದವು. ಸಭಾಧ್ಯಕ್ಷರು ಬಂದು ಲಲಿತವಾದ ಉಪನ್ಯಾಸವನ್ನು ಮಾಡಿದರು. ಹೊಳಲಕೆರೆ ಮೆ. ರಾ. ರಾ. ಬ್ರಹ್ಮಯ್ಯನವರು ಕೆಲವು ಪುಸ್ತ ಕಗಳನ್ನು, ಮೆ. ರಾ. ರಾ. ಪಂ ಧರಣಯ್ಯನವರು ಕೊಟ್ಟ ವಿತ್ತವನ್ನ ವಿದ್ಯಾರ್ಥಿಗಳಿಗೆ ಪಾರಿತೋಷಿಕವಾಗಿ ದಯಪಾಲಿಸಿದರು. ಅನಂತರ ಪ್ರೆ

ಸೋಗ್ರಾಸ ಮೊದಲಾದ ವಾದ್ಯಗಳು ಆನಂದಗೊಳಿಸುತ್ತಿರುವಾಗ್ಗೆ ಗಂಧ ಪುಷ್ಪ ತಾಂಬೂಲಾದಿಗಳನ್ನು ಕೊಟ್ಟರು. ಅನಂತರ ಶ್ರೀಭಗವತ್ಸ್ತೋತ್ರ ಕೊನೆಯಾಗಿ ಸಭೆಯು ಪೂರ್ತಿಮಾಡಲ್ಪಟ್ಟಿತು.

ಸಭಾ ಸೆ. ಡಿ. ಎಸ್.

ಸ್ವೀಕಾರ ಮತ್ತು ಅಭಿಪ್ರಾಯ.

ಬೆಳಗಾವಿಯ ಶ್ರೀಮಹಾವೀರ ಮುದ್ರಾಲಯದ ಅಧಿಪತಿಗಳಾದ ಮ. ರಾ. ರಾ. ಅಣ್ಣಪ್ಪಾ ಒಕ್ಕೌಗುಲೆ ವಕೀಲರಿಂದ ಕಳುಹಿಸಲ್ಪಟ್ಟ ೧ ರತ್ನಕರಂಡಶ್ರಾವಕಾಚಾರ, ೨ ಶ್ರೀಪೂಜ್ಯಪಾದಸ್ವಾಮಿಕೃತ ಉಪಾಸಕಾಚಾರ, ೩ ಶ್ರೀಪದ್ಮನಂದಿಶ್ರಾವಕಾಚಾರ ಮತ್ತು ೪ ಮೃತ್ಯುಮಹೋತ್ಸವ ಈ ನಾಲ್ಕು ಪುಸ್ತಕಗಳನ್ನು ನಾವು ಬಹು ಸಂತೋಷದಿಂದ ಸ್ವೀಕರಿಸುತ್ತೇವೆ. ಜಿನಮತದ ಸಂಸ್ಕೃತ ಗ್ರಂಥಗಳನ್ನು ಎಲ್ಲರಿಗೂ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ಮೂಲ ಸಹಿತವಾಗಿ ಮುದ್ರಿಸುವ ಪದ್ಧತಿಯು ಸಾಂಪ್ರತಕಾಲದ ಜೈನಸಮಾಜದ ಅವಸ್ಥೆಯನ್ನು ಲಕ್ಷಕ್ಕೆತಂದರೆ ಬಹಳ ಹಿತಕರವಾಗಿದ್ದು, ಅದರಿಂದ ಸಂಸ್ಕೃತ ಗ್ರಂಥದೊಳಗಿನ ಮರ್ಮವನ್ನು ತಿಳಕೊಳ್ಳುವದು ಬಹಳೇ ಸುಗಮವಾಗಿದೆ. ಮೇಲ್ಕಂಡ ಎಲ್ಲ ಗ್ರಂಥಗಳು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದ್ದು, ಅವುಗಳ ಕ್ರಯವಾದರೂ ತೀರ ಸ್ವಲ್ಪವಾಗಿರುತ್ತದೆ. ಶ್ರೀವಸುನಂದೀಶ್ರಾವಕಾಚಾರ, ಪ್ರಶ್ನೋತ್ತರಮಾಣಿಕ್ಯಮಾಲೆ ಮುಂತಾದ ಗ್ರಂಥಗಳು ಅವರಿಂದ ಮುದ್ರಿಸಲ್ಪಡುತ್ತಿಲಿವೆ. ಮತಾಭಿಮಾನಿಗಳು ಈ ಸತ್ಕಾರ್ಯಕ್ಕೆ ತಮ್ಮ ಉದಾರ ಆಶ್ರಯವನ್ನು ಕೊಟ್ಟು ಪ್ರೋತ್ಸಾಹಗೊಳಿಸುವರೆಂದು ನಾವು ನಂಬುತ್ತೇವೆ.

ಬೆಳಗಾವಿ ಜಿಲ್ಲೆಕ್ಕೆ ಸೇರಿದ ಪಕ್ಕುಂದ ಎಂಬ ಗ್ರಾಮದ ಕನ್ನಡ ಶಾಲೆಯ ಜೈನ ಶಿಕ್ಷಕರಾದ ಮ. ರಾ. ರಾ. ತಮನಪ್ಪಾ ಪದಮಪ್ಪಾ ಕಲಘಟಗಿಯವರು "ಬಾಲಕರನ್ನು ತಿದ್ದುವಿಕೆ" ಎಂಬಿನೊಂದು ಸಣ್ಣ ಪುಸ್ತಕವನ್ನು ಕನ್ನಡದಲ್ಲಿ ಪ್ರಸಿದ್ಧ ಮಾಡಿರುತ್ತಾರೆ. ಈ ಪುಸ್ತಕವು ಉಪಯುಕ್ತವಾಗಿದ್ದು, ಭಾಷಾಸರಣಿಯೂ ವಿಷಯಪ್ರತಿಪಾದನವೂ ಮನೋಹರವಾಗಿರುವವೆಂದು ನಾವು ಆನಂದದಿಂದ ತಿಳಿಸುತ್ತೇವೆ.

ಸಂಪಾದಕ.

ಕಳವು.

ಲೇಖಕರು:—ತಪನಪ್ಪ ಪಮ್ಮಪ್ಪ ಕಲಘಟಗಿ, ತಡಕೋಡ.

ಮುರವಿರ್ದುದ ನಿಕ್ಷೇಪಿಸಿಯಿರ್ದುದ । ನಿರುತ ಬಿದ್ದಿರ್ದ ವಸ್ತುಗಳಾ ॥
ಪರರ ತೆಗೆಯಹೇಳ ತಾಕೊಳ್ಳನಿಪುದು । ಧರೆಯೊಳು ಕಳನೆಂಬ
ವ್ರತವು ॥ ೧ ॥ ದ್ವಾದಶಾನುಪ್ರೇಕ್ಷೆ ॥

ತಾತ್ಪರ್ಯ:— ಮನೆತಂಥ, ಹುಗಿದಂಥ, ಬಿದ್ದಂಥ ವಸ್ತುಗಳನ್ನು ಪರರಿಗೆ ತೆಗೆಯಲಿಕ್ಕೆ ಹೇಳಬಾರದು ಹಾಗು ತಾನೂ ತಕ್ಕೊಳ್ಳಬಾರದು. ದಾನಾರ್ಹವಾದ ದ್ದನ್ನು ತೆಗೆದುಕೊಂಡರೆ ಕಳವಾಗುತ್ತದೆ. ಅದರೆ ನೀರು ಮುಂತಾದ ದಾನ ಯೋಗ್ಯವಲ್ಲದ ವಸ್ತುಗಳನ್ನು ತೆಗೆದುಕೊಂಡರೂ ಕಳವು ಆಗುವದಿಲ್ಲ.

ಅದರೆ ಯಾವದೊಂದು ಕೃತ್ಯವು ಬುದ್ಧಿಪೂರ್ವಕವಾಗಿ ಅಥವಾ ಉದ್ದೇಶಪೂರ್ವಕವಾಗಿ ಮಾಡಿದರೆ ಮಾತ್ರ ಅಪರಾಧವಾಗುತ್ತದೆಂದು ವ್ಯವಹಾರದ ನಿಯಮಗಳಲ್ಲಿ ಬರೆದಿದ್ದರೆ, ಅಂಥ ಪ್ರಸಂಗದಲ್ಲಿ ಯಾವನೊಬ್ಬನು ಬುದ್ಧಿಪೂರ್ವಕವಾಗಿ ಅಥವಾ ಉದ್ದೇಶಪೂರ್ವಕವಾಗಿ ಆ ಕೃತ್ಯವನ್ನು ಮಾಡಿದರೆ ಕಳವಾಗುತ್ತದೆ. ಇಲ್ಲದಿದ್ದರೆ ಆಗುವದಿಲ್ಲ. ಉದಾಹರಣೆ:—ಒಬ್ಬನು ಬೇರೊಬ್ಬನ ಎತ್ತನ್ನು ಅವನ ಮನೆಯೊಳಗಿಂದ ಅವನನ್ನು ಕೇಳದೇ ತನ್ನ ಕೆಲಸಕ್ಕೆ ಉಪಯೋಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ತೆಗೆದುಕೊಂಡು ಹೋದರೆ, ಅವನು ಕಳವಿನ ಅಪರಾಧ ಮಾಡಿದನೆಂದು ತಿಳಿಯಬೇಕು. ಅದರೆ ಎತ್ತಿನ ಒಡೆಯನು ಅದಕ್ಕೆ ಕಾವಲಿಡದಾಗ ಅದನ್ನು ಯಾರಾದರೂ ತೆಗೆದುಕೊಂಡು ಹೋದಾರೆಂದು ಅವನಿಗೆ ಎಚ್ಚರ ಕೊಡುವದಕ್ಕಾಗಿ ಎತ್ತನ್ನು ಅವನಿಗೆ ತಿರುಗಿ ಕೊಡುವ ಉದ್ದೇಶದಿಂದ ಒಯ್ದು ಬೇರೊಬ್ಬನು ತನ್ನ ಮನೆಯಲ್ಲಿ ಕಟ್ಟಿದ್ದರೆ, ಅದು ಕಳವಿನ ಅಪರಾಧವಾಗುವದಿಲ್ಲ. ಆದುದರಿಂದ ಬುದ್ಧಿಪೂರ್ವಕವಾಗಿ ಯಾವದೊಂದು ಕೃತ್ಯವನ್ನು ಮಾಡಿದರೆ ಮಾತ್ರ ಅಪರಾಧವಾಗುತ್ತದೆ. ಇದು ವ್ಯವಹಾರನಿರ್ಣಯವಾಯಿತು. ಅದರೆ ಯಾವ ಸ್ಥಳದಲ್ಲಿ ಸರ್ವ ಜನಗಳು ಅಚೌರ್ಯ (ಕಳವು ಮಾಡದೆ ಇರೋಣ) ವ್ರತವನ್ನು ಪಾಲಿಸುವರೋ, ಅಲ್ಲೆ ಮರೆತಂಥ ವಸ್ತುಗಳನ್ನು ತರುವ ಮತ್ತು ಅದನ್ನು ತಿರುಗಿಕೊಡುವ ಕಾರಣವೇ ಬೇಳುವದಿಲ್ಲ; ಏಕಂದರೆ, ಆ ಒಡವೆಗಳನ್ನು ಯಾರೂ ಹಿಡಿಯುವದಿಲ್ಲ.

ಯಾವನೊಬ್ಬನು ಎರಡನೇಯವನ ಮನೆಯ ಕನ್ನಾ ಕೊರೆಯುತ್ತಿರಲು. ಮನುಷ್ಯರ ಸುಳವಾಗಿ ಕಳವಿನ ಕೃತ್ಯ ಪೂರ್ಣವಾಗದೆ ಏನಾಗ್ಲೂ ಅವನ

ನೋಗ್ರಾಫ್ ಮೊದಲಾದ ವಾದ್ಯಗಳು ಆನಂದಗೊಳಿಸುತ್ತಿರುವಾಗ್ಗೆ ಗಂಧ ಪುಷ್ಪ ತಾಂಬೂಲಾದಿಗಳನ್ನು ಕೊಟ್ಟರು. ಅನಂತರ ಶ್ರೀಭಗವತ್‌ಸ್ತೋತ್ರ ಕೊನೆಯಾಗಿ ಸಭೆಯು ಪೂರ್ತಿಯಾಡಲ್ಪಟ್ಟಿತು.

ಸಭಾ ಸೆ. ಡಿ. ಎಸ್.

ಸ್ವೀಕಾರ ಮತ್ತು ಅಭಿಪ್ರಾಯ.

ಬೆಳಗಾವಿಯ ಶ್ರೀಮಹಾವೀರ ಮುದ್ರಾಲಯದ ಅಧಿಪತಿಗಳಾದ ಮ. ರಾ. ರಾ. ಅಣ್ಣಪ್ಪಾ ಚೌಗುಲೆ ವಕೀಲರಿಂದ ಕಳುಹಿಸಲ್ಪಟ್ಟ ೧ ರತ್ನಕರಂಡಶ್ರಾವಕಾಚಾರ, ೨ ಶ್ರೀಪೂಜ್ಯಪಾದಸ್ವಾಮಿಕೃತ ಉಪಾಸಕಾಚಾರ, ೩ ಶ್ರೀಪದ್ಮನಂದಿಶ್ರಾವಕಾಚಾರ ಮತ್ತು ೪ ಮೃತ್ಯುಮಹೋತ್ಸವ ಈ ನಾಲ್ಕು ಪುಸ್ತಕಗಳನ್ನು ನಾವು ಬಹು ಸಂತೋಷದಿಂದ ಸ್ವೀಕರಿಸುತ್ತೇವೆ. ಜಿನಮತದ ಸಂಸ್ಕೃತ ಗ್ರಂಥಗಳನ್ನು ಎಲ್ಲರಿಗೂ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ಮೂಲ ಸಹಿತವಾಗಿ ಮುದ್ರಿಸುವ ಪದ್ಧತಿಯು ಸಾಂಪ್ರತಕಾಲದ ಜೈನಸಮಾಜದ ಅವಸ್ಥೆಯನ್ನು ಲಕ್ಷಕ್ಕೆತಂದರೆ ಬಹಳೇ ಸಮಯೋಚಿತಕರವಾಗಿದ್ದು, ಅದರಿಂದ ಸಂಸ್ಕೃತ ಗ್ರಂಥದೊಳಗಿನ ಮರ್ಮವನ್ನು ತಿಳಕೊಳ್ಳುವದು ಬಹಳೇ ಸುಗಮವಾಗಿದೆ. ಮೇಲ್ಕಂಡ ಎಲ್ಲ ಗ್ರಂಥಗಳು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದ್ದು, ಅವುಗಳ ಕ್ರಯವಾದರೂ ತೀರ ಸ್ವಲ್ಪವಾಗಿರುತ್ತದೆ. ಶ್ರೀವಸುನಂದೀಶ್ರಾವಕಾಚಾರ, ಪ್ರಶ್ನೋತ್ತರವಾಣಿಕ್ಯಮಾಲೆ ಮುಂತಾದ ಗ್ರಂಥಗಳು ಅವರಿಂದ ಮುದ್ರಿಸಲ್ಪಡುತ್ತಿಲಿವೆ. ಮತಾಭಿಮಾನಿಗಳು ಈ ಸತ್ಕಾರ್ಯಕ್ಕೆ ತಮ್ಮ ಉದಾರ ಆಶ್ರಯವನ್ನು ಕೊಟ್ಟು ಪ್ರೋತ್ಸಾಹಗೊಳಿಸುವರೆಂದು ನಾವು ನಂಬುತ್ತೇವೆ.

ಬೆಳಗಾವಿ ಜಿಲ್ಲೆಕ್ಕೆ ಸೇರಿದ ವಕ್ಕುಂದ ಎಂಬ ಗ್ರಾಮದ ಕನ್ನಡ ಶಾಲೆಯ ಜೈನ ಶಿಕ್ಷಕರಾದ ಮ. ರಾ. ರಾ. ತಮನಪ್ಪಾ ಪದಮಪ್ಪಾ ಕಲಘಟಗಿಯವರು "ಬಾಲಕರನ್ನು ತಿದ್ದುವಿಕೆ" ಎಂಬದೊಂದು ಸಣ್ಣ ಪುಸ್ತಕವನ್ನು ಕನ್ನಡದಲ್ಲಿ ಪ್ರಸಿದ್ಧ ಮಾಡಿರುತ್ತಾರೆ. ಈ ಪುಸ್ತಕವು ಉಪಯುಕ್ತವಾಗಿದ್ದು, ಭಾಷಾಸರಣಿಯೂ ವಿಷಯಪ್ರತಿಪಾದನಪ್ರಣಾಲಿಯೂ ಮನೋಹರವಾಗಿರುವವೆಂದು ನಾವು ಆನಂದದಿಂದ ತಿಳಿಸುತ್ತೇವೆ.

ಸಂಪಾದಕ.

ಕಳವು.

ಲೇಖಕ:—ತವನಪ್ಪ ಪದ್ಮಪ್ಪ ಕಲಘಟಗಿ, ತಡಕೋಡ.

ಮುರವಿರ್ದುದ ನಿಕ್ಷೇಪಿಸಿಯಿರ್ದುದ । ನಿರುತ ಬಿದ್ದಿರ್ದ ವಸ್ತುಗಳಾ ॥
ಪರರ ತೆಗೆಯಹೇಳ ಕಾಕೊಳ್ಳದಿಪ್ಪುದು । ಧರೆಯೊಳು ಕಳನೆಂಬ
ಪ್ರತವು ॥ ೧ ॥ ದ್ವಾದಶಾನುಪ್ರೇಕ್ಷೆ ॥

ತಾತ್ಪರ್ಯ:— ಮರೆತಂಥ, ಹುಗಿದಂಥ, ಬಿದ್ದಂಥ ವಸ್ತುಗಳನ್ನು ಪರರಿಗೆ ತೆಗೆಯಲಿಕ್ಕೆ ಹೇಳಬಾರದು ಹಾಗು ತಾನೂ ತಕ್ಕೊಳ್ಳಬಾರದು. ದಾನಾರ್ಹವಾದ ದ್ದನ್ನು ತೆಗೆದುಕೊಂಡರೆ ಕಳವಾಗುತ್ತದೆ. ಅದರೆ ನೀರು ಮುಂತಾದ ದಾನ ಯೋಗ್ಯವಲ್ಲದ ವಸ್ತುಗಳನ್ನು ತೆಗೆದುಕೊಂಡರೂ ಕಳವು ಆಗುವದಿಲ್ಲ.

ಅದರೆ ಯಾವದೊಂದು ಕೃತ್ಯವು ಬುದ್ಧಿಪೂರ್ವಕವಾಗಿ ಅಥವಾ ಉದ್ದೇಶಪೂರ್ವಕವಾಗಿ ಮಾಡಿದರೆ ಮಾತ್ರ ಅಪರಾಧವಾಗುತ್ತದೆಂದು ವ್ಯವಹಾರದ ನಿಯಮಗಳಲ್ಲಿ ಬರೆದಿದ್ದರೆ, ಅಂಥ ಪ್ರಸಂಗದಲ್ಲಿ ಯಾವನೊಬ್ಬನು ಬುದ್ಧಿಪೂರ್ವಕವಾಗಿ ಅಥವಾ ಉದ್ದೇಶಪೂರ್ವಕವಾಗಿ ಆ ಕೃತ್ಯವನ್ನು ಮಾಡಿದರೆ ಕಳವಾಗುತ್ತದೆ. ಇಲ್ಲದಿದ್ದರೆ ಆಗುವದಿಲ್ಲ. ಉದಾಹರಣೆ:—ಒಬ್ಬನು ಬೇರೊಬ್ಬನ ಎತ್ತನ್ನು ಅವನ ಮನೆಯೊಳಗಿಂದ ಅವನನ್ನು ಕೇಳದೇ ತನ್ನ ಕೆಲಸಕ್ಕೆ ಉಪಯೋಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ತೆಗೆದುಕೊಂಡು ಹೋದರೆ, ಅವನು ಕಳವಿನ ಅಪರಾಧ ಮಾಡಿದನೆಂದು ತಿಳಿಯಬೇಕು. ಆದರೆ ಎತ್ತಿನ ಒಡೆಯನು ಅದಕ್ಕೆ ಕಾವಲಿಡದಾಗ ಅದನ್ನು ಯಾರಾದರೂ ತೆಗೆದುಕೊಂಡು ಹೋದಾರೆಂದು ಅವನಿಗೆ ಎಚ್ಚರ ಕೊಡುವದಕ್ಕಾಗಿ ಎತ್ತನ್ನು ಅವನಿಗೆ ತಿರುಗಿ ಕೊಡುವ ಉದ್ದೇಶದಿಂದ ಒಯ್ದು ಬೇರೊಬ್ಬನು ತನ್ನ ಮನೆಯಲ್ಲಿ ಕಟ್ಟಿದ್ದರೆ, ಅದು ಕಳವಿನ ಅಪರಾಧವಾಗುವದಿಲ್ಲ. ಆದುದರಿಂದ ಬುದ್ಧಿಪೂರ್ವಕವಾಗಿ ಯಾವದೊಂದು ಕೃತ್ಯವನ್ನು ಮಾಡಿದರೆ ಮಾತ್ರ ಅಪರಾಧವಾಗುತ್ತದೆ. ಇದು ವ್ಯವಹಾರನಿರ್ಣಯವಾಯಿತು. ಆದರೆ ಯಾವ ಸ್ಥಳದಲ್ಲಿ ಸರ್ವ ಜನಗಳು ಅಚೌರ್ಯ (ಕಳವು ಮಾಡದೆ ಇರೋಣ) ವ್ರತವನ್ನು ಪಾಲಿಸುವರೋ, ಅಲ್ಲೆ ಮರೆತಂಥ ವಸ್ತುಗಳನ್ನು ತರುವ ಮತ್ತು ಅದನ್ನು ತಿರುಗಿಕೊಡುವ ಕಾರಣವೇ ಬೀಳುವದಿಲ್ಲ; ಏಕಂದರೆ, ಆ ಒಡವೆಗಳನ್ನು ಯಾರೂ ಹಿಡಿಯುವದಿಲ್ಲ.

ಯಾವನೊಬ್ಬನು ಎರಡನೇಯವನ ಮನೆಯ ಕನ್ನಾ ಕೊರೆಯುತ್ತಿರಲು ಮನುಷ್ಯರ ಸುಳುವಾಗಿ ಕಳವಿನ ಕೃತ್ಯ ಪೂರ್ಣವಾಗದೆ ಇದ್ದಾಗ್ಯೂ ಅವನ

ಕನ್ನಾ ಕೊರೆದು ಕಳವು ಮಾಡಿದ ಅಪರಾಧಕ್ಕೆ ಪಾತ್ರನಾಗುತ್ತಾನೆ. ಆದರೆ ಮನಸ್ಸಿನಲ್ಲಿ ಕಳವು ಮಾಡುವ ಇಚ್ಛೆ ಮಾತ್ರ ಇದ್ದು, ಆ ಇಚ್ಛೆಯ ಪ್ರಕಾರ ಆ ಕೆಲಸವನ್ನು ಮಾಡದಿದ್ದರೆ ಬರೀ ಮನಸ್ಸಿನೊಳಗಿನ ದುರಾಲೋಚನೆಯು ಅಪರಾಧವಾಗುವದಿಲ್ಲ. ಆದರೂ ಧರ್ಮಶಾಸ್ತ್ರಜ್ಞರು ತ್ರಿಕರಣಪೂರ್ವಕವಾಗಿ ಅಂದರೆ ಮನ-ವಚನ-ಕಾಯಗಳಿಂದ ಕಳವು ಮಾಡಬಾರದೆಂದು ಹೇಳುತ್ತಾರೆ.

ಹೆಂಗಸಿನ ಸಮ್ಮತಿಯಿಂದ ಆಕೆಯ ಸಂಗವನ್ನು ಮಾಡಿದರೆ, ಗಂಡನ ಸಮ್ಮತಿಯಿಂದ ಅವನ ಪೆಂಡತಿಯ ಸಂಗವನ್ನು ಮಾಡಿದರೆ ಅಪರಾಧವಾಗುವದಿಲ್ಲೆಂದು ಕಾಯ್ದೆಯು ಹೇಳುತ್ತದೆ. ಆದರೆ ಪರಸ್ತ್ರೀಯರನ್ನು ಗಮನ ಮಾಡಬಾರದೆಂದು ಜಿನಶಾಸ್ತ್ರವು ಕೂಗಿ ಹೇಳುತ್ತದೆ.

ನಡಾವಳಿ, ವ್ಯವಹಾರ ಇವೆರಡೂ ಸಂಗತಿಗಳು ಧರ್ಮಶಾಸ್ತ್ರದಲ್ಲಿ ಸಮಾವೇಶವಾಗಿರುತ್ತವೆ. ಅರಸರು ಅಡಳಿತೆಯ ವ್ಯವಸ್ಥೆಗಾಗಿ ರಚಿಸಿ ಪ್ರಸಿದ್ಧಿಸಿದಂಥ ನಿಯಮಗಳ ಸಂಗ್ರಹಕ್ಕೆ ಕಾಯಿದೆಯೆಂಬುವರು. ಆ ನಿಯಮಗಳನ್ನು ಪಾಲಿಸತಕ್ಕವರು ಇವುಗಳನ್ನು ಉಲ್ಲಂಘಿಸಿ ನಡೆಗೆದೆ, ಅಧಿಕಾರಿಗಳು ಅವರನ್ನು ಶಿಕ್ಷಿಸಿ ಬಲಾತ್ಕಾರದಿಂದ ಈ ನಿಯಮಗಳಿಗೆ ಅಂಕಿತರಾಗಿ ಮಾಡುವರು. ಆದರೆ ನೀತಿಯನ್ನು ಉಲ್ಲಂಘಿಸುವವನು ತಾನು ಕೆಡುವದಲ್ಲದೆ, ಪರರಿಂದ ದೂಷಿಸಲ್ಪಡುತ್ತಾನೆ. ಮತ್ತು ಪಾಪಕ್ಕೆ ಗುರಿಯಾಗುತ್ತಾನೆ. ನೀತಿಯ ನಿಯಮಗಳು ಉಪದೇಶರೂಪವಾಗಿರುತ್ತವೆ. ಕಾಯ್ದೆಯ ನಿಯಮಗಳು ಅಧಿಕಾರರೂಪವಾಗಿರುತ್ತವೆ. ಆದದರಿಂದ ಶ್ರೀ ಜಿನಧರ್ಮಶಾಸ್ತ್ರದ ನಿಯಮಗಳಂತೆ ನಡೆಯುವವನು ಕಾಯ್ದೆಯ ನಿಯಮಗಳನ್ನು ಸಹ ಪಾಲಿಸಿದಂತಾಗುತ್ತದೆ.

ಕಳವು ಮಾಡುವದು:—ಈಬಗ್ಗೆ ದ್ವಾದಶಾನುಪ್ರೇಕ್ಷೆಯಲ್ಲಿ ಹೇಳಿದ್ದೇನಂದರೆ,

ಕಳವು ಮಾಡುವವರಿಗೆ ಮುಳಿವುದು ಜಗವೆಲ್ಲ ।
ಇಳೇಗೀಶರು ಕೇಳಿದರೇ ॥
ತಳುವದೆ ಶಿರಹಸ್ತ ಪಾದವ ಛೇದಿಪ ।
ರಿಳಿವರು ಮುಂದೆ ನಾರಕಕೆ ॥ ೧ ॥
ಹಲವು ಭಯವು ರೋಗ ದಾರಿದ್ರ ದುಃಖಕೆ ।
ನೆಲೆಯಾಗಿ ಭವ ಭವದಲ್ಲಿ ॥
ಬಹು ನರಕದ ಬಲು ದುಃಖವ ಭುಂಜಿಪ ।
ರಲಸದೆ ಕಳವ ಮಾಡುವರೂ ॥ ೨ ॥

ತಾತ್ಪರ್ಯ:—ಕಳವು ಮಾಡುವವರಿಗೆ ಜಗವೆಲ್ಲ ಮುಳಿಯುವದು; ಅರಸಿಂದ ಶಿಕ್ಷೆಯಾಗುವದು; ಮುಂದೆ ನರಕಗತಿಯಾಗುವದು; ಹಲವು ಭಯುಗಳುಂಟಾಗುವವು; ದಾರಿದ್ರತನ ಬೆಂಬಳಿಸುವದು; ಭವ ಭವದಲ್ಲಿ ದುಃಖವು ಹಿಂಬಾಲಿಸುವದು; ಘೋರವಾದ ನರಕದುಃಖವನ್ನು ಉಣ್ಣುವರು.

ಕಳ್ಳತನವು ಗಳಿಸಿದ ಕೀರ್ತಿಯನ್ನು, ಸಮ್ಯಗ್ದರ್ಶನಚಾರಿತ್ರಾತ್ಮಕ ಧರ್ಮವನ್ನು ಸಂಹಾರ ಮಾಡುವದು. ಸರ್ವ ಅಪರಾಧಗಳಿಗೆ ಕಾರಣವಾಗುವದು; ಕೊಲೆಗೆ ಸಹಾಯಮಾಡುವದು; ಸಂಕಟಕರವಾದ ಆಶೆಯನ್ನು ಬೆಳೆಸುವದು; ದುರ್ಗತಿಗೆ ಮುಖ್ಯವಾಗಿರುವದು; ಶುಭಕಾರ್ಯಗಳಿಗೆ ಎಡರು ತರುವದು. ಆದ್ದರಿಂದ ಕಳ್ಳತನವನ್ನು ಬುದ್ಧಿಹೀನನು ಮಾಡುತ್ತಾನಲ್ಲದೆ, ಬುದ್ಧಿಶಾಲಿಗಳು ಮಾಡುವದಿಲ್ಲ.

ಈಬಗ್ಗೆ ಜಿನಭಾರತದಲ್ಲಿ ಹೇಳಿದ್ದು ಹ್ಯಾಗಂದರೆ:—

ಪಿಶಿತ ವ್ಯಸನದಿ ಬಕನು ವೇಶ್ಯಾ।
ವ್ಯಸನನಾದ ಸುಚಾರುದತ್ತನು।
ಅಸುವ ಅಪಹರವ್ಯಸನನಾ ಭಗದತ್ತ ಭವಭೂತೀ॥
ಹುಸಿಯ ವ್ಯಸನದಿ ಕಳವಿಲಂಜನೆ।
ರಸಿಕನತಿ ಕಾಂಕ್ಷೆಯಲಿ ರುದ್ರರು।
ಸಿಪಿತಚರ ರಾವಣನು ಪರಸತಿ ಯೊಲವಿಗಾಕರಿಸೀ॥೧॥

ಸಿರಿಯನೆಲ್ಲವ ನೀಗಿ ಯೇನಾ।
ಗಿರುವರಾಕಥೆ ವೇಳ್ವಡತಿ ವಿ।
ಸ್ತರಗಳಾದುದರಿಂದ ಲವರಾವಾವ ವಿಸನದಲೀ॥
ಚರಿಸಿದರೋ ಆ ಕರುಹ ನಿನಗಾ।
ನರುಹಿದೆನು ಜೂಜಿಂದಲವರಿಗೆ।
ಸರಿಯು ನೀವೆನಿಸಿರ್ಪಿರಣು ಗರೆಯಂದನಾ ವಿದುರಾ॥೨॥

ತಾತ್ಪರ್ಯ:— ಮಾಂಸ ಸೇವನೆಯಿಂದ ಬಕನು; ವೇಶ್ಯಾಸಂಗದಿಂದ ಚಾರುದತ್ತನು: ಬೇಟೆಯ ವ್ಯಸನದಿಂದ ಭಗದತ್ತನು; ಹುಸಿಯಿಂದ ಭವಭೂತಿಯು; ಕಳವಿನ ವ್ಯಸನದಿಂದ ಅಂಜನಚೋರನು; ಅತಿಕಾಂಕ್ಷೆಯಿಂದ ರುದ್ರನು; ಪರಸತಿಯ ವ್ಯಸನದಿಂದ ರಾವಣನು ಇವರೆಲ್ಲರೂ ಸಿರಿಯನೆಲ್ಲವ ನೀಗಿದರು. ಆ ಕಥೆಗಳು ವಿಸ್ತಾರಗಳಾದುದರಿಂದ ಉದಾಹರಣಗಳನ್ನು ಆರುಹಿದೆನು. ಆದದ್ದರಿಂದ ಮಕ್ಕಳಿರಾ, (ಕಾರವರೇ) ಜೂಜಿನ ವ್ಯಸನದಿಂದ ಕೆಡಬೇಡಿರಿ, ಎಂದು ವಿದುರನು ಹೇಳಿದನು.

ಕಳವು ಮಾಡದಿರುವದುಃ—

ಕಳವನುಳಿದ ಮನುಜರು ಅನವರತವು ।
ಯಿಳಿಗತಿ ಪೂಜಿತರಹರು ॥
ಸತಿಸ್ವರ್ಗದ ಸುಖಭಾಗಿಗಳಾಗಿಯೆ
ನೆಲೆಯರಪ್ಪರು ಮೋಕ್ಷಸುಖಕೆ ॥ ೨ ॥ ವ್ಯಾದಶಾನುಪ್ರೇಕ್ಷೆ ॥

ತಾತ್ಪರ್ಯಃ— ಕಳವು ಮಾಡದ ಜನರು ಯಾವಾಗಲೂ ಲೋಕಕ್ಕೆ ಅತಿ ಪೂಜ್ಯರಾಗುವರು; ಸ್ವರ್ಗಸುಖದ ಭಾಗಿಗಳಾಗುವರು; ಮೋಕ್ಷ ಸುಖವನ್ನು ಹೊಂದುವರು.

ಅಚೌರ್ಯವ್ರತಕ್ಕೆ ವಾರಿಷೇಣನ ದೃಷ್ಟಾಂತವುಃ—ರಾಜಗೃಹ ಪಟ್ಟಣದಲ್ಲಿ ಶ್ರೇಣಿಕನೆಂಬ ದೊರೆ ಇರುವನು. ಆತನ ಮಗನಾದ ವಾರಿಷೇಣನೆಂಬವನು ಪರ್ವತಿಥಿಯಲ್ಲಿ ಉಪವಾಸ ಮಾಡಿ ರಾತ್ರಿಯಲ್ಲಿ ಪ್ರತಿಮಾಯೋಗವನ್ನು ಮಾಡುತ್ತಾ ನಿಂತಿದ್ದನು. ಆಗ ಒಬ್ಬ ಕಳ್ಳನು ರತ್ನಹಾರವನ್ನು ಕದ್ದು ಓಯ್ಯುತ್ತಿರಲು ರಾಜದಂಡರು ಬೆನ್ನುಹತ್ತಲು ರಾತ್ರಿಯಲ್ಲಿ ಪ್ರತಿಮಾಯೋಗವನ್ನು ಮಾಡುತ್ತ ನಿಂತಿದ್ದ ವಾರಿಷೇಣನ ಮುಂದೆ ಚೆಲ್ಲಿ ಹೋದನು. ಅದನ್ನು ನಿಸ್ಪೃಹನಾಗಿ ವಾರಿಷೇಣನು ಮುಟ್ಟದಿದ್ದರಿಂದ ಬಂದ ವಿಪತ್ತುಗಳನ್ನೆಲ್ಲ ನೀಗಿ ಈ ಜನ್ಮದಲ್ಲಿ ಕೀರ್ತಿಯನ್ನು ಪಡೆದು, ಉತ್ತರ ಜನ್ಮದಲ್ಲಿ ಸ್ವರ್ಗಸುಖವನ್ನು ಅನುಭವಿಸಿದನು.

ವಿಶೇಷಪ್ರಕಾರದ ಕಳವುಗಳು.

ಚೋರಪ್ರಯೋಗ, ಚೋರಾರ್ಥದಾನ, ಹೀನಾಧಿಕಮಾನ, ಸದೃಶಮಿಶ್ರ, ವಿರುದ್ಧರಾಜ್ಯಾಧಿಕ್ರಮಣ ಎಂದು ಕಳವಿನಲ್ಲಿ ಬೇಧಗಳು.

ಚೋರಪ್ರಯೋಗಃ— ಕಳ್ಳರನ್ನು ಕಳುಹಿಸಿ ಕದ್ದು ತರಿಸುವದು, ಕಳ್ಳರಿಗೆ ಸಹಾಯ ಮಾಡುವದು, ವಸ್ತುಗಳನ್ನು ಕದ್ದು ತಂದವನಿಗೆ ಇನಾಮು ಕೊಡುವದು, ಅವನಿಗೆ ಕಳ್ಳಬಂಟನೆಂದು ಬಿರಿದು ಕೊಡುವದು, ಕಳವು ಮಾಡುವದಕ್ಕೆ ಅನುಮೋದನ ಕೊಡುವದು, ಮಾರಾಟಕಾಲಕ್ಕೆ ಚಲೋ ಜೀನಸು ತೋರಿಸಿ, ಕೆಪಟದಿಂದ ಪೊಟ್ಟ ಜೀನಸು ಕೊಡುವದು, ಯಾವದೊಂದು ಪದಾರ್ಥವನ್ನು ನೋಡುವದಕ್ಕೆ ತಕ್ಕೊಂಡಾಗ್ಗೆ ವ್ಯಾಪಾರಸ್ಥರ ಕಣ್ಣುಮರೆಯಾಗಲು ಅದನ್ನು ಅಪಹರಿಸುವದು, ಯಾವದೊಂದು ಒಡವೆಯನ್ನು ತನ್ನ ಸ್ವಾಧೀನದಲ್ಲಿ ಯಾವದೊಂದು ಉದ್ದೇಶದಿಂದ ಕೊಟ್ಟರಲು ಅದನ್ನು ಎರಡನೇ ಕೆಲಸಕ್ಕೆ ಹಚ್ಚುವದು, ಅದರ ಧಾರಣೆ ಸಂಬಂಧದಿಂದ ಹೆಚ್ಚು ಕಡಿಮೆ ಮಾಡುವದು, ಒಬ್ಬನು ಮತ್ತೊಬ್ಬನ ಹೆಸರಿನಿಂದ ಪರೀಕ್ಷೆಗೆ ಕೂಡ್ರುವದು, ಪರೀಕ್ಷೆಯಲ್ಲಿ ವಿಷಯಗಳ ಕಾಪಿ ಮಾಡುವದು ಮುಂತಾದವು ಚೋರಪ್ರಯೋಗವೆಂಬ ಗಿನೆಯ ಅತಿಚಾರವು.

(ಅಪೂರ್ಣ.)

K. S. Narasimha Murthy,
Land Holder & Patel,
TIRTHAMUTTLA (T... HALLI TALUK.)

ಓಂ

ವಿಜ್ಞಾನಂ ಬ್ರಹ್ಮ ಚೇದ್ವೇದ, ತಸ್ಮಾಚ್ಚೇನ್ನ ಪ್ರಮಾದ್ಯತಿ ।
ಶರೀರೇ ಪಾಪ್ಮನೋ ಹಿತ್ವಾ, ಸರ್ವಾ ಕಾಮಾ೯ ಸಮಶ್ನುತೇ ॥

(ತೈತ್ತಿರೀಯೋಪನಿಷತ್)

ಶ್ರೀ ವಾಸಿಷ್ಠರಾಮಾಯಣಂ.

ಮುಮುಕ್ಷುವ್ಯವಹಾರಪ್ರಕರಣಂ.

ಸಂಪುಟ ೨. | ಏಕ ಶ್ಲೋ ಸಂಖ್ಯೆ [ಸಂಜ್ಞಿಕೆ ೦.

ಪ್ರಕಾಶಕ

ಶ್ರೀಮನ್ಮಹಾರಾಜರವರ ಆಸ್ಥಾನ ಪಂಡಿತ

ಗುಂಡಶಾಸ್ತ್ರೀ,

ಸದ್ವಿದ್ಯಾಶಾಲಾಧ್ಯಕ್ಷ.

ಮೈಸೂರು

ಜಿ. ಟಿ. ಎ. ಪ್ರೆಸ್.

1909.

ದಾ ೩—೦—೦ (ಹಾಸಲು ಮಾಪಿ ಐದಕ್ಕೊಂದು ಬಹುಮಾನ.

16/11/11

ಸಚಿತ್ರ
ಚಾತುರ್ಯ

ಹಾಸ್ಯ ರಸವುಳ್ಳವಾಸಪತ್ರಿಕೆಯು.

ಎಡಿಟರ್—ಬಿ, ಜನಾರ್ದನರಾವ್,

ವಾರ್ಷಿಕ ಚಂದಾ ಸ್ಥಳೀಕರಿಗೆ—೧೮ ಆಣೆ, ಪರಸ್ಥಳದವರಿಗೆ ಅಂಚೆ ವೆಚ್ಚ ಸೇರಿ ೧ ರೂಪಾಯಿ.

ವಿಲಾಸ—ಎಡಿಟರ್, ಚಾತುರ್ಯ ಚಾಮರಾಜಪೇಟೆ ಬೆಂಗಳೂರು ನಗರ.

Printed and published at the Chaturya Press, 3-148, Chamara
Bangalore City.

ಸಚಿತ್ರಜಾತುರ್ಯ
Registered No. M. 674

ವಿಜ್ಞಾಪನೆ

ನಮ್ಮಲ್ಲಿ ಈ ಕೆಳಗೆ ಬರೆದಿರುವ ಚಿತ್ರಪಠಗಳು ದೊರೆಯುತ್ತವೆ! ಬೇಗ ಕಳುಹಿಸಿಕೊಳ್ಳಬಹುದು! ಉಡುಪಿ ಶ್ರೀಕೃಷ್ಣನವಶ(ಬಣ್ಣ ಹಾಕಿದ್ದು) ೫ ಆಣೆ ಲಕ್ಷ್ಮೀನರಸಿಂಹ ಸ್ವಾಮಿವಶ(ಬಣ್ಣ ಹಾಕಿದ್ದು) ೧ ಆಣೆ ಚಲುವರಾಯಸ್ವಾಮಿಪಠ! [ಡಬೊ]ಕ್ಕಯ ಒಂದು ಆಣೆ! ಶ್ರೀ ರಾಘವೇಂದ್ರಸ್ವಾಮಿಗಳ ಪಠ ೩ ಆಣೆ

ಜಾತುರ್ಯ ಪ್ರಿಸ್. ಬೆಂಗಳೂರು!

ಶ್ರೀಕೃಷ್ಣಸೂಕ್ತಿ.

ಉತ್ತಮವಾದ ಕನ್ನಡನುಡಿಯಮಾಸಪತ್ರಿಕೆ! ಸಮಾಜಿಕ ರಾಜಕೀಯ, ನೈತಿಕ, ವಿಜ್ಞಾನವಿಷಯಕ, ಮನೋಭೋಧಕ, ಕಾವ್ಯನಾಟಕ, ಚಂಪುಗದ್ಯ, ಕಾದಂಬರಿಗಳಿಗ್ರಂಥಮಾಲಿಕೆ!! ಮತ್ತು "ವಿನೋದಿನಿ"ಯನ್ನು ಒಳಕೊಂಡುದುಜರಿಂದ ವಿನೋದಲಹರಿಗಳೂ, ವಿವಿಧ ವಿಷಯಗಳೂ!!! ವಾರ್ಷಿಕ ಚಂದಾ,- ಪೋಷಕರಿಗೆ ರೂ ೩-೪-೦ ಸಾಮಾನ್ಯರಿಗೆ ರೂ ೧-೪-೦ ಸ್ಥಳೀಯರಿಗೆ ೧—೬—೦ ಸ್ತ್ರೀಯರಿಗೂ, ಪುಸ್ತಕ ವಿದ್ಯಾರ್ಥಿಗಳಿಗೂ ೧ ರೂಪಾಯಿ.

ಸಾಸ= ಮ್ಯಾನೇಜರ್, "ಶ್ರೀಕೃಷ್ಣಸೂಕ್ತಿ" ಉಡುಪಿ.

ಪ್ರಕಟನೆ.

ಪಿ ಗುಂಡುರಾವ್, ಫೋಟೋಗ್ರಾಫರ್ ಮತ್ತು ಕಮಿಷನ್ ಏಜಂಟ್! ಮೈಸೂರ್ ರೋಡ್ ಜಾಮರಾಜಪೇಟೆ! ಬೆಂಗಳೂರು ಸಿಟಿ; ಎಲ್ಲಾ ವಿಧವಾದ ಪದಾರ್ಥಗಳನ್ನೂ ನಾವು ಸುಲುಭ ಬಾರ್ಜಿಗೆ ತರಿಸಿಕೊಡುತ್ತೇವೆ! ವಿ! ಡಿ. ಪಂಡಿತರೆ ಕೇಸರಾರ್ಕಮಧು ಮಿಲ್ಕ್‌ಫೂಡ್ ಮೊದಲಾದ ಔಷಧ, ಗಳಿಗೆಲ್ಲಾ ನಾವು ಏಜಂಟರಾಗಿರುತ್ತೇವೆ! ಅಪೇಕ್ಷಿಸುವವರು ಹಣವನ್ನು ಅಡ್ವಾನ್ಸಾಗಿ ಕಳುಹಿಸಿದಲ್ಲಿ ಪದಾರ್ಥಗಳನ್ನು ಜಾಗ್ರತೆಯಲ್ಲಿಯೇ ಕಳುಹಿಸುತ್ತೇವೆ! ಒಳ್ಳೇ ಪದಾರ್ಥಗಳನ್ನು ಕಳುಹಿಸಿಕೊಡುತ್ತೇನೆ!

MEGARAVALLI ... Patel, ... HALLI TALUK
... NEWS PAPER ... CY
MEGARAVALLI ... 1924.
Shimoga Dist, Karanataka State, INDIA

ವಿಕ್ಟೋರಿಯಾ ಗಜಬು.

ಎಚ್ಚರಿಕೆ.

ಒಳ್ಳೇ ಔಷಧಗಳು!

ಸ್ವಲ್ಪ ಕ್ರಯದಲ್ಲಿ ಡಬ್ಬಿಗಳು!!

1. ಆಯಾ ಔಷಧಗಳನ್ನು ಉಪಯೋಗಿಸುವ ವಿಧಾನ, ಪರಿಮಿತಿ, ಪಥ್ಯವು - ಇವುಗಳನ್ನು ತಿಳಿಸುವ ಕಾಗದವು, ಪ್ರತಿ ಯೊಂದು ಡಬ್ಬಿಯಮೇಲೆಯೂ ಸುತ್ತಲ್ಪಟ್ಟಿರುವುದು.

2. ದರಖಾಸ್ತು ದಾರರಿಗೆ ಔಷಧಗಳನ್ನು ಕಳುಹಿಸಿ ಕೊಡಣವನ್ನು ಪೊಸ್ಟ್‌ದ್ವಾರಾ ವಸೂಲುಮಾಡಿಕೊಳ್ಳುವೆವು.

3. ಒಂದೇ ಔಷಧವಾದರೂ ಸರಿಯ, ಬೇರೆಬೇರೆ ಔಷಧಗಳಾದರು ಸರಿಯ, ಒಂದುಡಬ್ಬಿ ಮೊದಲು ನಾಲ್ಕುಡಬ್ಬಿಗಳವರಿಗೂ ಪಾಂಗಿಷಾರ್ಜು ನಾಲ್ಕುಆಣೆ. ಮಣಿಯಾ ಷಾರ್ಜು ಎರಡು ಆಣೆ. ಮಾತ್ರೆಷಾರ್ಜು ಆರು ಆಣೆ ಯಿಂದ ಬೇಕಾದ ಔಷಧಗಳನ್ನು ಸೇರಿಸಿ ಒಂದೇಸಾರಿ ಕೊಳ್ಳುವೆದಲ್ಲಾದೆ, ಅನೇಕರು ಸೇರಿ [illegible] ಹಾಗೆ ಪಾರ್ಸಲು ಬಹಳಮಟ್ಟಿಗೆ ತಗ್ಗು [illegible]

5. ಇಂದ್ರಜಿತ್ ಕೃಷ್ಣ.

ಡಬ್ಬಿ 1 ಕ್ಕೆ ಬೆಲೆರೂ. **1.**

ಕೊರ್ಕು ಸವಾಯಿ ಮೇಹಪಾಷ್ಯಗಳು, ಮೇಹರಣಗಳು, ಸುಖಜಾಷ್ಯದ ಹುಣ್ಣುಗಳು - ಇವುಗಳನ್ನು ಈ ತೈಲವು ಅತಿತ್ವರಿತವಾಗಿ ಮಾಣಿಸುವುದು. ಇದನ್ನು ಮೇಲೆ ಸವರಿಕೊಳ್ಳುತ್ತ, ಒಳಕ್ಕೆ ರಕ್ತಶುದ್ಧಿಗಾಗಿ ದರ್ಬಾರು ಮಾತ್ರೆಗಳನ್ನು ಸೇವಿಸಿದರೆ, ವ್ಯಾಧಿ ನಿಶ್ಶೇಷವಾಗಿ ವಾಸಿಯಾಗಿ ವೆಜ್ರಕರೀರ ವೇರ್ಪಡುವುದು.

6. ಬಾವಾಜೀ ತೈಲವು.

ಡಬ್ಬಿ 1 ಕ್ಕೆ ಬೆಲೆ ರೂ. **1.**

ಈ ತೈಲವು - ಶ್ವೇತಕುಷ್ಠ, ಕಾಕಕುಷ್ಠ, ಮೇಹಕುಷ್ಠ, ಕುಷ್ಠದದ್ದಿರ, ಬಿಳುಸಿಬ್ಬ, ಮುಂತಾದ ವ್ಯಾಧಿಗಳಿಗೆ ವಜ್ರಾಯುಧವು. ಈ ತೈಲವನ್ನು ಮೇಲೆ ಸವರಿಕೊಳ್ಳುತ್ತ, ಒಳಕ್ಕೆ ರಕ್ತಶುದ್ಧಿಗಾಗಿ ದರ್ಬಾರುಮಾತ್ರೆಗಳನ್ನು ಸೇವಿಸಬೇಕು.

7. ಜಾವಾ ಮಾತ್ರೆಗಳು.

ಡಬ್ಬಿ 1 ಕ್ಕೆ ಬೆಲೆ ರೂ. **1.**

ಒಂದುಡಬ್ಬಿಗೆ 12 ಮಾತ್ರೆಗಳು. ಈ ಮಾತ್ರೆಗಳು ಸ್ತ್ರೀ ಪುರುಷರಲ್ಲಿ ಬಿಳುಪು, ಹಳದಿ ಸಂಬಂಧರೋಗಗಳಿಗೆ ಸಿದ್ಧೌಷಧವು. ಚಿರಕಾಲದಿಂದ ಹಿಡಿದ ತ್ರಿದ್ದರೂ ಬೇಗನೆ ವಾಸಿಯಾಗುವುದು. ಇವು ಬೆಳ್ಳಿಗಾಣ್ಣ ಸೇರಿಸಲ್ಪಟ್ಟ ಮಾತ್ರೆಗಳು. ರಸವಿಷ ಗಂಧಕಗಳು ಇಲ್ಲ[illegible] ಕರು ಬಲಗಾತ್ರವುದ್ವಾರ ದರಖಾಸ್ತುಗಳು ಕಳುಹಿಸಿ[illegible]. ಒಂದು ಡಬ್ಬಿ ಮಾತ್ರೆಗಳಿಂದ ಗುಣಕಾಣಿಸಿ ನಾಲ್ಕುಡಬ್ಬಿಗಳಿಂದ ವ್ಯಾಧಿ ನಿರ್ಮೂಲವಾಗಿ ಸ್ವಸ್ಥವಾಗುವುದು ಆನಂತರ ದರ್ಬಾರುಮಾತ್ರೆಗಳನ್ನು ತೆಗದುಕೊಂಡರೆ ರಕ್ತ ಒಪ್ಪಯ ವೀರ್ಯವೃದ್ಧಿಯು ಆಗಿ ವಜ್ರಕರೀರ ವೇರ್ಪಡುವುದು.

8. ದರ್ಬಾರುಮಾತ್ರೆಗಳು

ಒಂದುಡಬ್ಬಿ ಮಾತ್ರೆಗಳು

ಸೇವಿಸಿದಮೇಲೆ ಅದರ ಮಹಿಮ ತಿಳಿದು ನಾಲ್ಕುಡಬ್ಬಿಗಳ ಮಾತ್ರೆಗಳು ಮುಗಿವವರಿಗೆ ವೆಜ್ರಕರೀರ ವೇರ್ಪಡುವುದು. ದರ್ಬಾರು ಮಾತ್ರೆಗಳನ್ನು ಸ್ತ್ರೀಯರು ಪುರುಷರು ಸಹಾ ಸೇವಿಸಬಹುದು. ದೇಶದೇಶಗಳಲ್ಲಿಯೂ ಪ್ರಸಿದ್ಧಿಹೊಂದಿ, ಸಾವಿರಾರು ವಿಕ್ರಯವಾಗುತ್ತಿವೆ.

9. ಲಂಗರು ಮಾತ್ರೆಗಳು.

ಡಬ್ಬಿಗೆ 1 ಕ್ಕೆ ಬೆಲೆ ರೂ **1.**

ಒಂದುಡಬ್ಬಿಗೆ 12 ಮಾತ್ರೆಗಳು. ಈ ಮಾತ್ರೆಗಳು ಅತಿ ಮೂತ್ರವ್ಯಾಧಿಗೆ ಪರಮೌಷಧವು. ಹಲವು ಮೆದ್ದುಗಳನ್ನು ನುಂಗಿ ಮೇಲನ್ನು ಪಡೆಯದವರಿಗೆಕೂಡ ಶೀಘ್ರುಕಾಲದಲ್ಲಿ ಯೇ ಅತಿಮೂತ್ರವು ಕಟ್ಟಿ ವ್ಯಾಧಿ ಮರಳಿ ಬಾರದಂತೆ ಮೂತ್ರಾವಯವೆಗಳು ಬಲಪಡುವುವು. ಈ ಮಾತ್ರೆಗಳಲ್ಲಿ ದೊಡ್ಡಿ ಬೆಲೆಯುಳ್ಳ ಔಷಧಗಳು ಸೇರಿವೆ. ಒಂದುಡಬ್ಬಿ ಮಾತ್ರೆಗಳಿಂದ ಗುಣಕಾಣಿಸಿ, ನಾಲ್ಕುಡಬ್ಬಿಗಳು ಮುಗಿವವರಿಗೆ ವ್ಯಾಧಿ ಸಂಪೂರ್ಣವಾಗಿ ವಾಸಿಯಾಗುವುದು.

10. ನಾಜೂಕು ಮಾತ್ರೆಗಳು.

ಡಬ್ಬಿ 1 ಕ್ಕೆ ಬೆಲೆ ರೂ. **1.**

ಒಂದುಡಬ್ಬಿಗೆ 12 ಮಾತ್ರೆಗಳು ಸ್ಥೂಲಶರೀರದಿಂದ ಬಾಧಪಡುತ್ತಿರುವವರಿಗೆ ಈ ಮಾತ್ರೆಗಳು ಬಹಳ ವುಪಯೋಗವು. ಇವುಗಳಿಂದ ಯಾವಬಗಯಾದೆ ಕಡಕಾದರೂ ಹುಟ್ಟದೆ, ಶರೀರದೆ ದೊಪ್ಪವು ಕ್ರಮಕ್ರಮವಾಗಿ ತಗ್ಗಿ, ಕಡ್ಡಿಯಂತ ಗಟ್ಟಿಬಿದ್ದು, ಬಲವೇರ್ಪಡುವುದು.

11. ಜನಾನಾ ಮಾತ್ರೆಗಳು.

ಡಬ್ಬಿಗೆ 1 ಕ್ಕೆ ಬೆಲೆ **8** ಆಣೆ.

ಜನಾನಾಮಾತ್ರೆಗಳು ಇವು ಸ್ತ್ರೀಯರ ಖಯಿಲೆ [illegible] ಸುವುದರಲ್ಲಿ ಹೆಸರು [illegible] ಯೋಗವಿಕ, ಎವೆಡು [illegible] ಂಗಳಿಗೆ ಎರಡುಡಬ್ಬಿ [illegible] ಸಾಕಾಗುವುದು.

1 ಯಶ್ರಣಿ ತೈಲವು.

ಡಬ್ಬಿಗೆ 1 ಕ್ಕೆ ಬೆಲೆ **6** ಆಣೆ.

ಇದು ಚೇಳಬಡಿತಕ್ಕೆ ಮಹಾಮಂತ್ರ ಪ್ರಯೋಗವು ಚೇಳು, ಕಚ್ಚಿದ ಸ್ಥಳದಲ್ಲಿ ಕೊಂಚ ತೈಲವನ್ನು ಉಜ್ಜಿದರೆ ನಾಲ್ಕು ನಿಮಿಷದೊಳಗೆ ಒಣದ ಮಾಯವಾಗಿ ಚೇಳು ಒಡಿಯಲೇ ಇಲ್ಲವೆಂದು ತೋರುವುದು. ಬಹಳ ಆಶ್ಚರ್ಯವು. ಒಂದುಡಬ್ಬಿ ಯಿಪ್ಪತ್ತು ಜನಗಳಿಗೆ ಸಾಕಾಗುತ್ತೆ

2. ವಿಕ್ಟರು ತೈಲವು.

ಡಬ್ಬಿ 1 ಕ್ಕೆ ಬೆಲೆ **8** ಆಣೆ.

ಈ ತೈಲದಿಂದ ತುರಕಾಣ, ತುರಿ, ತೀಟೆ, ಆನೆಖಜ್ಜಿ, ಹುಳುಕಡ್ಡಿ ಮುಂತಾದವುಗಳು ನಾಲ್ಕು ಬಳಿತಗಳಿಂದ ನಿರ್ಮೂಲವಾಗಿ ವಾಸಿಯಾಗಿ ಶರೀರವು ನಿರ್ಮಲವಾಗುವದು. ಅಂಗಡಿಯ ಔಷಧಿಗಳ ಹಾಗಲ್ಲ. ಪುನಃ ವ್ಯಾಧಿ ತಲೆತೋರಿಸದು. ಬಹಳ ದಿನಗಳಿಂದ ಹುಳಕಡ್ಡಿ ಮುಂತಾದವುಗಳಿಂದ ಬಾದೆ ಪಡುತ್ತಿರುವವರು ಒಳಕ್ಕೆ ರಕ್ತಶುದ್ಧಿಗಾಗಿ ದರ್ಬಾರುಮಾತ್ರ ಗಳನ್ನು ಸೇವಿಸಬೇಕು.

ಭೇತಾಳ ತೈಲವು.

ಡಬ್ಬಿ 1 ಕ್ಕ ಬಲೆ **8** ಆಣೆ.

ಇದು ಒಳ್ಳೆಯ ಪರಿಮಳವೂ ಘೂಟೂ ಉಳ್ಳ ತೈಲವು. ಕೆಮ್ಮು, ನೆಗಡಿ, ತಲೆನೋವು, ಒತ್ತಲೆನೋವು, ಕೊರಳುನೋವು, ಎದೆನೋವು, ನಡುವುನೋವು, ಕೀಲುನೋವು, ಕೀಲು ಬಿಡಿತ್ತ, ನರಗಳಸುತ್ತು, ಉಳುಕು, ಕೈಕಾಲು ಸಳಲಿಕೆ, ಬಾವು, ಕವಡುಬಿಲ್ಲೆ-ಇವುಗಳನ್ನು ತಕ್ಷಣವೇ ಪರಿಹರಿಸುವುದು. ಭೇತಾಳನ ಹೆಸರನ್ನು ಹೇಳಿದಷ್ಟು ಮಾತ್ರದಿಂದಲೇ ಸಿಕಚೆಗಳು ಓಡಿಹೋಗುವಂತೆ, ಈ ತೈಲವನ್ನು ಸ್ವಲ್ಪ ವು ಜಜ್ಜಿದಮಾತ್ರದಲ್ಲೇ ಸಮಸ್ತ ವಿಧಗಳಾದ ಮೈಹದೆನೋವುಗಳೂ ಪಾತದನೋವುಗಳೂ ಯಿಷ್ಟು ದಿನಗಳಿಂದ ಭಾದಿಸುತ್ತಿದ್ದರೂ ಶೀಘ್ರವಾಗಿ ಹೋಗುವುವು ಇತರ ಔಷಧಗಳನ್ನು ಬಿಟ್ಟು ಯಲ್ಲರೂ ಇದನ್ನೇ ತರಿಸಿಕೊಳ್ಳುತ್ತಿರುವರು

4. ಮೂ ಮೂ ತೈಲವು.

ಡಬ್ಬಿಗೆ 1 ಕ್ಕೆ ಬೆಲೆ ರೂ. **1**.

ಈ ತೈಲವು ಮೂಲಕಂಕವ್ಯಾಧಿಗೆ ವಜ್ರಾಯುಧವು ಕೊಂಚ ತೈಲವನ್ನು ಮೇಲೆ ಸವರಿಕೊಂಡರೆ ತಕ್ಷಣವೇ ಶಾಂತಿಗಿ ಸುಖ ವುಂಟಾಗುವುದು. ಎಷ್ಟುಕಾಲದಿಂದ ಬಾ ಧಿ ದರೂ ಶೀಘ್ರವಾಗಿ ನಿವಾರಣ ವಾಗುವುದು.

ಒಂದುಡಬ್ಬಿ 12 ಮಾತ್ರೆಗಳು ಇಂ ಒಂಗಾರದೂ ಡನೆ ಸೇರಿನಲ್ಲಪ್ಪವು ಇವ್ರಾಕ್ಕೆ ಗುಣವು ಅತ್ಯಂತತಾತ್ಸ ರ್ಯವು ರಕ್ತಶುದ್ಧಿ, ಸಂಗಿಕಪುಷ್ಟಿ, ವೀರ್ಯೋತ್ಪತ್ತಿಯನ್ನು, ಕ್ಷಾಜಸ್ಸು, ಬಲವು, ಸಂಭೋಗಶಕ್ತಿ, ಜಿಜ್ಞಾಸಕ್ಕೆ - ಇವುಗಳನ್ನು ವೃದ್ಧಿಗೊಳಿಸಿ ಉತ್ಸಾಹವನ್ನುಂಟುಮಾಡುವುವು ಮೈಬಿಸಿ, ಹಸಿವಿಲ್ಲ ಎಂಬಿಕ, ನಿಶ್ಯಕ್ತಿ, ಭಯವು, ಮೆಕಿಛಾಂತಿ, ಶುಕ್ಲನಷ್ಟವು, ಮೂತ್ರಕ್ಕಮುಂಚೆ ಶ್ವೇತವು ಹೋಡುವಿಕೆ, ಸಂಭೋಗಶಕ್ತಿ ಲೋಪವು, ಸುಖಜಾಡ್ಯಗಳಿಂದ ಉಂಟಾದ ದೋಷಗಳು - ಇವುಗಳನ್ನು ಖಂಡಿಸುವುವು. ಮುದುಕರಿಗಕೂಡ ಯೌವನವನ್ನುಂಟುಮಾಡುವುವು ಈ ಕಾಲದಲ್ಲಿ ಇಪ್ಪತ್ತು ಸಂವತ್ಸರಗಳೊಳಗಾಗಿಯೇ

ಶುಕ್ಲನಷ್ಟ

ದಿಂದೆ ಬಾಧಿಪಡುವವರು, ವೀರ್ಯಪಟುತ್ವವು ಕಟ್ಟು ವೃದ್ಧಾಪ್ಯವು ಸಂಬಂಧಿಸಿದವರು ಅನೇಕರು ಕಾಣಬರುತ್ತಿರುವರು ಇದು ಆಶ್ಚರ್ಯವೆಲ್ಲ ಸದಾ ಕುಳಿತು ಕೆಲಸಮಾಡುವಿಕ ಓದುವಿಕೆ, ವಿಚಾರವು, ಅಕಾಲಭೋಜನವು, ಚಕ್ಕಂದಿನಲ್ಲಿ ಯದ್ಧೇಚ್ಛವಾಗಿ ವಿಹರಿಸುವಿಕೆ, ಹಸ್ತಪ್ರಯೋಗವು, ಅತಿಸಂಭೋಗವು, ಸುಖಜಾಡ್ಯಗಳು, ಯಿಂಥಾ ಕಾರಣಗಳಿಂದ ಶರೀರ ಪಟುತ್ವವು ಕಟ್ಟು

ಸಂಭೋಗಶಕ್ತಿ

ಕ್ಷೀಣಿಸುವುದು ನಿಶ್ಚಯವು. ಇಪ್ಪತ್ತೇ ಅಲ್ಲದೆ ನರಗಳವು ಪಿಟ್ಟು ಕ್ಷೀಣಿಸುವದರಿಂದ ಸಂಭೋಗಾವಯವವು ಬಿಗಿತಪ್ಪಿ ಜಳ್ಳಾಗುವುದು. ಉನ್ನತಿ ಚೆನ್ನಾಗಿ ಉಂಟಾಗದು. ಅತಿಶೀಘ್ರವಾಗಿ ಸ್ಖಲನವಾಗುವುದು ವೀರ್ಯವು ನೀರಂತಾಗಿ ಪಟುತ್ವವು ಕಟ್ಟು ಸಂತಾನಕ್ಕೆ ಅಯೋಗ್ಯವಾಗಿರುವುದು ನಿದ್ರೆಯಲ್ಲಿ ಸ್ಖಲನಗಳು ಹಚ್ಚಿ ಶರೀರದ ಸಾರವನ್ನು ಹೀರಿಹಾಕುವುದು. ಕಡೆಗೆ ಸಂಭೋಗಶಕ್ತಿ ಬುಡಸುಟ್ಟಿ ನಶಿಸುವುದು.

ದರ್ಬಾರು ಮಾತ್ರೆಗಳ ಗುಣಗಳು

ಮುಖ್ಯವಾಗಿ ಮೂರು 1. ರಕ್ತವನ್ನು ಚೆನ್ನಾಗಿ ಶುದ್ಧಿಮಾಡುವಿಕ 2 ನರಗಳಲ್ಲಿಯೂ ಮಿದಳಿನಲ್ಲಿಯೂ ಜೀವಶಕ್ತಿಯನ್ನು ತುಬಿ ಉತ್ಸಾಹವನ್ನುಂಟುಮಾಡುವಿಕ. 3 ಸಂಭೋಗಾವಯವಗಳಿಗೂ ವೀರ್ಯನಾಳಗಳಿಗೂ, ಶಾಶ್ವತವಾದ ಬಲವನ್ನುಂಟುಮಾಡುವಿಕೆ ಎಷ್ಟು ಕಟ್ಟಿರುವ ಶರೀರಕ್ಕಾದರೂ, ಎಂತಹ ವೃದ್ಧ ಶರೀರಕ್ಕಾದರೂ ಒಣಗಿದಮರವು ಬಿಗಿರಿಟ್ಟ ಹಾಗೆ ದರ್ಬಾರುಮಾತ್ರೆಗಳಿಂದ ನವಯೌವನವು ಸಿದ್ಧಿಸುವುದು. ಮತ್ತು ಯೌವನದಲ್ಲಿ ಯಿರುವವರಿಗ ಉಂಟಾಗುವ ಫಲವನ್ನು ಹೇಳಲು ಅನಾವಶ್ಯಕವು. ತತ್ಕಾಲಕ್ಕೆಮಾತ್ರ ಫಲ ಕೊಡುವ ಲೇಹ್ಯಗಳು, ಹಲ್ವಾಗಳು, ಮೊದಲಾದವುಗಳಿಂದ ಪ್ರಯೋಜನವಿಲ್ಲ ಆದ್ದರಿಂದಯೆಲ್ಲರಿಗೂ ದರ್ಬಾರುಮಾತ್ರ ಗಳೇ ಪ್ರಶಸ್ತವು.

ಮಾಡುವ ಸ್ತ್ರೀಯರಿಗೂ ವಿಧವ ಸ್ತ್ರೀಯರಿಗೂ ಅತ್ಯಂತೋಪಯೋಗ ಯುವ ಜನಾನಾಮಾತ್ರೆಗಳನ್ನೂ ಸೇವಿಸಿದರೆ ವರಸಿದ್ಧಿ ಯುಂಟಾ

12 ಖುಲಾಸಾ ಮಾತ್ರೆಗಳು.

ಡಬ್ಬಿಗೆ 1 ಕ್ಕೆ ಬೆಲೆ **8** ಆಣೆ.

ಒಂದು ಡಬ್ಬಿಗೆ 12 ಮಾತ್ರೆಗಳು ಮೆಲಬಿದ್ದಹಾಗೆ, ಅಗ್ನಿಮಾಂದ್ಯವು, ಅಜೀರ್ಣ, ಹುಳಿತೇಗು, ಹೊಟ್ಟೆಯುಬ್ಬರವು, ಹೊಟ್ಟೆಯಲ್ಲಿ ನಾತವು, ಗುಂಡಿಗೆಯುರಿ, ವೈಶ್ಯವು, ಅರುಚಿ, ಬಾಯುಳ್ಳುಳ್ಳಿರು, ಹಸರು, ಪ್ರಾತಃಕಾಲದಲ್ಲಿ ವಾಂತಿಗೆ ಬಂದಂತಿರುವಿಕೆ, ತಲೆತಿರುಗುವಿಕೆ - ಈ ಸರ್ವ ಸಾಮಾನ್ಯ ವ್ಯಾಧಿಗಳಿಗೆ ಈ ಮಾತ್ರೆಗಳು ಪರಮೌಷಧವು ಇವುಗಳಿಂದ ಜಠರಾಗ್ನಿಗ ತೀಕ್ಷ್ಣವುಂಟಾಗಿ ಜೀರ್ಣಕೋಶದ ಶಕ್ತಿ ಹೆಚ್ಚುವುದು ರಾತ್ರಿ ಭೋಜನಾನಂತರದಲ್ಲಿ ಮಲಗಿಕೊಳ್ಳಹೋಗುವಾಗ ಒಂದು ಮಾತ್ರೆಯನ್ನು ತೆಗದುಕೊಂಡರೆ, ಬೆಳಗ್ಗೆ ಖುಲಾಸೆ ಯುಂಟಾಗಿ ಶರೀರಕ್ಕೆ ಆರೋಗ್ಯವ್ಯೇಷ್ಟಡುವುದು - ಎರಡುಮಾತ್ರೆಗಳನ್ನು ತೆಗದುಕ್ಕೊಂಡರೆ, ಸುಖವಾದ ವಿರೇಚನಕಾರಿಯಾಗಿ ಕೆಲಸಮಾಡುವುದು. ಈ ದೋಷದ್ವರಿಗ ಖುಲಾಸಾಮಾತ್ರೆಗಳೇ ಪ್ರಶಸ್ತವು.

13. ರಾಂರಾಂ ಮಾತ್ರೆಗಳು.

ಡಬ್ಬಿಗೆ 1 ಕ್ಕೆ ಬೆಲೆ **8** ಆಣೆ.

ಬಂದುಡಬ್ಬಿಗೆ 12 ಮಾತ್ರೆಗಳು. ಈ ಮಾತ್ರೆಗಳು ಕಲರಾ ಜಾಡ್ಯಕ್ಕೆ ಸಿದ್ಧೌಷಧವು. ತೆಪ್ಪದ ನಿವಾರಿಸಿ ಪ್ರಾಣವನ್ನು ರಕ್ಷಿಸುವೆದು ಈ ಭಯಂಕರ ವ್ಯಾಧಿ ಕಾಣಿಸಿದ ಮೇಲೆ ಮೆದ್ದು ತರಿಸುವುದಕ್ಕೆ ಅವಕಾಶವಿರಲಾರದು ಆದ್ದರಿಂದ ಪ್ರತಿ ಗೃಹದಲ್ಲಿಯೂ ಒಂದುಡಬ್ಬಿಯನ್ನು ಇಟ್ಟುಕೊಳ್ಳಬೇಕು

14 ಕಸ್ತೂರಿ ಮಾತ್ರೆಗಳು

ಡಬ್ಬಿಗೆ 1 ಕ್ಕೆ ಬೆಲೆ **8** ಆಣೆ.

ಒಂದುಡಬ್ಬಿಗೆ 20 ಮಾತ್ರೆಗಳು ಇವು ಪ್ರಶಸ್ತವಾದ ನೇ ವಾಳದೇಶದ ಕಸ್ತೂರಿಯಿಂದ ಮಾಡಲ್ಪಟ್ಟು ಘಾಟು ಹೋಗದಹಾಗ ಬೆಳ್ಳಿಯಿಂದ ಮುಚ್ಚಲ್ಪಟ್ಟಿವೆ. ಜ್ವರವು, ನೆಗಡಿ, ಮೈನೋವು, ಶೀತವೇದಿ ಮೊದಲಾದವುಗಳಿಗೆ ಸಿದ್ಧೌಷಧವು. ಮಕ್ಕಳಿಗೂ ಹಿರಿಯರಿಗೂ ಸಹ ಸಾರ್ವಜನಿಕವಾದ್ದರಿಂದ ಪ್ರತಿ ಮನೆಯಲ್ಲಿಯೂ ಒಂದುಡಬ್ಬಿ ಯಿರಬೇಕು.

ಶ್ರೀಃ.

ಓಂ ಸರ್ವಂವಿಕಟಮಯಂಜಗತ್.

ವಿಕಟ ಪ್ರತಾಪ

ಎಂಬ

ಸಚಿತ್ರವೂ, ವಿಚಿತ್ರವೂ ಆದ ಮಾಸಪತ್ರಿಕೆ.

Shri Vani Vilas Press, Basavanagudi, Bangalore.

ಪಾರುತೆದೇಕೋದ್ಧರಣಮು । ನಗೆಯಾಯುರ್ವೃದ್ಧಿಗೆತಾಂ ।
ನೋರಂತನ್ನೆಯಮನೆಲ್ಲರೊಳ್ತಿಳಿಪುತೆಮು ॥ ಮಿಗೆಕಾರಣಮದರಿನೆಲ್ಲರಸಿಕರಹಿತಕೆಂ ॥
ತ್ಯಾರಂಬಗೆಯುವೆಭಾರತ । ಬೊಗೆವಂವಿಕಟಂಹಾಸ್ಯದ ।
ಧಾರಿಣಿಯೊಳ್ಪ್ರಜೆಗೆಹಿತಮನಿಸವಂವಿಕಟಂ ॥ ೧ ॥ ಬಗೆಯೊಳ್ಜಗಮೆಲ್ಲನಗುವತೆರದಿಂಭರದಿಂ ॥ ೨ ॥

ಸಂಪುಟ ೪.] ಜನವರಿ, ಪಿಬ್ರವರಿ—೧೯೧೦. [ಸಂಚಿಕೆ ೭—೮

ವಾಚಕರಿಗೊಂದು ವಿನಂತಿ.

1910ನೇ ಜನವರಿ 15 ರಲ್ಲಿಯೇ ಮದರಾಸಿನಲ್ಲಿ ಮುದ್ರಿತವಾಗಿ ಹಂಚಿಕೆಗೆ ಸಿದ್ಧವಾಗಿದ್ದ 1909ನೆ ಡಿಸಂಬರ್ ತಿಂಗಳ ವಿಕಟಪ್ರತಾಪವು ಕುಪ್ಪದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಅಸ್ಪಣೆಯನ್ನು ಪಡೆದು ಹೊರಹೊರಡುವುದು ಬಹಳ ನಿದಾನವಾಯಿತು,—ಅಂದರೆ ಜನವರಿತಿಂಗಳ ಆಖೈರ್‌ನಲ್ಲಿ ಚಂದಾದಾರರ ಕೈಸೇರಿತು. ಇಂತಹ ಅಸಂಭವವು ಪ್ರಾಪ್ತವಾದುದರಿಂದ ಮುಂದೆ ಪತ್ರಿಕೆಯನ್ನು ಕಾಲಕಾಲಕ್ಕೆ ಸರಿಯಾಗಿಹೊರಡಿಸಬೇಕೆಂದು ಈ 1910ನೆ ಜನವರಿ ಮತ್ತೂ ಪೆಬ್ರವರಿ ತಿಂಗಳ ಪತ್ರಿಕೆಗಳೆರಡನ್ನೂ ಒಂದೇ ಪುಸ್ತಕವನ್ನಾಗಿ ಅಚ್ಚುಹಾಕಿಸಿರುತ್ತೇವೆ. ಎರಡು ತಿಂಗಳ ಪತ್ರಿಕೆಗಳನ್ನು ವಿಕ್ಕಾಲದಲ್ಲಿ ಅಚ್ಚುಹಾಕಿಸಿದುದರಿಂದ ಕೆಲವು ಪುಟಗಳನ್ನು ಜಾಸ್ತಿಯಾಗಿಯೇ ಸೇರಿಸಿರುತ್ತೇವೆ. ಕಷ್ಟವು ವಿಶಿಷ್ಟರಿಗೂ ಒಂದೇ ತೆರನಲ್ಲವೇ! ಆದುದರಿಂದ ಚಂದಾದಾರ್ ಮಹಾಶಯರುಗಳು ವಿಕಟನು ಮುಂದೆ ನಿರಾಟಂಕವಾಗಿಯೂ ಕಾಲಕ್ಕಾಲಕ್ಕೆ ಸರಿಯಾಗಿಯೂ ಹೊರಟು ತನ್ನ ಬರುವಿಕೆಯನ್ನೇ ನಿರೀಕ್ಷಿಸುತ್ತಿರುವವರ ಕಣ್ಮನಗಳನ್ನು ಸಂತೋಷಪಡಿಸುವನೆಂದು ತಿಳಿಯತಕ್ಕುದು.

ಇತಿ

ಪತ್ರಕರ್ತ.

ವಿಕಟಸಂಬಂಧಂ.

ವಸಂತಕಾಲ. ಅದರಲ್ಲೂ ಪೂರ್ಣಿಮಾ ಚಂದ್ರನು ತನ್ನ ಸೋದರಿಕಳಲಿಗಳನ್ನು ನುತ್ತಲೂ ಜಲ್ಲಿರುವನು. ಇವನ ಕಿರಣದ ತಂಪಿಗೆ ಮೈಯೊಡ್ಡಿಕೊಂಡು ಮನೆಮಂದಿಯೆಲ್ಲರೂ ಅಂಗಗಳಲ್ಲೇ ಹಾಸಿಗೆ ಹಾಸಿಕೊಂಡು ಸ್ವರ್ಗಸೌಖ್ಯವನ್ನನುಭವಿಸುತ್ತಿರುವರು. ಇದರ ಮೇಲೂ ಉತ್ತರ ಪಿನಾಕಿನಿ ತೀರ. ಪುಣ್ಯಕ್ಷೇತ್ರ. ನರಿಕಾಕ್ರಮು ವೆಂಬ ಹೆಸರು. ಆ ಸ್ಥಳಕ್ಕೆ ಆ ಹೆಸರು ಪೂರ್ವದಿಂದಲೂ ಇರುವುದು. ಅಂತರಿಕ್ಷದಲ್ಲಿಲ್ಲಿ ನೋಡಿದಾಗ್ಯಾದರೂ ಕಳಂಕವೆಂಬುದನ್ನು ಕಾಣೆನು. ಅಂದಿನದಿನದ ಚಂದ್ರಿಕೆಯು ಸೌಖ್ಯವನ್ನಾರುತಾನೇ ವರ್ಣನಲಾದೀತು? ಕೆಲವರು ಬದರೀ ನಾರಾಯಣನ ಸೇವೆ ಮಾಡಿಕೊಂಡು ಸುಖವಾಗಿ, "ಗೊರ್ ಗೊರ್" ಎಂದು ಎಳೆಮಕ್ಕಳು ಬೆಚ್ಚಿಬೀಳುವಂತೆ ಗೊರಕೆಬಿಡುತ್ತಿದ್ದರು. ಕೆಲವರು ಪುಳಹೋರೆ, ತಥ್ಯೋದನ, ನಾಂಗೀಭಾತ್, ಕಾಫಿ, ಟೀ, ದೋಸೆ, ಬೌಂಡ, ಮತ್ತು ನೀರುಳ್ಳಿ ಮುಂತಾದ ಇಷ್ಟವಾದ ವದಾರ್ಥಗಳನ್ನು ನದೀದಡಕ್ಕೆ ತೆಗದುಕೊಂಡು ಹೋಗಿ ಆನಂದದಿಂದ ಮೆರೆಯುವರು. ಅವರಲ್ಲಿ ಒಬ್ಬ ಯೂವನೆಯು ವಿರಹಕಾರಕನಾದ ಚಂದ್ರನನ್ನು ಅಂತರಂಗದಲ್ಲೇ ನಿಂದಿಸಲಾರಂಭಿಸಿ, ಏಕೋವಮೌನವಾಗಿ ಕುಳಿತಳು. ಬಾಕಿಯವರು ತಮ್ಮತಮ್ಮ ಮೃಧುಮಧುರ ವಾಕ್ಕಿನಿಂದ ಆಕೆಯ ಕಡೆಗೆ ಗಮನಕೊಡದೆ ಅವಳಗೂ ಕೊಂಚ ದೋಸೆ, ಟೀ, ಚಿತ್ರಾನ್ನ, ಮುಂತಾದ ಅಲ್ಪಾಹಾರವನ್ನಿತ್ತು ತಮ್ಮತಮ್ಮ ವಿನೋದಲಹರಿಯಲ್ಲಿ ಕಾಲ ಕಳೆದು ಹಿಂದಿರುಗಿದರು. ವ್ಯಥೆಪಟ್ಟು ಕುಳಿತವಳೇ ಕಥಾನಾಯಕಿಯಾದ ರುಕ್ಮಿಣಿಯು. ಇನ್ನು, ಕೆಲವಯೋನ್ಮದ್ಧರು ಹಿಂದಿನಕಾಲದ ಐರಾವತ, ಪಾರಿಜಾತ, ಪಲಕ್ಕೀಜೆ, ಚಂದ್ರಾವಳಿಕಥೆ, ರಾಮನಾಮಾಮೃತ, ಪಾರ್ವತೀಕೊರವಂಜೀ ಕಥೆ, ಇತ್ಯಾದಿಗಳಲ್ಲಿ ನಿದ್ದೆಹತ್ತುವ ಪರ್ಯಂತರವೂ ಕಾಲಕಳೆಯುತ್ತಿ

ವೀರ ಕೇಸರಿ.



ಇದೇನೆಲೆಲೆ, ‘ವೀರಕೇಸರಿ’! ಮಹಾಗುಹೀಭೃದ್ಗುಹಾಂ।
ತದೊಳ್ ಬರಿದೆ ನಿದ್ರಿಸ್ಪೆ? ನಿಜ ಗಭೀರ ನಾದಂಗಳಂ॥
ಪೊದಳ್ದೆಸೆವ ಸಚ್ಛಟಾಳಿಯಿಂ ಮನೋಜ್ಞೆ ತೋರ್ಪಲ್ಲದಂ।
ದಿದಲ್ತೆ, ಖರಸೂಕರಪ್ರತತಿ ಮೆಟ್ಟಿಪೋಕುಂ ವಲಂ॥

ಸೌಮ್ಯ ಸಂ॥ ವೈಶಾಕ ಶುದ್ಧ ೫ ಶನಿವಾರ

ಅಸಮಾಧಾನಕ್ಕೆ ಕಾರಣವೇನು?

—o—

ಇಂಡಿಯಾದೇಶದಲ್ಲಿ ಈಗ ಅನೇಕಜನರು ಸರ್ಕಾರದಮೇಲೆ ಅಸಮಾಧಾನಪಟ್ಟು ತಮಗೆ ರಾಜ್ಯದ ಆಡಳಿತದಲ್ಲಿ ಅಧಿಕಾರವನ್ನು ಕೊಡಬೇಕೆಂದು ಕೇಳುತ್ತಿದ್ದಾರಷ್ಟೆ ಇದೆಲ್ಲಾ ವಿದ್ಯಾವಂತರ ಹೇಳುವದಾಯಿತು, ವಿದ್ಯಾವಂತರು ಬಹುಸ್ವಲ್ಪಜನವೆಂತಲೂ, ರೈತರೇ ಮೊದಲಾದ ಅನೇಕರು ತೃಪ್ತಿಪಟ್ಟಿದ್ದಾರೆಂದೂ ಸರ್ಕಾರದ ಅಧಿಕಾರಿಗಳು ಹೇಳುವದುಂಟು. ಈ ವಿಷಯದಲ್ಲಿ ನಿಜಸ್ಥಿತಿಯೇನು?

ಈಗ ಎಲ್ಲಾಕಡೆಯಲ್ಲೂ ಧಾನ್ಯಗಳ ಬೆಲೆಯು ಹೆಚ್ಚಿ ಬಹುಜನರು ಆರ್ಥಹೊಟ್ಟೆ ಊಟಮಾಡಿ ಕಾಲ ಕಳೆದೇ ಇರಲಿಲ್ಲ. ಆನೇಕ ಪ್ರಸಿದ್ಧಿಕ್ಕೆ ಬಂದಿದ್ದ ಕೆಲವು ಜನರಿಗೆ ಬ್ರಿಟಿಷ್ ಸರ್ಕಾರದವರು ಏನು ಹೀಗೆ ತೊಂದರೆ ಪಟ್ಟಿಲ್ಲ. ಅವರು ಹೇಗೆ ಜೀವನವನ್ನು ಮಾಡಿದರು? ಇವರಿಗೆ ಜನರಮೇಲೆ ನಿಜವಾಗಿ ಅಭಿಮಾನ ವಿಶ್ವಾಸವಿದ್ದರೆ ಅದಕ್ಕೆ ಪ್ರಮಾಣ? ಇಂತಾಕಷ್ಟಕಾಲದಲ್ಲಿ ರೈತರಿಗೆ ಸರ್ಕಾರನವರು ಸಹಾಯಮಾಡುವುದು ಸಹಜವಲ್ಲವೆ? ಆದರೆ ಸರ್ಕಾರದವರು ಅನ್ಯದೇಶೀಯರಾದ್ದರಿಂದ ಈದೇಶದ ರೈತರ ವಿಷಯದಲ್ಲಿ ವಿಶ್ವಾಸವಿಲ್ಲವೆಂಬುದಕ್ಕೆ ಅನೇಕ ದೃಷ್ಟಾಂತಗಳವೆ. ಇವುಗಳಲ್ಲಿ ಈವಾರ ತಿಳಿದು ಬಂದದ್ದೇನೆಂದರೆ,—

ಶಾಲ್ಯದ ವಿಸ್ಕ್ರಿಕ್ಟಿನ ಕೆಲವು ತಾಲ್ಲೂಕುಗಳಲ್ಲಿ ಸ ತರಾಂ ಮಳೆ ಬೀಳದೆ ನೆಲವೆಲ್ಲಾ ಸ ಟ್ಟುಹೋಗಿದೆ. ಬೆಳೆಯಿಲ್ಲದೆ ರೈತರು ಬಹಳ ಕಷ್ಟದಲ್ಲಿದಾ-. ಇದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ತಾಲ್ಲೂಕುಗಳಲ್ಲಿ ನದಿಯೂ ಇಲ್ಲ, ನಾಲಗಳೂ ಇಲ್ಲ, ಕೆರೆಗಳೂ ಇಲ್ಲ. ಎಲ್ಲಾ ಕುಷ್ಕಿಸಾಗುವಳಿಯೇ ಆಗುತ್ತದೆ ಮಳಬಂದ ಹೊರತು ಅಲ್ಲಿ ರೈತರು ಏನನ್ನೂ ಬೆಳೆಯಲಾರರು ಕಳೆದ ೫ ವರ್ಷಗಳಿಂದಲೂ ಮಳೆಯು ಕಡಿಮೆಯಾಗಿದೆ ಅಕಾಲದಲ್ಲಿ ಬೀಳುತ್ತವೆ ಅಲ್ಪಸ್ವಲ್ಪ ಧಾನ್ಯಗಳನ್ನು ಹೊಂದಿದ್ದ ರೈತರೆಲ್ಲಾರೂ ಈ ವರ್ಷ ಮಳೆಬಾದೀತೆಂಬ ಆಶೆಯಿಂದ ಬಿತ್ತಿದರು ಆದರೆ ಬೆಳೆಯಾಗಲಿಲ್ಲ ಭಾವಿಗೆಲ್ಲಾ ಒಣಗಿದವು ಹೊಲಗಳು ಸುಟ್ಟುಹೋದವು ದನಗಳಿಗೆ ಮೇವಿಲ್ಲದೆ ಸಾಯುತ್ತಿವೆ. ಕುಸುಕರು ಜಮೀನದ ಆಸೆಗೆ ದನಗಳನ್ನು ಕಡಿಯುತ್ತಾ ಇದಾರೆ ಈ ದುರವಸ್ಥೆಯನ್ನು ವಿವರಿಸಿ ರೈತರೆಲ್ಲಾ ಸರ್ಕಾರಕ್ಕೆ ಅರ್ಜಿಯನ್ನು ಬರೆದುಕೊಂಡು ಕಂದಾಯವನ್ನುಬಿಟ್ಟು ಕೊಡಬೇಕೆಂದು ಕೇಳಿಕೊಂಡರು ಕಂದಾಯ ಬಿಡುವದಲ್ಲದ ಇತರ ವಿಧದಲ್ಲಿ ಸರ್ಕಾರದವರು ಜನರಿಗೆ ಸಹಾಯ ಮಾಡಬೇಕಲ್ಲ. ಅದನ್ನುಬಿಟ್ಟು ಕುಸ್ಕಿ ಜಮೀನಿಗೆ ಕಂದಾಯವನ್ನು ಬಿಡುವುದಿಲ್ಲವೆಂದು ಅರ್ಜಿಗೆ ಉತ್ತರವನ್ನು ಕೊಟ್ಟಿದಾರೆಂದು, ಒಬ್ಬ ಬಾತ್ಮಿದಾರರು ಬಂದಿದಾರೆ ಹೀಗೆ ಜನರ ಕಷ್ಟವನ್ನ ಕೇಳಿ ಅನುತಾಪಪಡದ ಸರ್ಕಾರ್ಯ ಎಷ್ಟು ವಿಶ್ವಾಸವನ್ನ ಹೊಂದಿದೆಯೋ ಅದನ್ನು ಜನರೇ ಊಹಿಸಲಿ.

ಈರೀತಿಯಲ್ಲಿ ಬೆಳೆಯಾಗದ ವರ್ಷವೂ ಕೊಡ ರೈತರಿಂದ ಕಂದಾಯವನ್ನು ತೆಗೆದುಕೊಳ್ಳುವ ಸರ್ಕಾರವು ಜನರಿಗೆ ಸಮಾಧಾನವನ್ನು ಹ್ಯಾಗೆ ಉಂಟುಮಾಡೀತು? ಈ ದೇಶದ ವಿದ್ಯಾವಂತರು ಮಾತ್ರ ಸರ್ಕಾರದ ಅಧಿಕಾರಕ್ಕೆ ಹೊಡೆದಾಡುವುದೆಂದೂ, ರೈತರೇ ಮೊದಲಾದವರು ಈಗಿನ ಸರ್ಕಾರದಲ್ಲಿ ತೃಪ್ತರಾಗಿದಾರೆಂದೂ, ಕೆಲ ಇಲ್ಲ ರೈತರು ಅತ್ಯಂತ ತೊಂದರೆಯನ್ನು ಅನುಭವಿಸುತ್ತಿದಾರೆ. ಇದುವರಿಗೂ ಬಂದ ಕಷ್ಟವನ್ನೆಲ್ಲಾ ಅನುಭವಿಸಿದರು ಇನ್ನು ಮೇಲೆ ಅವರಿಗೆ ಸರ್ಕಾರದವರು ಸಹಾಯಮಾಡದೇ ಹೋದರೆ ನಾಶವಾಗುವರು. ದನಕರುಗಳು ಸಾಯುವತ್ರ. ಮೈಸೂರು ಶೀಮೆಯಲ್ಲಿ ದನಗಳ ಮೇವಿಗೆ ಕಾಡುಗಳನ್ನುಬಿಟ್ಟು ಕೊಟ್ಟಿದಾರೆ. ಭಾವಿಗಳನ್ನು ತೋಡಿಸುತ್ತಿದಾರೆ ಕರೆಗಳನ್ನು ದುರಸ್ತುಮಾಡುತ್ತಿದಾರೆ, ಕೂಲಿ ಕೆಲಸಗಳನ್ನು ಮಾಡಿಸುತ್ತಿದಾರೆ ಆದರೆ ಬ್ರಿಟಿಷ್ ಸರ್ಕಾರದವರು ಇನ್ನೂ ರೈತರ ಕಷ್ಟಗಳನ್ನು ನೋಡಿ ಕಣ್ಣನ್ನು ಮುಚ್ಚಿಕೊಂಡಿರುವರು. ಸ್ವದೇಶಕ್ಕು ಪರದೇಶಕ್ಕು ಇಲ್ಲೇ ವ್ಯತ್ಯಾಸ ಕಾಣುತ್ತಿರುವದು ಮೈಸೂರು ದೇಶದಲ್ಲಿ ಸರ್ಕಾರವು ಸ್ವದೇಶೀಯರಿಂದ ನಡೆಸಲ್ಪಡುವುದು. ಆದ್ದರಿಂದಲೇ ಅವರು ತಮ್ಮ ರೈತರ ವಿಷಯದಲ್ಲಿ ಸ್ವಲ್ಪವಾದರೂ ಕರುಣದಿಂದ ಉಪಕಾರಮಾಡಿದಾರೆ. ಬ್ರಿಟಿಷ್ ತೀಮೆಯಲ್ಲಿ ಸರ್ಕಾರವು ಅನ್ಯದೇಶೀಯರಿಂದ ನಡೆಸಲ್ಪಡುತ್ತಿದೆ ರೈತರಿಗೂ ಇವರಿಗೂ ಸಂಬಂಧವೇನಿದೆ? ಆದ್ದರಿಂದಲೆ ಇವರು ಈ ಕಷ್ಟಕಾಲದಲ್ಲಿ ಏನನ್ನೂ ನೋಡದೆ ಇದಾರೆ

ಇನ್ನು ಮುಂದೆ ಯಾದರೂ ಇವರು ತಮ್ಮ ಕ್ರೂರವಾದ ಪದ್ಧತಿಗಳನ್ನು ಬದಲಾಯಿಸಿ, ಜನರಿಗೆ ಸಂತಾಪದ ರೀತಿಯಲ್ಲಿ ಆಡಳಿತವನ್ನು ನಡೆಸಲಾರ? ಸರ್ಕಾರದವರು ಇದನ್ನುಮಾಡದಿದ್ದರೆ ಇನ್ನು ಯಾರು ಮಾಡುವರು? ಯಾವ ಸರ್ಕಾರನೂ ಪ್ರಜೆಗಳ ಹಿತಕ್ಕೋಸ್ಕರವಾಗಿಯೇ ಇರತಕ್ಕದ್ದು ಎಂಬ ನೀತಿಯನ್ನು ಇಂಗ್ಲೀಷರು ಸ್ಥಿರಪಡಿಸಿರುವಾಗ, ಇಂಡಿಯಾದೇಶದಲ್ಲಿ ಮಾತ್ರ ಇದನ್ನು ಆಚರಣೆಯಲ್ಲಿ ತರುವುದಕ್ಕೆ ಏನು ತೊಂದರೆ ಇದ್ದೀತು? ಸರ್ಕಾರವನ್ನು ಪ್ರಜೆಗಳಿಗೆ ಹಿತವಾಗಿರುವಂತೆ ಮಾಡಬೇಕೆಂದು ಈಗ ಕೆಲವು ಪ್ರಜಾಪಕ್ಷವಾದ ಬದಲಾವಣೆಗಳನ್ನು ಲಾರ್ಡ್ ಮೂರ್ಲೆ, ಮಿಂಟೋ ಸಾಹೇಬರುಗಳು ಮಾಡುತ್ತಿದಾ ಇದರಿಂದಲಾದರೂ ಜನರಿಗೆ ಸ್ವಲ್ಪ ಉಪಕಾರವಾಗಿ, ಈಗಿನ ಕ್ರೂರವಾದ ಪದ್ಧತಿಗಳು ಬದಲಾಯಿಸಲ್ಪಡುತ್ತವೆಂದು ಕೋರ್ಟುತ್ತೇವೆ

ತುರ್ಕೀ ದೇಶದ ಸೈನಾಯಕತ್ವ.

ತುರ್ಕೀ ರಾಜ್ಯದಲ್ಲಿ ಜನರೆಲ್ಲಾ ಸೇರಿ ಬಹು ಉಪಾಯದಿಂದ ರಾಜ್ಯಭಾರಕ್ಕೆ ಮನವನ್ನು ಬದಲಾಯಿಸಿ ಮುಂದೆ ಸರ್ಕಾರದ ವಿಶಿಷ್ಟ ಆಡಳಿತವೂ ಜನರಿಂದಲೇ ನಡೆಯುವಂತೆ ಮಾಡಿಕೊಂಡರು ಈ ಪ್ರಯತ್ನದಲ್ಲಿ ಯಾವ ವಿಧವಾದತೊಂದರೆಯೂ ಉಂಟಾಗಲಿಲ್ಲ, ಪಟ್ಟಿಗೆಯಲ್ಲಿ ಹೆಸರಿಲ್ಲದ ಸರ್ಕಾರದ ಪದ್ಧತಿಯನ್ನು ಜನರೇ ಸೇರಿ ಬದಲಾಯಿಸಿಕೊಂಡದ್ದು ಅತ್ಯಂತ ಆಶ್ಚರ್ಯವಾದುದ್ದು. ಮತ್ತು ಸಂತೋಷಕರವಾದುದ್ದು. ಇತರದೇಶಗಳಲ್ಲಾದರೆ ಎಷ್ಟೋಯುದ್ಧವೂ ಪ್ರಾಣನಾಶವೂ ಆಗುತಿತ್ತು

ಆದರೆ ಈಚೆಗೆ ಆಡಳಿತದಲ್ಲಿ ಸ್ವಲ್ಪತೊಂದರೆ ಉಂಟಾಗಿದೆಯೆಂದು ಗೊತ್ತಾಗುತ್ತದೆ ಅಲ್ಲಿ ಸಹ ರಾಜ್ಯದಲ್ಲಿ ಎರಡು ಪಕ್ಷದವರು ಪರಸ್ಪರದ್ವೇಷದಿಂದ ಕಾರ್ಯಕ್ಕೆ ವಿಘ್ನವನ್ನುಂಟುಮಾಡುತ್ತಿದಾರೆ. ಈಗ ಎರಡುಸಾರಿ ಸರ್ಕಾರವನ್ನು ನಡೆಸುವ ಮಂತ್ರಿಗಳು ಬದಲಾಯಿಸಲ್ಪಟ್ಟರು ಒಂದು ಪಕ್ಷದವರು ಮತ್ತೊಬ್ಬರನ್ನು ಕೊಲ್ಲುವದಕ್ಕೆ ಪ್ರಯತ್ನವನ್ನು ಮಾಡಿದಾರೆ. ಆರ್ಮೀನಿಯಾ ದೇಶದಲ್ಲಿ ಆನೇಕರನ್ನು ಕೊಂದು ಹಾಕಿದರೆಂದು ವೃತ್ತಾಂತಬಂದಿದೆ. ಯುರೋಪಿಯರ್ ದೇಶದವರೆಲ್ಲಾ ತಮ್ಮ ಜನರನ್ನು ಸಂರಕ್ಷಿಸುವುದಕ್ಕೆ ಸೈನ್ಯಬಲವನ್ನು ಕಳುಹಿಸಿದಾರೆ. ಈ ಸಂದರ್ಭದಲ್ಲಿ ಸರ್ಕಾರದವರು ಜನರಲ್ಲಿ ಹತೆಯೆಟಿಯನ್ನು ತರುವುದಕ್ಕೆ ಬಹು ವಿಧವಾಗಿ ಸಾಹಸವನ್ನು ಮಾಡುತ್ತಿರುವರು ಇದರ ಫಲ ಏನಾಗುವುದೋ ಮುಂದೆ ತಿಳಿಯಬೇಕು

ಇದರಿಂದ ಮುಖ್ಯವಾಗಿ ನಮಗೆ ತೋರುವುದೇನೆಂದರೆ, ಯಾವ ರಾಜ್ಯದಲ್ಲೇ ಆಗಲಿ ಜನರನ್ನ ಕೆಣಕಿ ಅವರಿಗೆ ಅಧಿಕಾರ ಬರುವಂತೆ ಮಾಡುವುದು ಸುಲಭ ಸಾಧ್ಯವಾದುದ್ದು ಆದರೆ ಜನರಿಗೆ ಬಲ ಬಂದಮೇಲೆ ಅವರನ್ನು ಹತೋಟಿಯಲ್ಲಿಟ್ಟು, ಪರಸ್ಪರ ವೈಷಮ್ಯವಿಲ್ಲದೆ ನ್ಯಾಯವಾದ ರೀತಿಯಿಂದ ಇರುವಂತೆ ಮಾಡುವುದು ಬಹು ಕಷ್ಟಕಾರ್ಯವಾಗಿದೆ ಯುರೋಪಿಯರ್ ದೇಶಗಳೆಲ್ಲಾ ಈ ಅನುಭವವು ತೋರಿಬಂದಿದೆ ಪ್ರೆಂಚ್ ದೇಶದಲ್ಲಿ “ರೆವೊಲ್ಯೂಷ-” ಎಂಬ ಸರ್ಕಾರ ಬದಲಾವಣೆಯು ಅತ್ಯಂತ ಘೋರವಾದ ರೀತಿಯಲ್ಲಿ ನಡೆಯಿತು ಪ್ರಜಾಕಂಟಕನಾದಥೆರೆಯನ್ನು ಪಟ್ಟದಿಂದ ತಳ್ಳಿ ಅವನನ್ನಾ ನಕ್ಕೆ ಜನರು ಬಂದರು ಆದರೆ ಜನಸಾಮಾನ್ಯದಲ್ಲಿ ಅನೇಕ ಪಂಗಡಗಳಾಗಿ, ಬಬ್ಬರನ್ನು ಮತ್ತೊಬ್ಬರು ಇನ್ನೂ ಹೆಚ್ಚಾಗಿ ಹಿಂಸೆಪಡಿಸಲಾರಂಭಿಸಿದರು ಮೊದಲಿದ್ದ ಪ್ರಜ ಹಿಂಸಕನಾದ ಘೋರೆಯೇಮೇಲು ಎಂಬಂತೆ ಪ್ರಜೆಗಳಲ್ಲಿ ದ್ವಂದ್ವಯುದ್ಧ ಪ್ರಬಲೆಯಿತ್ತು ಇದೇ ರೀತಿಯಲ್ಲಿ ಇತರ ದೇಶಗಳಲ್ಲೂ ನಡೆಯುತು ಇದನ್ನು ಹ್ಯಾಗಾದರೂ ತಪ್ಪಿಸಬೇಕೆಂದು ತುರ್ಕೀ ದೇಶದ “ರಿಪಾರಂ” ಪಂಗಡದವರು ಬಹು ಪ್ರಯತ್ನವನ್ನುಮಾಡಿ ಜಯಹೊಂದಿದರು. ಇದರ ಫಲವು ಈಗ ತೋರಿದೆ. ಘೋರಯುದ್ಧವೂ, ಪ್ರಯಾನಾತಪವೂ ಆಗಲು ಪ್ರಾರಂಭವಾಗಿದೆ. ಇದು ಹೀಗೇ ಬೆಳೆಯುತ್ತಾ ಆರಾಜ್ಯದಲ್ಲಿ ಜನರಿಗೆ ಅತ್ಯಂತ ದುಃಖವಾಗುವುದೋ, “ಧವಾ ಅವರು ಬುದ್ಧಿ ನಂತರಾಗಿ ತಮಲ್ಲೇ ಸಮಾಧಾನವಿಡಿಕೊಂಡು ಸೌಖ್ಯವಾಗಿರುವರೋ ಸಂಶಯವಾಗಿದೆ

ಈ ವಿಷಯದಲ್ಲಿ ಅನ್ಯದೇಶೀಯರು ಒಂದು ಮಾಡುತ್ತಿರುವ ಪಿತೂರಿಯು ನಾನಾ ವಿಧವಾಗಿರುವುದು ಮೊದಲೇ ಜನರಲ್ಲಿ ಅನೇಕ ವಿಧವಾದ ವ್ಯತ್ಯಾಸಗಳುಂಟಾಗಿ, ಪಂಗಡಗಳಾಗಿ, ಪರಸ್ಪರ ದ್ವೇಷದಿಂದ ಹೊಡೆದಾಡುವದು ಮನುಷ್ಯ ಸ್ವಭಾವವಾಗಿದೆ ಆದರೆ ಕೆಲವು ಸಂದರ್ಭದಲ್ಲಿ ಸತ್‌ಪ್ರೇರಣೆಯಿಂದ ಇವರೆಲ್ಲಾ ಸೇರಿ ಒಂದು ಒಳ್ಳೇ ಪ್ರಯತ್ನವನ್ನು ಮಾಡಬಹುದು ಅದನ್ನುನೋಡಿ ಸಹಿಸಲಾರದೆ ಕೆಲವು ನೆರೆಹೊರೆಯವರು ಅಸೂಯೆ ಭಾವದಿಂದ ಇವರಿಗೆ ದುಷ್ಪ್ರೇರಣೆಯನ್ನಿವ್ವತಿ, ಅವರನ್ನು ದುಃಖಕ್ಕೆ ಗುರಿಮಾಡುವುದುಂಟು ಆದೇರೀತಿಯಲ್ಲಿಯೆ ಸಾರೂಪ್ಯರ್ ರಾಜ್ಯದವರ ಸಹ ತುರ್ಕೀದೇಶಕ್ಕೆಬಂದು ಪಿತೂರಿಮಾಡಿದ್ದರೆ ಇರಬಹುದೇ? ಈ ಅನ್ಯದೇಶೀಯರು ತಮ್ಮ ಸ್ವಪ್ರಯೋಜನಕ್ಕಾಗಿ ಇತರ ಜನಗಳನ್ನು ದುಃಖಪಡಿಸಿ, ತಮ್ಮ ಆಧಿಕ್ಯವನ್ನು ಸಾಧಿಸುವುದಕ್ಕೆ ಯಾವ ಕೆಲಸಕ್ಕೂ ಹಿಂಜರಿಯುವುದಿಲ್ಲವೆಂಬ ಒಂದುಮಾತು ಜಗಳಕ್ಕೆ ನೆರೆಹೊರೆಯವರಲ್ಲಾ ಒಗ್ಗೂಡಿದರೆ ಅದರಿಂದ ಆಪತ್ತಿನವ-ನಿಂದವನೆನುವವರಿಗೆ ತೊಂದರೆಯಲ್ಲದೇ ಈಗ ತುರ್ಕೀ-ದೇಶದಲ್ಲಿ ಆಡಳಿತವನ್ನು ಅನಾಹತವು ಕೂಡ ಇದೇಕಾರಣದಿಂದ ಒಂದಲ್ಲಿಂದ ನಾವು ಜಾಗ್ರತೆಯಾಗಿರಬೇಕು. ಮೊದಲು ಯಾವಸಂಶಯವೂ ಇಲ್ಲದೆ ಇವರು ತಮ್ಮ ರಾಜ್ಯದ ಆಡಳಿತವನ್ನು ಕೈಮಪಡಿಸಿಕೊಂಡ 8 ತಿಂಗಳಲ್ಲಾಲೆ ತೆಂದರೆಯು ಪ್ರಾಪ್ತವಾಗುವುದಕ್ಕೆ ಇತರರ ದುಷ್ಪ್ರೇರಣೆಯಲ್ಲವೆ ಕಾರಣವಿರಬಹುದು. ಆನ್ಯರನ್ನು ದೂರವಾಗಿಟ್ಟಿರುವ ಆದೇಶದ ಕ್ಷೇಮವನ್ನುಸ್ಥಿರವಾಗುವುದು

ಮಾಧವರಾಯರ ನಿವೃತ್ತಿ

—o—

ಮೆ॥ ಮಾಧವರಾಯರು ವ್ಯವಸಾರು ಸಂಸ್ಥಾನದ ದಿವಾನ್ ಪದವಿಯಲ್ಲಿದ್ದ ಮೂರ ವರ್ಷಗಳಲ್ಲಿ ಪ್ರಜೆಗಳಿಗೆ ಅಸಮಾಧಾನ ಉಂಟಾಗುವಂತೆ ಎಷ್ಟೋಪೊಸ ಏರ್ಪಾಡುಗಳನ್ನೂ ಹೊಸಹೊಸ ಕಾನೂನು ಗಳನ್ನೂ ಮಾಡಿದರು. ವೃತ್ತ ಪತ್ರಿಕೆಗಳ ಬಾಯನ್ನು ಮುಚ್ಚಿಸಿದರು, ಮೈಸೂರು ದೇಶೀಯರು ಇವರನ್ನು ಚಿರಕಾಲ ಸ್ಮರಿಸುವರು ಮೆ ಮಾಧವರಾಯರು ಕೆಲಸದಿಂದ ನಿವೃತ್ತರಾಗಿ ವಿಶ್ರಾಂತಿಯನ್ನು ಹೊಂದುವ ಸಮಯದಲ್ಲೂ ಸಹ ಈ ಕ್ರೂರ ಕಾನೂನಿಗೆ ಸಂಬಂಧಪಡುವ ವಿಷಯಗಳನ್ನ ಕುರಿತು ಹುಕುಂ ಜಾರಿ ಮಾಡಬೇಕಾದ ಸಂದರ್ಭ ಒದಗಿತು ಕಳೆದ ನವಂಬರು ೫೦ಗಳಲ್ಲಿ ರಾಜಧಾನಿಯಲ್ಲಿರುವ “ಜೆನರಲ್ ಏಜೆನ್ಸಿ” ಎಂಬ ಕಂಪನಿಯ ಯಜಮಾನರಾದ ವೆ। ರಾಮಚಂದ್ರರಾವ್ ಎಂಬ ಗೃಹಸ್ಥರೊಬ್ಬರು “ಮೈಸೂರು ಪೇಟ್ರಿಯಟ್” ಎಂಬ ಅಭಿಧಾನದಿಂದ, ಇಂಗ್ಲೀಷು ಮತ್ತು ಕನ್ನಡ ಭಾಷೆಯಲ್ಲಿ ಒಂದು ವಾರಪತ್ರಿಕೆಯನ್ನು ಹೊರಡಿಸಲು ಉದ್ದೇಶಿಸಿ, ವೃತ್ತಪತ್ರಿಕೆಗಳ ಕಾನೂನು ಕೋರುವ ಅಪ್ಪಣೆಯನ್ನು ಪಡೆಯಲು ಸರಕಾರಕ್ಕೆ ಅರ್ಜಿಯನ್ನ ಹಾಕಿದರು ಮೂರು ನಾಲ್ಕು ವಾರಗಳು ಕಳೆದ ನಂತರ ಮೆ॥ ಚೊಕಪ್ಪ ಹೆಬ್ಬಾರ್ ಎಂಬ ಇನ್ನೊಬ್ಬ ಗೃಹಸ್ಥರು “ಮೈಸೂರು ವಿಹಾರ” ಎಂಬ ಅಭಿಧಾನದಿಂದ ಒಂದು ವಾರಪತ್ರಿಕೆಯನ್ನು ಹೊರಡಿಸಲು ಉದ್ದೇಶಿಸಿ, ವೃತ್ತಪತ್ರಿಕೆಗಳ ಕಾನೂನು ಕೋರ ವಂ,ಸರಕಾರದವರನ್ನು ಅಪ್ಪಣೆಕೊಡಬೇಕೆಂದು ಪ್ರಾರ್ಥಿಸಿದರು ಈ ಎರಡು ಅರ್ಜಿಗಳನ್ನೂ ಪೈಸಲು ಮಾಡದೆ, ಮೆ॥ ಮಾಧವರಾಯರು, ತಮ್ಮ ಕೆಲಸದ ವಾಯಿದೆಯು ಮುಗಿಯುವ ಕಡೇದಿನದವ-ಗೂ ಹಾಗೆಯೇ ಇಟ್ಟಿದ್ದರು ಕೆಲಸವನ್ನು ಒಪ್ಪಿಸಿಹೋಗುವದಿನ ಇದರಡಿ ಪ್ರಕಟಿಸುವ ಹುಕುಂ ಅನ್ನ ಕೊಟ್ಟುಹೋದರು —

“ಸರ್ಕಾರದವರು ವಿಚಾರಿಸಿದ್ದಲ್ಲಿ ಅರ್ಜಿದಾರ್ ರಾಮಚಂದ್ರ ರಾವ್ 20 ವರ್ಷ ವಯಸ್ಸುಳ್ಳ ಒಬ್ಬ ತರುಣಸ್ಥನೆಂದು ಸರಕಾರಕ್ಕೆ ತಿಳಿದು ಬರುವುದು. ಈತನು ವಿದ್ಯಾತತ್ವರನಾಗುವನಲ್ಲ ಗೌರವವಾದ ಒಂದು ವೃತ್ತಪತ್ರಿಕೆಯನ್ನು ನಡೆಸಲು ಸಾಮರ್ಥ್ಯಸಾಲದು ಇದಲ್ಲದೆ ಈತನು ಪತ್ರಿಕೆಗೆ ತನ್ನ ಹೆಸರನ್ನು ಕಡಕೊಟ್ಟಿರುವನೆಂದು ಸಂಸ್ಕಾರಕ್ಕೆ ತಿಳಿದು ಬರುವುದು ತಾತ್ಪರ್ಯವೆಲ್ಲಿದ್ದು ಕೊಂಡು ಈತನನ್ನು ಮುಂದಿಟ್ಟುಕೊಂಡು ಕೆಲವರು ಈ ಕಾರ್ಯವನ್ನು ನಡೆಸಲು ಉದ್ದೇಶಿಸಿರುವಂತೆ ತೋರುತ್ತದೆ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಯೋಗ್ಯತಾಸಾಲದ ತರುಣರು ಪತ್ರಿಕಾ ಸಂಪಾದಕರಾಗಲು ಕೋರುವ ಸಂದರ್ಭಗಳಲ್ಲಿ, ಸರಕಾರದವರು ಅಂಥವರ ಅರ್ಜಿಗಳನ್ನು ತಿರಸ್ಕರಿಸಬಹುದಾದ ಹಕ್ಕನ್ನು ಉಪಯೋಗಿಸುವುದು ಅವಶ್ಯಕವಾಗಿರುತ್ತದೆ ಆದುದರಿಂದ ಅರ್ಜಿದಾ

ಇನ್ನೊಬ್ಬ ಅರ್ಜೀದಾರನ ವಿಷಯದಲ್ಲಿ ಕೊಟ್ಟಿರುವ ಹುಕ್ಕುಂ ಏನಂದರೆ:— "ಸರಕಾರದವರು ವಿಚಾರಿಸಿದ್ದಲ್ಲಿ, ಅರ್ಜೀದಾರನು ಹುಡುಗನೆಂದು ಕಂಡು ಬರುತ್ತದೆ. ಅರ್ಜೀದಾರನ ವಯಸ್ಸು ೨೦ ವರ್ಷಗಳೊಳಗಾಗಿಯೇ ಇರುವುದು ಮೆಟ್ರಿಕ್ಯುಲೇಶನ್ ಕ್ಲಾಸಿನಲ್ಲಿ ಓದುತ್ತಿದ್ದ ಒಬ್ಬ ವಿದ್ಯಾರ್ಥಿಯು. ಈತನು ಪತ್ರಿಕೆಗೆ ತನ್ನ ಹೆಸರನ್ನು ಸುಮ್ಮನೆ ಕಡಕೊಟ್ಟಿರುವನೆಂದೂ, ನಿಜವಾಗಿಯೂ ಪತ್ರಿಕೆಯನ್ನು ನಡಿಸಬೇಕೆಂದ ಕೂಡಲೆ ಸರಕಾರದವರು, ಪರೀಕ್ಷೆಯ ಮಧ್ಯದಲ್ಲಿ ನಿಂತು ಕೊಂಡು ಕಾರ್ಯಗಳನ್ನು ನಡೆಸಬೇಕೆಂದು ಅಪೇಕ್ಷೆ ಪಡುತ್ತಿರುವವನಾಗಿಯೂ ಸರಕಾರಕ್ಕೆ ತಿಳಿದು ಬರುವದರಿಂದ ಅರ್ಜೀದಾರನು ಕೋರುವ ಆಸ್ಪದೆಯನ್ನು ಕೊಡಲು ಸರಕಾರದವರು ಒಪ್ಪುವದಿಲ್ಲ."

ಮೇಲ್ಕಂಡ ಎರಡು ಹುಕುಂಗಳನ್ನೂ ಜೆನ್ನಾಗಿ ಓದಿನೋಡಿದಂ, ಸರಕಾರದವರು ಅಂಜುವುದು, ಪರದೆಯ ಮರೆಯಲ್ಲಿನಿಂತು ಕೆಲಸಗಳನ್ನು ನಡೆಸುವವರನ್ನು ಕಂಡು ಮೇ। ಮಾಧವರಾಯರ ಸರಕಾರಕ್ಕೆ ವಿರೋಧಿಗಳಾಗಿ ಕೆಲವರು ನಿಂತಿದ್ದರಿಂದ, ಹೊಸದಾಗಿ ಪ್ರಕಟವಾಗಿ ಪತ್ರಿಕೆಗಳನ್ನು ಹೊರಡಿಸುವ ಉದ್ದೇಶದಿಂದ ಯಾರು ಅಪ್ಪಣೆಯನ್ನು ಕೇಳಿದರೂ, ಅಪ್ಪಣೆಯನ್ನು ಕೇಳುವವರ ಹಿಂದೆ ತಮ್ಮ ಶತೃಗಳು ಇದ್ದುಕೊಂಡು, ಪತ್ರಿಕೆಯನ್ನು ಹೊರಡಿಸುವೇಕೆಂದು ಇಚ್ಛೈಸುವಂಥ ಯೋಚನೆಯೂ ನೀತಿಯೂ ಮೇ ಮಾಧವರಾಯರ ಬುದ್ಧಿಗೆ ಹೊಳೆಯುವ ತಿದ್ದಂತೆ ಕಾಣುವುದು. ರಾಜಕಾರ್ಯವನ್ನು ನಿರ್ವಾಹನೂಡುವ ಅಧಿಕಾರಿಗೆ ಈ ನೀತಿಗಿಂತಲೂ ಕೇವಲವಾದ ದುಸ್ಥಿತಿಯು ಮತ್ಯಾವುದು ತಾನೇ ಇರುತ್ತದು?

ಒಬ್ಬ ಅರ್ಜೀದಾರರ ವಿಷಯದಲ್ಲಿ ಸರಕಾರದವರು ವಿದ್ಯಾತತ್ಪರನಲ್ಲನೆಂದು ಹೇಳಿರುವರು. ವೃತ್ತ ಪತ್ರಿಕೆಗಳ ಕಾನೂನನ್ನು ಜಾರಿಗೆತರುವಂದು ಕೇಳಿದಾಗ, ಸರಕಾರದವರು ಪತ್ರಿಕೆಗೆ ಸಂಪಾದಕರಾಗಲು ಕೋರುವವರನ್ನು, ಅವರ ವಿದ್ಯೆಯನ್ನು ಕುರಿತು ಪರೀಕ್ಷೆಯನ್ನು ನಡೆಸುವಂದು ತಿಳಿದಿರಲಿಲ್ಲ. ಪತ್ರಿಕಾ ಸಂಪಾದಕರಿಗೆ ಯೋಗ್ಯತಾ ಪತ್ರವನ್ನು ಕೊಡಲು ಮೈಸೂರು ಸರಕಾರದವರು, ಯೋಗ್ಯತಾ ಪರೀಕ್ಷೆಯನ್ನು ಯಾವ ರೀತಿಯಲ್ಲಿ ನಡೆಸಿದಂಬ ಅಂಶವು ತಿಳಿದುಕೊಳ್ಳಲು ಬಹಳ ಸ್ವಾರಸ್ಯವಾಗಿರುತ್ತದಲ್ಲವೆ? ವೃತ್ತ ಪತ್ರಿಕೆಗಳ ಕಾನೂನನ್ನು ಜಾರಿಗೆ ತರುವುದರಲ್ಲಿ ಆದಕ್ಕೆ ಸಂಬಂದಪಡುವ ನಿಬಂಧನೆಗಳನ್ನು ಅನವಶ್ಯಕವಾಗಿ ಯಾವ ಪತ್ರಿಕೆಯ ವಿಷಯದಲ್ಲೂ ವಿಳಂಬವಾಗದಂತೆ ಭರವಸವನ್ನು ಕೊಟ್ಟರು. ಈ ಅಂಶವು ಈಗ ಅಧಿಕಾರಿಗಳ ನೆನಪಿನಲ್ಲಿಲ್ಲ ದಿರುವಂತೆ ತೋರುವುದು ಹೊಸದಾಗಿ ಪತ್ರಿಕೆಗಳನ್ನು ಹೊರಡಿಸಲು ಕೋರುವ ಅರ್ಜೀಗಳನ್ನು ಸರಕಾರದವರು ತಿರಸ್ಕರಿಸುತ್ತಿರುವುದನ್ನು ನೋಡಿದರೆ, ಕಾನೂನನ್ನು ಮಾಡಿರುವುದು ನಿಶ್ಚಯವಾಗಿ ಕಂಡದನ್ನು ಬಯಿಯುವ ವೃತ್ತ ಪತ್ರಿಕೆಗಳು ಇಲ್ಲದಂತೆ ಮಾಡವು ಉದ್ದೇಶದಿಂದಲೆಂದು ಊಹಿಸಬೇಕಾಗಿದೆ.

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ

—.o.—

ಮೈಸೂರು ಶೀಮೆಯಲ್ಲಿ ಈವರ್ಷವೂ ಕೂಡ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಮಾಡಿ ಇಬ್ಬರಿಗೆ ಅಸಿಸ್ಟೆಂಟ್ ಕಮಿಷನರ ಕೆಲಸವನ್ನು ಕೊಡಬೇಕೆಂದು ಸರ್ಕಾರದವರು ಗೊತ್ತು ಮಾಡಿದಾರೆ ಈ ವಿಷಯದಲ್ಲಿ ಜನರಿಗೆ ಅತ್ಯಂತ ಅಸಮಾಧಾನವುಂಟು. ಯಾಕಂದರೆ ರಾಜ್ಯದಲ್ಲಿ ಅಸಿಸ್ಟೆಂಟ್ ಕಮಿಷನರ ಸಂಖ್ಯೆಯು ಈಗಲೇ ಬಹಳ ಹೆಚ್ಚಾಗಿರುವುದು ಪರೀಕ್ಷೆಗಳನ್ನು ಮಾಡಿ ಕೆಲಸಕ್ಕೆ ಬಂದವರು ಚಿಕ್ಕ ಹುಡುಗರು ಇವರಿಗೆ ದೇಶದ ಅನುಭವಸಾಲದೆ ಸರಕಾರದ ಕೆಲಸವನ್ನು ಜನರಿಗೆ ಹಿತವಾಗಿಮಾಡಲಾರರು. ಇವರಿಗೆ ಗರ್ವ ಹೆಚ್ಚು, ವಿಶ್ವಾಸ ಪ್ರಾಸಲದು. ಇದರಿಂದ ರಾಜ್ಯದಲ್ಲಿ ಅತ್ಯಂತ ಅಸಮಾಧಾನ ಉಂಟಾಗುವುದು ಹೀಗೆ ಪರೀಕ್ಷೆಗಳನ್ನು ಮಾಡಬೇಕಾದರೆ ಮೈಸೂರುವೀಮೆಯಲ್ಲಿ ಅನೇಕ ವಿದ್ಯಾವಂತರಿರುವರು ಇವರಲ್ಲಿ ಪರೀಕ್ಷೆಯನ್ನುಮಾಡಿ ಗಟ್ಟಿಗರನ್ನು ಚುನಾಯಿಸಿ ಕೆಲಸಕ್ಕೆ ನಿಯಮಿಸುವುದು ಉತ್ತಮವಾಗಿದೆ. ಮದ್ರಾಸ್ ಮೊದಲಾದ ಬ್ರಿಟಿಷ್ ಶೀಮೆಯಿಂದ ಬರತಕ್ಕವರನ್ನು ಕೆಲಸಕ್ಕೆವಿಶೇಷವಾಗಿ ನೇಮಿಸಿದರೆ, ದೇಶೀಯರಿಗೆ ಅವಕಾಶವಿರುವುದಿಲ್ಲ. ಈಕಾರಣದಿಂದ ಈ ಪರೀಕ್ಷೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂತಲೂ ಅಥವಾ ದೇಶೀಯರಿಗೆ ಮಾತ್ರ ನಡೆಸಬೇಕೆಂದೂ ಜನರು ಕೇಳುವುದು ಬಹುನ್ಯಾಯವಾಗಿದೆ

ಪ್ರತಿಯೊಂದು ಮನೆಯಲ್ಲಾಸಹ, ಮನೆಯಲ್ಲಿರುವವರು ತಮ್ಮ ತಮ್ಮ ಕಾರ್ಯಗಳನ್ನು ಮಾಡಿಕೊಂಡು, ಇತರರ ಸಂಪರ್ಕವಿಲ್ಲದೆ ಇರಬೇಕಾದದ್ದು ಹ್ಯಾಗೆ ಸಹಜವಾಗಿದೆಯೋ, ಆದೇರೀತಿಯಲ್ಲಿ ಪ್ರತಿಯೊಂದು ರಾಜ್ಯದಲ್ಲಾಸಹ, ಆಯಾ ರಾಜ್ಯದವರು ತಮ್ಮತಮ್ಮ ದವನೂ ಕೂಡ ತನ್ನಮನೆಯನ್ನು ಇತರರಿಗೆ ಬಿಟ್ಟುಕೊಡಬಾರದು ತನಗೆ ತಿಳಿಯದ ಸಂಗತಿಗಳನ್ನು ಅನ್ಯರಿಂದಕೇಳಿ ತಿಳಿದುಕೊಂಡು ತಾನೇ ಅನುಭವವನ್ನು ಸಂಪಾದಿಸಬೇಕೇ ಹೊರತು, ತನ್ನ ಸಂಸಾರವನ್ನು ಅನ್ಯರ ವಶವಾಡಬಾರದು ಇದೇರೀತಿಯಲ್ಲಿ ಸಹ ಮೈಸೂರು ಸಂಸ್ಥಾನದ ಆಡಳಿತವನ್ನು ಈಗ ಮೈಸೂರುದೇಶೀಯರ ಹಿತೋಪಯನ್ನುತ್ತಿಪ್ಪು, ಮದರಾಸ್ ಪ್ರಾಂತ್ಯದಿಂದ ಒಂದು ಸ್ಥಿರವಾಗಿ ನಿಂತಿರುವ ಅಧಿಕಾರಿಗಳಿಂದಲೇ ನಡೆಸಲ್ಪಡುತ್ತಿರುವುದು. ಇದು ರಾಜ್ಯಧರ್ಮಕ್ಕೆ ವಿರೋಧವಾಗಿದೆ ಸಿವಿಲ್ಸರ್ವಿಸ್ ಪರೀಕ್ಷೆಯನ್ನು ಅನ್ಯರಿಗೆ ಉಪಯೋಗವಾಗಿ ಮಾಡಿರುವುದರಿಂದ ಪ್ರತಿ ಒಂದು ಪರೀಕ್ಷೆಯಲ್ಲೂ ಸಹ ಒಬ್ಬರಾದರೂ ಮದರಾಸಿನವರು ಕೆಲಸಕ್ಕೆ ಬರುವರು ಇದರ ವಿಷಯದಲ್ಲಿ ಜನರ ಅಪೇಕ್ಷಣೆಯು ನ್ಯಾಯವಾಗಿದೆ.

ಇಂಗ್ಲಿಂಡ್, ಜರ್ಮನೀ, ಮೊದಲಾದ ಪಶ್ಚಿಮರಾಜ್ಯಗಳಲ್ಲಿ ಸರಕಾರದ ಆಡಳಿತವು ಜನರ ಅಭಿಪ್ರಾಯದಂತೆಯೇ. ಜನರ ಪ್ರತಿಧ್ವನಿಗಳಿಂದ ನಡಿಸಲ್ಪಡುತ್ತಿರುವುದು ಆದರಂತೆಯೇ ಮೈಸೂರು ಶೀಮೆಯ ಸರ್ಕಾರವೂಸಹ ಪ್ರಜಾಪ್ರತಿನಿಧಿಗಳಿಂದಲೇ ನಡಿಸಲ್ಪಡುತ್ತಿದ್ದರೆ ಆಗ ಸರಕಾರದ ಅಧಿಕಾರಕ್ಕೆ ಅನ್ಯದೇಶೀಯರು ಬಂದರೂ ವಿಶೇಷ ಬಾಧಕವಾಗುತ್ತದಿಲ್ಲ ಯಾಕಂದರೆ ಈ ಅಧೀನಗಲ್ಲಿರುವ (Subordinate positions) ಅಸಿಸ್ಟೆಂಟ್ ಕಮೀಷನರು ಜನರ ಅಭಿಪ್ರಾಯಕ್ಕೂ ಆಜ್ಞೆಗೂ ಒಳಪಟ್ಟಿರುವರು. ಆದರೆ ಈಗಿನ ಮೈಸೂರು ಸರ್ಕಾರಪ್ರಜನರಅಧಿಕಾರಕ್ಕೆ ಒಳಪಟ್ಟಿಲ್ಲವಾದುದರಿಂದ, ಅಧಿಕಾರಿಗಳ ಬಲವು ಹೆಚ್ಚಾಗಿದೆ. ಇವರು ಮಾಡುವುದೇ ಆಡಳಿತ, ಇವರು ಹೇಳಿದ್ದೇ ಸಿವಿ. ಈರೀತಿಯಲ್ಲಿರುವುದು. ಇಂತಹಸಂದರ್ಭದಲ್ಲಿ ಅಧಿಕಾರಿಗಳೆಲ್ಲರೂ ದೇಶೀಯರೇ ಆಗಿದ್ದರೆ ಅವರು ಸ್ವದೇಶ ಸ್ವಜನವೆಂಬ ಅಭಿಮಾನದಿಂದಲಾದರೂ ಜನರವಿಷಯದಲ್ಲಿ ವಿಶ್ವಾಸವು ಳ್ಳವರಾಗಿ, ನ್ಯಾಯವಾಗಿ ಸರ್ಕಾರದಕಾರ್ಯಗಳನ್ನು ನಡೆಸಲಿಕ್ಕೆ ಅನುಕೂಲವಾಗಿರುವುದು ಇದಕ್ಕಾಗಿ ಬದಲಾಗಿ ಮದರಾಸ್ ಶೀಮೆಯಿಂದ ಬಂದವರನ್ನು ಅಧಿಕಾರಕ್ಕೆ ನೇರಿಸಿದರೆ ಅವರಿಗೆ ದೇಶವಾಂಛಲ್ಯವೆ ಅಜ್ಞೇನೂ ಇರುವುದಿ ದ್ದರಿಂದ ತಮ್ಮ ಸ್ವಂತಸೌಖ್ಯವನ್ನೇ ಹೆಚ್ಚಾಗಿಕೋರುವುದು ಸ್ವಭಾವವಾಗಿದೆ. ಈದಿನ ಅಸಿಸ್ಟೆಂಟ್ ಕಮೀಷನರಾಗುವರು ; ಕೊಂಚಕಾಲದಲ್ಲೇ ಡೆಪ್ಯುಕಮೀಷನರಾಗಿಯೂ, ಅನಂತರ ಕೌನ್ಸಿಲರಾಗಿಯೂ ಪದವಿಗೆ ಬರುವರು ಈ ಸಂದರ್ಭದಲ್ಲಿ ಜನರಿಗೆ ಅತ್ಯಂತ ತೊಂದರೆ ಉಂಟಾಗುವುದೆಂ ಬುದರಲ್ಲಿ ಸಂದೇಹವಿರುವುದಿಲ್ಲ.

ಆದ್ದರಿಂದ ಮೈಸೂರು ಸರ್ಕಾರದ ಅಧಿಕಾರಗಳಿಗೆ ಯೂರಾಪ್ ನಿಯಮಿಸಬೇಕೆಂಬ ವಿಷಯದಲ್ಲಿ ಸ್ವಜೆಗಳು ತಮ್ಮ ಅಭಿಪ್ರಾಯವನ್ನುಹೇಳುವುದು ಅತ್ಯವಶ್ಯಕವಾಗಿದೆ ಅದನ್ನು ಕೇಳುವುದುರಾಜರಿಗೆ ಅತ್ಯಂತ ಉಪಯೋಗವಾಗಿದೆ ಪ್ರಜೆಗಳ ಅಭಿಪ್ರಾಯಕ್ಕೆ ವಿರೋಧವಾಗಿ ಆಡಳಿತವನ್ನು ನಡೆಸುವುದು ರಾಜಧರ್ಮವೇ ಅಲ್ಲ ಅಂತಾ ಅಪೇಕ್ಷಣೀಯವಾದ ಏಪಾಚನ್ನು ಈಗಿನ ಸರ್ಕಾರದವರು ಮಾಡಲೇಬಾರದು ಇದಲ್ಲದೆ ಈಗ ಸರ್ಕಾರದ ಭಾರಿ ಅಧಿಕಾರಿಗಳು ಬದಲಾಯಿಸಲ್ಪಟ್ಟಿದಾರೆ. ಹಿಂದೆ ಇದ್ದ ದಿವಾಕ್ ಮಾಧವರಾಯರು ಕೆಲಸದಿಂದ ನಿವೃತ್ತರಾಗಿ ಮಾ। ಆನಂದರಾಯರು ಅವರ ಪದವಿಗೆ ಬಂದಿದಾರೆ. ಇವರು ಬಹು ಧರ್ಮಿಷ್ಟರೆಂದು ಹೆಸರನ್ನು ಪಡೆದಿರುವುದರಿಂದ ಮೇಲೆಹೇಳಿದ ಅಪೇಕ್ಷೇಪಣೆಗಳಿಗೆ ಅವಕಾಶಕೊಡುವುದು ಶೋಚನೀಯವಾದುದ್ದು. ಆದರೆ ಈವರ್ಷ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ನಡೆಸಲೇಬೇಕೆಂಬ ವಿಧಾಯಕವು ಹಿಂದಿನ ದಿವಾರ್ರು ಮಾಡಿದ್ದೆಂದು ಹೇಳುವರು ಸರ್ಕಾರವು ಬದಲಾಯಿಸಿದರೆ ಸರ್ಕಾರದ ಸದ್ದತಿಯು ಬದಲಾಯಿಸುವುದು ಸಾಧ್ಯವಲ್ಲವೆಂದು ಕೆಲವರು ಹೇಳುವರು ಇದುಸರಿಯಲ್ಲ ಸರ್ಕಾರಕ್ಕೆನ್ಯಾಯವಿಶೇಷವೆಯೂ, ಅನ್ಯಾಯವನಾಶನವೂ ಮುಖ್ಯವೇ ಹೊರತು, ಅವರು ಮಾಡಿದ್ದು ಇವರು ಮಾಡಿದ್ದು ಎಂಬ ಮರ್ಯಾದೆಗಳು ಮುಖ್ಯವಲ್ಲ ಪದ್ಧತಿ ಮರ್ಯಾದೆ, ಅನುಕೂಲ, (precedence, prestege and expediency) ಎಂಬ ದುರ್ವಚನಗಳಿಗೆ ಅಧೀನವಾಗದೆ ನ್ಯಾಯವನ್ನೇ ಗುರಿಯಿಟ್ಟು ರಾಜ್ಯದ ಆಡಳಿತವನ್ನು ನಡೆಸಬೇಕು. ಆದ್ದರಿಂದ ಹಿಂದಿನ ದಿವಾರ್ರುಮಾಡಿದ ಏಪರ್ಪಾಟುಗಳು ನ್ಯಾಯವಲ್ಲವೆಂದು ತೋರಿದರೆ ಅದ್ದನ್ನು ಈಗಿನವರು ಎಂದಿಗೂ ನಡೆಸಬಾರದು. ತಾವು ಅದನ್ನು ನಡೆಸಿದರೆ ತಮಗೂ ಅದು ನ್ಯಾಯವೆಂದು ತೋರಿದಂತೆ ಜನರಿಗೆ ತಿಳಿಯುವುದು. ಮನುಷ್ಯರಲ್ಲಿ ಅಜ್ಞಾನವಶದಿಂದಲೂ, ಪದ್ಧತಿಮೊದಲಾದ ಆಚಾರಬಲದಿಂದಲೂ, ದುಷ್ಟಅಭಿಪ್ರಾಯಗಳು (Superstitions) ಹ್ಯಾಗೆ ಹುಟ್ಟಿಸ್ಥಿರವಾಗಿ ನಿಂತು ದುಃಖಕ್ಕೆ ಕಾರಣವಾಗುವುದೋ ಹಾಗೆಯೇ ಸರ್ಕಾರದ ಅಧಿಕಾರಿಗಳಲ್ಲಿ ಸಹ ಕೆಲವೇಳೆ ರಾಜಕೀಯ ದುರಭಿಪ್ರಾಯಗಳು ಹುಟ್ಟಿ (political superstitions) ಬಹು ತೊಂದರೆಗಳನ್ನುಂಟುಮಾ ಡುವುದುಂಟು ಹಿಂದಿನ ಅಧಿಕಾರಿಯ ರಾಜಾರಂಗತಾ ಶ್ರೇಷ್ಟರು ಒಳಗಾಗುವಾರದು ಲೋಕದಲ್ಲಿ ಸಾಮಾನ್ಯಜನರಿಗೆ ಆಗಲೀ, ರಾಜರಿಗೆ ಆಗಲೀ, ಸಂಸಾರವಿಷಯಗಳಲ್ಲಿ ಆಗಲೀ, ಒಂದು ಪ್ರಯತ್ನದಲ್ಲೇ ಆಗಲಿ, ರಾಜ್ಯಭಾರದಲ್ಲೇ ಆಗಲಿ, ಸತ್ಯಮತ್ತು ಧರ್ಮಕ್ಕಿಂತ ಹೆಚ್ಚಾದದ್ದು ಯಾವದೂ ಇಲ್ಲ. ಇದನ್ನು ಸಾಧಿಸುವದಕ್ಕೋಸ್ಕರವಾಗಿ ಎಂತಾ ನಿಷ್ಕೂರವಾದ ಕೆಲಸವನ್ನಾದರೂ ಕೂಡ ಮಾಡಲೇಬೇಕು ಈವಿಷಯವನ್ನು ಈಗಿನ ಮೈಸೂರುಸರ್ಕಾರದ ಅಧಿಕಾರಿಗಳು ಜ್ಞಾಪಕದಲ್ಲಿಟ್ಟುಕೊಂಡು ಕಳೆದ ೫೬ ವರ್ಷಗಳಿಂದ ನಡೆಸಿದ ಪ್ರಜಾವಿರುದ್ಧವಾದ ಕಾರ್ಯಗಳನ್ನು ಬದಲಾಯಿಸಿ, ಜನರಿಗೆಹಿತವಾದ ಕಾರ್ಯಗಳನ್ನುಮಾಡಿ ದೇಶಕ್ಕೆ ಉಪಕಾರವನ್ನು ಮಮಗಳಿಕೇ-ತಿಯನ್ನೂ ಸಂಪಾದಿಸುವಂದು ಕೋರುತ್ತೇವೆ.

ಮೈಸೂರು ವೃತ್ತಾಂತಗಳು.

—:o:—

ಮೈಸೂರಿನಿಂದ ಹಾಸನಕ್ಕೆ ರೇವಾ ರೈಲಾ ಮಾರ್ಗವನ್ನೇರ್ಪಡಿಸಲು ಸರ್ವೇಮಾಡುವುದಕ್ಕಾಗಿ ಸರ್ಕಾರದ ಮರಾಟಾಲೈಟ್ಸೇಕಂಪನಿಯವರಿಗೆ ಮೈಸೂರು ಸರಕಾರದವರು ಅನುಮತಿ ಕೊಟ್ಟಿರುತ್ತಾರೆ ಈ ಸರ್ವೇ-ಖರ್ಚಿಗಾಗಿ ೨೧ ಸಾವಿರರೂಪಾಯಿಗಳು ಸ್ಯಾಂಕ್ಷನ್ ಆಗಿರುತ್ತದೆ ಸರ್ವೇ ಕೆಲಸವನ್ನೂ, ರೈಲ್ವೆವಿಚಾರ-ದ ಆಂದಾಜಿಕೆಲಸವನ್ನೂ ಕಲಿತುಕೊಳ್ಳಲು ಇಬ್ಬರು ಸಕಾ-ರೀ ಇಂಜಿನಿಯರುಗಳು ಸರ್ವೇ-ಪಾರ್ಟಿ-ಯವರ ಜೊತೆಯಲ್ಲಿಹೋಗುವರು

ಹೊಸದಿವಾನ್ ರವರಾದ ಮಾ। ಟಿ ಆನಂದರಾಯರು ರೆವಿನ್ಯು, ಖಜಾನೆ, ಪಬ್ಲಿಕ್ಕೆಷನ್ಸ್-ಗಳು, ರೈಲ್ವೆ ರಾಜಕಾರ್ಯ ಮತ್ತು ಭೂಗರ್ಭಶೋಧನೆ ಈ ಇಲಾಖೆಗಳ ಮೇಲ್ವಿಚಾರನೆಯನ್ನು ತೊಡಿಕೊಳ್ಳುವರು. ಮೊದಲಿನಂತೆ ಸೆಕ್ರೆಟರಿಯವರು ಈ ಪಿ। ಪ್ರೆಟ್ಟಿಣ ಶಟ್ಟರವರು, ಎಕ್ಸೈಜ್, ಪೊಲೀಸ್, ಕಾರಾಗೃಹ, ಫಾರೆಸ್ಟ್, ವೈದ್ಯ, ಪೆಕ್ಷ್, ಮತ್ತು ಸ್ಯಾನಿಟರಿಗಳ ಇಲಾಖೆಗಳ ವಿಚಾರಣೆಯಲ್ಲಿರುವರು ಮೆ ಎಚ್ ನಂಜುಂಡಯ್ಯನವರು ಜಡಿಷಿಯಲ್, ಟಿಜಿಸ್ಲೇಷನ್, ರಿಜಿಸ್ಟ್ರೇಷನ್, ವಿದ್ಯಾಖಾತೆ ಮುಜರಾಯಿ ಮತ್ತು ಇತರ ಚಿಲ್ಲರೆಬಾಬ ಗಳನ್ನು ನೀಡಿಕೊಳ್ಳುವರು.

ಮೈಸೂರು ಚೀಫ್‌ಕೂರ್ಗ್ ಬೆಂಗಳೂರ ರಜಾ ಉದ್ದಿಶ್ಯ ಈ ತಿಂಗಳು ೧೦ ತಾರೀಖಿನಿಂದ ಮುಚ್ಚಲ್ಪಟ್ಟಿದೆ ಮತ್ತೆ ಜೂನ್ ಮಾಹೆ 16 ಕ್ಕೆ ತೆರೆಯಲ್ಪಡುವುದು ಆದಕಾರಣ ತುರ್ತು ಕೆಲಸಗಳನ್ನು ನೋಡಿಕೊಂಡು ಹೋಗಲು ದಿನಮಂ ಸ್ವಲ್ಪಕಾಲ ಅಕಾಶಗಳು ಹೊಂದುವುದಿಲ್ಲ. ಇತ್ತ ಮೈ। ಜಸ್ಟಿಸ್ ಕೃಷ್ಣಸ್ವಾಮಯ್ಯರವರು ಮೊದಲನೆ 10 ದಿವಸಗಳೂ, ಮೈ। ಜಸ್ಟಿಸ್ ಸೆಟ್ಟೂರ್‌ಯವರು ಉಳಿದ ದಿವಸಗಳೂ ಜಾಕಾಲದ ಜಡ್ಜಿಯವರಾಗಿ ನೇಮಿಸಲ್ಪಟ್ಟಿದ್ದಾರೆ.

ಶ್ರೀ ಮುಮ್ಮಡಿಗಿಸರಸಾಮಿಗಳ ತಮ್ಮಮರಿಕ್ಕೆ ವಾಪಸು ಯೋಗುವ ವೇಳೆಯಲ್ಲಿ ಚೆಳಕತಿಯ ವೀರಭಗಳಲ್ಲಿ ವಾದ್ಯವಿಶೇಷವು ಯೂ-ದೆಯೊರಿಗೆ ಬ್ರಾಹ್ಮಣರ ದೇವಸ್ಥಾನಗಳ ಮುಂದೆ ಹಾದು ಹೊದದ್ದು ಅಲ್ಲಿನ ಬ್ರಾಹ್ಮಣರಲ್ಲಿ ಸಮಾಧಾನವನ್ನುಂಟುಮಾಡಿರ ದೆಂದೂ, ಬ್ರಾಂಹ್ಮಣರು ಸ್ವಾಮಿಗಳವೇಲ್ ಚಪಿಲ ಕಮೀಷನರ ಗರ ಕೋರ್ಟ ನಲ್ಲಿ ಫಿರ್ಯಾದ್ ಮಾಡಿರುವರೆಂದೂ ಗೊತ್ತಾಪತ್ತೆ.

ಕ ರ ಪೊಂಪಾವಾದಿಂದ ವಿಜ್ಞಾಪನ

"ವೀರಕೇಸರಿ" ಯಲ್ಲಿ ತಿಂಗಳು ತಪ್ಪದೆಯಂತೆ ತಾರೀಖು ಆಗಾಯಿಯಂ ಪ ರಪ್ರತಿಕೆಯಾಗಿ ಜೆ ದಾರರುಗಳ ಕೈಯನ್ನು ಸೇರುತ್ತಿದೆ ಇನ್ನೂ ಜೆ ದಾರುಗಳಿ ಮಾಡಿದ್ದವರುಗಳ ಮೇ ತಾರೀಖಿನ ಒಂದರ ಒಳಗಾಗಿ ವಾಯಿದೆಯಂ ಳುವಿರುವ ಜಿಂದಾದಾರರುಗಳಿಗೆ ಈಗಿದ ನಿವಾರದ ಪತ್ರಿಕೆಯಲ್ಲಿ ವಿಜ್ಞಾಪನೆಯೊಡನೆ ಆರ್ಡರ್ ಸಾರಮಿನ ಕಾರ್ಡ್ ಒಂದನ್ನು ಗರ್ಭೀಕರಿಸಿ ಕಳುಹಿಸಿರುತ್ತೇವೆ ಆ ಕಾರ್ಡಿನಲ್ಲಿ ಜೆಂದಾದಾರರುಗಳು ಇನ್ನೊಂದು ವರ್ಷದ ಜೆಂದಾ ಮೊಬಲಗನ್ನು ವಿ ಪಿ ಮುಖಾಲಕ ಕಳುಹಿಸಬೇಕೆಂಬುದನ್ನು ತಿಳಿಸಬೇಕೆಂದೂ ಪ್ರಾರ್ಥಿಸಿಕೊಂಡಿದ್ದೆವು ಹಾಗೆ ಒಂದು ತಿಳಿಸದೆ ಜಂದಾದಾರರುಗಳಿಗೆ ಮುಂದಿನ ವಾರದ ಪತ್ರಿಕೆಯನ್ನು ಒಂದು ವರ್ಷದ ಜೆಂದಾ ಮೊಬಲಗಿಗೆ ವಿ ಪಿ ಮುಖಾಲಕ ಕಳುಹಿಸುವುದಾಗಿಯೂ ತಿಳಿಸಿದ್ದೆವು, ಈವರ್ಗೆ ಅನೇಕರಿಂದ ಕಾರ್ಡಾ ಬಂದಿರುವುದಿಲ್ಲ ಆದುದರಿಂದ ವಾಯಿದೆ ಪೂರೈಸಿರುವ ಒಂದು ಸಾವ್ರ ಕಳೆದ ವಾರದಲ್ಲಿ ವಿಜ್ಞಾಪನೆಯನ್ನು ಕಾರ್ಡಿನಲ್ಲಿ ಬರೆದು ಕಾಡಲೆ ತಿಳಿಸಬೇಕಾಗಿ ಕೋರುಳಿಪ್ಪು, ಹಾಗೆ ಕಾರ್ಡನ್ನು ಬರೆದು ತಿಳಿಸದೆಯೂ ಜೆಂದಾ ಮಣಿಆರ್ಡರ್ ಮುಖಾಲಕ ಕಳುಹಿಸದೆಯೂ ಇರುವ ವಾಯಿದೆ ಪೂರ್ತಿಸಿದ ಜೆಂದಾದಾರರುಗಳಿಗೆ ವಿ ಪಿ ಮುಖಾಲಕ ಮುಂದಿನ ವಾರದ ಅಂಚೆಲೆ ಮೇ ತಾರೀಖು ೧೭ ನೆಯ ಶನಿವಾರ "ವೀರಕೇಸರಿ"ಯನ್ನು ಒಂದು ವರ್ಷದ ಜೆಂದಾ ಕೂಬಲಿಗೆ ರವಾನಿಸುವೆವು ಅದಂತೆರಿಂದ, ಪಯಿಯಿಟ್ಟು ವಾಯಿದೆ ಪೂರ್ತಿಸಿದ ಜೆಂದಾದಾರರುಗಳು ಮೊಬಲಗನು ಪಾವತಿಯಿಂದ "ವೀರಕೇಸರಿ"ಯನ್ನು ಸ್ವೀಕರಿಸಿ ಎಂದಿನಂತೆ ಉದಾ

(೩ನೇ ಪುಟದಿಂದ ಮುಂದಕ್ಕೆ ಸಾಗಿಬಂದಷ್ಟು)

ಅವರನ್ನು ಸಮಾಧಾನಗೊಳಿಸಲು ಬಹು ಪ್ರಯಾಸಪಟ್ಟರು. ಆದರೆ ಸಿಪಾಯಿಗಳು ಯಾವ ಒಪ್ಪಂದಕ್ಕೂ ಸಮ್ಮತಿಸದೇ ಹೋದರು.

ರುಮೇಲಿಯಕ್ ಪ್ರಾಂತ್ಯದಲ್ಲಿರುವ ಸೇನಾನಾಯಕರೂ, ಮುಸಲ್ಮಾಕ್ ಮತ್ತು ಕ್ರಿಶ್ಚಿಯಕ್ ದೊಡ್ಡ ಮನುಷ್ಯರೂ ಹಳೇ ಏರ್ಪಾಡನ್ನೇ ಸಮ್ಮತಿಸಿ ಅದನ್ನು ಜಾರಿಗೆ ತರಬೇಕೆಂದೂ, ಇಲ್ಲದಿದ್ದರೆ ಕಾಕ್‌ಸ್ಟಾಂಟಿನೋಪಲ್ ಮೇಲೆ ದಂಡೆತ್ತಿ ಬರುವವರಾಗಿಯೂ ಹೆದರಿಸಿರುತ್ತಾರೆ.

ಅಲೆಕ್ಸಾಂಡ್ರಿಟಾ ಪ್ಟ್ಟಣವೂ ಗಲಭೆಯಲ್ಲಿರುವುದೆಂದೂ, ಗಲಭೆಯನ್ನು ಅಡಗಿಸುವುದಕ್ಕೆ ಒಂದು ಯುದ್ಧ ಹಡಗನ್ನು ಕಳುಹಿಸಬೇಕೆಂದೂ ಬ್ರಿಟಿಷ್ ಸರಕಾರದ ಪ್ರತಿನಿಧಿಗಳು ಕಾಕ್‌ಸ್ಟಾಂಟಿನೋಪಲ್‌ನಲ್ಲಿರುವ ಸುಲ್ತಾನರ ಅಧಿಕಾರಿಗಳಿಗೆ ಬರೆದಿರುವರು. ದಂಗೆಕೋರರು ತಾರಾಸ್ಸಿನಲ್ಲಿ ಕ್ರಿಶ್ಚಿಯರ ಮನೆಗಳಿಗೆ ಮುತ್ತಿಗೆ ಬಾಕಿದರು. ತಾರಾಸ್ಸಿನ ಪಟ್ಟಣದ ಒಂದು ಭಾಗವನ್ನು ದಂಗೆಕೋರರು ಸುಟ್ಟು ಹಾಕಿದರು.

ಲಂಡನ್, ತಾ|| ೧೯ ೨೦

ಆದನಾದಲ್ಲಿ ಇಬ್ಬರು ಅಮೆರಿಕ್ ಕ್ರಿಸ್ತುಪಾದರಿಗಳು ಕೊಲೆ ಮಾಡಲ್ಪಟ್ಟಿರುವರು

ಮೆಸ್ಸಿನಾ ಪಟ್ಟಣದ ಸ್ಥಿತಿಯು ಬಹಳ ಭಯಂಕರವಾಗಿರುವುದು ಕ್ರಿಶ್ಚಿಯರೂ ಮತ್ತು ಇತರ ಅನ್ಯದೇಶೀಯರೂ ದಿಕ್ಕುತೋಚದ ತಮ್ಮ ರಕ್ಷಣೆಗಾಗಿರುವ ಕಾಂಸಲ್ ಮಂತ್ರಿಗಳ ಮೊರೆಯನ್ನು ಹೊಕ್ಕಿರುವರು. ದೊಂಬಿಯನ್ನು ಆಡಗಿಸುವದಕ್ಕೆ ಫ್ರೆಂಚರಿಗೆಸೇರಿದ ಎರಡು ಯುದ್ಧಹಡಗುಗಳು ಮೆಸ್ಸಿನಾಗೆ ಹೊರಟಿರುವುದು

ಅಲೆಕ್ಸಾಂಡ್ರಿಟಾ ಪಟ್ಟಣದಲ್ಲಿ ಮುಸಲ್ಮಾಕ್ ಪ್ರಜೆಗಳುದೊಂಬಿ ಎದ್ದಿರುವರು. ದೊಂಬಿಯನ್ನು ತಡಿಯುವುದಕ್ಕೆ ಬ್ರಿಟೀಷರಿಗೆಸೇರಿದ ಒಂದು ಯುದ್ಧಹಡುಗು ಆಲಕ್ಸಾಂಡ್ರಿಟಾಗಿ ಹೊರಟಿರುವುದು

ಕರ್‌ಪ್ರತಾಂಜಿಲ್ಲಾದಲ್ಲಿ ಕುರ್ದುಎಂಬ ಕಾಡುಜನರು ಊರುಗಳನ್ನು ಲೂಟಿಮಾಡುತ್ತಾ ದಾಂಧಲೆಯನ್ನು ನಡೆಸಲು ಪ್ರಾರಂಭಿಸಿರುವರು.

ಹದೆಂಕೋಯಿನಲ್ಲರುವ ಸೈನ್ಯಿಕರು ಕಳೆದವಾರ ನಡೆದ ದೊಂಬಿಯ ಲ್ಲ ಮುಖಂಡರನ್ನು ಹಿಡಿದು ದಂಡಿಸಬೇಕೆಂದು ಅಧಿಕಾರಿಗಳ ಕೇಳುತ್ತಿರುವರು.

ರಾಜಧಾನಿಯಾದ ಕಾಕ್‌ಸ್ಟಾಂಟಿನೋಪಲ್‌ಪಟ್ಟಣವು ಸಧ್ಯಕ್ಕೆಗಲಭೆಯಿಲ್ಲದ ನ್ಯಾಯಸಾಯಗುವುದು ಅದಕ್ಕೆ ಪೊಲೀಸಿನವರಿಗೆ ಮಾತ್ರ ಭೀತಿತಪ್ಪಿರುವದಿಲ್ಲ.

"ಪ್ಯಾಗ್ರೆಸೀವಿಸ್ಟ್ಸ್" ಪಂಗಡಕ್ಕೆ ಸೇರಿದ 9 ಸಾವಿರವಂದಿ ಬಲಾತ್ಕಳ್ಳ ಒಂದು ಸೈನ್ಯವು ತ್ಚಾತಲ್‌ಜಾ ಪಟ್ಟಣವನ್ನು ಬಂದುಸೇರಿರುವುದು ಇತರ ಪಟಾಲಂಗಳು, ಕ್ಯುಲೇಲಿ, ಬುಗಾಜ್, ಸ್ಮಿರ್ನಾ, ಎರ್‌ಜೀರಂ, ಮತ್ತು ತ್ರೆಬಿಜೊಂಡ್, ಮೊದಲಾದ ಸ್ಥಳಗಳಿಂದ ಬಂದು ಸೇರುತ್ತಿರುವಪ್ಪ "ಪ್ಯಾಗ್ರೆಸೀವಿಸ್ಟ್ಸ್" ಪಂಗಡದವರು ಸುಲ್ತಾನರನ್ನು ಪದಚ್ಯುತನಕ್ಕೆ ತಪ್ಪಿದವರೆಂದು ದೂಷಿಸಿ ಒಂದು ಪ್ರಕಟನ ಪತ್ರಿಕೆಯನ್ನು ಹೊರಡಿಸಿ ಪ್ರಜೆಗಳಲ್ಲಿ ಹರಡುತ್ತಿರುವರು.

ತಾರ್‌ಸೂಸ್‌ನಲ್ಲಿ ಸುಮಾರು ಸಾವಿರಮಂದಿ ನಿಲ್ಲುವದಕ್ಕೆ ಮನೆಗಳಿಲ್ಲದೆ ಅಲಿಯುತ್ತಿರುವರು. ತಾರ್‌ಸೂಸ್‌ನಲ್ಲೂ ಮತ್ತು ಅಲೆಕ್ಸಾಂಡ್ರಿಟಾದಲ್ಲೂ ಒಟ್ಟು ಇದುವರೆಗೆ ಸಾವಿರಮಂದಿ ಕೊಲ್ಲಲ್ಪಟ್ಟಿರುವರೆಂದು "ಡೆಯಿ ಲಿ ಟೆಲೆಗ್ರಾಫ್" ಪತ್ರಿಕೆಯು ತಿಳಿಸುವುದು

ಅಲೆಪ್ಪೋದಲ್ಲಿರುವ ಕಾಕ್ ಸಲ್ ಮಂತ್ರಿಯು ಕೊಡುವ ತಂತಿ ವರ್ತಮಾನವೇನಂದರೆ:—ಅಲೆಪ್ಪೋ ಪ್ರಾಂತ್ಯದಲ್ಲಿ ಮರಷ್ ಎಂಬ ಕಡೆ ದಂಗೆಕೋರರು 2೧ ಮಂದಿಯನ್ನು ಕೊಂದಿರುವರು. ಕೊಲ್ಲಲ್ಪಟ್ಟವರೆಲ್ಲರೂ ಬಾಲತುರ್ಕಿಯರ ಕಾಟಕ್ಕೆ ಸೇರಿದವರು ಸಲೋನಿಕಾದಲ್ಲಿ ಬಾಲತುರ್ಕಿಯ ಸಂಘಕ್ಕೆ ಸೇರಿದವರು ಸರಕಾರಕ್ಕೆ ಸೇರಿದ ಎರಡ ಲಕ್ಷರೂಪಾಯಿಗಳನ್ನು ವಶಪಡಿಸಿಕೊಂಡಿರುವರಂತೆ.

ವೃತ್ತಾಂತ ಸಂಗ್ರಹ.

—o—

"ಸ್ವರಾಜ್ಯ"ಎಂಬ ಆಂಧ್ರಭಾಷಾ ಪತ್ರಿಕೆಯ ಸಂಪಾದಕರಾದ ಹರಿಸರ್ವೋತ್ತಮರಾವ್ ಅವರಿಗೆ ವಿಧಿಸಲ್ಪಟ್ಟಿರುವ ಶಿಕ್ಷೆಯನ್ನು ಮದರಾಸು ಹೈಕೋರ್ಟ್‌ನವರು 6 ತಿಂಗಳಿಂದ ಮೂರಷ್ಟಕ್ಕೆ ಹೆಚ್ಚಿಸಿರುವರು.

ವೈಸರಾಯಿಸಾಹೇಬರು ಲಾಹೂರಿಗೆ ಹೊಗಿದ್ದಾಗ ಪೊಲೀಸಿನವರು ಶ್ರೀಯುತ ಅಜಿತಸಿಂಹರನ್ನೂ ಮತ್ತು ಸೊಫಿ ಅಂಬಾ ಪ್ರಸಂದರನ್ನೂ ಲಾಹೂರಿನಲ್ಲಿ ಆ ಕಾಲದಲ್ಲಿ ಅವರು ಇರಕೂಡದೆಂದು ಬಹಳವಾಗಿ ಉಪದ್ರಪಡಿಸಿದರೆಂದು "ನೀತವಾದಿ" ಪತ್ರಿಕೆಯು ತಿಳಿಸುವುದು.

ಲಕ್ಕೆ ಎತ್ತಿಸಿ ತಮ್ಮ ಜೂತಯಲ್ಲಿ ತಗದುಕೊಂಡು ಹೋದರು. ಖಡ್ಗಗಳನ್ನು ನೀರಿನಲ್ಲಿ ಬಚ್ಚಿಟ್ಟಿದ್ದವರು ಯಾರಿರಬಹುದೆಂಬುದನ್ನು ಈಗ ಪತ್ತೆಮಾಡುತ್ತಿರುವರು.

ನೆಕಂದರಾಬಾದಿನಲ್ಲಿ (ನೈಜಾಮರ ಸಂಸ್ಥಾನ) ಅಸಿಸ್ಟೆಂಟು ಬ್ರಿಟಿಷ್ ರೆಸಿಡೆಂಟರ ಆಫೀಸಿನಲ್ಲಿ ಒಂದು ದೊಡ್ಡ ಅಪರಾಧವು ಪತ್ತೆಯಾಗಿ ವಿಚಾರಣೆಯಲ್ಲಿರುವುದು. ತಪ್ಪು ಇಂಧಾದ್ದೆಂದು ಗೊತ್ತಾಗುವುದಲ್ಲಿ ಅಸಿಸ್ಟೆಂಟು ರೆಸಿಡೆಂಟರ ಆಫೀಸನ್ನು ಪೊಲೀಸು ನವರು ಮೊಹರುಮಾಡಿ ಕಾಯುತ್ತಿರುವರು. ಮೇಲ್ಪಟ್ಟ ಅಧಿಕಾರಿಗಳು ಅಸಿಸ್ಟೆಂಟು ರೆಸಿಡೆಂಟರನ್ನು ಕೆಲಸದಿಂದ ಸಸ್ಪೆಂಡು ಮಾಡಿರುವರು

ವೈಸರಾಯಿ ಸಾಹೇಬರು ಲಾಹೂರಿಗೆ ದಯಮಾಡಿಸಿದ್ದಾಗ ಹಿಂದೂ ಬಾಲಕನೊಬ್ಬನು ಆಶ್ಚರ್ಯವನ್ನುಂಟುಮಾಡುವ ತಲೆ ಪಂತಿಗಳಿಂದ ಕುಣಿದು ಕೆಲವು ನೋಟೀಸುಗಳನ್ನು ಹಂಚುತ್ತಿರಲು, ಇವನನ್ನು ಪೊಲೀಸಿನವರು ಹಿಡಿದು ಮೂರನೇದಿನದವರೆಗೂ ಸೆರೆಯಲ್ಲಿಟ್ಟಿದ್ದು ನಂತರ ಬಿಡುಗಡೆಮಾಡಿದರಂತೆ ಈವರ್ತಮಾನವನ್ನು ಲಾಹೂರಿನ ಒಂದ ದೇಶೀಯಪತ್ರಿಕೆಯು ಪ್ರಕಟಿಸುವುದು.

ಸಂಯುಕ್ತಸಂಸ್ಥಾನಗಳಿಗೆ ಸೇರಿದ ಫತೇಪೂರ್ ಎಂಬಕಡೆ ಕಳೆದವಾರ ಒಂದು ಪಾಠಶಾಲೆಯಲ್ಲಿ ಒಬ್ಬ ಬಂಗಾಳಿ ಉಪಾಧ್ಯಾಯನು ತನ್ನ ವಿದ್ಯಾರ್ಥಿಗಳಲ್ಲಿ ಒಬ್ಬ ಬಾಲಕನು ಶ್ರೀಯುತ ಅಯಸತಿರಾಯರ ಭಾವಪರಗಳನ್ನು ತನ್ನು ವಶದಲ್ಲಿಟ್ಟುಕ್ಕೊಂಡಿರುವುದನ್ನು ಕಂಡು ಬಾಲಕನನ್ನು ದಂಡಿಸಿ, ಅವನಿಗೆ ಜರಿಮಾನೆಯನ್ನು ವಿಧಿಸಿದನೆಂದು ಹೇಳಲ್ಪಟ್ಟಿದೆ ಬಾಲಕನು ಶ್ರೀಯುತಅಯಸತಿರಾಯರ ಭಾವಪರಗಳನ್ನು ತನ್ನು ತಂದೆತಾಯಿಗಳಿಗೆ ಕಳುಹಿಸಬೇಕೆಂದು ಕೊಂಡು ಕೊಂಡಿದ್ದನಂತೇ.

ಕಳೆದವಾರ ಲಾಹೂರಿನ ಸಾಮಾಪದಲ್ಲಿ ಫಿಟ್ಟೆ ಎಂಬ ಊರಿನ ಹತ್ತರ, ಒಂದು ಗೂಡ್ಸುಗಾಡಿಯು ಬರುತ್ತಿರುವ, 13 ವ್ಯಾಗ್ಗನ್ ಗಾಡಿಗಳು ಬಿಚ್ಚಿಕ್ಕೊಂಡು ಒಂದು ಸೇತುವೆಗೆ ಹೋಗಿಬಡಿಯಲು ಸೇತುವೆಯು ಮುರಿದು ಬಿತ್ತು. ಸೇತುವೆಯು ಮುರಿದುಬೀಳಲು, ಗಾಡಿಗಳು ಕೆಳಗೆ ಹರಿಯುತ್ತಿದ್ದ ನದಿಯೊಳಕ್ಕೆ ಹೋಗಿಬಿದ್ದವು. ಪ್ರಾಣಾಪಾಯವನ್ನು ತಪ್ಪಿಸಿಕ್ಕೊಂಡರು.

ಬಂಗಾಳದಲ್ಲಿ ಕೆಂದ್ರಾಪುರ ಎಂಬ ಸ್ಥಳದಿಂದ ಒಂದು ವಿಶೇಷ ವರ್ತಮಾನತಿಳಿದು ಬರುವುದು ಆದೇನಂದರೆ. ಒಬ್ಬ ಕುಂಬಾರನ ಮನೆಯಲ್ಲಿ ಗಟ್ಟಿ ಮಟ್ಟಿಯಾಗಿದ್ದ ಮೂರಮಂದಿ ಅಸಾಮಿಗಳು ಇದಕ್ಕಿದ್ದಹಾಗೆ ಸತ್ತದ್ದು. ಸದರಿ ಅಸಾಮಿಗಳು ಯಾವ ಖಾಯಿಲೆ ಇಂದಾಗಲಿ ಅನುಭವಿಸುತ್ತಿರಲಿಲ್ಲ. ಒಂದು ಪಂಚಪಾತ್ರೆಯೊಳಿಗಿದ್ದ ನೀರನ್ನು ಕುಡಿಯಲು ಕೊಡಲೆ ಮೂರ್ಚಿತರಾಗಿ ಕಳಕ್ಕೆಬಿದ್ದು ಪ್ರಾಣಬಿಟ್ಟರು ನಿರು ಇಟ್ಟಿದ್ದ ಪಂಚಪಾತ್ರೆಯ ಬಾಯಿ ತೆಗೆದಿದ್ದುದರಿಂದ ಒಂದು ಸರ್ಪವುಬಂದು ಪಾತ್ರೆಯೊಳಿಗೆ ಬಾಯನ್ನಿಟ್ಟು ನೀರಲ್ಲಿ ವಿಷವನ್ನು ಕಲಿಸಿಹೋಯಿತೆಂದೂ, ಈ ನೀರನ್ನು ಅವರು ಕುಡಿಯಲು ಮರಣಪ್ರಾಪ್ತವಾಗಲೂ ಕಾರಣವಾಯಿತೆಂದೂ ತಿಳಿದು ಬರುತ್ತದೆ.

ಪ್ಯಾರಿಸ್ ಪಟ್ಟಣಕ್ಕೆ ಹೋಗಿ ಶ್ಯಾಮಾಜಿ ಕೃಷ್ಣವರ್ಮರನ್ನು ನೇರಲು ಉದ್ದೇಶಿಸಿದ್ದ ಇಬ್ಬರು ಬ್ರಾಂಹಣ ತರುಣರನ್ನುಪೊಲೀಸು ನವರು ಪಾಂಡಿಚೇರಿಗೂ ತೂತುಕುಡಿಗೂ ಮಧ್ಯೆ ಗುಮಾನಿಯಮೇಲೆ ಹಿಡಿದು, ಜಾರಣೆಗೆ ಅವರನ್ನು ಗುರಿಮಾಡಿದರಷ್ಟೆ ಸದರಿ ತರುಣರವಶದಲ್ಲಿ ನೂರಾರು ರೂಪಾಯಿಗಳು ಇದ್ದದ್ದನ್ನುಕಂಡು ಅವರು ಅದನ್ನು ಎಲ್ಲೋ ಕಳವುಮಾಡಿರಬಹುದೆಂಬ ಊಹೆಯ ಮೇಲೆ ಅವರಮೇಲೆ ಮೊಕದ್ದಮೆಯನ್ನು ತಂದಿರುವರು ಬ್ರಾಂಹಣ ತರುಣರು ಮಚಲೀ ಪಟ್ಟಣಕ್ಕೆಸೇರಿದವರು. ಮೊಕದ್ದಮೆಯು ಮಚಲೀಪಟ್ಟಣದ ಮ್ಯಾಜಿಸ್ಟ್ರೇಟರಮುಂದೆ ಈ ತಿಂಗಳು ತಾರೀಖು 21 ಕ್ಕೆ ವಿಚಾರಣೆಗೆ ಬರುವುದು.

ವಾಕ್ಕಾದಲ್ಲಿ ಕಳೆದ ಸೋಮವಾರ ತರಣಿ ಕಾಂತ ಜಕ್ಕರ್ವರ್ತಿ ಎಂಬ ಹಿಂದೂ ಭಕ್ತನೊಬ್ಬನು ಉರಿಯುತ್ತಿದ್ದ ಅಗ್ನಿಕುಂಡವನ್ನು ಪ್ರವೇಶಿಸಿ ತಮಾಷೆಯನ್ನು ನೋಡಲು ನೆರದಿದ್ದ ಯೋರೋಪಿಯರ್ ಆಫೀಸರುಗಳಿಗೆ ಆಶ್ಚರ್ಯ ಉಂಟಾಗುವಂತೆ, ಅಗ್ನಿದೇವ

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಅಜಂಗರ್ ಜಿಲ್ಲಾದಲ್ಲಿ ಹಿಂದು ಮಹಮ್ಮದ್ದೀಯರಿಗೆ ಮನಸ್ತಾಪಗಳಿಂದ ಕೆಲಹವು ಹುಟ್ಟುವ ಸಂಭವವಿರುತ್ತದೆಂದು ಲಕ್ನೌ ಪತ್ರಿಕೆ ಒಂದು ತಿಳಿಸುವುದು ಇದಕ್ಕೆ ಕಾರಣವೇನಂದರೆ ಹಿಂದೂ ಕೆಲದಲ್ಲಿ ಹುಟ್ಟಿ ಮಹಮ್ಮದ್ದೀಯರ ಮತವನ್ನು ಅವಲಂಬಿಸಿದವರನ್ನು ಸುನಹ ಹಿಂದು ಮತಕ್ಕೆ ಸೇರಿಸಿಕೊಳ್ಳುವುದಕ್ಕೆ ಹಿಂದೂಗಳು ಪ್ರಯತ್ನಪಡುತ್ತಿರುವುದು. ಅಧಿಕಾರಿಗಳೂ ಸಹ ಎಚ್ಚರಗೊಂಡು ಕಲಹವನ್ನು ತಡೆಯಲು ತಕ್ಕ ಪ್ರಯತ್ನವನ್ನು ಮಾಡುತ್ತಿರುವರಂತೆ.

ಪೂರ್ವಬಂಗಾಳದ ರೈಲ್ವೇಗೆಸೇರಿದ ಸೊನಾರ್‌ಪುರ್ ಎಂಬ ಸ್ಟೇಷ್‌ನಲ್ಲಿ ಕಳೆದಸೋಮವಾರ ಕೆಲಸಮಂದಿ ಪ್ರಯಾಣೀಕರಿಗೂ ಮತ್ತು ರೈಲ್ವೇ ಕೂಲಿಗಳಿಗೂ ದೊಡ್ಡದೊಂಬಿನಡೆದು, ಪ್ರಯಾಣೀಕರಲ್ಲಿ ಅನೇಕರಿಗೆ ಘಾಯಗಂಟಾಗಿರುವುದು ಗಾಡಿಯು ಸೋನಾರ್‌ಪೂರ್ ಸ್ಟೇಷ್‌ನಲ್ಲಿ ಬಂದುನಿಲ್ಲಲು ಕೂಲಿಗಳು ತಮ್ಮ ಸಾಮಾನುಗಳನ್ನು ಎತ್ತಿಕ್ಕೊಂಡು ಒಂದು ಕಂಪಾರ್ಟುಮೆಂಟಿನ್ನು ಹತ್ತಲುಹೋದರು. ಒಳಗೆಕೂತಿದ್ದ ಪ್ರಯಾಣೀಕರು ಹತ್ತಕೂಡದೆಂದು ತಡಿಯಲು, ದೊಂಬಿಗೆ ಅವಕಾಶವಾಯಿತೆಂದು ತಿಳಿದು ಬರುವುದು

ಪೂರ್ವ ಬಂಗಾಳದ ರೈಲ್ವೇಗೆಸೇರಿದ ಸೋರಥ ಸ್ಟೇಷ್‌ನಲ್ಲಿ ಕೆಲವ್ರದಿನಗಳ ಹಿಂದೆ ಪೋಲೀಸುನವರು ಗುಮಾನಿಯಮೇಲೆ ಸತ್ಯೇಂದ್ರಭಟ್ಟಾಚಾರ್ಜಿ ಎಂಬ ವಂಗತರುಣನನ್ನೂ ಮತ್ತು ಅವನ ಜೊತೆಯಲ್ಲಿದ್ದ 7 ಮಂದಿ ಇತರ ತರುಣರನ್ನೂ ಗುಮಾನಿಯಮೇಲೆ ಹಿಡಿದರಷ್ಟೆ ಇವರನ್ನು ಶೋಧನೆನಡಾಡುವ ಕಾಲದಲ್ಲಿ, ಇವರವಶದಲ್ಲಿ ಬಾಂಬು ಗುಂಡುಗಳನ್ನು ತಯಾರುಮಾಡುವ ಕ್ರಮವನ್ನು ತೋರಿಸುವ ಕಾಗದ ಪತ್ರಗಳಿದ್ದವು ಪೋಲೀಸು ತನಿಖೆಯು ಮುಗಿದು, ಈಮೊಕದ್ದಮೆಯ ವಿಚಾರಣೆಬಗ್ಗೆ ಈಗ ರಂಗಸ್ಪುರದ ಮಾ ಸ್ಟ್ರೇಟರಮುಂದೆ ಹಾಕಲ್ಪಟ್ಟಿರುವುದು. ಅಪರಾಧಿಗಳಾದ ತರುಣರೆಲ್ಲರೂ ಭಾವಿಲಾಯರುಗಳ ಮತ್ತು ಡಾಕ್ಟರುಗಳ ಪುತ್ರರಾಗಿರುತ್ತಾರೆ

ಪೂರ್ವ ಬಂಗಾಳದ ರೈಲ್ವೇದಾರಿಯಲ್ಲಿ ಗಾಡಿಗಳನ್ನುಕೆಡಹುವ ಪ್ರಯತ್ನವು ನಡೆಯುತ್ತಲೇ ಇರುವುದು. ಇದನ್ನು ತಪ್ಪಿಸುವದಕ್ಕೆ ಪೊಲೀಸುನವರಿಗೆ ಸಾಧ್ಯವಾಗಲ್ಲವೆಂದು ಕಂಡುಬರುವುದು ಬೆಳಿಯ ಘಾಟಿನ ಹತ್ತ ಗಾಡಿಗಳನ್ನು ಕೆಡಹಲು ಒಂದು ಹೊಸಪ್ರಯತ್ನ ಕಳೆದವಾರ ನಡೆಸಲ್ಪಟ್ಟಿತೆಂದು ಈಗ ತಿಳಿದು ಬರುವುದು ಗುರುವಾರ ಪ್ರಾತಃಕಾಲ ಒಬ್ಬ ರೈಲ್ವೇನೌಕರನು ಲೈನ್‌ಪರೀಕ್ಷೆಯನ್ನು ಮಾಡಲು ಹೊರಟು ಅಲ್ಲಲ್ಲಿ ಪರೀಕ್ಷೆಯನ್ನು ನಡೆಸುತ್ತಿರುವಾಗ್ಗೆ, ಮೂಲಿಕ್ ಪುರದ ಸ್ಟೇಷ್ ಸಮೀಪದಲ್ಲಿ ರೈಲು ಕಂಬಿಗಳಿಗೆ ಅಡ್ಡಲಾಗಿ ಕೆಬ್ಬಿಣದ ಕಂಭ ನಿದ್ದಿರುವದು ಕಂಡುಬಂತು. ಈಕಂಭವನ್ನು ಮೈಲು ಲೆಖ್ಖವನ್ನು ತೋರಿಸಲು ಹೂಳುವದಕ್ಕೆ, ಒಂದು ಪಕ್ಕದಲ್ಲಿ ಮರಿಯಮತ್ತು ಇಲಾಖೆಯವರು ತಂದು ಹಾಕಿದ್ದರಂತೆ ರೈಲು ಗಾಡಿಗಳನ್ನು ಕೆಡುಹುವ ಉದ್ದೇಶದಿಂದ ಇದನ್ನು ಎತ್ತಿ ರೈಲುಕಂಬಿಗಳಿಗೆ ಅಡ್ಡಲಾಗಿ ಯಾರೊ ಹಾಕಿ ಹೋದರು

ಬಂಗಾಳದಲ್ಲಿ ಗೂರ್ಕಾಸಿಪಾಯಿಗಳಿಂದ ಪ್ರಜೆಗಳಿಗೆ ಉಂಟಾಗುತ್ತಿರುವ ಉಪದ್ರವ ಹೋಗಲಶಕ್ಯವಾಗಿರುವುದು. ಕಳೆದ ಗುರುವಾರ ಇವರು ಜಾಲ್‌ಪೈಗುರಿಯಲ್ಲಿ ರೈಲ್ವೇ ಸ್ಟೇಷ್‌ಮ್ಯಾಸ್ಟರ್‌ನನ್ನು ಹಿಡಿದು ಹೊಡೆದು ರೈಲ್ವೇಸ್ಟೇಷ್‌ನ್ನು ಲೂಟೆಮಾಡಿದರು ಜಾಲ್‌ಪೈಗುರಿಯು ಪೂರ್ವಬಂಗಾಳದ ರೈಲ್ವೇಗೆಸೇರಿದ ಒಂದುಸ್ಟೇಷ್. ಗುರುವಾರಸಾಯಂಕಾಲ ಪ್ಯಾಸೆಂಜರುಗಾಡಿಯು ಜಾಲ್‌ಪೈಗುರಿಯಲ್ಲಿ ಬಂದುನಿಲ್ಲಲು I2 ಮಂದಿ ಗೂರ್ಕಾಸಿಪಾಯಿಗಳು ಸ್ಟೇಷ ಒಳಕ್ಕೆಪ್ರವೇಶಿಸಿ, ತಮ್ಮಜೊತೆಯಲ್ಲಿ ಕೆಲೆತಂದಿದ್ದ ನೀಚಕೆಲಸ ಸ್ತ್ರೀಯರೊಂದಿಗೆ ಮಾನ ಮರ್ಯಾದೆಗಳನ್ನುಬಿಟ್ಟು ಸರಸವಾಡುತ್ತಿರಲು ಇದನ್ನು ಸ್ಟೇಷ್‌ಮ್ಯಾಸ್ಟರುಕಂಡು ಅವರನ್ನು ಸ್ಟೇಷ್ ಹಸ ವದಾಗಿ ನೌಕರರಿಹೊರಗೆಕಳ್ಳಿಗೆ ಅಜ್ಞಾಪಿಸಿದನು ನೌಕರರು ತಮ್ಮಸಾಹೇಬರು ಆಜ್ಞಾಯಂತೆ ಅವರನ್ನು ಹೊರಗೆ ಕಳುಹಿಸಿದರು. ಸಿಪಾಯಿಗಳು ಕೋಪಗೊಂಡು ಹೊರಗಿನಿಂದ ಸ್ಟೇಷ್‌ಮೇಲೆ ಕಲ್ಲುಗಳನ್ನು ಎಸೆಯಲಾರಂಭಿಸಿದರು. ನಂತರ ಒಳಕ್ಕೆನುಗ್ಗಿ ಸ್ಟೇಷ್‌ಮ್ಯಾಸ್ಟರನ್ನು ಹೊಡೆದು. ಸ್ಟೇಷ್ ಅನ್ನು ಲೂಟಿಮಾಡಿ ಹೊರಟುಹೋದರು. ಸ್ಟೇಷ್ ಮ್ಯಾಸ್ಟರು

ತುರ್ಕಿಯಲ್ಲಿ ಅರಾಜಕತ್ವ.
ಭಯಂಕರವಾದ ಸ್ಥಿತಿ
ಮಂತ್ರಿಗಳ ಕೊಲೆ.

—0—

(ತಂತೀವರ್ತಮಾನಗಳು.

ಯುರೋಪ್ ಖಂಡದ ತುರ್ಕಿಯಲ್ಲಿ ಅರಾಜಕತ್ವವು ಪುನಹ ಕಾಣಿಸಿಕ್ಕೊಂಡು ಘೋರ ಕೊಲೆಪಾತಕಗಳು ನಡೆಯುತ್ತಿರುವುದೆಂದು ಲಂಡನ್ ತಂತೀವರ್ತಮಾನಗಳಿಂದ ತಿಳಿದು ಬರುವುದು. ತುರ್ಕಿಯಲ್ಲಿ ಈಗ ಸರಕಾರದ ವಿಶಿಷ್ಟ ಅಡಳಿತವನ್ನು "ಪ್ರಾಗ್ರೆಸೀವಿಸ್ಟ್ಸ್" ಎಂಬ ಪಂಗಡದವರು ನಡೆಸುತ್ತಿರುವರು "ಪ್ರಾಗ್ರೆಸೀವಿಸ್ಟ್ಸ್" ಅಂದರೆ ಮುಂದಕ್ಕೆ ನಡೆಯುವವರೆಂದು ಅರ್ಥ. ರಾಜ್ಯವಿರ್ವಹಣೆ ಕರ್ಮದಲ್ಲಿ ಮುಂದೆ ಮುಂದೆಹೋಗುತ್ತಾ ವೃದ್ಧಿಯನ್ನು ಹೊಂದುವುದು ಇವರ ರಾಜತಂತ್ರವಾದುದರಿಂದ ಈ ಹೆಸರು ಬಂದಿರುವುದು. ಇನ್ನೊಂದುಪಂಗಡದವರಿಗೆ "ಯೂನಿಯನಿಸ್ಟ್ಸ್" ಎಂದು ಹೆಸರು. ಪ್ರಜೆಗಳಲ್ಲಿ ಏಕೀಭಾವವನ್ನೂ ಏಕ್ಯಮತ್ವವನ್ನೂ ಹುಟ್ಟಿಸುವುದು ಇವರ ಮುಖ್ಯ ರಾಜತಂತ್ರವಾದುದರಿಂದ ಇವರಿಗೆ ಈ ಹೆಸರು ಬಂದಿರುವುದು ಈಗ ಪದವಿಯಲ್ಲಿರುವ "ಪ್ರಾಗ್ರೆಸೀವಿಸ್ಟ್ಸ್" ಪಂಗಡದವರು ಜನಾಂಗದ ಪ್ರೀತಿಯನ್ನು ಸಂಪಾದಿಸಿಕ್ಕೊಂಡಿರುವುದಿಲ್ಲ. "ಯೂನಿಯನಿಸ್ಟ್ಸ್"ಪಂಗಡದವರುಪನವಿಗೆಬರಬೇಕೆಂದು ಪ್ರಯತ್ನಪಡುತ್ತಿರುವರು ಈ ಪಂಗಡಕ್ಕೆ ಸೇರಿದವರು ಬಾಲ ತರ್ಕಿಯರಾಗಿರುತ್ತಾರೆ ಅರಾಜಕತ್ವಕ್ಕೆ ಇದೇಕಾರಣ ತಂತೀ ಸಮಾಚಾರಗಳನ್ನು ಇದರಡಿ ಪ್ರಕಟಿಸುವೆವು —

ಲಂಡನ್, ಏಪ್ರೆಲ್ ತಾ॥ 14.

ಈಗಿನಸ್ಥಿತಿಯನ್ನು ಕುರಿತು ಯಾವಸುಗತಿಯನ್ನೂ ವರ್ತಮಾನ ಪತ್ರಿಕೆಗಳು ಪ್ರಕಟಿಸಕೂಡದೆಂದು ಕಾನ್ಸ್ಟಾಂಟಿನೋಪಲ್ ನಲ್ಲಿ ಅಧಿಕಾರಿಗಳು ತಡೆಯುತ್ತಿರುವರು. ಈಗಿನಸ್ಥಿತಿಯಾದರೋ ಬಹಳ ಭಯಂಕರವಾಗಿದೆ ಅನಾಯಕಸಾಳ್ವಿಕವರು ಕಾನ್ಸ್ಟಾಂಟಿನೋಪಲ್‌ನಲ್ಲಿರುವ ನ್ಯಾಯ ಇಲಾಖೆಯ ಮಂತ್ರಿಯನ್ನು ಕೂಲೆ ಮಾಡಿ, ಸಮುದ್ರ ಇಲಾಖೆಯ ಅಧ್ಯಕ್ಷಕರನ್ನು ಘಾಯಪಡಿಸಿ, ಯುದ್ಧ ಇಲಾಖೆಯ ಮಂತ್ರಿಯನ್ನು ಕೈದಿಯಾಗಿ ತೆಗೆದುಕೊಂಡು ಹೋಗಿರುತ್ತಾರೆ ಈ ದೊಂಬಿಯಲ್ಲಿ 17 ಮಂದಿ ಮಡಿದರು 3 ಮಂದಿ ಘಾಯಪಡೆದರು. ಎದೇಂ ಪಾಷ್ಟಾ ಅವರನ್ನು ಯುದ್ಧ ಇಲಾಖೆಯ ಮಂತ್ರಿಯನ್ನಾಗಿ ನೇಮಿಸಿರುವರು. ಹೊಸ ಅಧಿಕಾರವನ್ನು ಕೈಕೊಂಡು ಎಷ್ಟೋ ಎಲ್ಲ ಹೊಸ ಅಧಿಕಾರಿಗಳನ್ನೂ ನಿಂದ ಸ್ಟಂಬೂಲಿಗೆ ಸೈನ್ಯಸಮೇತವಾಗಿ ಮೆರವಣಿಗೆಯಲ್ಲಿ ನಿನ್ನೆ ರಾತ್ರಿ ಹೊರಟರು. ದಂಗೆಕೋರರು ಪಾರ್ಲಿಮೆಂಟು ಸಭಾಮಂದಿರದ ಮಾರ್ಗವನ್ನು ಅತ್ತಗಟ್ಟಿರುವರು.

ಸಭಾಮಂದಿರದಲ್ಲಿ ಒಂದು ಪ್ರಸಿದ್ಧ ಪತ್ರಿಕೆಯನ್ನು ಸುಲ್ತಾನರು ಓದಿದರು. ಅಧಿಕಾರದಲ್ಲಿದ್ದ ಮಂತ್ರಿಸಮೂಹವು ರಾಜೀನಾಮೆಯನ್ನು ತೆಗೆದುಕೊಂಡು, ಹೊಸ ಸಮೂಹವನ್ನು ಏರ್ಪಾಡುಮಾಡವುದಾಗಿಯೂ, ದಂಗೆಕೋರರಿಗೆ ಮನ್ನಣೆಯನ್ನು ಕೊಡುವುದಾಗಿಯೂ, ಪ್ರಕಟಿಸಲ್ಪಟ್ಟಿತು ಹೇಗೆ ಎಂಬ ತುರ್ಕಿಯ ಧರ್ಮಸ್ಥಾಪಕರ ನ್ಯಾಯಧರ್ಮವನ್ನು ಇನ್ನು ಮುಂದೆ ಆಚರಣೆಗೆ ತರಲ್ಪಡುವುದೆಂದೂ ಪ್ರಕಟಿಸಲ್ಪಟ್ಟಿತು ಈ ವರ್ತಮಾನವನ್ನು ಜನಸಮೂಹವು ಕೇಳಿ ಉಲ್ಲಾಸವನ್ನ ಹೊಂದಿತು

ಎಮಿರ್ ಅಲ್ಲಾದ್ ಎಂಬ ಒಬ್ಬ ಸಣ್ಣ ಅಧಿಕಾರಿಯು ಕೊಲೆಮಾಡಲ್ಪಟ್ಟಿರುವನು. ಈತನನ್ನು ಹುಸೇ ದ್ದಾಹೆದ್ ಎಂದು ತಪ್ಪಾಗಿ ಭಾವಿಸಿ ಕೊಲೆಮಾಡಿದರೆಂದು ಗೊತ್ತಾಗುತ್ತದೆ. ಹುಸೇ ದ್ದಾಹೆದ್ ಎಂಬುವರು ಒಂದು ವರ್ತಮಾನ ಪತ್ರಿಕೆಯ ಸಂಪಾದಕರು.

ಸೈನ್ಯವು ರಾತ್ರಿಎಲ್ಲಾ ಪಾರ್ಲಿಮೆಂಟು ಸಭಾಮಂದಿರದಮುಂದೂ ಯುದ್ಧ ಇಲಾಖೆಯ ಕಾರ್ಯಾಲಯದ ಮುಂದೂ ಶತ್ರುಭಯದಿಂದ ಎಚ್ಚರತ್ತುಕ್ಕೊಂಡಿದ್ದು ಗಸ್ತುಕೊಡುತ್ತಿತ್ತು. ದಂಗೆಕೋರರ ಕೋರಿಕೆಗಳಿಗೆಲ್ಲಾ ಸುಲ್ತಾನರು ಸಮ್ಮತವನ್ನು ಕೊಟ್ಟಿರುವರು. ಇದಲ್ಲದೆ "ಪ್ರಾಗ್ರೆಸೀವಿಸ್ಟ್ಸ್" ಎಂಬ ಪಂಗಡದವರ ಪೈಕಿಸೈಯಾರನ್ನೂ ಅಧಿಕಾರದಲ್ಲಿಡುವದಿಲ್ಲವೆಂಬ ವಾಗ್ದಾನನಮಾಡಿರುವರು. ಈದೀನ ರಾಜಧಾನಿಯು ಗಲಭೆಯಿಲ್ಲದೆ ನೆಮ್ಮದಿಯಾಗಿರುವುದು. ವರ್ತಕರು ಅಂಗಡಿಗಳನ್ನು ತೆಗೆಯುತ್ತಿರುವರು. ವ್ಯಾಪಾರವು ಪ್ರಾರಂಭವಾಗುತ್ತಿರುವುದು

ಲಂಡನ್, ಏಪ್ರೆಲ್ ತಾ॥ 15.

ನ್ಯಾಯ ಇಲಾಖೆಯ ಮಂತ್ರಿಯನ್ನು ಅನಾಯಕ ಕೂಟದವರು ಕೂಲೆಮಾಡಿದರೆಂಬ ವರ್ತಮಾನವನ್ನು ಕಾನ್ಸ್ಟಾಂಟಿನೋಪಲಿನ ತಂತೀವರ್ತಮಾನಗಳು ಸ್ಥಿರಪಡಿಸಿವೆ. ಇವರನ್ನು ಯುದ್ಧ ಇಲಾಖೆಯ ಮಂತ್ರಿ ಎಂಬದಾಗಿ ತಪ್ಪಾಗಿ ಎಣಿಸಿ ಕೊಲೆಮಾಡಿದರೆಂದು ಗೊತ್ತಾಗುತ್ತದೆ. ಯುದ್ಧ ಇಲಾಖೆಯ ಮಂತ್ರಿಗಳು "ಪ್ರಾಗ್ರೆಸೀವಿಸ್ಟ್ಸ್" ಪಂಗಡಕ್ಕೆ ಸೇರಿದವರು.

ಎದೇಂ ಪಾಷ್ಟಾ ಅವರು ಯುದ್ಧ ಇಲಾಖೆಯ ಮಂತ್ರಿಗಳಾಗಿಯೂ ನೇಮಿಸಲ್ಪಟ್ಟಿರುವರು.

ದಂಗೆಕೋರರು ರಾಜಧಾನಿಯನ್ನು ವಶಪಡಿಸಿಕ್ಕೊಂಡಿರುವುದರಿಂದ ಮುಂದೆ ಏನುಮಾಡುವರೋ ಎಂದು ಯೋಚನೆಯಾಗಿದೆ. ಹಡಗಿನ ಸಿಪಾಯಿಗಳು ಯುರೋಪಿಯರ್ತು ವಾಸಮಾಡುವ ಪ್ರದೇಶಕ್ಕೆ ಹೋಗಿ ತುರ್ಕಾಕಿಗಳನ್ನು ವಿವೇಚನೆಇಲ್ಲದೆ ಸುಡುತ್ತಾ ಬರಲು ಗುರಿತಪ್ಪಿ ಗುಂಡುಗಳು ಅನೇಕರಿಗೆ ತಗಲಿ ಅನಾಹುತವನ್ನುಂಟುಮಾಡಿತು

ಟ್ರಾಫಿಕ್ ಪಾಷ್ಟಾ ಅವರು ಸೋಲ್ಟೇಗೆ ಹೋಗುವಾಗ ದಾರಿಯಲ್ಲಿ ಜನಸಮೂಹವು ಅವರನ್ನುಕಂಡು ಉಲ್ಲಾಸದಿಂದ ಕೈಜಿಪ್ಪಾಳೆಮಾಡಿತು. ಮುಖ್ಯಂಡ ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವ ಇವರು ಹೇರಿ ನ್ಯಾಯಧರ್ಮದಲ್ಲಿ ಆಚರಿಸತಕ್ಕದೆಂದೂ, ಜನಾಂಗದ ಯೋಗಕ್ಷೇಮವನ್ನು ನಮುಂದಾಗಿ ಇಟ್ಟುಕ್ಕೊಂಡು ವಿಶಿಷ್ಟ ಕಾರುಬಾರುಗಳನ್ನು ನಡೆಸತಕ್ಕದೆಂದೂ ಇವರಿಗೆ ಕೊಟ್ಟಿರುವ ನಿರೂಪದಲ್ಲಿ ವಿಧಿಸಲ್ಪಟ್ಟಿರುತ್ತೆ.

ಕೋಟೆಯನ್ನು ಕಾಯುತ್ತಿದ್ದ ಸೈನ್ಯದ ಒಂದು ಪಟಾಲಮು ಇಲ್ಲಿಜ್‌ಗೆ ಹೋಗಿ ಸುಲ್ತಾನರ ಅರಮನೆಯಮುಂದೆ ನಿಂತು, ಉಲ್ಲಾಸದಿಂದ ಅರುಚುವುದಕ್ಕೆ ತೊಡಗಿತು ಸುಲ್ತಾನರು ಕಿಟಕಿಯಿಂದ ಸಿಪಾಯಿಗಳನ್ನು ಕಂಡು "ಮೊಕ್ಕಳಿರಿ, ಗಲಾಟೆಮಾಡಬೇಡಿ ಹೊರಟುಹೋಗಿ" ಎಂದು ಹೇಳಲು, ಪಟಾಲಂಮಂದಕ್ಕೆ ತೆರಳಿಬಂತು.

"ಪ್ರಾಗ್ರೆಸೀವಿಸ್ಟ್ಸ್" ಪಂಗಡದವರಿಗೆ ಅನುಕೂಲವಾಗಿ ಲೇಖನಗಳನ್ನ ಬರೆಯುತ್ತಿದ್ದ ವರ್ತಮಾನ ಪತ್ರಿಕೆಗಳ ಕಾರ್ಯಾಲಯಗಳಿಗೆ ನಿನ್ನೆಯದಿನ ಜನಸಮೂಹವು ನಗ್ನಿ ನಾಶಪಡಿಸಿತೆಂದು ತಿಳಿದುಬರುವುದು. ಇದಲ್ಲದೆ ಮಹಿಳೆಯರ ಸಂಘದ ಕಾರ್ಯಾಲಯಕ್ಕೆ ಮುತ್ತಿಗೆಯನ್ನುಹಾಕಿ ನಾಶಪಡಿಸಿತು.

ನಿನ್ನೆಯರಾತ್ರಿ ಒಂದೂಗಂ ಪಟ್ಟಣವನೆಮ್ಮದಿಯಾಗಿ
ತ್ತು. ಪಟ್ಟಣವು ಯಾಥಾ ಪ್ರಾ ಂದಿನ ಸ್ಥಿತಿಗೆ ಬರುತ್ತಿರು
ವುದ ಸೈನ್ಯಿಕರು ಹೋಗಿ ಕಾರಗಳನ್ನು ಸ್ವಚ್ಛವಾಗಿ
ನೇರಿರುತ್ತಾರೆ. ಪ್ರಜೆಗಳು ನಿಭೀ ಹೊರಗೆ ಸಂಚಾರಮಾ
ಡುವದಕ್ಕೆ ಆರಂಭಿಸಿರುವರು ಮಂತ್ರಿಸಭೆಯ ಹೊಸ ಏರ್ಪಾಟು, ಪ್ರಜಾ ಸಂಮತವಾಗಿರುವುದೆಂದು ವರ್ತಮಾನಪತ್ರಿಕೆಗಳು ಸಾರುತ್ತಿರುವವು. ಕಾನ್ಸ್ಟಾಂಟಿನೋಪಲ್‌ನಲ್ಲಿರುವ ಸೈನ್ಯಕ್ಕೆ ನಾಯಕತ್ವವನ್ನು ವಹಿಸಿದ್ದ ಜನರಲ್ ಮಹಮ್ಮದ್ ಶೆವ್ಕತ್ ಪಾಷ್ಟಾ ಎಂಬವನು ಸೈನ್ಯವನ್ನುಹಿಂದೆ ಒಂದು ಸಲ ಯುದ್ಧ ಇಲಾಖೆಯ ಮಂತ್ರಿಯಾಗಿ ನೇಮಿಸಲು ಸೈನ್ಯಿಕರಲ್ಲಿ ಅಸಮಾಧಾನಕ್ಕೆಯ್ದಾ ದೊಂಬಿಗೂ ಕಾರಣಳಿಂಬಾಯಿತು ಸೈನ್ಯಿಕರಿಗೆ ಉತ್ತಮವಾದ ಶಿಕ್ಷೆಯನ್ನುಕೊಡುವ ಕೆಲಸವು ಇವರಿಗೆ ಒಪ್ಪಿಸಲ್ಪಟ್ಟಿರುತ್ತದೆ.

ಲಂಡನ್ ಏಪ್ರೆಲ್ ತಾ॥ 16.

ಅಮೀರ್‌ನಿಯರನ್ನು ಮುತ್ತಿಗೆ ಹಾಕಿದ್ದು ಮೆರಿಸೀನಾದಲ್ಲಿ ಅಲ್ಲ ಮುತ್ತಿಗೆ ಹಾಕಿದ್ದು ಅದನಾದಲ್ಲಿ. ಈ ದೊಂಬಿಯು ಜಾಗ್ರತೆಯಾಗಿ ಆಗಿನಿಸಲ್ಪಟ್ಟಿತು ದೊಂಬಿಯಲ್ಲಿ 10 ಮಂದಿ ಮಾತ್ರ ಮಡಿದರು

ಗುರುವಾರ ರಾಜಧಾನಿಯು ಗಲಭೆಯಲ್ಲಿದ ನೆಮ್ಮದಿಯಾಗಿತ್ತು ಆದರೆ ಹಡಿಗಿನ ಸಿಪಾಯಿಗಳು ಮಾತ್ರ ಸ್ವಲ್ಪ ಗಲಭೆಯನ್ನುಮಾಡಿದರು ಈ ಇಲಾಖೆಗೆ ಜುನಾಯಿಸಲ್ಪಟ್ಟಿರುವ ಹೊಸ ಅಧಿಕಾರಿಯ ವಿಷಯದಲ್ಲಿ ಸೈನ್ಯಿಕರಿಗೆ ತುಂಬಾ ಅಸಮಾಧಾನವಿರುವುದು. ಈ ಸಿಪಾಯಿಗಳು ಒಬ್ಬ ನಾವಿಕನನ್ನು ಹಿಡಿದು, ಇಲ್ದಿಜ್‌ಗೆ ತೆಗೆದುಕೊಂಡು ಹೋಗಿ ಅಲ್ಲಿ ಅವನನ್ನು ದಂಡಿಸಿದರು ಇದಕ್ಕೆ ಕಾರಣ ವೇನೆಂದರೆ ಸದರಿ ನಾವಿಕನು ಕೆಲವು ತುಪಾಕಿಗಳನ್ನು ತಂದು ಕೊಡುತ್ತಾ "ಪ್ರಾಗ್ರೆಸೀವಿಸ್ಟ್ಸ್"ಪಂಗಡದವರಿಗೆ ಸಹಾಯಮಾಡುತಿದ್ದನಂತೆ ನಾವಿಕನನ್ನು ಹಿಡಿದು ಕೊಲ್ಲಲು ಇದೇಕಾರಣ.

ಗುರುವಾರ ಎದೇಂ ಪಾಷ್ಟಾ ಮತ್ತು ನೈಜಾಂಪಾಷ್ಟಾ ಅವರು ಸೈನ್ಯಿಕರ ಬಿಡಾರಗಳನ್ನು ಹೋಗಿನೋಡಿಕೊಂಡು, ಸಿಪಾಯಿಗಳು ಮೇಲ್ಪಟ್ಟ ಅಧಿಕಾರಿಗಳಿಗೆ ವಿಧೇಯರಾಗಿರ ಬೇಕೆಂದು ಬೋಧಿಸಿ ಬಂದರು.

ಸಲೋನಿಕಾದಲ್ಲಿರುವ ಬಾಲಕ ಸಂಘವರು ಹೊಸ ಏರ್ಪಾಟುಗಳಿಗೆ ಅಂಗೀಕಾರವನ್ನು ಕೊಟ್ಟಿರುವದಿಲ್ಲ ಇವರು ಆಕ್ಷೇಪಣೆಯನ್ನು ತಂದು, ಹೊಸಏರ್ಪಾಟುಗಳನ್ನು ತಲೆಕೆಳಗುಮಾಡಲು ಪ್ರಯತ್ನಪಡುತ್ತಿರುವರು. ಇದಕ್ಕಾಗಿ ಸೈನ್ಯವನ್ನು ಜೊತೆ ಮಾಡುತ್ತಿರುವರು. ಹಿಂದಿನ ಏರ್ಪಾಟುಗಳನ್ನು ಜಾರಿಗೆತಾರದೆ ಹೋದರೆಕಾನ್ಸ್ಟಾಂಟಿನೋಪಲಿಗೆ ಮತ್ತೆ ಹಾಕಿಹಿಂದಿನಏರ್ಪಾಟುಗಳನ್ನು ಸ್ಥಾಪಿಸುವದಾಗಿ ಸಾರಿರುವರು. ತಮಗೆ ಸಹಾಯ ಮಾಡಬೇಕೆಂದು ಏಥ್ರಿಯಾನೋಪಲ್ ನಲ್ಲಿರುವ ಸೈನ್ಯಿಕರೊಂದಿಗೆ ಪತ್ರ ವ್ಯವಹಾರವನ್ನು ಬೆಳೆಸುತ್ತಿರುವದು.

ತುರ್ಕಿಯು ಅಂತಃ ಕಲಹದ ತೀರದಲ್ಲಿರುವಂತೆ ತೋರುವುದು. ಯಲ್ಲಿ ಕರೆದುಕೊಂಡು ಸೈಲ್ವೆ ಮಂತ್ರಿಕ ಕಾನ್ಸ್ಟಾಂಟಿನೋಪಲಿಗೆ ಪ್ರಯಾಣ ಬೆಳಸಿದರು. ಇನ್ನೊಂದು ಪಟಾಲಂ ಶುಕ್ರವಾರ ಹೊರಡ ಬೇಕಾಗಿತ್ತು ಇತರ ಪಟಾಲಂಗಳು ಯುದ್ಧಕ್ಕೆ ಹೊರಡಲು ಸನ್ನದ್ಧರಾಗುತ್ತಿರುವರು. ಬಾಲಕ ಸಂಘದ ಮುಖಂಡರಾದ ಎನ್ವರ್‌ಬೆ ಮತ್ತು ಹಕ್ಕಿಬೆ ಎಂಬುವರು ಏಥ್ರಿಯಾನೋಪಲ್‌ನಲ್ಲಿರುವ ಸೈನ್ಯವನ್ನು ಸಹಾಯಕೊಡೆಂದು ಕೆಳಲು ಹೊರಟಿರುವರು

ಲಂಡನ್, ಏಪ್ರೆಲ್ ತಾ॥ 16, 17

ಅದನಾದಲ್ಲಿ ದಂಗೆಯು ಪುನಹ ಪ್ರಾರಂಭವಾಗಿರುವುದು. 60 ಮಂದಿಆರ್ಮೀನಿಯರ್ರು ದೊಂಬಿಯಲ್ಲಿ ಇದುವರೆಗೂ ಮಡಿದರು. ವರು. ಜರ್ಮನ್ ಮತ್ತು ಬ್ರಿಟಿಷ್ ಪ್ರತಿನಿಧಿಗಳು ದಂಗೆಕೋರರ ಕೈಗೆಸಿಕ್ಕಿ ಘಾಯವನ್ನು ಪಡೆದರು.

ಪ್ಯಾರಡಾತ್ ರೈಲ್ವೇಯಲ್ಲಿ ಕೆಸಸಮಾಡುವ ಜರ್ಮನ್ ಇಂಜಿನಿಯರುಗಳು ತಮಗೆ ರಕ್ಷಣೆಯನ್ನು ಕೊಡಬೇಕೆಂದು ತಮ್ಮ ಪ್ರತಿನಿಧಿಗಳಿಗೆ ಬರೆದುಕೊಂಡರು ಇವರಿಗೆ ತಕ್ಕ ರಕ್ಷಣೆಯ ನ್ನು ಕೊಡುವಂತೆ ವಜೀರರು ಹುಕುಂಕೊಟ್ಟಿರುವರು

ಮಾಲ್ಟಾದಲ್ಲಿರುವ ಬ್ರಿಟೀಷ್ ಯುದ್ಧಹಡುಗುಗಳ ದಂಗೆಯನ್ನು ಅಡಗಿಸುವ ಉದ್ದೇಶದಿಂದ ಕಾನ್ಸ್ಟಾಂಟಿನೋಪಲಿಗೆ ಹೊರಡಲು ಸಿದ್ಧವಾಗಿರುವನ್ತೆ

ಎನ್ವರ್ ಎಂಬ ಹೆಸರುಳ್ಳ ದಂಗೆಕೋರರ ಮುಖಂಡನು ಕಾನ್ಸ್ಟಾಂಟಿನೋಪಲಿನಲ್ಲಿ ಬಂದಿರುವನು ರಾಜ್ಯಾಡಳಿತದಲ್ಲಿ ಏರ್ಪಾಟಿನ್ನೇ ನಿಲ್ಲುವಂತೆಮಾಡಲು ಹೊಡದಾಡಿ ಜಯಿಸುವದಾಗಿ ಜನಗಳಿಗೆ ಬರವಸವನ್ನು ಕೊಡುತ್ತಿರುವನು.

"ವಿಕ್ಟರು ಹುಗೊ" ಮತ್ತು "ಜುಲೆಸ್ ಮಿಚೆಲಾಟ್" ಎಂಬ ಸ್ಟೇಂಜ್‌ಯುದ್ಧಹಡುಗುಗಳು ಪೈರಿಯಾನ್ವೀಪವನ್ನು ಹೋಗಿ ಕಾಯುವದಾಗಿ ಹುಕುಂಕೊಡಲ್ಪಟ್ಟಿರುವರು ಹೊಸ ಏರ್ಪಾಟುಗಳನ್ನೇ ಜಾರಿಗೆತರುವುದ ಗಿ ಕಳೆದ ಗುರುವಾರ ಸುಲ್ತಾನರು ತಮ್ಮ ಪ್ರಜೆಗಳಿಗೆ ಬರವಸವನ್ನು ಕೊಟ್ಟರು

ಕಾನ್ಸ್ಟಾಂಟಿನೋಪಲ್‌ನಲ್ಲಿ ಯಾವಗಲಭೆಯೂ ಇಲ್ಲದೆ ಊರು ನೆಮ್ಮದಿಯಾಗಿರ ಪುಸ . ವರ್ತಕರು ಬೀತಿಗೊಂಡವರಾಗಿದ್ದಾಗ್ಯೂ, ತಮ್ಮ ವರ್ತಕವನ್ನು ಯಥಾಪ್ರಕಾರ ನಡೆಸಿಕ್ಕೊಂಡು ಬರುತ್ತಿರುವರು.

ಬ್ರಿಟಿಷ್ ಸ್ವಸ್ಥಾಧಿಕಾರಿಯ ಪ್ರತಿನಿಧಿಗಳಲ್ಲಿ ಮೇಜರ್ ತಾಪ್ಪಲ್‌ವಿಲ್ಲಿ ಯರು ಸಂಗಡ ಮುಸಲ್ಮಾನರಿಗೂ, ಆರ್ಮೀನಿಯರ್ರಿಗೂ ನಡೆಯುತ್ತಿದ್ದ ಒಂದು ಕಲಹವನ್ನು ತಪ್ಪಿಸಲು ಹೋಗಿ ಇವರು ಬಂದೂಕಿನಿಂದ ಹೊಡೆಯುತ್ತಿದ್ದ ಒಂದು ಕೊಂಡು ಬಂದರೆಂದು ಗೊತ್ತಾಗುತ್ತದೆ.

ಕಾನ್ಸ್ಟಾಂಟಿನೋಪಲ್‌ನಲ್ಲಿ ಕಳೆದ ಮಂಗಳವಾರ ಮತ್ತು ಬುಧವಾರ ದಂಗೆಕೋರರು ನಡೆಸಿದ ದಾಂಧಲೆಯಲ್ಲಿ ಗುಂಡಿನೇಟಿಗೆ ತಗಲಿ 511 ಮಂದಿಗೆ ಘಾಯವಾಗಿರುವುದು. 14 ಮಂದಿ ಮೃತ್ತಪಟ್ಟಿರು

ಆದಾನದಿಂದ ಬರುವ ಹೊಸವರ್ತಮಾನವೇನೆಂದರೆ —ನೂರಾರುಮಂದಿ ಕೊಲ್ಲಲ್ಪಟ್ಟಿರುವರೆಂದೂ, ಅನೇಕರಿಗೆ ಇರುವದಕ್ಕೆ ಮನಗಳಲ್ಲದೆ ಸಂಕಟಪಡುತ್ತಿರುವರೆಂದೂ

300 ಮಂದಿ ಮುಸಲ್ಮಾನ್ ಸಿಪಾಯಿಗಳು ಆಯುಧಾರೂಢರಾಗಿ ಆದಾನದಿಂದ ತಾರಾಸ್ಸಿಗೆ ಹೊರಟಿರುವರು "ಲೊರೇಲಿ" ಎಂಬ ಜರ್ಮನ್ ಯುದ್ಧಹಡುಗು ಮಿರ್ಸಿನಾ ಪಟ್ಟಣವನ್ನು ಹೋಗಿ ಕಾಯುವಂತೆ ಹುಕುಂ ಕೊಡಲ್ಪಟ್ಟಿರುವುದು

ಸಲೋನಿಕಾದಲ್ಲಿರುವ ಸೈನ್ಯವು ಕಾನ್ಸ್ಟಾಂಟಿನೋಪಲ್‌ನಲ್ಲಿ ಬಂದಿಳಿದ ಮಾತ್ರಕ್ಕೆ ಸುಲ್ತಾನರು ಹೆದರಿಕೊಂಡು "ಪ್ರಾಗ್ರೆಸೀವಿಸ್ಟ್ಸ್" ಪಂಗಡದವರನ್ನು ಅಧಿಕಾರಪದವಿಯಿಂದ ಕಿತ್ತು ಹಾಕಲಾರರೆಂದು ಬಾಲತುರ್ಕಿಯರು ನಂಬುವರು "ಸ್ಯಾಗ್ರೆಸೀವಿಸ್ಟ್ಸ್" ಪಂಗಡದವರನ್ನು ಅಧಿಕಾರಪದವಿಯಿಂದ ಕಿತ್ತು ಹೋಕಿ ಹೊಸ ಏರ್ಪಾಟಿನ್ನೇ ಜಾರಿಗೆತರಬೇಕೆಂದೂ, ಈ ಹೊಸ ಏರ್ಪಾಟಿಗೆ ಒಪ್ಪದಿರುವ ಬಾಲತುರ್ಕಿಯರನ್ನುಜೈಗಾವದರೂ ಸಮಾಧಾನಪಡಿಸಬೇಕೆಂದೂ ಇತರ ಜನರು ವಾದಿಸುತ್ತಿರುವರು ಬಾಲತುರ್ಕಿಯರು "ಪ್ರಾಗ್ರೆಸೀವಿಸ್ಟ್ಸ್" ಪಂಗಡದವರ ಪಕ್ಷವನ್ನು ವಹಿಸಿ ಹೊಡೆದಾಡುವದನ್ನು ಕೆಂಡು, ಕಾನ್ಸ್ಟಾಂಟಿನೋಪಲ್‌ನಲ್ಲಿರುವ ಸಿಪಾಯಿಗಳು ಬಾಲತುರ್ಕಿಯರ ಸಂಘಕ್ಕೆಸೇರಿದವರನ್ನು ಕೊಲೆ ಮಾಡುವದಕ್ಕೆ ಮೊದಲು ಮಾಡಿದವರು

ಕಾನ್ಸ್ಟಾಂಟಿನೋಪಲ್‌ಗೆ ಸಮೀಪದಲ್ಲಿರುವ ಹಡೆಂಕೋಯಿ ಎಂಬ ಕೋಟೆಗೆ ಶನಿವಾರ ಸಲೋನಿಕಾದಿಂದ ಒಂದು ಕಾಲುಬಲ ಸೈನ್ಯವು ಮುತ್ತಿಗೆ ಹಾಕಿತು. ಸೈನ್ಯವು 16 ಸಾವಿರಮಂದಿ ಆಳುಗಳಿಂದ ಕೂಡಿತ್ತು. ಬಾಲತುರ್ಕಿಯರಿಗೆ ಸೇರಿದ ಸೈನ್ಯದ ಪೈಕಿ 7 ಸಾವಿರಮಂದಿ ಸಿಪಾಯಿಗಳು ಏಥ್ರಿಯಾ ನೋಪಲ್‌ನಿಂದ ಬಂದು ಹಡೆಂಕೋಯಿನಲ್ಲಿ ತಲವುವುದೆಂದು ವರ್ತವಾನವಿರುವುದು. ಸರ